ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 8 ಮಾರ್ಚ್ 2026

ಸಂಪುಟ 47, ಸಂಚಿಕೆ 339 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital



ಟಿ20 ವಿಶ್ವಕಪ್: ಭಾರತ-ಕಿವೀಸ್ ಫೈನಲ್ ಇಂದು

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಿ20 ವಿಶ್ವಕಪ್ ಪ್ರಶಸ್ತಿ ಸುತ್ತು

ಬ್ಯಾಟಿಂಗ್ ಪಿಚ್‌ನಲ್ಲಿ ಮಿಂಚಿದವರೇ ಚಾಂಪಿಯನ್ಸ್

ಸಂಜೆ 7ಕ್ಕೆ ಪಂದ್ಯ

ಭಾರತಕ್ಕೆ ಮೂರನೇ ಕಪ್ ಗೆಲ್ಲುವ ಭರವಸೆ

ಸತತ 2ನೇ ಬಾರಿ ಫೈನಲ್ ಆಡುತ್ತಿರುವ ಭಾರತ

ಮೊದಲ ಟ್ರೋಫಿಗಾಗಿ ನ್ಯೂಜಿಲೆಂಡ್ ಫೈಟ್

• ವಿವರ ಪುಟ ೧೧

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ : ಪಂಚಮಿ, ನಕ್ಷತ್ರ: ಸ್ವಾತಿ

ದಿನದ ಮಾತು

ಜ್ಞಾನವೇ ಶಕ್ತಿ. ಶಕ್ತಿಯೇ ಜೀವನ, ಅಜ್ಞಾನವೇ ದೌರ್ಬಲ್ಯ, ದೌರ್ಬಲ್ಯವೇ ಮರಣ.

▲ ರಾಮಕೃಷ್ಣ ಪರಮಹಂಸ

ಹೀಗೊಂದು ಕಿಟ್ಟಿ ಪಾರ್ಟಿ ಅನುಭವ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬



ಕಿರುಸುದ್ದಿ

ಎಲ್‌ಪಿಜಿ ದರ 60 ರೂ. ಏರಿಕೆ, ಹೊಸ ಬೆಲೆ ಜಾರಿ

• ಹೊಸದಿಲ್ಲಿ: ಇರಾನ್ ಯುದ್ಧದ ನಡುವೆ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ದೇಶಾದ್ಯಂತ 60 ರೂ. ಏರಿಕೆಯಾಗಿದ್ದು, ಶನಿವಾರವೇ ಹೊಸ ದರವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. 14.2 ಕೆ.ಜಿ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂ. ಹೆಚ್ಚಿಸಲಾಗಿದೆ. ಅದೇ ರೀತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 115 ರೂ. ಹೆಚ್ಚಿಸಲಾಗಿದೆ.

• ಪುಟ ೯

ಮಾನವೀಯ ದೃಷ್ಟಿಯಿಂದ ಲವಣ್ ಲಂಗರಿಗೆ ಅವಕಾಶ

• ಪುಟ ೯

ಡೇರಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಖುಲಾಸೆ

• ಪುಟ ೯

ಭಾರತದ ವಿದೇಶಿ ಕರೆನ್ಸಿ ಸಂಪತ್ತು ಹೆಚ್ಚಳ

• ಪುಟ ೯

ಮುಂದಿನ ವರ್ಷಾಂತ್ಯಕ್ಕೆ ಏಡ್ಸ್ ನಿಯಂತ್ರಣ ಗುರಿ

• ಪುಟ ೯

ಇಸ್ರೇಲ್‌ಗೆ 12,000 ಬಾಂಬ್ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

• ಪುಟ ೯

ಒಳ ಮೀಸಲಾತಿ ಕಾಯ್ದೆ ಅನೂರ್ಜಿತ: ಛಲವಾದಿ

• ಪುಟ ೩

ಕೇಂದ್ರ ಸರ್ಕಾರ ವಿದೇಶಾಂಗ ನೀತಿ ಉಲ್ಲಂಘನೆ

• ಪುಟ ೩

ಟೆಹ್ರಾನ್, ದುಬೈನಲ್ಲಿ ಹತ್ತಾರು ಸ್ಫೋಟ | ದಿನೇದಿನೆ ಉಲ್ಬಣ

ಹೆಚ್ಚಿದ ಯುದ್ಧೋನ್ಮಾದ

• ವಾಷಿಂಗ್ಟನ್: ಕಳೆದ 9 ದಿನಗಳಿಂದ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ದಿನೇದಿನೇ ಉಲ್ಬಣಗೊಳ್ಳುತ್ತಲೇ ಇದ್ದು, ಯುದ್ಧ ಅಂತ್ಯದ ಯಾವ ಲಕ್ಷಣವೂ ಕಾಣುತ್ತಿಲ್ಲ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಶನಿವಾರ ಭಾರೀ ಸ್ಫೋಟಗಳು ಸಂಭವಿಸಿವೆ. ಟೆಹ್ರಾನ್‌ನ ಪ್ರಮುಖ ವಿಮಾನ



ನಿಲ್ದಾಣವಾದ ಮೆಹ್ರಾಬಾದ್ ವಿಮಾನ ನಿಲ್ದಾಣದ ಮೇಲೂ ದಾಳಿಯಾಗಿದ್ದು, ಕೆಲವು ವಿಮಾನಗಳಿಗೆ ಹಾನಿಯಾಗಿದೆ. ಇದಕ್ಕೆ ಪ್ರತಿದಾಳಿಯೆಂಬಂತೆ ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ.

ದುಬೈ ಮೇಲೂ ದಾಳಿ: ಶನಿವಾರ ಬೆಳಗ್ಗೆ ದುಬೈ ಮೇಲೆ ದಾಳಿ ಮಾಡಿರುವ ಇರಾನ್, ವಿವಿಧೆಡೆ ಹಲವು ಸ್ಫೋಟಗಳನ್ನುಂಟುಮಾಡಿದೆ. ತನ್ನ ವಾಯುರಕ್ಷಣಾ ವ್ಯವಸ್ಥೆ ಸಕ್ರಿಯವಾಗಿ ದಾಳಿಗಳನ್ನು ಎದುರಿಸಿದೆ ಎಂದು ದುಬೈ ಸರಕಾರ ಹೇಳಿದೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ವಿಮಾನಗಳಿಗಾಗಿ ಕಾಯುತ್ತಿದ್ದು, ಎಚ್ಚರಿಕೆ ಸೈರನ್ ಮೊಳಗಿದ ವೇಳೆ ಇವರೆಲ್ಲ ರೈಲ್ವೆ ಸುರಂಗಗಳೊಳಗೆ ಆಶ್ರಯ ಪಡೆದರು.

ಇರಾನ್ ಮೇಲೆ ಮಾರಕ ದಾಳಿ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ತನ್ನ ಯುದ್ಧದ ವೇಳೆ ನೆರೆಯ ದೇಶಗಳ ಮೇಲೆ ದಾಳಿ ನಡೆಸಿರುವ ಬಗ್ಗೆ ಇದೀಗ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಕ್ಷಮೆಯಾಚಿಸಿದ ಬಳಿಕ, ಇರಾನ್ 'ಮಧ್ಯಪ್ರಾಚ್ಯದ ಸೋತ ಪಕ್ಷ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವ್ಯಂಗ್ಯವಾಡಿದ್ದಾರೆ. ಇರಾನ್ ವಿರುದ್ಧ ಅತ್ಯಂತ ಕಠಿಣ ಹೊಡೆತ ನೀಡುವುದಾಗಿಯೂ ಅವರು ಎಚ್ಚರಿಸಿದ್ದಾರೆ.ತನ್ನ 'ಟ್ರುತ್ ಸೋಷಿಯಲ್ 'ಸಾಮಾಜಿಕ ಜಾಲ ತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲಿ, ನರಕಕ್ಕೆ ತಳ್ಳಲ್ಪಟ್ಟಿರುವ ಇರಾನ್, ಇನ್ನು ಮುಂದೆ ನಿಮ್ಮ ಮೇಲೆ ದಾಳಿ ಮಾಡುವುದಿಲ್ಲ ಎಂಬುದಾಗಿ ನೆರೆಯ ಕೊಲ್ಲಿ ದೇಶಗಳಿಗೆ ಭರವಸೆ ನೀಡಿರುವ ಇರಾನ್ ಕ್ಷಮೆಯಾಚಿಸಿ ಕೊನೆಗೂ ಶರಣಾಗಿದೆ. ➡ ಪುಟ ೪



ಇರಾನ್‌ಗೆ ಕಾದಿದೆ ಅತಿ ದೊಡ್ಡ ದಾಳಿ: ಯುಎಸ್

ಯುದ್ಧದಲ್ಲಿ ಅತಿದೊಡ್ಡ ಬಾಂಬ್ ದಾಳಿ ಇನ್ನಷ್ಟೇ ನಡೆಯಬೇಕಾಗಿದೆ ಎಂದು ಅಮೆರಿಕದ ವಿತ್ತ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಈಗಾಗಲೇ ಇರಾನ್‌ನ ಸೇನಾ ಸಾಮರ್ಥ್ಯಗಳು, ನಾಯಕತ್ವ ಹಾಗೂ ಪರಮಾಣು ಕಾರ್ಯಕ್ರಮಗಳ ಮೇಲೆ ದಾಳಿ ನಡೆಸಿದ್ದು, ಇರಾನ್ ಜರ್ಝರಿತಗೊಂಡಿದೆ. ➡ ಪುಟ ೪

ಇರಾನ್‌ಗೆ ರಷ್ಯಾ ಮಾಹಿತಿ!

ಅಮೆರಿಕದ ಯುದ್ಧನೌಕೆಗಳು, ವಿಮಾನಗಳು ಮತ್ತು ಇತರ ಮಿಲಿಟರಿ ಆಸ್ತಿಗಳನ್ನು ಗುರಿಯಾಗಿಸಲು ಇರಾನ್‌ಗೆ ನೆರವಾಗಬಲ್ಲ ಗುಪ್ತಚರ ಮಾಹಿತಿಯನ್ನು ರಷ್ಯಾ ಒದಗಿಸಿದೆ ಎಂದು ಗುಪ್ತಚರ ವರದಿಗಳನ್ನು ಆಧರಿಸಿ ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿ ಹಂಚಿಕೆ ಆರೋಪ: ಅಮೆರಿಕದ ಮಿಲಿಟರಿ ಗುರಿಗಳನ್ನು ಗುರುತಿಸಲು ಇರಾನ್‌ಗೆ ಸಹಾಯ ಮಾಡುವ ಮಾಹಿತಿಯನ್ನು ಮಾಸ್ಕೋ ರವಾನಿಸಿದೆ ಎಂದು ಇಬ್ಬರು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಇರಾನ್‌ನ ಮಿಲಿಟರಿ ಕ್ರಮಗಳನ್ನು ರಷ್ಯಾ ನಿರ್ದೇಶಿಸುತ್ತಿದೆ ಅಥವಾ ಈ ಮಾಹಿತಿಯನ್ನು ಹೇಗೆ ಬಳಸಬೇಕೆಂದು ಸೂಚನೆ ನೀಡುತ್ತಿದೆ ಎಂಬುದಕ್ಕೆ ಯಾವುದೇ ಪುರಾವೆಗಳು ಲಭ್ಯವಾಗಿಲ್ಲ, ಎನ್ನಲಾಗಿದೆ.ಮಾಹಿತಿ ಹಂಚಿಕೆ ಅಮೆರಿಕದ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ವೈಟ್ ಹೌಸ್ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿದ್ದಾರೆ. ➡ ಪುಟ ೪

16 ವಿಮಾನ ನಾಶ: ಹೇಡಿತನದ ಕೃತ್ಯ

ಟೆಹ್ರಾನ್‌ನ ಮೆಹ್ರಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಇಸ್ರೇಲಿ ದಾಳಿಗಳು ಗುರಿಯಾಗಿಸಿಕೊಂಡಿವೆ ಎಂದು ವರದಿಯಾದ ನಂತರ ಬಲದಿಂದ ಪ್ರತಿಕ್ರಿಯಿಸುವುದಾಗಿ ಇರಾನ್ ಎಚ್ಚರಿಸಿದೆ. ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಈ ದಾಳಿಯನ್ನು ಖಂಡಿಸಿದ್ದು, ನಾಗರಿಕ ವಿಮಾನಯಾನ ಸೌಲಭ್ಯಗಳನ್ನು ಗುರಿಯಾಗಿಸುವುದು ಸ್ವೀಕಾರಾರ್ಹವಲ್ಲ ಎಂದು ಹೇಳಿದ್ದಾರೆ. ನಮ್ಮ ವಿಮಾನ ನಿಲ್ದಾಣಗಳನ್ನು ಗುರಿಯಾಗಿಸುವುದು ಹೇಡಿತನದ ಕೃತ್ಯವಾಗಿದೆ. ನಾವು ಅದಕ್ಕೆ ಬಲವಾಗಿ ಪ್ರತಿಕ್ರಿಯಿಸುತ್ತೇವೆ ಎಂದು ಇರಾನಿನ ಮಾಧ್ಯಮಗಳು ವರದಿ ಮಾಡಿದ ಹೇಳಿಕೆಯಲ್ಲಿ ಅರಾಘ್ಚಿ ತಿಳಿಸಿದ್ದಾರೆ. ಮೆಹ್ರಾಬಾದ್ ವಿಮಾನ ನಿಲ್ದಾಣದಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಕುಡ್ಸ್ ಫೋರ್ಸ್‌ಗೆ ಸೇರಿದ 16 ವಿಮಾನಗಳನ್ನು ನಾಶಪಡಿಸಿವೆ ಎಂದು ಒಪ್ಪಿಕೊಂಡಿವೆ.

ಅಧಿಕಾರ ಬಿಡಿ ಎಂದರೆ ಬಿಡುತ್ತೇನೆ

ವರಿಷ್ಠರ ಮಾತಿನಂತೆ ನಡೆಯುವೆ: ಸಿಎಂ

• ಮೈಸೂರು: ಪಕ್ಷದ ಹೈಕಮಾಂಡ್ ಅಧಿಕಾರ ಬಿಡಿ ಎಂದು ಹೇಳಿದರೆ ಬಿಡುತ್ತೇನೆ. ಅಧಿಕಾರದಲ್ಲಿ ಮುಂದುವರಿಯಿರಿ ಎಂದರೆ ಮುಂದುವರಿಯುತ್ತೇನೆ. ಹಾಗಾಗಿ ನಾನು ಅಧಿಕಾರದಲ್ಲಿ ಮುಂದುವರಿಯಬೇಕೋ, ಬೇಡವೋ ಎಂಬುದರ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರುಣ ಕ್ಷೇತ್ರದ ಪಿಳ್ಳಾಹಳ್ಳಿ ಹೆಲಿಪ್ಯಾಡ್‌ನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಹಣಕಾಸು ಸಚಿವನಾಗಿಯೂ ಈಗ 17ನೇ ಬಜೆಟ್ ಮಂಡಿಸಿದ್ದೇನೆ. ಕರ್ನಾಟಕದಲ್ಲಿ ಹೆಚ್ಚು ಬಜೆಟ್ ಮಂಡಿಸಿರುವುದು ನಾನೇ. ಹೈಕಮಾಂಡ್ ಅವಕಾಶ ಕೊಟ್ಟರೆ ಇನ್ನು ಮುಂದೆಯೂ ಎರಡು ಬಜೆಟ್ ಮಂಡಿಸುತ್ತೇನೆ. ಹೈಕಮಾಂಡ್ ಸಿಎಂ ಸ್ಥಾನದ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ, ಅದಕ್ಕೆ ನಾನು ಬದ್ಧನಾಗಿದ್ದೇನೆ. ಹೈಕಮಾಂಡ್ ಮೇಲೆ ನನಗೆ ವಿಶ್ವಾಸವಿದೆ. ಅವರ ಮೇಲೆ ವಿಶ್ವಾಸ ಇರಲೇಬೇಕು ಎಂದರು.

ರೆಕಾರ್ಡ್ ಮುಖ್ಯವಲ್ಲ: ಬಜೆಟ್ ಮಂಡನೆ ಮೂಲಕ ದಾಖಲೆ ಮುರಿಯುವುದು ಮುಖ್ಯವಲ್ಲ. ಜನರು ಅವಕಾಶ ಕೊಟ್ಟರೆ ಮುಂದೆ ಯೂ ಬಜೆಟ್ ಮಂಡಿಸುತ್ತೇನೆ. ನಾನು ವಾಸ್ತವ ಬಿಟ್ಟು ಮಾತನಾಡುವುದಿಲ್ಲ. ಇಡೀ ರಾಜ್ಯದ ಜನರಿಗೆ ಆಸೆ ಇದೆ. ಯಾರು ಏನೇ ಹೇಳಿದರೂ ಕೊನೆಯ ದಾಗಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸ್ಪಷ್ಟಪಡಿಸಿದರು.

ನಾನು ಒಂದು ವರ್ಗಕ್ಕೆ ಸೀಮಿತವಾಗಿಲ್ಲ: ಬಜೆಟ್ ಒಂದು ವರ್ಗಕ್ಕೆ ಸೀಮಿತ ಎಂದು ಬಿಜೆಪಿ ನಾಯಕರ ಟೀಕೆಗೆ ಉತ್ತರಿಸಿ, ಸಿದ್ದರಾಮಯ್ಯ ಬಜೆಟ್ ಒಂದು ವರ್ಗ ಕ್ಕೆ ಸೀಮಿತವಾಗಿಲ್ಲ. ಸಾಮಾಜಿಕ ನ್ಯಾಯದಲ್ಲಿ ಬಜೆಟ್ ಮಂಡನೆ ಮಾಡಿದ್ದೇವೆ. ಬಜೆಟ್ ಇಡೀ ರಾಜ್ಯದ ಅಭಿವೃದ್ಧಿಯ ಬಜೆಟ್ ಆಗಿದೆ. ➡ ಪುಟ ೪



ಸಾಲಕ್ಕೆ ಸಿಎಂ ಸಮರ್ಥನೆ


ಸಾಲ ಮಾಡಿ ಬಜೆಟ್ ಮಂಡಿಸಿದ್ದಾರೆ ಎಂಬ ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಎಷ್ಟು ಸಾಲ ಮಾಡಿದ್ದಾರೆ ಎಂಬುದು ಗೊತ್ತೇ? ಸಾಲ ಮಾಡದೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ನಮ್ಮ ಸಾಲ ಕೂಡ ಫೈನಾನ್ಸ್ ಮಿತಿಯಲ್ಲಿದೆ. ಸಾಲ ಯಾವಾಗಲೂ ಶೇ.25ರ ಒಳಗೆ ಇರಬೇಕು. ನಾವು ಶೇ.24ರಷ್ಟು ಸಾಲ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು. ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ ಎಂಬುದು ವಿಪಕ್ಷ ನಾಯಕ ಆರ್. ಅಶೋಕ್ ಅವರಿಗೆ ಗೊತ್ತಾ? ಪ್ರಧಾನಿ ಮೋದಿ ಅವರು ಬಂದ ಮೇಲೆ 11 ವರ್ಷಗಳಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. ಶೇ.55.6ರಷ್ಟು ಸಾಲ ಮೋದಿ ಮಾಡಿದ್ದಾರೆ. ಆದರೆ ನಾವು ಆರ್ಥಿಕ ಶಿಸ್ತಿನ ಮಿತಿಯಲ್ಲಿ ಸಾಲ ಮಾಡಿ, ಅಭಿವೃದ್ಧಿಗೆ ಹಣ ಕೊಡುತ್ತಿದ್ದೇವೆ. ಆದರೆ ಬಿಜೆಪಿ ಅವರ ಮಿತಿ ಆರ್ಥಿಕ ಸ್ಥಿತಿಗಿಂತ ಹೆಚ್ಚಾಗಿದೆ. ನಾವು ಮಾಡಿರುವ ಸಾಲ ಆರ್ಥಿಕ ಮಿತಿ ಒಳಗಿದೆ ಎಂದು ಸಿಎಂ ಹೇಳಿದರು.

ಪಂಪ್ಡ್ ಸ್ಟೋರೇಜ್‌ಗೆ ಒಪ್ಪಿಗೆ ಹಿನ್ನೆಲೆ | ಪಿಐಎಲ್ ವಿಚಾರಣೆ

ಶರಾವತಿ: ಸರ್ಕಾರಕ್ಕೆ ಹೈ ನೋಟಿಸ್

• ಬೆಂಗಳೂರು: ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ 10 ಸಾವಿರ ಕೋಟಿ ರೂ.ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆಗೆ ರಾಜ್ಯ ವನ್ಯಜೀವಿ ಮಂಡಳಿ ನೀಡಿರುವ ಅನುಮೋದನೆ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನೀಡಿರುವ ತಾತ್ವಿಕ ಅನುಮೋದನೆಯ ಕಾನೂನು ಬದ್ಧತೆ ಪ್ರಶ್ನಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಸಾಗರದ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ. ಮನೋಹರ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲೆ ಬಿ.ವಿ. ವಿದ್ಯುಲ್ಲತಾ ಅವರ ವಾದ



ಆಲಿಸಿದ ಪೀಠವು, ಪ್ರತಿವಾದಿಗಳಾದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.ಉದ್ದೇಶಿತ ಯೋಜನೆಯು ವನ್ಯಜೀವಿಗಳಿಗೆ ಸಂಪೂರ್ಣ ಹಾನಿ ಉಂಟು ಮಾಡಲಿದೆ. ➡ ಪುಟ ೪

ಗೂಗಲ್, ಕೊಲಂಬೋ ಟೆಲಿಗ್ರಾಫ್, ಲಂಕಾ ನ್ಯೂಸ್‌ಗೆ ನೋಟಿಸ್

ಶ್ರೀಲಂಕಾ ಜಡ್ಜ್ ಅರ್ಜಿ ವಿಚಾರಣೆ

• ಬೆಂಗಳೂರು: ತಮ್ಮ ವಿರುದ್ಧ ಆನ್‌ಲೈನ್‌ನಲ್ಲಿ ಪ್ರಕಟವಾಗಿರುವ ಮಾನಹಾನಿಕರ ಲೇಖನಗಳನ್ನು ತೆರವುಗೊಳಿಸುವಂತೆ ನಿರ್ದೇಶಿಸಬೇಕು ಎಂದು ಕೋರಿ ಶ್ರೀಲಂಕಾ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ, ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೋ ಟೆಲಿಗ್ರಾಫ್ ಹಾಗೂ ಲಂಕಾ ಇ-ನ್ಯೂಸ್‌ಗೆ ನೋಟಿಸ್ ಜಾರಿ ಮಾಡಿದೆ.



ಶ್ರೀಲಂಕಾ ಸುಪ್ರೀಂನಲ್ಲಿ ನ್ಯಾಯಮೂರ್ತಿ ಯಾಗಿರುವ ಎಎಚ್‌ಎಂಡಿ ನವಾಜ್ ಅವರು ಆನ್‌ಲೈನ್‌ನಲ್ಲಿ ಪ್ರಕಟವಾಗಿರುವ ಮಾನಹಾನಿ ಲೇಖನಗಳನ್ನು ತೆರವುಗೊಳಿಸುವಂತೆ ರಾಜ್ಯ ಹೈಕೋರ್ಟ್‌ಗೆ ಅರ್ಜಿ ಅಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಸಚಿನ್ ಶಂಕರ್ ಮಗದುಮ್ ಅವರಿದ್ದ ಪೀಠವು ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ ಸೇರಿದಂತೆ ಗೂಗಲ್ ಇಂಡಿಯಾ, ಗೂಗಲ್ ಇಂಕ್, ಕೊಲಂಬೋ ಟೆಲಿಗ್ರಾಫ್ ಹಾಗೂ ಲಂಕಾ ಇ-ನ್ಯೂಸ್‌ಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಮುಂದೂಡಿದೆ. ➡ ಪುಟ ೪

ನೋಟಿಸ್ ನೀಡಿದರೂ ಸ್ಪಂದಿಸದ ಗೂಗಲ್

ಈಗಾಗಲೇ ಈ ಸಂಬಂಧ ಗೂಗಲ್ ಸಂಸ್ಥೆಗೆ ನೋಟಿಸ್ ನೀಡಿದ್ದರೂ, ಆಕ್ಷೇಪಾರ್ಹ ಹಾಗೂ ಅವಹೇಳನಕಾರಿ ಸುದ್ದಿಗಳನ್ನು ಆನ್‌ಲೈನ್‌ನಿಂದ ತೆಗೆದುಹಾಕಲಾಗಿಲ್ಲ ಎಂದು ನ್ಯಾ. ನವಾಜ್ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗಾಗಿ ನ್ಯಾಯಾಲಯವು ಮಧ್ಯಪ್ರವೇಶಿಸಿ ಅಂತಹ ಮಾನಹಾನಿಕರ ವಿಷಯಗಳನ್ನು ತಕ್ಷಣವೇ ತೆರವುಗೊಳಿಸಲು ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡಬೇಕೆಂದು ಅವರು ಕೋರಿದ್ದಾರೆ.

ನಿಶಾಂತ್ ಇಂದು ರಾಜಕೀಯಕ್ಕೆ



ಮುಖ್ಯಮಂತ್ರಿ ರಾಜೀನಾಮೆ ಬೆನ್ನಲ್ಲೇ ಮುನ್ನೆಲೆಗೆ ಬಂದ ಪುತ್ರ ನಿಶಾಂತ್

• ಹೊಸದಿಲ್ಲಿ: ರಾಜ್ಯ ಸಭೆಗೆ ನಾಮನಿರ್ದೇಶನಗೊಂಡ ನಿತೀಶ್ ಕುಮಾರ್ ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಪುತ್ರ ನಿಶಾಂತ್ ಕುಮಾರ್ ಭಾನುವಾರ ಸಕ್ರಿಯ ರಾಜಕಾರಣ ಪ್ರವೇಶಿಸಲಿದ್ದಾರೆ. ಹೊಸ ತಲೆಮಾರಿನ ನಾಯಕ ನಿಶಾಂತ್ ರಾಜಕೀಯ ಪ್ರವೇಶದೊಂದಿಗೆ ಪಕ್ಷದಲ್ಲಿ ನಾಯಕತ್ವದ ಚರ್ಚೆಗಳು ನಡೆಯುತ್ತಿವೆ. ಪಕ್ಷದ ನಾಯಕರೆಲ್ಲರೂ ತಾಳ್ಮೆ ಮತ್ತು ಒಗ್ಗಟ್ಟಿನಿಂದ ಇರಬೇಕೆಂದು ಹಿರಿಯ ನಾಯಕರು ಮನವಿ ಮಾಡಿದ್ದಾರೆ. ಭಾನುವಾರ ನಿಶಾಂತ್ ರಾಜ್ಯ ರಾಜಕೀಯಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ, ಜೆಡಿ(ಯು) ಮುಖಂಡ ಶ್ರವಣ್ ಕುಮಾರ್, ನಿತೀಶ್ ಅವರ ಪುತ್ರ ಎಂಬ ಕಾರಣಕ್ಕೆ ನಿಶಾಂತ್ ಅವರನ್ನು ಕರೆತರಲಾಗುತ್ತಿಲ್ಲ. ➡ ಪುಟ ೪

ನನ್ಮೇಲೆ ದೀದಿಗೇಕೆ ಕೋಪ?: ರಾಷ್ಟ್ರಪತಿ

• ಹೊಸದಿಲ್ಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಸಾರ್ವಜನಿಕವಾಗಿ ಸಭ್ಯ ಭಾಷೆಯಲ್ಲೇ ಛೀಮಾರಿ ಹಾಕಿದ್ದಾರೆ. ನಾನೂ ಬಂಗಾಳದ ಮಗಳು, ಮಮತಾ ನನ್ನ ಕಿರಿಯ ಸಹೋದರಿ ಇದ್ದಂತೆ. ನನಗೇನೂ ಅವರ ಮೇಲೆ ದ್ವೇಷವಿಲ್ಲ. ಆದರೆ ನನಗೆ ಅಸಮಾಧಾನವಾಗಿದೆ. ನನ್ನ ಮೇಲೆ ಅವರಿಗೇಕೆ ಇಷ್ಟು ಕೋಪ ಎಂದು ಮುರ್ಮು ಪ್ರಶ್ನಿಸಿದ್ದಾರೆ.



ಶನಿವಾರ ಉತ್ತರ ಬಂಗಾಳದ ನಡೆದ 9ನೇ ಅಂತಾರಾಷ್ಟ್ರೀಯ ಆದಿವಾಸಿ (ಸಂತಾಲ್) ಸಮ್ಮೇಳನಕ್ಕೆ ಅನುಮತಿ ನೀಡದೆ ಸ್ಥಳ ಬದಲಾಯಿಸಿದ್ದಲ್ಲದೆ, ರಾಷ್ಟ್ರಪತಿಗೆ ಸೂಕ್ತ ಭದ್ರತೆಯನ್ನೂ ನೀಡದೆ ಮುರ್ಮು ಅವರನ್ನು ಮುಖ್ಯಮಂತ್ರಿ ಮಮತಾ ಅಪಮಾನಿಸಿದ್ದಾರೆ. ಘಟನೆಯನ್ನು ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಖಂಡಿಸಿದ್ದಾರೆ.

ಉತ್ತರ ಬಂಗಾಳದ ಸಿಲಿಗುರಿಯ ಬಿಧಾನ್‌ನಗರದಲ್ಲಿ 9ನೇ ಅಂತಾರಾಷ್ಟ್ರೀಯ ಆದಿವಾಸಿ (ಸಂತಾಲ್) ಸಮ್ಮೇಳನವನ್ನು ಆಯೋಜಿಸಲು ಮೊದಲೇ ನಿರ್ಧರಿಸಲಾಗಿದ್ದು, ರಾಷ್ಟ್ರಪತಿ ಮುರ್ಮು ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲಾಗಿತ್ತು. ➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,73,000 (2,72,300) ಅಪರಂಜಿ ಚಿನ್ನ 16,011 (15,860) ಆಭರಣ ಚಿನ್ನ 15,000 (14,860) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹91.93

09

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಭಾನುವಾರ, 8 ಮಾರ್ಚ್ 2026

ಮಂಗಳೂರು



ಉದ್ಯೋಗಸ್ಥ ಮಹಿಳೆಯರು

ಉದ್ಯೋಗಮ್ ಸ್ತ್ರೀ –ಪುರುಷ ಲಕ್ಷಣಂ. ಬದಲಾದ ಈ ಸಾಲುಗಳು ಇಂದಿನ ಕಾಲಕ್ಕೆ ಸೂಕ್ತ ಎನಿಸುತ್ತದೆ. ಈ ಕಾಲದಲ್ಲಿ ಎಷ್ಟು ಆದಾಯವಿದೆಯೋ ಅಷ್ಟೇ ಖರ್ಚುಗಳಿರುತ್ತವೆ. ಹಾಗಾಗಿ ಮಹಿಳೆಯ ದುಡಿಮೆ ಅನಿವಾರ್ಯ ಹಾಗು ಅತ್ಯಾವಶ್ಯಕವೆನಿಸುತ್ತದೆ. ಉದ್ಯೋಗಿ ಮಹಿಳೆ ಇಂದಿನ ಸಮಾಜದ ಶಕ್ತಿಯ ಸಂಕೇತವಾಗಿದೆ. ಅವಳು ಮನೆಯಲ್ಲೂ, ಕಚೇರಿಯಲ್ಲೂ ಸಮಾನವಾಗಿ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಶಿಕ್ಷಣವು ಅವಳಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ. ಅದೇ ಆತ್ಮ ವಿಶ್ವಾಸ ಅವಳನ್ನು ಎತ್ತರದ ಶಿಖರಗಳಿಗೆ ಕೊಂಡೋಯ್ಯುತ್ತದೆ. ಉದ್ಯೋಗವು ಅವಳಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡುವುದಲ್ಲದೆ ಕುಟುಂಬದ ಅಭಿವೃದ್ಧಿಗೆ ಅವಳ ಆದಾಯ ಸಹಕಾರಿಯಾಗಿರುತ್ತದೆ. ಅವಳು ಸಮಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಾಳೆ. ಸಮಾಜದಲ್ಲಿ ಮಹಿಳೆಯ ಸ್ಥಾನವನ್ನು ಉನ್ನತಗೊಳಿಸುತ್ತಾಳೆ. ಕಠಿಣ ಪರಿಶ್ರಮದಿಂದ ತನ್ನ ಗುರಿಗಳನ್ನು ಸಾಧಿಸುತ್ತಾಳೆ. ಸವಾಲುಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ಅವಳು ಇತರ ಮಹಿಳೆಯರಿಗೆ ಪ್ರೇರಣೆಯಾಗುತ್ತಾಳೆ. ತಾಯಿಯಾಗಿ ಮಕ್ಕಳಿಗೆ ಉತ್ತಮ ಮಾದರಿಯಾಗುತ್ತಾಳೆ. ಅವಳ ಸಾಧನೆಗಳು ಸಮಾಜಕ್ಕೆ ಹೆಮ್ಮೆ ತಂದಿವೆ. ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅವಳು ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಾಳೆ. ಅವಳ ಕಾರ್ಯಕ್ಷೇತ್ರದಲ್ಲಿ ತನ್ನ ಪ್ರತಿಭೆಯನ್ನು ತೋರಿಸುತ್ತಾಳೆ, ಅಲ್ಲದೆ ಕುಟುಂಬ ಮತ್ತು ಉದ್ಯೋಗದ ನಡುವೆ ಸಮತೋಲನ ಕಾಯ್ದುಕೊಳ್ಳುತ್ತಾಳೆ. ಅವಳು ಆತ್ಮಗೌರವದಿಂದ ಜೀವನ ನಡೆಸುತ್ತಾಳೆ.ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತಾಳೆ.ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ.ಉದ್ಯೋಗಿ ಮಹಿಳೆ ದೇಶದ ಆರ್ಥಿಕತೆಗೆ ಬಲವಾಗಿದ್ದಾಳೆ. ಅವಳು ಸಮಾಜದ ಬದಲಾವಣೆಗೆ ಕಾರಣವಾಗುತ್ತಾಳೆ. ಕಷ್ಟಗಳ ನಡುವೆಯೂ ತನ್ನ ಕನಸುಗಳನ್ನು ಬಿಡುವುದಿಲ್ಲ. ಉದ್ಯೋಗವು ಅವಳಿಗೆ ಸ್ವಾತಂತ್ರತೆಯ ಅನುಭವ ನೀಡುತ್ತದೆ. ಅವಳ ಪರಿಶ್ರಮದಿಂದ ಕುಟುಂಬ ಸುಖವಾಗಿ ಸಾಗುತ್ತದೆ. ಮಹಿಳೆಯ ಸಾಮರ್ಥ್ಯಕ್ಕೆ ಉದ್ಯೋಗದ ಆವರಣ ಒಂದು ವೇದಿಕೆಯಾಗಿದೆ. ಅವಳ ಶ್ರಮ, ಶಕ್ತಿ, ಮತ್ತು ಸಹನೆಯ ಪ್ರತಿರೂಪವಾಗಿರುತ್ತಾಳೆ . ಉದ್ಯೋಗಿ ಮಹಿಳೆ ಸಮಾಜದ ಪ್ರಗತಿಯ ಚಿಹ್ನೆಯಾಗಿಹಳು. ಅವಳು ಸಮಾನತೆಯ ಸಂಕೇತವಾಗಿಹಳು.ಹೊಸ ತಲೆಮಾರಿಗೆ ಆತ್ಮವಿಶ್ವಾಸವನ್ನು ಬೋಧಿಸುತ್ತಾಳೆ.ಉದ್ಯೋಗಿ ಮಹಿಳೆ ನಮ್ಮ ದೇಶದ ಗೌರವವಾಗಿದ್ದಾಳೆ.ಅವಳು ಮನೆಯಲ್ಲೂ, ಕಚೇರಿಯಲ್ಲೂ ಸಮಾನವಾಗಿ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಶಿಕ್ಷಣವು ಅವಳಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ. ಉದ್ಯೋಗವು ಅವಳಿಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡುತ್ತದೆ. ಸವಾಲುಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ಅವಳು ಇತರ ಮಹಿಳೆಯರಿಗೆ ಪ್ರೇರಣೆ ಮತ್ತು ಮಾದರಿಯಾಗುತ್ತಾಳೆ. ಅವಳ ಸಾಧನೆ ಹೆಮ್ಮೆ ತಂದಿವೆ. ಉದ್ಯೋಗ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅವಳು ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಾಳೆ. ಮಹಿಳೆ ಸಮಾಜದ ಪ್ರಗತಿಯ ಚಿಹ್ನೆಯಾಗಿದ್ದಾಳೆ. ಅವಳು ಸಮಾನತೆಯ ಸಂಕೇತವಾಗಿದೆ. ಹೊಸ ತಲೆಮಾರಿಗೆ ಆತ್ಮವಿಶ್ವಾಸವನ್ನು ಬೋಧಿಸುತ್ತಾಳೆ. ಉದ್ಯೋಗಿ ಮಹಿಳೆ ನಮ್ಮ ದೇಶದ ಗೌರವವಾಗಿದ್ದಾಳೆ. ಅವಳ ಕುಟುಂಬದ ಬೆನ್ನೆಲುಬಾಗಿರುತ್ತಾಳೆ.

ಉದ್ಯೋಗಸ್ಥ ಮಹಿಳೆಯರಿಗೆ ಮಾಸಿಕ ರಜೆ

ಮಹಿಳೆಯರು ಋತುಚಕ್ರದ ಸಮಯದಲ್ಲಿ ದೈಹಿಕ ಮತ್ತು ಮಾನಸಿಕ ಅಸಹನೆ ಅನುಭವಿಸುತ್ತಾರೆ. ಈ ಸಂದರ್ಭದಲ್ಲಿ ವಿಶ್ರಾಂತಿ ಅತ್ಯಂತ ಅಗತ್ಯವಾಗುತ್ತದೆ. ಉದ್ಯೋಗ ಕ್ಷೇತ್ರದಲ್ಲಿಯೂ ಮಹಿಳೆಯರ ಈ ಅವಸ್ಥೆಗೆ ಸಹಕಾರ ನೀಡಬೇಕು. ಮಾಸಿಕ ರಜೆ ಎಂಬುದು ಮಹಿಳೆಯರ ಆರೋಗ್ಯ ಹಕ್ಕಿನ ಭಾಗವಾಗಿದೆ. ಭಾರತದಲ್ಲಿ ಕೆಲವು ರಾಜ್ಯ ಸರ್ಕಾರಗಳು ಈಗಾಗಲೇ ಈ ರಜೆ ಅನುಮತಿಸಿವೆ.

ದಿಗಂತ ವಿಶೇಷ

ಅಂತಾರಾಷ್ಟ್ರೀಯ ಮಹಿಳಾ ದಿನದ ಇತಿಹಾಸ

1908ರಲ್ಲಿ ಅಮೆರಿಕಾದ ನ್ಯೂಯಾರ್ಕ್ ನಲ್ಲಿ ಮಹಿಳೆಯರ ಹಕ್ಕುಗಳಿಗಾಗಿ ಪ್ರತಿಭಟನೆಗಳು ಪ್ರಾರಂಭವಾದವು. ಹೆಣ್ಣು ಮಕ್ಕಳ ಹಕ್ಕುಗಳಿಗಾಗಿ ಅನೇಕ ಪ್ರತಿಭಟನೆಗಳು ನಡೆದವು. ವಿಶ್ವಸಂಸ್ಥೆಯು 1975ರಿಂದ ಮಾರ್ಚ್ 8 ಅನ್ನು ಅಂತಾರಾಷ್ಟ್ರೀಯ ಮಹಿಳಾ ದಿನ ಎಂದು ಅಧಿಕೃತವಾಗಿ ಘೋಷಿಸಿತು. ಆ ದಿನದಂದು ಮಹಿಳೆಯರ ಸಾಧನೆಗಳನ್ನು ಸಂಭ್ರಮಿಸಲಾಗುತ್ತದೆ. ಈ ಆಚರಣೆಯ ಮೂಲಕ ಮಹಿಳಾ ಹಕ್ಕುಗಳನ್ನು ಬಲಪಡಿಸಿ ಸಮಾನತೆಯನ್ನು ಕಲ್ಪಿಸಿ ಕೊಡುವಲ್ಲಿ ಕಾನೂನು ವ್ಯವಸ್ಥೆಗಳನ್ನು ಉತ್ತೇಜಿಸಲು ಕರೆ ನೀಡಲಾಗುತ್ತದೆ. ಪ್ರತಿ ವರ್ಷವೂ ಇಂತಹ ಘೋಷವಾಕ್ಯಗಳು ಮಹಿಳೆಯರ ಹಕ್ಕುಗಳ ರಕ್ಷಣೆ, ಕಾನೂನು ನೆರವು, ಮತ್ತು ಸಮಾನ ಅವಶ್ಯಕತೆಗಳನ್ನು ಒದಗಿಸುವ ಜಾಗತಿಕ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ. ಇರಲಿ ಅಂತಾರಾಷ್ಟ್ರೀಯ ಆಚರಣೆಗಳು ಏನೇ ಇರಲಿ, ಪ್ರಪಂಚದಲ್ಲಿರುವ ಎಲ್ಲಾ ಒಳ್ಳೆಯ ವಿಷಯಗಳನ್ನು ಆಲಿಸೋಣ, ಅರ್ಥೈಸಿಕೊಂಡು ಕೆಲವನ್ನು ಮಾತ್ರ ಪಾಲಿಸಿ ನಮ್ಮ ಸಂಸ್ಕೃತಿ ಹಾಗು ನಮ್ಮ ಸನಾತನ ಆಚರಣೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡೋಣ.

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ। ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ॥

ಮಹಿಳೆಯರಿಗೆ ಕಾನೂನು ಶಿಕ್ಷಣ ಅತ್ಯಗತ್ಯ

ಮಹಿಳಾ ದೌರ್ಜನ್ಯವು ಸಮಾಜದ ಗಂಭೀರ ಸಮಸ್ಯೆಯಾಗಿದೆ. ಇದು ಶಾರೀರಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ರೀತಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ. ಮಹಿಳೆಯರು ಮನೆ, ಕೆಲಸದ ಸ್ಥಳ, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಪಿತೃಸತ್ತಾತ್ಮಕ ಮನೋಭಾವನೆ ಇದರ ಪ್ರಮುಖ ಕಾರಣವಾಗಿದೆ. ಬಾಲ್ಯದಲ್ಲೇ ಹುಡುಗಿಯರ ಮೇಲೆ ಅನ್ಯಾಯ ನಡೆಯುವುದು ಕಂಡುಬರುತ್ತದೆ. ಶಿಕ್ಷಣದ ಕೊರತೆ ಮಹಿಳೆಯರ ಶಕ್ತಿಯನ್ನು ಹಿಂಸಿಸುತ್ತದೆ. ವರದಕ್ಷಿಣೆ, ಲೈಂಗಿಕ ಕಿರುಕುಳ, ಮಹಿಕೆಯರ ಮೇಲಿನ ದಬ್ಬಾಳಿಕೆ,ಇವು ಮಹಿಳಾ ದೌರ್ಜನ್ಯದ ರೂಪಗಳು. ಸಾಮಾಜಿಕ ಮಾಧ್ಯಮಗಳಲ್ಲಿಯೂ ಮಹಿಳೆಯರ ಮಾನಹಾನಿ ನಡೆಯುತ್ತಿದೆ. ಮಹಿಳೆಯರನ್ನು ದುರ್ಬಲರೆಂದು ನೋಡುವ ಮನೋಭಾವ ಬದಲಾಗಬೇಕಾಗಿದೆ. ಮಹಿಳೆಯರ ಹಕ್ಕುಗಳನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಭಾರತದ ಸಂವಿಧಾನವು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದೆ.



ಹೆಣ್ಣುಮಕ್ಕಳಿಗೆ ಆತ್ಮರಕ್ಷಣಾ ತರಬೇತಿ ದೊರಕಲಿ

ಮಹಿಳಾ ದೌರ್ಜನ್ಯವು ಕೇವಲ ಮಹಿಳೆಯರ ಸಮಸ್ಯೆಯಲ್ಲ, ಸಮಾಜದ ಸಮಸ್ಯೆ. ನ್ಯಾಯಾಂಗವು ತ್ವರಿತ ನ್ಯಾಯ ನೀಡುವುದು ಅಗತ್ಯ. Justice delayed is Justice denied" ಎಂಬಂತೆ ತಡವಾಗಿ ತೀರ್ಪು ನೀಡಿದರೆ ಪ್ರಯೋಜನವಿಲ್ಲ. ಮಹಿಳೆಯರ ಸಾಧನೆಗಳನ್ನು ಗುರುತಿಸಿ ಗೌರವಿಸಬೇಕು. ಪ್ರತಿ ಮನೆಯೂ ಮಹಿಳೆಯರ ಸುರಕ್ಷಿತ ಸ್ಥಳವಾಗಿರಬೇಕು. ಮಹಿಳೆಯರ ವಿರುದ್ಧದ ಹಿಂಸೆಗೆ ಶೂನ್ಯ ಸಹಿಷ್ಣುತೆ ಇರಬೇಕು. ಸಂಸ್ಕೃತಿಯ ಹೆಸರು ನೀಡಿ ದೌರ್ಜನ್ಯಕ್ಕೆ ಅವಕಾಶ ಕೊಡಬಾರದು. ಮಹಿಳೆಯರ ಗೌರವ ಕಾಪಾಡಿದರೆ ಸಮಾಜ ನಿಜವಾದ ಪ್ರಗತಿಯನ್ನು ಸಾಧಿಸುತ್ತದೆ.

ಕಾನೂನು ಸಮಾಜದಲ್ಲಿ ಶಾಂತಿ, ನ್ಯಾಯ ಹಾಗೂ ಸಮಾನತೆಯನ್ನು ಕಾಪಾಡಲು ನಿರ್ಮಿಸಲಾದ ವ್ಯವಸ್ಥೆ: ಕಾನೂನಿನ ಮೂಲ ಉದ್ದೇಶ ಪ್ರಜೆಗಳ ಹಕ್ಕುಗಳನ್ನು ರಕ್ಷಿಸುವುದು. ಇದು ದುರ್ಬಲರನ್ನು ಬಲಿಷ್ಠರಿಂದ ರಕ್ಷಿಸುತ್ತದೆ. ಕಾನೂನು ಸತ್ಯ ಮತ್ತು ನ್ಯಾಯದ ಸಾಧನವಾಗಿದೆ. ನಾಗರಿಕರು ಕಾನೂನನ್ನು ಪಾಲಿಸಿದರೆ ಸಮಾಜದಲ್ಲಿ ಶಿಸ್ತು ನೆಲೆಸುತ್ತದೆ. ಕಾನೂನು ಪ್ರತಿ ವ್ಯಕ್ತಿಗೂ ಸಮಾನ ಅವಕಾಶವನ್ನು ನೀಡುತ್ತದೆ. ನ್ಯಾಯಾಂಗವು ಕಾನೂನಿನ ಜಾರಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಕಾನೂನಿನ ಸಹಾಯದಿಂದ ಅಪರಾಧಿಗಳಿಗೆ ಶಿಕ್ಷೆ ನೀಡಲಾಗುತ್ತದೆ. ಕಾನೂನು ಅಕ್ರಮ ಚಟುವಟಿಕೆಗಳನ್ನು ತಡೆಯುತ್ತದೆ. ಕಾನೂನು ಪ್ರಜೆಗಳಲ್ಲಿ ಹೊಣೆಗಾರಿಕೆಯನ್ನು ಬೆಳೆಸುತ್ತದೆ.ಆದರೆ, ಕೆಲವು ವೇಳೆ ಕಾನೂನಿನ ದುರುಪಯೋಗವೂ ನಡೆಯುತ್ತದೆ. ಕೆಲವು ಜನ ಕಾನೂನಿನ ಲೋಪದೋಷಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸುತ್ತಾರೆ. ಸುಳ್ಳು ದೂರುಗಳು, ನಕಲಿ ದಾಖಲೆಗಳು ಮುಂತಾದವುಗಳಿಂದ ಕಾನೂನಿನ ಅರ್ಥವನ್ನು ವಿಕೃತಗೊಳಿಸುತ್ತಾರೆ. ಕೆಲವು ರಾಜಕೀಯ ನಾಯಕರೂ ಕಾನೂನನ್ನು ತಮ್ಮ ಲಾಭಕ್ಕೆ ಬಳಸುತ್ತಾರೆ. ಕಾನೂನು ಸದುಪಯೋಗಕ್ಕಿಂತ ದುರುಪಯೋಗವಾಗುವಾಗ ನಿರಪರಾಧಿಗಳು ಶಿಕ್ಷೆ ಅನುಭವಿಸುತ್ತಾರೆ. ಕೆಲವೊಮ್ಮೆ ಪೊಲೀಸರ ಅಥವಾ ಅಧಿಕಾರಿಗಳ ಅಜಾಗರೂಕತೆ ಕಾನೂನಿನ ವಿಶ್ವಾಸ ಹಾಳುಮಾಡುತ್ತದೆ. ಕಾನೂನಿನ ನಿಧಾನ ಪ್ರಕ್ರಿಯೆಯಿಂದ ಅನ್ಯಾಯ ಅನುಭವಿಸುವವರು ಹೆಚ್ಚಾಗುತ್ತಾರೆ.



ಸ್ತ್ರೀ....... ಎಂದರೆ ಅಷ್ಟೇ ಸಾಕೆ. ನಿನಗೆ ಬೇರೆ ಹೆಸರು ಬೇಕೇ. ಡಾ . ಜಿ ಎಸ್ ಶಿವರುದ್ರಪ್ಪನವರು ಸ್ತ್ರೀಯನ್ನು ಪ್ರಕೃತಿಗೆ ಹೋಲಿಸಿ ಮಹಿಳೆಯ ತ್ಯಾಗ, ಪ್ರೀತಿ ಮತ್ತು ಸೃಷ್ಟಿಯ ಸಾಮರ್ಥ್ಯ, ಆಕಾಶದ ಬೆಳಕು, ಹಸಿರು ಬೆಟ್ಟ, ಮತ್ತು ದೀಪದ ಬೆಳಕಿಗೆ ಹೋಲಿಸಿ ವರ್ಣಿಸಿದ್ದಾರೆ. ಸ್ತ್ರೀಯನ್ನು ತ್ಯಾಗಮಯಿಯಾದ ಹೆಣ್ಣು ಬಾಂಧವ್ಯದ ಸಂಕೇತ, ಪ್ರೀತಿಯ ಆಗರ, ಆಕೆ ಪ್ರಕೃತಿ ಮತ್ತು ಪ್ರೀತಿಯ ಮೂಲವಾಗಿದ್ದಾಳೆ ಎಂದು ಕವಿ ವರ್ಣಿಸಿದ್ದಾರೆ.

ಸ್ತ್ರೀ.....ಎಂದರೆ ಅಷ್ಟೇ ಸಾಕೆ? ನಿನಗೆ ಬೇರೆ ಹೆಸರು ಬೇಕೇ?



ಶೋಭಾ ನಂದ.
ಲೇಖಕಿ ಮತ್ತು ಅನುವಾದಕಿ

ಸ್ತ್ರೀ ಎಂದರೆ ಮಾತೃತ್ವ

ಸ್ತ್ರೀ ಮತ್ತು ಪುರುಷ ಎಂಬುದು ವ್ಯವಹಾರಿಕ ಭೇದವಷ್ಟೇ ಆತ್ಮಕ್ಕೆ ಯಾವುದೇ ಲಿಂಗಭೇದವಿಲ್ಲ. ಮನುಷ್ಯತ್ವ ಒಂದೇ ಆದರೂ ಸ್ತ್ರೀ ಮತ್ತು ಪುರುಷ ಎಂಬುದು ಎರಡು ಮುಖ್ಯ ಭೇದಗಳು. ಕಾರ್ಯರೂಪಕ್ಕೆ ಬರುವಾಗ ನಮ್ಮ ದೇಹ ಹಾಗೂ ಪಾತ್ರಗಳು ವ್ಯತ್ಯಾಸವಾಗುತ್ತದೆ. ಸ್ತ್ರೀ ಮತ್ತು ಪುರುಷ ಅವರದ್ದೇ ವೈಶಿಷ್ಟ್ಯ ಇರುತ್ತದೆ. ಅನ್ಯರು ಸ್ತ್ರೀಯನ್ನು ಒಂದು ಭೋಗ ವಸ್ತುವಾಗಿ ಕಂಡರೂ ನಮ್ಮ ಸನಾತನದಲ್ಲಿ ಆ ಭಾವನೆ ಇಲ್ಲ. ಭಗವಂತನು ಅವನ ಲೀಲೆಯಲ್ಲಿ ನಾನಾ ನಾಮಗಳನ್ನು ರೂಪಗಳನ್ನು ಸೃಷ್ಟಿ ಮಾಡಿದ್ದಾನೆ. ಅದರಲ್ಲಿ ಪ್ರಮುಖವಾದದ್ದು ಸ್ತ್ರೀ ಮತ್ತು ಪುರುಷ ಎಂಬುದು. ಮಹಿಳೆಯರಿಗೆ ಶಿಕ್ಷಣ ಮತ್ತು ಗೌರವ ನೀಡದ ಹೊರತು ಜಗತ್ತಿನ ಕಲ್ಯಾಣ ಸಾಧ್ಯವಿಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ನಮ್ಮ ಸನಾತನ ಧರ್ಮದಲ್ಲಿ ಸ್ತ್ರೀ ಗೆ ಅತ್ಯುತ್ತಮವಾದ ಪೂಜ್ಯ ಸ್ಥಾನವನ್ನು ನೀಡಿದ್ದಾರೆ. ಅದೇ ಮಾತೃತ್ವ. ಸ್ತ್ರೀಯನ್ನು ಬದಲಾಗುವ ಪ್ರಕೃತಿಗೆ ಹೋಲಿಸಿ ಅವಳ ಹುಮ್ಮಸ್ಸನ್ನು ಹೆಚ್ಚು ಮಾಡಿದ್ದಾರೆ. ಸ್ತ್ರೀ ಬಹುಕಾರ್ಯಕ ಕೆಲಸಗಳನ್ನು ಚೆನ್ನಾಗಿ ನಿಭಾಯಿಸುತ್ತಾಳೆ. ಮಕ್ಕಳ ಪಾಲನೆ ಪೋಷಣೆಯಲ್ಲದೆ ಅವರ ಸರ್ವಾಂಗೀಣ ಬೆಳವಣಿಗೆ ಬೇಕಾದ ಎಲ್ಲಾ ಆಯಾಮಗಳನ್ನು ಗರ್ಭಸಂಸ್ಕಾರದಲ್ಲೇ ತೊಡಗಿಸಿಕೊಳ್ಳುತ್ತಾಳೆ. ಒಮ್ಮೆ ಒಬ್ಬ ಮಹಿಳೆ ತನ್ನ 4 ವರ್ಷದ ಮಗುವನ್ನು ಕರೆದುಕೊಂಡು ಸ್ವಾಮಿ ವಿವೇಕಾನಂದರ ಬಳಿ ಹೋಗಿದ್ದಳು. ತನ್ನ ಮಗನಿಗೆ ವಿದ್ಯಾಭ್ಯಾಸ ಪ್ರಾರಂಭಿಸಬೇಕು , ಅದರ ಜವಾಬ್ದಾರಿಯನ್ನು ಸ್ವಾಮಿ ವಿವೇಕಾನಂದರೇ ವಹಿಸಬೇಕು ಎಂದು ವಿನಂತಿಸಿದಳು. ಆಗ ವಿವೇಕಾನಂದರುಹೀಗೆಂದರು, –ಈಗಾಗಲೇ ನೀವು 4ವರ್ಷ 9ತಿಂಗಳು ತಡವಾಗಿ ಬಂದಿದ್ದೀರಿ ತಾಯಿ . ಇದರ ಅರ್ಥ ಮಗುವಿಗೆಗರ್ಭ ಸಂಸ್ಕಾರದಿಂದಲೇ ಅವರ ವಿದ್ಯಾಭ್ಯಾಸ ಪ್ರಾರಂಭವಾಗುತ್ತದೆ ಎಂದು ಆ ತಾಯಿಗೆ ಅರ್ಥೈಸಿದರು.



ಭಾರತೀಯ ಸಂಸ್ಕೃತಿಯಲ್ಲಿ ನಾರಿಯರ ಪಾತ್ರ

ಪ್ರಾಚೀನ ಭಾರತದಲ್ಲಿ ಮಹಿಳಾ ವಿದ್ವಾಂಸರನ್ನು ಋಷಿಕರು ಅಥವಾ ಬ್ರಹ್ಮವಾದಿನಿಯರು ಎಂದು ಕರೆಯುತ್ತಿದ್ದರು. ಇವರು ವೇದ ಮಂತ್ರಗಳನ್ನು ರಚಿಸುತ್ತಿದ್ದರು. ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಗೌರವ ಸ್ಥಾನವಿತ್ತು. ಶಿಕ್ಷಣ ಸಾಹಿತ್ಯ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಮಹಿಳೆಯರು ಯಜ್ಞ, ಹೋಮ ಸಂವಾದಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಜ್ಞಾನ,ಧೈರ್ಯ, ಹಾಗೂ ಕಲೆಗಳಲ್ಲಿ ನಿಪುಣರಾಗಿದ್ದರು. ಪೌರಾಣಿಕ ಕಾಲದಲ್ಲಿ ಸೀತಾ, ಸಾವಿತ್ರಿ, ದ್ರೌಪದಿ,ತಾರ,ಮಂಡೋದರಿ ಮುಂತಾದವರು ಆದರ್ಶ ಮಹಿಳೆಯರಾಗಿ ನಡೆದುಕೊಂಡರು. ಅನೇಕ ಮಹಿಳೆಯರು ರಾಜಕೀಯ ಹಾಗೂ ಯುದ್ಧ ಕ್ಷೇತ್ರದಲ್ಲಿ ಚಾಣಾಕ್ಷರಗಿದ್ದರು. ಉದಾಹರಣೆಗೆ ರಾಣಿ ಅಬ್ಬಕ್ಕ, ಕಿತ್ತೂರು ಚೆನ್ನಮ್ಮ, ರಾಣಿ ಚೆನ್ನಬೈರಾದೇವಿ, ಹಾಗೂ ಒನಕೆ ಓಬವ್ವ. ಪ್ರಾಚೀನ ಕಾಲದ ಮಹಿಳೆಯರಲ್ಲಿ ಧರ್ಮ ನಿಷ್ಠೆ ಮತ್ತು ತ್ಯಾಗದ ಗುಣಗಳು ತುಂಬಿದ್ದವು. ಮಹಿಳೆಯರು ಸಮಾಜದ ನೈತಿಕತೆ ಮತ್ತು ಸಂಸ್ಕೃತಿಯ ಸಂರಕ್ಷಕರಾಗಿದ್ದರು ಅವರ ಆ ನಡವಳಿಕೆ ಹಾಗೂ ಅರ್ಥಪೂರ್ಣ ಪಾತ್ರದಿಂದ ಭಾರತೀಯ ಸಂಸ್ಕೃತಿಯ ಮಹತ್ವ ಹೆಚ್ಚಾಗಿದೆ. ಗೃಹ ಕಾರ್ಯಗಳಲ್ಲದೆ ಪ್ರಾಚೀನ ಕಾಲದ ಮಹಿಳೆಯರಲ್ಲಿ ಧರ್ಮ ನಿಷ್ಠೆ ಮತ್ತು ತ್ಯಾಗದ ಗುಣಗಳು ತುಂಬಿದ್ದವು. ಮಹಿಳೆಯರು ಸಮಾಜದ ನೈತಿಕತೆ ಮತ್ತು ಸಂಸ್ಕೃತಿಯ ಸಂರಕ್ಷಕರಾಗಿದ್ದರು ಅವರ ಆ ನಡವಳಿಕೆ ಹಾಗೂ ಅರ್ಥಪೂರ್ಣ ಪಾತ್ರದಿಂದ ಭಾರತೀಯ ಸಂಸ್ಕೃತಿಯ ಮಹತ್ವ ಹೆಚ್ಚಾಗಿದೆ ಗೃಹ ಕಾರ್ಯದರ್ಶಿ ಅಲ್ಲದೆ ಜ್ಞಾನಾರ್ಜನೆಯಲ್ಲಿಯೂ ತೊಡಗಿಸಿಕೊಂಡಿದ್ದರು ಸಂಗೀತ ಸಾಹಿತ್ಯಗಳಲ್ಲಿ ಪರಿಣತರಾಗಿದ್ದರು. ಅನೇಕ ಋಷಿ ಪತ್ನಿಯರು ತಮ್ಮ ಪತಿಯರ ಜತೆ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಆಗಿನ ಕಾಲದಲ್ಲಿ ಮಹಿಳೆಯರನ್ನು ಗೃಹಲಕ್ಷ್ಮಿ ಎಂದು ಗೌರವಿಸುತ್ತಿದ್ದರು. ಮಹಿಳೆಯರು ಮಕ್ಕಳಿಗೆ ನೈತಿಕತೆ ಮತ್ತು ಧರ್ಮದ ಪಾಠ ಕಲಿಸುತ್ತಿದ್ದರು . ವೈದ್ಯಕೀಯ ಹಾಗೂ ಆಯುರ್ವೇದ ಕ್ಷೇತ್ರಗಳಲ್ಲಿಯೂ ಪರಿಣತರಾಗಿದ್ದರು. ತ್ಯಾಗ ಶೌರ್ಯ ಮತ್ತು ನಿಷ್ಠೆಯ ಉದಾಹರಣೆಗಳು ನಮಗೆ ಸಿಗುತ್ತವೆ. ವೇದಗಳ ಅಧ್ಯಯನಗಳಲ್ಲಿ ಮಹಿಳೆಯರ ಬೌದ್ಧಿಕ ಶಕ್ತಿಯ ಉಲ್ಲೇಖಗಳು ಕಾಣುತ್ತವೆ. ಪ್ರಾಚೀನ ಮಹಿಳೆಯರು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ ಈ ಕಾರಣದಿಂದಾಗಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಇಂದು ಜೀವಂತವಾಗಿದೆ.

ಮಾಸಿಕ ರಜೆಯಿಂದ ಮಾನಸಿಕ ಶಾಂತಿ

ಹಲವಾರು ಖಾಸಗಿ ಸಂಸ್ಥೆಗಳು ಸಹ ಮಹಿಳಾ ಸಿಬ್ಬಂದಿಗೆ ಮಾಸಿಕ ರಜೆ ನೀಡಲು ಪ್ರಾರಂಭಿಸಿವೆ. ಈ ರಜೆಯ ಉದ್ದೇಶ ಮಹಿಳೆಯರ ಆರೋಗ್ಯ ಮತ್ತು ಗೌರವ ಕಾಪಾಡುವುದು.ಇಂತಹ ಸಮಯದಲ್ಲಿ ಮಹಿಳೆಯರ ದೇಹದಲ್ಲಿ ಹಾರ್ಮೋನ್ ಬದಲಾವಣೆಗಲಾಗುತ್ತವೆ.ಬದಲಾವಣೆಗಳಿಂದ ತಲೆನೋವು, ಹೊಟ್ಟೆನೋವು ಇತ್ಯಾದಿ ಸಮಸ್ಯೆಗಳು ಕಾಣಿಸಬಹುದು. ಕೆಲಸದ ಒತ್ತಡದಿಂದ ಆರೋಗ್ಯ ಹದಗೆಡುವ ಸಾಧ್ಯತೆ ಇರುತ್ತದೆ.ಆದ್ದರಿಂದ ಮಹಿಳೆಯರು ವಿಶ್ರಾಂತಿ ಪಡೆದರೆ ಅವರ ಕಾರ್ಯಕ್ಷಮತೆ ಹೆಚ್ಚುತ್ತದೆ. ಮಾಸಿಕ ರಜೆಯು ಮಹಿಳೆಯರಿಗೆ ಮಾನಸಿಕ ಶಾಂತಿಯನ್ನು ನೀಡುತ್ತದೆ. ಈ ರಜೆ ಮಹಿಳೆಯರ ಹಕ್ಕು ಎಂದು ಸಮಾಜ ಗುರುತಿಸಬೇಕು. ಉದ್ಯೋಗದಾತರು ಇದನ್ನು ಸಹಾನುಭೂತಿಯ ದೃಷ್ಟಿಯಿಂದ ಅಲ್ಲದೆ ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ರಜೆಯು ಸಂಬಳ ಕಡಿತವಿಲ್ಲದೆ ನೀಡಲ್ಪಡುವಂತಾಗಬೇಕು. ಮಹಿಳೆಯರು ನಾಚಿಕೆಪಡುವ ಅಗತ್ಯವಿಲ್ಲ ? ಇದು ನೈಸರ್ಗಿಕ ಪ್ರಕ್ರಿಯೆ. ಕೆಲಸದ ಸ್ಥಳದಲ್ಲಿ ಈ ವಿಷಯದ ಬಗ್ಗೆ ತೆರೆದ ಮನಸ್ಸಿನಿಂದ ಚರ್ಚಿಸಬೇಕು. ಪುರುಷ ಸಹೋದ್ಯೋಗಿಗಳೂ ಸಹ ಮಹಿಳೆಯರ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಇದು ಮಹಿಳೆಯರ ಕಾರ್ಯಸ್ಥಳದಲ್ಲಿ ಸಮಾನ ಅವಕಾಶಗಳನ್ನು ಒದಗಿಸುತ್ತದೆ.ಮಾಸಿಕ ರಜೆಯು ಉದ್ಯೋಗದಲ್ಲಿ ಮಹಿಳೆಯರ ಉಳಿವನ್ನು ಹೆಚ್ಚಿಸುತ್ತದೆ. ಇದರಿಂದ ಮಹಿಳೆಯರ ಮೇಲೆ ಇರುವ ಒತ್ತಡ ಕಡಿಮೆಯಾಗುತ್ತದೆ. ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳು ಈ ನೀತಿಯನ್ನು ಕಡ್ಡಾಯಗೊಳಿಸಬೇಕು.ಪ್ರತಿ ಸಂಸ್ಥೆಯು ಮಾಸಿಕ ರಜೆ ನೀತಿಯನ್ನು ಸ್ಪಷ್ಟವಾಗಿ ಪ್ರಕಟಿಸಬೇಕು. ಮಾಸಿಕ ರಜೆಯು ಕೇವಲ ವಿಶ್ರಾಂತಿಗಾಗಿ ಅಲ್ಲ, ಗೌರವದ ಸಂಕೇತವೂ ಆಗಿದೆ. ಇದು ಸಮಾನತೆ, ಗೌರವ ಮತ್ತು ಆರಾಮದ ನಿಜವಾದ ಸೂಚಕವಾಗಿದೆ.

ಆದ್ದರಿಂದ ''ಮಾಸಿಕ ರಜೆ''?
ಮಹಿಳೆಯರ ಆರೋಗ್ಯ,
ಮಾನವೀಯ ಹಕ್ಕಿಗೆ ಗೌರವ!



ವಿಶ್ವಸಂಸ್ಥೆಯ ಪ್ರಕಾರ ಈ ವರ್ಷ ಅಂದರೆ 2026ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಘೋಷವಾಕ್ಯವು ಪಡೆಯಲು ನೀಡಿ (ಗೀವ್ ಟು ಗೈನ್) ಎಂದಾಗಿದೆ.

ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ ಅತ್ಯಂತ ಅಗತ್ಯ



ಶೌಚಾಲಯಗಳ ಕೊರತೆಯಿಂದ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಸ್ವಚ್ಛ ಹಾಗೂ ಸುರಕ್ಷಿತ ಶೌಚಾಲಯಗಳಿಲ್ಲದಿದ್ದರೆ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಪ್ರವಾಸ ಮುಗಿಸಿ ಬಂದಂತಹ ಅನೇಕ ಮಹಿಳೆಯರಿಗೆ ಮೂತ್ರನಾಳದ ಸೋಂಕು ಉಂಟಾಗುತ್ತಿದೆ. ಪ್ರವಾಸಿ ತಾಣಗಳಲ್ಲಿ ಈ ಸಮಸ್ಯೆ ಹೆಚ್ಚು ಕಂಡುಬರುತ್ತದೆ. ಮಹಿಳೆಯರ ಗೌಪ್ಯತೆ ಮತ್ತು ಸುರಕ್ಷತೆಗಾಗಿ ಪ್ರತ್ಯೇಕ ಶೌಚಾಲಯದ ಅಗತ್ಯವಿದೆ . ಶೌಚಾಲಯಗಳಲ್ಲಿ ನೀರು, ಸಾಬೂನು ಮತ್ತು ಕಸದ ನಿರ್ವಹಣೆ ಸರಿಯಾಗಿ ಇರಬೇಕು.

ಸುಪೋಷಿತ ಮಹಿಳೆ

ಸುಪೋಷಿತ ಮಹಿಳೆ ಸಮಾಜದ ಆರೋಗ್ಯದ ಮೂಲಸ್ತಂಭಳು. ಆಕೆಯ ಶಾರೀರಿಕ ಮತ್ತು ಮಾನಸಿಕ ಆರೋಗ್ಯವು ಕುಟುಂಬದ ಸುಖಕ್ಕೆ ಕಾರಣವಾಗುತ್ತದೆ.ಪೌಷ್ಟಿಕ ಆಹಾರ ಸೇವನೆಯಿಂದ ಮಹಿಳೆಯ ಶಕ್ತಿ ಮತ್ತು ತಾಳ್ಮೆ ಹೆಚ್ಚುತ್ತದೆ. ಗರ್ಭಿಣಿಯರು ಮತ್ತು ತಾಯಂದಿರಿಗೆ ವಿಶೇಷ ಪೋಷಣೆಯ ಅಗತ್ಯವಿದೆ. ಸರಿಯಾದ ಆಹಾರ, ವ್ಯಾಯಾಮ ಮತ್ತು ವಿಶ್ರಾಂತಿ ಸುಪೋಷಣೆಗೆ ಅಗತ್ಯ. ಮಹಿಳೆಯ ಪೋಷಣೆ ರಾಷ್ಟ್ರದ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಸರ್ಕಾರದ ಪೌಷ್ಟಿಕ ಆಹಾರ ಯೋಜನೆಗಳು ಮಹಿಳೆಯರ ಆರೋಗ್ಯ ಸುಧಾರಿಸುತ್ತವೆ. ಅನಿಮಿಯಾ ಮುಂತಾದ ರೋಗಗಳಿಂದ ತಪ್ಪಿಸಿಕೊಳ್ಳಲು ಪೌಷ್ಟಿಕತೆ ಮುಖ್ಯ. ಅರಿವು ಮತ್ತು ಶಿಕ್ಷಣದಿಂದ ಮಹಿಳೆಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬಹುದು.ಸುಪೋಷಿತ ಮಹಿಳೆ ಎಂದರೆ, ಶಕ್ತಿಶಾಲಿ, ಆತ್ಮವಿಶ್ವಾಸಿ ಮತ್ತು ಸಂತುಷ್ಟ ಜೀವನ ನಡೆಸುವವಳು. ಈ ನಿಟ್ಟಿನಲ್ಲಿ ಎಲ್ಲಾ ಮಹಿಳೆಯರು ತಮ್ಮ ತಮ್ಮ ವಯಸ್ಸಿಗೆ ಅನುಗುಣವಾಗಿ ಆಹಾರ ಸೇವಿಸಿ ಸದೃಢರಾಗಿರಬೇಕು. ಇದರಿಂದ ತಮ್ಮ ಪರಿವಾರಕ್ಕೆ ಮತ್ತು ದೇಶಕ್ಕೆ ಸಲ್ಲಿಸುವ ಮಹಾನ್ ಸೇವೆ ಎನಿಸಿಕೊಳ್ಳುತ್ತದೆ.

ಕಾನೂನು ಶಸ್ತ್ರವಾಗಿ ಅಲ್ಲ, ರಕ್ಷಣೆ ಸಾಧನವಾಗಿ ಬಳಕೆಯಾಗಲಿ

ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು.ಕಾನೂನಿನ ಜ್ಞಾನ ಪ್ರತಿಯೊಬ್ಬ ನಾಗರಿಕನಿಗೂ ಅಗತ್ಯ. ಪ್ರಜೆಗಳು ತಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿದಿರಬೇಕು. ಕಾನೂನಿನ ಸರಿಯಾದ ಉಪಯೋಗದಿಂದ ನ್ಯಾಯ ಸಮಾಜದಲ್ಲಿ ಬೆಳೆಯುತ್ತದೆ. ಕಾನೂನಿನ ದುರುಪಯೋಗವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಅಗತ್ಯ. ನ್ಯಾಯಾಂಗ ವ್ಯವಸ್ಥೆಯ ಪಾರದರ್ಶಕತೆ ಕಾನೂನಿನ ಗೌರವವನ್ನು ಹೆಚ್ಚಿಸುತ್ತದೆ. ಮಾಧ್ಯಮ ಮತ್ತು ಶಿಕ್ಷಣ ವ್ಯವಸ್ಥೆಯು ಕಾನೂನು ಅರಿವು ಮೂಡಿಸಬೇಕು. ಕಾನೂನನ್ನು ಶಸ್ತ್ರವಾಗಿ ಅಲ್ಲ, ರಕ್ಷಣೆಯ ಸಾಧನವಾಗಿ ಬಳಸಬೇಕು. ಸತ್ಯ, ನೀತಿ, ಧರ್ಮ ? ಇವುಗಳ ಮೇಲೆ ಕಾನೂನು ಆಧಾರವಾಗಿರಬೇಕು. ಕಾನೂನಿನ ಸದುಪಯೋಗದಿಂದ ಮಾತ್ರ ದೇಶದ ಪ್ರಗತಿ ಮತ್ತು ನ್ಯಾಯಯುತ ಸಮಾಜ ಸಾಧ್ಯ.



ಶಿಕ್ಷಣವೇ ದೌರ್ಜನ್ಯ ನಿವಾರಣೆಯ ಮೊದಲ ಹೆಜ್ಜೆ



ಗೃಹ ಹಿಂಸೆ ವಿರೋಧಿ ಕಾಯ್ದೆ ಮಹಿಳೆಯರಿಗಾಗಿ ಒಂದು ಶಕ್ತಿ ಆಗಿದೆ. ಮಹಿಳಾ ಶಿಕ್ಷಣವೇ ದೌರ್ಜನ್ಯ ನಿವಾರಣೆಯ ಮೊದಲ ಹೆಜ್ಜೆ. ಮಹಿಳೆಯರು ಆತ್ಮವಿಶ್ವಾಸದಿಂದ ಬದುಕಬೇಕಾಗಿದೆ. ಕುಟುಂಬದಿಂದಲೇ ಮಹಿಳೆಯರಿಗೆ ಗೌರವ ಕಲಿಸಬೇಕು. ಸಮಾಜದಲ್ಲಿ ಲಿಂಗ ಸಮಾನತೆ ಬೆಳೆಸುವುದು ಅತ್ಯಾವಶ್ಯಕ. ಮಹಿಳೆಯರ ಸುರಕ್ಷತೆಗೆ ಕಾನೂನುಗಳು ಸಾಕಷ್ಟಿವೆ, ಆದರೆ ಜಾಗೃತಿಯ ಅಗತ್ಯವಿದೆ. ಮಹಿಳಾ ಸಬಲೀಕರಣದಿಂದ ದೌರ್ಜನ್ಯ ಕಡಿಮೆಯಾಗಬಹುದು. ಉದ್ಯೋಗಸ್ತ ಮಹಿಳೆಯರು ಕೆಲಸದ ಸ್ಥಳಗಳಲ್ಲಿ ಸುರಕ್ಷಿತ ವಾತಾವರಣ ಪಡೆಯಬೇಕು. ಪುರುಷರ ಮನೋಭಾವ ಬದಲಾದರೆ ದೌರ್ಜನ್ಯ ತಡೆಯಬಹುದು. ಮಾಧ್ಯಮಗಳು ಮಹಿಳೆಯರ ಗೌರವ ಕಾಪಾಡುವಲ್ಲಿ ಪಾತ್ರವಹಿಸಬೇಕು.

ಪ್ರವಾಸಿಗರಿಗೆ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುವುದು ಮುಖ್ಯ

ಶೌಚಾಲಯಗಳ ನಿರ್ವಹಣೆಗೆ ಸ್ಥಳೀಯ ಮಹಿಳಾ ಸ್ವಸಹಾಯ ಸಂಘಗಳ ನೆರವು ಪಡೆಯಬಹುದು. ಶೌಚಾಲಯಗಳ ಶುದ್ಧತೆ ಕಾಪಾಡುವ ಸಿಬ್ಬಂದಿ ನೇಮಕ ಮಾಡಬೇಕು. ಮಹಿಳೆಯರಿಗೆ ಶೌಚಾಲಯ ಸೌಲಭ್ಯ ಒದಗಿಸುವುದು ಅವರ ಹಕ್ಕಾಗಿದೆ. ಅನೇಕ ತಾಣಗಳಲ್ಲಿ ಪೇಡ್ ಶೌಚಾಲಯಗಳು ಇದ್ದರೂ ಅವು ಎಲ್ಲೆಡೆ ಲಭ್ಯವಿಲ್ಲ. ಸರ್ಕಾರದ ಸ್ವಚ್ಛ ಭಾರತ್ ಅಭಿಯಾನ ಈ ಸಮಸ್ಯೆ ಪರಿಹಾರಕ್ಕೆ ಸಹಾಯಕವಾಗಿದೆ. ಪ್ರವಾಸೋದ್ಯಮ ಇಲಾಖೆಯು ಹೊಸ ತಾಣಗಳ ಅಭಿವೃದ್ಧಿಯಲ್ಲಿ ಶೌಚಾಲಯ ವ್ಯವಸ್ಥೆಯನ್ನು ಮಾಡಬೇಕು. ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಸಿಸಿಟಿವಿ ಹಾಗೂ ಬೆಳಕಿನ ವ್ಯವಸ್ಥೆಯೂ ಇರಬೇಕು. ಮಕ್ಕಳೊಂದಿಗೆ ಪ್ರಯಾಣಿಸುವ ಮಹಿಳೆಯರಿಗೆ ವಿಶ್ರಾಂತಿ ಕೊಠಡಿಗಳೂ ಉಪಯುಕ್ತ. ಮಹಿಳಾ ಶೌಚಾಲಯಗಳ ಸಂಖ್ಯೆ ಹೆಚ್ಚಿಸುವ ಮೂಲಕ ಮಹಿಳಾ ಪ್ರವಾಸಿಗರ ಸಂಖ್ಯೆಯೂ ಹೆಚ್ಚುತ್ತದೆ. ಶೌಚಾಲಯಗಳಲ್ಲಿ ಸ್ವಚ್ಛತೆ ಕಾಪಾಡುವುದು ಆರೋಗ್ಯದ ದೃಷ್ಟಿಯಿಂದ ಮುಖ್ಯ. ಶೌಚಾಲಯ ವ್ಯವಸ್ಥೆ ಸುಧಾರಿಸಿದರೆ ಪ್ರವಾಸಿ ತಾಣದ ಚಿತ್ರಣ ಕೂಡ ಉತ್ತಮವಾಗುತ್ತದೆ. ಸ್ವಚ್ಛ, ಸುರಕ್ಷಿತ ಮತ್ತು ಗೌಪ್ಯ ಶೌಚಾಲಯ ವ್ಯವಸ್ಥೆ ಮಹಿಳೆಯರ ಗೌರವದ ಪ್ರತೀಕವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಸಿಬ್ಬಂದಿಗಳು ಸಹಕರಿಸಿ ಮಹಿಕೆಯರಿಗೆ ಶೌಚಾಲಯದ ವ್ಯವಸ್ಥೆ ಹಾಗೆ ಈಗಾಗಲೇ ಇರುವ ಶೌಚಾಲಯಗಳ ಸ್ವಚ್ಛತೆ ಕಾಪಾಡುವಲ್ಲಿ ಸಹಕರಿಬೇಕು. ರಾಜ್ಯ ಹಾಗು ಕೇಂದ್ರ ಸರ್ಕಾರವು, ಸ್ಥಳೀಯರು ಹಾಗು ಜನ ಪ್ರತಿನಿಧಿಗಳು ಇದರ ಬಗ್ಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಈ ಲೇಖನಿಯ ಧ್ವನಿಯು ಎಲ್ಲರಿಗೂ ತಲುಪುವುದು ಎಂಬ ಒಂದು ಸಣ್ಣ ಆಶಯ.



ಕಿರುಸುದ್ದಿ

ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ 2025-26ಕ್ಕೆ ರಜನಿಕಾಂತ್

ಮಂಗಳೂರು: ಸುಳ್ಯ ತಾಲ್ಲೂಕಿನ ಬೆಳ್ಳಾರೆ ಗ್ರಾಮದ ಗುರುವಯ್ಯ ಮತ್ತು ಲಿಂಗಮ್ಮ ಅವರ ಪುತ್ರರಾದ ರಜನಿಕಾಂತ್ ಜಿ. ಅವರು 7ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ 2025–26ಕ್ಕೆ ಕರ್ನಾಟಕರಾಜ್ಯವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ. ಈ ಚಾಂಪಿಯನ್‌ಶಿಪ್ 2026ರ ಮಾ.6ರಿಂದ 10ರವರೆಗೆ ತೆಲಂಗಾಣದ ಹಾಟ್ ಫುಲ್‌ನೆಸ್ ಗೋಪಿಚಂದ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ನಡೆಯಲಿದೆ.



ಕರ್ನಾಟಕ ರಾಜ್ಯದಿಂದ ಒಟ್ಟು 18 ಮಂದಿ ಆಟಗಾರರು ಆಯ್ಕೆಯಾಗಿದ್ದು, ಅವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಆಯ್ಕೆಯಾದ ಏಕೈಕ ಆಟಗಾರ ರಜನಿಕಾಂತ್ ಜಿ. ಅವರ ಈ ಸಾಧನೆ ಜಿಲ್ಲೆಗೆ ಹೆಮ್ಮೆ ತಂದಿದೆ.ರಜನಿಕಾಂತ್ ಜಿ. ಅವರು ಕರ್ಣಾಟಕ ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ಅಧಿಕಾರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ

ಸುಳ್ಯ: ಪಯಸ್ವಿನಿ ಅನುದಾನಿತ ಪ್ರೌಢಶಾಲೆ ಜಾಲ್ಸೂರು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವನಸುಮ ವನವಾಸಿ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ. ಶಿಕ್ಷಣ ಇಲಾಖೆ ವತಿಯಿಂದ ನಡೆದ ರಾಜ್ಯಮಟ್ಟದ ಜಂಪ್ ರೋಪ್ ಕ್ರೀಡಾಕೂಟದ ತ್ರೀಲೇಗ ಜಂಪ್ ರೋಪ್‌ನಲ್ಲಿ ಸುಳ್ಯ ತಾಲೂಕಿನ ವನಸುಮ ವನವಾಸಿ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಾದ ಹನುಮಂತ, ನರೇಶ, ಶಿವು ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.



ದೇಹದಾರ್ಢ್ಯ ಸ್ಪರ್ಧೆ: ಆಳ್ವಾಸ್ ಕಾಲೇಜಿನ ಸಾಧನೆ

ಮೂಡುಬಿದಿರೆ: ಆಂಧ್ರ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಜರುಗಿದ ಅಖಿಲ ಭಾರತ ಅಂತರ್ ವಿ.ವಿ. ದೇಹದಾರ್ಢ್ಯ ಚಾಂಪಿಯನ್‌ಶಿಪ್‌ನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ ಆಳ್ವಾಸ್ ಕಾಲೇಜಿನ ಕಿಶನ್ ಶೆಟ್ಟಿ, 90 ಕೆಜಿ ವಿಭಾಗದಲ್ಲಿ ಚಿನ್ನದ ಪದಕವನ್ನು ಹಾಗೂ ಪ್ರಥಮ್ 65 ಕೆಜಿ ವಿಭಾಗದಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ಸಾಧನೆ ಮೆರೆದಿದ್ದಾರೆ.



ಈ ಗಮನಾರ್ಹ ಸಾಧನೆಯಿಂದ ಮಂಗಳೂರು ವಿ.ವಿ. ಚಾಂಪಿಯನ್ ಪಟ್ಟ ಅಲಂಕರಿಸಿತು. ಕಿಶನ್ ಶೆಟ್ಟಿ ಅಂತರ್ ಕಾಲೇಜು ದೇಹದಾರ್ಢ್ಯ ಚಾಂಪಿಯನ್‌ಶಿಪ್‌ನಲ್ಲಿ ಮಿಸ್ಟರ್ ಮಂಗಳೂರು ವಿವಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ ಆಳ್ವರು ಅಭಿನಂದಿಸಿದ್ದಾರೆ.

ಕೇರಳ ಸ್ಟೇಟ್ ಪೆನ್ಶನರ್ಸ್ ಸಂಘದ 28ನೇ ಕೇರಳ ಪ್ರಾಂತೀಯ ಸಮ್ಮೇಳನ

ಪ್ರಜಾಪ್ರಭುತ್ವ ಬಲಪಡಬೇಕು

ಕಾಸರಗೋಡು: ನಮ್ಮನ್ನು ಆಡಳಿತ ನಡೆಸುವ ಎಡ ಮತ್ತು ಐಕ್ಯರಂಗಗಳು ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಹೂತು ಹಾಕಲು ಯತ್ನಿಸುತ್ತಿದೆ. ನಮ್ಮ ಭೂತಕಾಲದ ಸಂಸ್ಕೃತಿ, ಸಂಸ್ಕಾರಗಳಲ್ಲವೂ ನಷ್ಟಗೊಂಡಿದೆ. ಈಗ ನಮ್ಮಲ್ಲಿ ರಾಷ್ಟ್ರೀಯತೆ ಎಂಬುದೇ ಇಲ್ಲದಂತಾಗಿದೆ. ನಾವಿಂದು ಫಾಸಿಸ್ಟ್ ಆಡಳಿತದ ಮಧ್ಯೆ ಜೀವಿಸುತ್ತಿದ್ದೇವೆ ಎಂದು ಬಿಎಂಎಸ್ ಕೇರಳ ರಾಜ್ಯಾಧ್ಯಕ್ಷ ಬಿ.ಶಿವಜಿ ಸುದರ್ಶನ್ ಹೇಳಿದ್ದಾರೆ.

ಕೇರಳ ಸ್ಟೇಟ್ ಪೆನ್ಶನರ್ಸ್ ಸಂಘದ 28ನೇ ಕೇರಳ ಪ್ರಾಂತೀಯ ಸಮ್ಮೇಳನದ ಅಂಗವಾಗಿ ಕಾಸರಗೋಡು ಪುರಭವನದಲ್ಲಿ ದ್ವಿತೀಯ ದಿನವಾದ ಶನಿವಾರ ಜರಗಿದ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಕೇರಳದಲ್ಲಿ ಆಡಳಿತ ನಡೆಸುತ್ತಿರುವುದು ಕಮ್ಯುನಿಸ್ಟ್ ಪಕ್ಷವಾಗಿದೆ. ಇದು ಫಾಸಿಸ್ಟ್ ಮುಖವಾಡವಿರುವ ಪಕ್ಷವಾಗಿದೆ. ಕ್ರಾಂತಿ ಇಲ್ಲದೆ ಕಮ್ಯುನಿಸ್ಟ್ ಪಕ್ಷವು ಇರುವುದಿಲ್ಲ. ಕ್ರಾಂತಿ ಇಲ್ಲದೆ ಕಮ್ಯುನಿಸ್ಟ್ ಪಕ್ಷಕ್ಕೆ ಆಡಳಿತಕ್ಕೆ ಬರಲು ಸಾಧ್ಯವಿಲ್ಲ. ಈಗಿನ ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ಬರ್ಮಾ, ಮ್ಯಾನ್ಮಾರ್ ಸಹಿತ ಎಲ್ಲವೂ ಅಖಂಡ ಭಾರತದ ಅವಿಭಾಜ್ಯ ಘಟಕವಾಗಿತ್ತು. ಅದನ್ನು ಮರಳಿ ಪಡೆಯುವ ಜವಾಬ್ದಾರಿ ನಮಗೆಲ್ಲರಿಗೂ ಸೇರಿದ್ದಾಗಿದೆ ಎಂದರು. ನಾವು ಧರ್ಮನಿಷ್ಠ ಸಮಾಜವನ್ನು ಸೃಷ್ಟಿಸಬೇಕು. ಆಗ ನಮಗೆ ಗೆಲುವು ಖಚಿತ. ಯಾವುದೇ ಸಂಘಟನೆಯಲ್ಲಿ ನಮಗೆ ನೈಜ ನಂಬಿಕೆಯಿರಬೇಕು. ಆಗ ಮಾತ್ರವೇ ಅದಕ್ಕೆ ಶಕ್ತಿ ಉಂಟಾಗುತ್ತದೆ ಎಂದರು.



> ಆಯುಧದಿಂದ ನಾವು ಹೋರಾಡ ಬಾರದು. ಬದಲಾಗಿ ನಾಲಗೆಯ ಮಾತಿನಿಂದ ಎಲ್ಲವನ್ನು ಗೆಲ್ಲಬೇಕು. ಕೇರಳದ ಸಂಸ್ಕೃತಿ ದಿನದಿಂದ ದಿನಕ್ಕೆ ಕ್ಷಯಿಸುತ್ತಿದೆ. ಇಂದು ಭಾರತವು ಉನ್ನತಿಗೇರುತ್ತಿದ್ದರೆ ಕೇರಳವು ಕ್ಷಯಿಸುತ್ತಾ ಸಂಕಷ್ಟಗಳನ್ನು ಎದುರಿಸುತ್ತಿದೆ. ಇದಕ್ಕೆ ಇಲ್ಲಿನ ಎರಡೂ ಸರಕಾರಗಳ ದುರಾಡಳಿತವೇ ಕಾರಣ. ನಾವು ದೇಶದ ಬಗ್ಗೆ ಗಮನ ಹರಿಸದಿದ್ದರೆ ಮುಂದೆ ದೇಶದಲ್ಲಿ ಅರಾಜಕತೆ ಉಂಟಾಗಲಿದೆ. ಆದುದರಿಂದ ನಾವು ಸದಾ ಜಾಗರೂಕತೆಯಿಂದ ಮುಂದಕ್ಕೆ ಸಾಗಬೇಕು.
>
> ■ ಬಿ.ಶಿವಜಿ ಸುದರ್ಶನ್, ಬಿಎಂಎಸ್ ಕೇರಳ ರಾಜ್ಯಾಧ್ಯಕ್ಷ

ಪ್ರಜಾಪ್ರಭುತ್ವವು ಬಲಪಡಬೇಕು. ಜನರಿಗೆ ಬೇಕಾದ ಅನ್ನ, ನೀರು, ಶಿಕ್ಷಣ, ಸ್ವಾತಂತ್ರ್ಯ ಇರಬೇಕು. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಜವಾಬ್ದಾರಿಯಾಗಿದೆ. ಜನರು ಸಮಾಜದ ಒಳಿತಿಗಾಗಿ ಕೆಲಸ ಮಾಡಬೇಕು. ನೌಕರರು ತಮ್ಮ ಹಕ್ಕುಗಳಿಗಾಗಿ ನ್ಯಾಯಾಲಯದ ಮೆಟ್ಟಿಲೇರಬೇಕಾದ ಸ್ಥಿತಿ ಉಂಟಾಗಬಾರದು. 1958ರಲ್ಲಿ ಇ.ಎಂ. ಶಂಕರನ್ ನಂಬೂದಿರಿಪ್ಪಾಡ್ ಕೇರಳದ ನೌಕರರ ಸೌಲಭ್ಯಗಳನ್ನು ಕಡಿತಗೊಳಿಸಿದರು. ಕಮ್ಯೂನಿಸ್ಟರು ಕೇರಳದಲ್ಲಿ ಆಡಳಿತ ನಡೆಸುವಾಗ ತುಟ್ಟಿಭತ್ಯೆಗಾಗಿ ನೌಕರರು ಮುಷ್ಕರ ನಡೆಸಿದುದಕ್ಕೆ ಗುಂಡು ಹಾರಿಸಿ ಇಬ್ಬರು ಮುಷ್ಕರ ನಿರತರನ್ನು ಕೊಲೆಗೈದರು. ಇದನ್ನು ಇತಿಹಾಸದಲ್ಲಿ ಮುಚ್ಚಿಹಾಕಲಾಗಿದೆ. ಸಾಹಿತಿಗಳು ಸಹಿತ ಎಡಪಂಥದ ಎಲ್ಲಾ ಸಂಘಟನೆಗಳು ಇದನ್ನು ಮರೆತಿವೆ. ಇದು ಎಂತಹ ದುಸ್ಥಿತಿ ಎಂದು ಅವರು ಹೇಳಿದರು.

ರಾಜ್ಯಾಧ್ಯಕ್ಷ ಬಿ.ಜಯಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಕೆ.ಗೋಪಾಲಕೃಷ್ಣ ಭಟ್, ಎಫ್ ಇಟಿಒ ರಾಜ್ಯಾಧ್ಯಕ್ಷ ಜೆ.ಮಹದೇವ್ ಕುಮಾರ್, ಎನ್‌ಟಿಯು ರಾಜ್ಯ ಉಪಾಧ್ಯಕ್ಷ ಕೆ.ಪ್ರಭಾಕರನ್ ನಾಯರ್, ಎಂ.ಕೆ.ಸದಾನಂದನ್, ಆಶಾಲತಾ, ಎಂ.ಟಿ.ಮದುಸೂದನನ್, ಎ.ಪ್ರಕಾಶ್, ಎಂ.ಈಶ್ವರ ರಾವ್, ಕಜಂಪಾಡಿ ಸುಬ್ರಹ್ಮಣ್ಯ ಭಟ್, ಕೆ.ವಿ.ಅಚ್ಯುತನ್, ಜಿ.ಗೋಪಕುಮಾರ್, ಕೆ.ಟಿ.ಬಾಲಕೃಷ್ಣನ್, ವಿ.ಎನ್.ಬಾಲಕೃಷ್ಣನ್, ಕೆ.ಕೃಷ್ಣನ್ ಮತ್ತಿತರರು ಮಾತನಾಡಿದರು.

ವಕೀಲ ಪಿ.ಜಯಭಾನು ಸ್ವಾಗತಿಸಿ, ಕುಂಞಿರಾಮನ್ ವಂದಿಸಿದರು.

ಕಾರ್ಯಕ್ರಮಕ್ಕೆ ಮೊದಲು ಪುರಭವನ ಪರಿಸರದಿಂದ ಹೊರಟ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಮತ್ತೆ ಪುರಭವನ ಬಳಿ ಸಮಾಪ್ತಿಗೊಂಡಿತು.

ನಂತರ ಸಾಂಸ್ಕೃತಿಕ ಸಮ್ಮೇಳನ, ಪ್ರತಿನಿಧಿ ಸಭೆ, ವಾರ್ಷಿಕ ವರದಿ ಮಂಡನೆ, ಆಯ ವ್ಯಯ ಲೆಕ್ಕಪತ್ರ ಮಂಡನೆ, ಚರ್ಚೆ, ಸಂಘಟನಾ ಠರಾವು ಮಂಡನೆ, ನೂತನ ಪದಾಧಿಕಾರಿಗಳ ಆಯ್ಕೆ ಇತ್ಯಾದಿಗಳು ನಡೆಯಿತು.

ಸಮಾರೋಪ ಸಮಾರಂಭದಲ್ಲಿ ಬಿಎಂಎಸ್ ಕೇರಳ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಮಹೇಶ್ ಸಮಾರೋಪ ಭಾಷಣ ಮಾಡಿದರು.

ಐವನ್ 'ಪ್ರಚಾರ'ಕ್ಕೆ ಕಾಮತ್ ಆಕ್ರೋಶ

ಮಂಗಳೂರು: ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿ ಅನುದಾನವನ್ನು ನಾನೇ ತಂದಿದ್ದೇನೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರು ಸ್ಥಳ ಪರಿಶೀಲನೆ ಮಾಡಿ ಫೋಟೋ ಕ್ಲಿಕ್ಕಿಸಿಕೊಂಡು ಪ್ರಚಾರ ಪಡೆಯುತ್ತಿರುವುದು ಹತಾಶೆಯ ಸಂಕೇತ ಎಂದು ಶಾಸಕ ಡಿ. ವೇದವ್ಯಾಸ ಕಾಮತ್ ಹೇಳಿದರು.

ವೈಯಕ್ತಿಕವಾಗಿ ಯಾವುದೇ ಹೊಸ ಯೋಜನೆಗಳನ್ನು, ಅನುದಾನಗಳನ್ನು ತರಲಾಗದೆ ಹತಾಶರಾಗಿರುವ ಕಾಂಗ್ರೆಸ್ ನಾಯಕರು, ಅನುದಾನವನ್ನು ನಾನೇ ತಂದಿದ್ದು ಎಂದು ಫೋಟೋ ಕ್ಲಿಕ್ಕಿಸಿಕೊಂಡು ಪ್ರಚಾರ ಪಡೆಯುತ್ತಿದ್ದಾರೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಆರೋಪಿಸಿದರು.



ಕಳೆದ ಮಳೆಗಾಲದಲ್ಲಿ ನನ್ನ ಕ್ಷೇತ್ರದಲ್ಲಿ ಉಂಟಾದ ಅಪಾರ ಹಾನಿಯ ಕುರಿತು ರಾಜ್ಯ ಸರಕಾರದ ಗಮನಕ್ಕೆ ತಂದು ರಾಜ್ಯ ವಿಪತ್ತು ಉಪಶಮನ ನಿಧಿಯಡಿ ತುರ್ತು ಕಾಮಗಾರಿ ನಡೆಸುವಂತೆ ಕೋರಲಾಗಿತ್ತು. 2025–26ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆದಿದ್ದೆ. ಜಿಲ್ಲಾಧಿಕಾರಿ ಫೆ.16 ರಂದು ತಮ್ಮ ಅಧಿಕೃತ ಜ್ಞಾಪನ ಪತ್ರದಲ್ಲಿ 'ಮಾನ್ಯ ಶಾಸಕರು ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರರವರ ಪತ್ರ ಸಂಖ್ಯೆ' ಎಂದು ಸ್ಪಷ್ಟವಾಗಿ ಉಲ್ಲೇಖಿಸಿ 28 ಕಾಮಗಾರಿಗಳಿಗೆ ಅನುಷ್ಠಾನಗೊಳಿಸಲು ಅಧಿಕೃತವಾಗಿ ಆದೇಶ ಹೊರಡಿಸಿದ್ದರು. ಇದೀಗ ಒಂದೂವರೆ ತಿಂಗಳ ನಂತರ ಕೆಲ ಕಾಂಗ್ರೆಸ್ ನಾಯಕರು ಕ್ಷೇತ್ರದ ವಿವಿಧ ಕಡೆ ತೆರಳಿ 'ಮಳೆಹಾನಿಯಿಂದ ಉಂಟಾದ ನಷ್ಟಕ್ಕೆ ಸರಕಾರದಿಂದ 10 ಕೋ. ರೂ. ಅನುದಾನ ತಂದಿದ್ದೇನೆ, ಬೇಗ ಕಾಮಗಾರಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಹೇಳಿಕೆ ನೀಡಿ, ಮಳೆ ನಿಂತು ಹೋದ ಮೇಲೆ ಕೊಡೆ ಏರಿಸುವ ಕೆಲಸ ಮಾಡಿ ಜನರ ಮುಂದೆ ನಗೆಪಾಟಲಿಗೀಡಾಗಿದ್ದಾರೆ ಎಂದರು.

ಹಲವು ವರ್ಷಗಳಿಂದ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಪೈಕಿ ಸುಮಾರು 163 ಜನರನ್ನು ಕೆಲಸದಿಂದ ತೆಗೆದು ಹಾಕಲು ರಾಜ್ಯ ಸರಕಾರ ಮುಂದಾಗಿರುವುದು ಖಂಡನೀಯ. 15–20 ವರ್ಷಗಳ ಕೆಲಸ ಮಾಡಿದ ಆಶಾ ಕಾರ್ಯಕರ್ತರನ್ನು ಏಕಾಏಕಿ ತೆಗೆದು ಹಾಕಿದರೆ ಅವರು ಎಲ್ಲಿ ಹೋಗಬೇಕು? ಅವರ ಜೀವನ ನಿರ್ವಹಣೆ ಹೇಗೆ? ಎಂದು ಶಾಸಕ ಕಾಮತ್ ಪ್ರಶ್ನಿಸಿದರು.

ದಿವಾಕರ್ ಪಾಂಡೇಶ್ವರ, ಪ್ರೇಮಾನಂದ ಶೆಟ್ಟಿ, ಸುಧೀರ್ ಶೆಟ್ಟಿ ಕಣ್ಣೂರು, ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಮಂಡಲದ ಪ್ರಧಾನ ಕಾರ್ಯದರ್ಶಿ ಲಲ್ಲೇಶ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ಪೂರ್ಣಿಮಾ ಎಂ., ಮಂಗಳಾ ಆಚಾರ್, ಸುರೇಖಾ ರಾವ್, ಸುರೇಖಾ ಎಂ.ಎಸ್. ಉಪಸ್ಥಿತರಿದ್ದರು.

ಆ್ಯಸಿಡ್ ದಾಳಿ ಪೀಡಿತರಿಗೆ ಸರ್ಕಾರದಿಂದಲೇ ಚಿಕಿತ್ಸೆ: ಚೌಧರಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸದಲ್ಲಿರುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಶನಿವಾರ ಮಂಗಳೂರಿನ ವೆನ್ಲಾಕ್ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಆ್ಯಸಿಡ್ ದಾಳಿ ಪೀಡಿತೆಯನ್ನು ಭೇಟಿ ಮಾಡಿದರು.



ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ್ಯಸಿಡ್ ಸಂತ್ರಸ್ತೆಗೆ ಸರ್ಕಾರದಿಂದ ದೊರಕಬೇಕಾದ ಎಲ್ಲಾ ನೆರವು ಒದಗಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಪತಿಯೇ ಆ್ಯಸಿಡ್ ಎರಚಿದ್ದರೂ ಆಕೆ ಅದನ್ನು ಎಲ್ಲೂ ಹೇಳಿಕೊಂಡಿಲ್ಲ. ಪತಿಯ ಪರವಾಗಿಯೇ ಮಾತನಾಡಿರುವುದಾಗಿ ತಿಳಿಸಿದರು.

ಆ್ಯಸಿಡ್ ದಾಳಿಯಿಂದ ಮಹಿಳೆಯ ಮೈ ಮೇಲೆ ಶೇ.15ರಷ್ಟು ಸುಟ್ಟ ಗಾಯಗಳಾಗಿವೆ. ಪೀಡಿತೆಗೆ ತಿಂಗಳಿಗೆ 10,000 ರೂ. ಪಿಂಚಣಿ ಹಾಗೂ ಗಾಯಗಳ ಪ್ರಮಾಣವನ್ನು ಅವಲಂಬಿಸಿ ಪರಿಹಾರ ಧನ ನೀಡಲಾಗುವುದು. ಆ್ಯಸಿಡ್ ದಾಳಿ ಪೀಡಿತರ ಶಸ್ತ್ರಚಿಕಿತ್ಸೆ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ ಎಂದು ಅವರು ಹೇಳಿದರು.

'ಆಕೆಯ ಶಸ್ತ್ರಚಿಕಿತ್ಸೆ ವೆಚ್ಚವನ್ನು ಮರುಪಾವತಿಸಲು ಮತ್ತು ಶೀಘ್ರದಲ್ಲೇ ನಡೆಯಲಿರುವ ಐದನೇ ಶಸ್ತ್ರಚಿಕಿತ್ಸೆಯ ವೆಚ್ಚವನ್ನು ಸರ್ಕಾರವೇ ಭರಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದ್ದೇನೆ ಎಂದು ಡಾ.ನಾಗಲಕ್ಷ್ಮೀ ಹೇಳಿದರು.

ವಿದ್ಯಾರ್ಥಿಗಳಿಗೆ ಮಾದಕ ವಸ್ತು ಮಾರಾಟ: ಆರೋಪಿಗಳ ಸೆರೆ

ಮಂಗಳೂರು: ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಮಾದಕ ದ್ರವ್ಯ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಅವರಿಂದ ಒಟ್ಟು 12.46 ಗ್ರಾಂ ತೂಕದ 1,24,600 ರೂ. ಅಂದಾಜು ಮೌಲ್ಯದ ಎಂಡಿಎಂಎ ಮಾದಕ ದ್ರವ್ಯವನ್ನು ವಶಪಡಿಸಿಕೊಂಡಿದ್ದಾರೆ.

» 12.46 ಗ್ರಾಂ ತೂಕದ 1,24,600 ರೂ. ಅಂದಾಜು ಮೌಲ್ಯದ ಎಂಡಿಎಂಎ ಮಾದಕ ದ್ರವ್ಯ ವಶ

ಬಂಟ್ವಾಳ ತಾಲೂಕಿನ ಗೋಳ್ತಮಜಲು ನಿವಾಸಿ ಮೂಲತಃ ಮಂಗಳೂರು ಉರ್ವ ವೇಲ್ಸ್ ಪೇಟೆಯ ತಿಲಕ್ ರಾಜ್ (31) ಮತ್ತು ಬಜಪೆ ಭಟ್ರಕೆರೆ ನಿವಾಸಿ ಕುದ್ರೋಳಿ ನಡುಪಳ್ಳಿ ಬಳಿ ವಾಸವಿದ್ದ ಶೇಕ್ ಮೊಹಮ್ಮದ್ ಹ್ಯಾರಿಸ್ ಅಲಿಯಾಸ್ ಜಿಗರ್ (32) ಬಂಧಿತ ಆರೋಪಿಗಳು. ಉರ್ವ ಠಾಣಾ ಪೊಲೀಸರಿಗೆ ದೊರೆತ ಖಚಿತ ಮಾಹಿತಿಯಂತೆ ದಾಳಿ ನಡೆಸಲಾಗಿತ್ತು.

ಆರೋಪಿಗಳು ಕೇರಳದ ಮಂಜೇಶ್ವರ ಮೂಲದ ವ್ಯಕ್ತಿಯೊಬ್ಬನಿಂದ ಕಡಿಮೆ ಬೆಲೆಗೆ ಎಂಡಿಎಂಎ ಪಡೆದು ಪ್ಲಾಸ್ಟಿಕ್ ಕವರ್ ನಲ್ಲಿ ತುಂಬಿಸಿ ಹೆಚ್ಚಿನ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡಲು ಬಂದಿರುವುದಾಗಿ ಒಪ್ಪಿಕೊಂಡಿದ್ದಾರೆ. ಆರೋಪಿಗಳಿಂದ ಮೊಬೈಲ್, ಎರಡು ಸ್ಕೂಟರ್ ಸೇರಿ ಇತರ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಾರ್ಮಿಕರೇ ಹೆಚ್ಚಾಗಿರುವ ಕಾಟಿಪಳ್ಳ ವಾರ್ಡ್!

ಜನತಾ ಕಾಲನಿಯಲ್ಲಿ ಕಾಡಿದ ನೀರಿನ ಬವಣೆ

ದಿಗಂತ ವಾಟರ್ ಚೆಕ್

ಮಂಗಳೂರು: ಬಿಸಿಲ ಬೇಗೆ ಹೆಚ್ಚುತ್ತಿದ್ದಂತೆ ಕುಡಿಯುವ ನೀರಿನ ತತ್ವಾರ ಎಲ್ಲೆಡೆ ಕಾಣಿಸಿಕೊಳ್ಳುತ್ತಿದೆ. ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ ಮೂರರಲ್ಲೂ (ಕಾಟಿಪಳ್ಳ ಪೂರ್ವ) ಇದೇ ಸಮಸ್ಯೆ ಎದುರಾಗಿದೆ. ಇಲ್ಲಿನ ಬ್ರಹ್ಮಶ್ರೀ ನಾರಾಯಣಗುರು ರಸ್ತೆ ಹಾಗೂ 2ನೇ ಬ್ಲಾಕ್, ಜನತಾ ಕಾಲನಿ ಕಾಟಿಪಳ್ಳ ಭಾಗದ ಕೆಲವು ಕಡೆ ನೀರಿನ ಸಮಸ್ಯೆ ಎದುರಾಗಿದೆ.



ತಾಂತ್ರಿಕವಾಗಿ ಪೈಪ್‌ಲೈನ್‌ನಲ್ಲಿ ಸಮಸ್ಯೆ ಉಂಟಾಗಿದ್ದು ಜನರಿಗೆ ನೀರು ತಲುಪುತ್ತಿಲ್ಲಘಿ. ಟ್ಯಾಂಕರ್ ಮೂಲಕ ಅಗತ್ಯ ಇರುವವರಿಗೆ ನೀರು ತಲುಪಿಸುವ ಕೆಲಸವನ್ನು ಮಾಡಲಾಗುತ್ತಿದೆ.

ಕಾರ್ಮಿಕರು ಹೆಚ್ಚಿರುವ ಪ್ರದೇಶ:

ಕಾಟಿಪಳ್ಳ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಕಾರ್ಮಿಕರು ವಾಸವಾಗಿದ್ದು ಮಂಗಳೂರು ಮಹಾನಗರ ಪಾಲಿಕೆ ಪ್ರತಿ ಮನೆಗೆ ನೀಡುವ ನೀರಿನ ಪ್ರಮಾಣ ಒಂದು ಕುಟುಂಬಕ್ಕೆ ಬೇಕಾಗುವಷ್ಟು ಮಾತ್ರ. ಆದರೆ ಅಲ್ಲಿಯ ಮನೆ ಮನೆಗಳಲ್ಲಿ ಬಾಡಿಗೆ ಮನೆಗಳನ್ನು ನಿರ್ಮಿಸಿ ಕಾರ್ಮಿಕರಿಗೆ ವಾಸ ಮಾಡಲು ಅವಕಾಶ ಕಲ್ಪಿಸಿ ಆದಾಯ ಗಳಿಸಲಾಗುತ್ತಿದೆ. ಒಂದು ಮನೆಗೆ 500 ಲೀಟರ್ ನೀರು ಪೂರೈಕೆ ಆದರೆ, ಬಾಡಿಗೆ ಕಟ್ಟಡಗಳು ಇರುವ ಮನೆಗಳಿಗೆ 2000 ಲೀಟರ್ ನೀರು ನೀಡಿದರು ಸಾಕಾಗುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಸರಿಯಾಗಿ ಮನೆ ನಂಬರ್ ಇಲ್ಲದೆ ಹಲವಾರು ಕಡೆಗಳಲ್ಲಿ ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸಲಾಗಿದೆ. ಇಲ್ಲಿಗೂ ಸಾಕಷ್ಟುನೀರಿನ ಅವಶ್ಯಕತೆಯಿದ್ದುಘಿ, ಇಲ್ಲಿನ ವಾಸಿಗಳು ಪಾಲಿಕೆ ಪೂರೈಸುವ ನೀರನ್ನೇ ಅವಲಂಬಿಸಬೇಕಿದೆ. ಕೆಲವು ಕಡೆಗಳಲ್ಲಿ ಬೋರ್‌ವೆಲ್ ಹಾಕಿದ್ದರೂ ನೀರಿನ ಪೂರೈಕೆ ಪ್ರಮಾಣ ಕಡಿಮೆ ಇದೆ.

ಪರ್ಯಾಯವಾಗಿ ಬಾಡಿಗೆ ಮನೆಗಳಿಗೆ ಪ್ರತ್ಯೇಕ ನೀರಿನ ಪೈಪ್‌ಲೈನ್ ಹಾಕಿಸಿಕೊಂಡರೆ ಬಹಳಷ್ಟು ಸಮಸ್ಯೆ ಬಗ್ಗೆ ಹರಿಸಬಹುದು ಎನ್ನುತ್ತಾರೆ ಸ್ಥಳೀಯರು.

ಕೊನೇ ಹಂತದಲ್ಲಿ ಜಲಸಿರಿ ಕಾಮಗಾರಿ:

ಈ ಭಾಗದಲ್ಲಿ ಜಲಸಿರಿ ಯೋಜನೆಯ ಕಾಮಗಾರಿ ಬಹುತೇಕ ಮುಕ್ತಾಯ ಹಂತದಲ್ಲಿದ್ದು, ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಜಲಸಿರಿ ಕಾಮಗಾರಿಯಲ್ಲಿ ಕೈಬಿಡಲಾದ ಮನೆಗಳಿಗೆ ಸಂಪರ್ಕವನ್ನು ಸ್ವತಃ ಕಾರ್ಪೊರೇಷನ್ ನೀಡುತ್ತಿದೆ. ಸದ್ಯ ನಿಕಟಪೂರ್ವ ಪಾಲಿಕೆಯ ಸದಸ್ಯ ಲೋಕೇಶ್ ಬೊಳ್ಳಾಜೆ ಅವರ ಸಹಕಾರದಲ್ಲಿ ಹಲವು ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲಾಗಿದೆ.

ಏರು ತಗ್ಗಿನ ಪ್ರದೇಶ

ಕಾಟಿಪಳ್ಳ ಪ್ರದೇಶ ಏರು ತಗ್ಗುಗಳನ್ನು ಹೊಂದಿರುವುದರಿಂದ ಬರುವ ನೀರು ಎತ್ತರ ಪ್ರದೇಶದ ಮನೆಗಳ ಟ್ಯಾಂಕುಗಳಿಗೆ ತುಂಬುತ್ತಿಲ್ಲ.

ಸಂಪು ಇಲ್ಲದ ಮನೆಗಳು ಓವರ್ ಹೆಡ್ ಟ್ಯಾಂಕುಗಳನ್ನು ನಂಬಿಕೊಂಡಿದ್ದು ಇದರಿಂದಾಗಿ ನೀರಿನ ಕೊರತೆಯನ್ನು ಎದುರಿಸುತ್ತಿದ್ದಾರೆ.

> **ಹಲವೆಡೆ ಸಮಸ್ಯೆ**
>
> ನೀರಿನ ಸಮಸ್ಯೆ ಕಾಟಿಪಳ್ಳ ವಾರ್ಡ್‌ನ ಎರಡನೆಯ ಬ್ಲಾಕ್, ಗಣೇಶ ಕಟ್ಟೆ ಮುಂತಾದೆಡೆ ಉಂಟು. ಸಮರ್ಪಕವಾಗಿ ನೀರು ಪೂರೈಸಲು ಪಾಲಿಕೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು.
>
> ■ ನಿತ್ಯಾನಂದ ಶೆಟ್ಟಿಗಾರ್, ಕಾಟಿಪಳ್ಳ



> **ಒಳಚರಂಡಿ ವ್ಯವಸ್ಥೆ ಸರಿಯಾಗಲಿ**
>
> ಕುಡಿಯುವ ನೀರಿನ ಯೋಜನೆಗೆ ಈ ಭಾಗದಲ್ಲಿ ಮಾಸ್ಟರ್ ಪ್ಲಾನ್ ರೂಪಿಸಬೇಕು. ಹೆಚ್ಚಾಗಿ ಬಡಾವಣೆ ಇರುವ ಪ್ರದೇಶವಾಗಿದ್ದು ಸಮರ್ಪಕವಾಗಿ ನೀರಿನ ಪೂರೈಕೆ ಆಗಬೇಕು. ಅಲ್ಲದೆ ಒಳಚರಂಡಿ ವ್ಯವಸ್ಥೆ ಸರಿಯಾಗುವುದರೊಂದಿಗೆ 60 ಬೆಡ್ಡಿನ ಆಸ್ಪತ್ರೆ ನಿರ್ಮಾಣವಾಗಬೇಕು.
>
> ■ ವಿಟ್ಠಲ ಶೆಟ್ಟಿಗಾರ್, ಕಾಟಿಪಳ್ಳ



ಒಳಚರಂಡಿ ಸಮಸ್ಯೆ

ಕಾಟಿಪಳ್ಳ ವಾರ್ಡ್ ನಲ್ಲಿ ಒಳಚರಂಡಿ ಸಮಸ್ಯೆ ಓಬಿರಾಯನ ಕಾಲದ್ದಾಗಿದ್ದು, ಇದೀಗ ಮನೆಗಳ ಸಂಖ್ಯೆಯು ಹೆಚ್ಚಾಗಿದೆ. ಇದರಿಂದಾಗಿ ಒಳಚರಂಡಿಯ ವ್ಯವಸ್ಥೆ ಕೆಟ್ಟು ಹೋಗಿ ರಸ್ತೆ ತೋಡುಗಳಲ್ಲಿ ಕೊಳಚೆ ನೀರು ಹರಿಯುತ್ತಿದೆ. ರಾಜ ಕಾಲುವೆಯ ನೀರು ಕಪ್ಪು ಬಣ್ಣಕ್ಕೆ ತಿರುಗಿದೆ. ಕೆಲವೆಡೆ ಮಳೆ ನೀರು ಹರಿಯುವ ತೋಡು ಮಾಡಬೇಕಿದ್ದು ಮಹಾನಗರ ಪಾಲಿಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ.



ನಾಳೆ ವಾರ್ಡ್ 4-ಕಾಟಿಪಳ್ಳ (ಕೃಷ್ಣಾಪುರ) ಸ್ಥಿತಿಗತಿ

ಬೆಳಗಾವಿ ವಿಮಾನ ನಿಲ್ದಾಣ ರೆಡ್ ಝೋನ್ ಘೋಷಣೆ

ಬೆಳಗಾವಿ: ಇಸ್ರೇಲ್, ಇರಾನ್, ಅಮೆರಿಕ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣವನ್ನು 'ರೆಡ್ ಝೋನ್' ಎಂದು ಘೋಷಿಸಲಾಗಿದೆ.

ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ ಮಾರ್ಗಸೂಚಿಯಂತೆ ಈ ಕ್ರಮ ಕೈಗೊಳ್ಳಲಾಗಿದೆ. ಸಾಂಬ್ರಾ ವಿಮಾನ ನಿಲ್ದಾಣದ ಸುತ್ತಮುತ್ತ 8 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಡ್ರೋನ್ ಹಾಗೂ ಅನ್ಮ್ಯಾನ್ಡ್ ಏರಿಯಲ್ ವಾಹನಗಳ ಹಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ರೆಡ್ ಝೋನ್ ಮತ್ತು ಯೆಲ್ಲೋ ಝೋನ್ ವ್ಯಾಪ್ತಿಯಲ್ಲಿ ಅನುಮತಿ ಇಲ್ಲದೆ ಡ್ರೋನ್ ಹಾರಾಟ ನಡೆಸುವುದು ಕಾನೂನುಬಾಹಿರ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.



ಇದಕ್ಕೆ ಸಂಬಂಧ ಬೆಳಗಾವಿ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಪತ್ರಿಕಾ ಪ್ರಕಟಣೆ ಹೊರಡಿಸಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ. ವಿಮಾನ ನಿಲ್ದಾಣದ ಭದ್ರತೆ ದೃಷ್ಟಿಯಿಂದ ಈ ಕ್ರಮ ಅತ್ಯಾವಶ್ಯಕವಾಗಿದ್ದು, ಆದೇಶ ಉಲ್ಲಂಘನೆ ಮಾಡುವವರ ವಿರುದ್ಧ ಕಾನೂನು ಕಠಿಣ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಪ್ರಸ್ತುತ ಜಾಗತಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ.

ಉತ್ತರ ಪ್ರದೇಶದ ಶಿಕ್ಷಣ ಪದ್ಧತಿ ದೇಶಕ್ಕೆ ಮಾದರಿ

ಲಖ್ನೋ: ಉತ್ತರ ಪ್ರದೇಶದಲ್ಲಿ ಕಳೆದ ಏಳು ವರ್ಷಗಳಲ್ಲಿ ಶಿಕ್ಷಣ, ಉನ್ನತ ಶಿಕ್ಷಣ, ಅಂಗನವಾಡಿ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಮಹತ್ವದ ಪರಿವರ್ತನೆ ಕಂಡುಬಂದಿದ್ದು, ಸಮಗ್ರ ದೃಷ್ಟಿಯೊಂದಿಗೆ ರೂಪಿಸಿದ ಆಡಳಿತ ಕ್ರಮಗಳು ರಾಜ್ಯವನ್ನು ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸ್ಥಾನಕ್ಕೆ ಕೊಂಡೊಯ್ದಿವೆ ಎಂದು ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಅವರು ಹೇಳಿದರು.

ಕರ್ನಾಟಕ ಮತ್ತು ತ್ರಿಪುರ ಪತ್ರಕರ್ತರ ನಿಯೋಗಗಳು ಉತ್ತರ ಪ್ರದೇಶದ ಜನಭವನಕ್ಕೆ ಭೇಟಿ ನೀಡಿ ರಾಜ್ಯಪಾಲರೊಂದಿಗೆ ನಡೆಸಿದ ಸಂವಾದದಲ್ಲಿ, ಶಿಕ್ಷಣ ಕ್ಷೇತ್ರದ ಸುಧಾರಣೆಗಳು, ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸುವ ಕ್ರಮಗಳು, ಮಹಿಳಾ ಸಬಲೀಕರಣ, ಅಂಗನವಾಡಿ ಅಭಿವೃದ್ಧಿ, ಆರೋಗ್ಯ ಅಭಿಯಾನಗಳು ಹಾಗೂ ಸಾಮಾಜಿಕ ಪಾಲ್ಗೊಳ್ಳುವಿಕೆ ಕುರಿತು ರಾಜ್ಯಪಾಲರು ಹಾಗೂ ಅಧಿಕಾರಿಗಳು ವಿವರಿಸಿದರು. ಈ ವೇಳೆ ಮಾತನಾಡಿದ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್, ಶಿಕ್ಷಣ ವ್ಯವಸ್ಥೆಯನ್ನು 'ಕೆಜಿಯಿಂದ ಪಿಜಿವರೆಗೆ' ಒಂದೇ ನಿರಂತರ ಪ್ರಕ್ರಿಯೆಯಾಗಿ ನೋಡಬೇಕು ಎಂದು ಹೇಳಿದರು.

ಅಂಗನವಾಡಿಗೆ ಬರುವ ಮೂರು ವರ್ಷದ ಮಗು ಭವಿಷ್ಯದಲ್ಲಿ ವಿಶ್ವವಿದ್ಯಾಲಯ ತಲುಪುವವರೆಗೂ ಅದರ ಶಿಕ್ಷಣದ ಪಥವನ್ನು ಸಮಗ್ರವಾಗಿ ರೂಪಿಸಬೇಕು ಎಂಬುದು ಈ ಮಾದರಿಯ ಮೂಲಭೂತ ಚಿಂತನೆ ಎಂದು ವಿವರಿಸಿದರು. ಗ್ರಾಮ ಮಟ್ಟದಲ್ಲಿ ಸಮೀಕ್ಷೆ ನಡೆಸಿ, ಮೂರು ವರ್ಷದ ಮಕ್ಕಳನ್ನು ಅಂಗನವಾಡಿಗೆ ಹಾಗೂ ಆರು ವರ್ಷ ಮೇಲ್ಪಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯ ನಡೆಯುತ್ತಿದೆ. ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ ವಿತರಣೆ, ಗ್ರಂಥಾಲಯ ನಿರ್ಮಾಣ ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಶಾಲಾ ಬಿಡುವಿಕೆ ಪ್ರಮಾಣವನ್ನು ಬಹುತೇಕ ಶೂನ್ಯಕ್ಕೆ ಇಳಿಸಲಾಗಿದೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 2019ರಿಂದ ಗುಣಮಟ್ಟ ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿದ್ದು, ವಿಶ್ವವಿದ್ಯಾಲಯಗಳ ಸ್ವಾಟ್ ವಿಶ್ಲೇಷಣೆ, ಮೂಲಸೌಕರ್ಯ ಅಭಿವೃದ್ಧಿ, ಶಿಕ್ಷಕರ ನೇಮಕಾತಿ ಸುಧಾರಣೆ ಹಾಗೂ ಸಂಶೋಧನೆಗೆ ಉತ್ತೇಜನ ನೀಡಲಾಗಿದೆ. ಕೋವಿಡ್ ಅವಧಿಯಲ್ಲೂ ಆನ್‌ಲೈನ್ ಸಭೆಗಳ ಮೂಲಕ ವಿಶ್ವವಿದ್ಯಾಲಯಗಳ ಕಾರ್ಯವನ್ನು ನಿರಂತರವಾಗಿ ಪರಿಶೀಲಿಸಲಾಗಿದೆ.



ಉನ್ನತ ಶಿಕ್ಷಣ ಸಾಧನೆ

- ಒಟ್ಟು ವಿಶ್ವವಿದ್ಯಾಲಯಗಳು: 38
- ನ್ಯಾಕ್ ಎ++ : 9
- ನ್ಯಾಕ್ ಎ+ : 4
- ನ್ಯಾಕ್ ಎ : 5
- ಎನ್‌ಐಆರ್‌ಎಫ್ ಪಟ್ಟಿಯಲ್ಲಿ 11 ಸ್ಥಾನ
- ಪಾರದರ್ಶಕ ನೇಮಕಾತಿ: 1500ಕ್ಕೂ ಹೆಚ್ಚು

ಆರೋಗ್ಯ ಕ್ಷೇತ್ರದಲ್ಲಿ ಕ್ರಮ

ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳಿಗೆ ಮಕ್ಕಳ ಕುರ್ಚಿ, ಮೇಜು, ಕಲಿಕಾ ಸಾಮಗ್ರಿ ಒಳಗೊಂಡ ಕಿಟ್‌ಗಳನ್ನು ಸಿಎಸ್‌ಆರ್ ನೆರವಿನಿಂದ ಒದಗಿಸಲಾಗಿದೆ. ಇದರ ಪರಿಣಾಮವಾಗಿ ಅಂಗನವಾಡಿಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಾಗಿದೆ. ಟಿಬಿ ರೋಗಿಗಳನ್ನು ದತ್ತು ಪಡೆಯುವ ನಿಕ್ಷಯ್ ಮಿತ್ರ ಯೋಜನೆ ಹಾಗೂ ಬಾಲಕಿಯರ ಆರೋಗ್ಯಕ್ಕಾಗಿ ಎಚ್‌ಪಿವಿ ಲಸಿಕೆ ಅಭಿಯಾನ ಕೂಡ ರಾಜ್ಯದಲ್ಲಿ ವ್ಯಾಪಕವಾಗಿ ಜಾರಿಯಲ್ಲಿವೆ.

ಮಹಿಳಾ ಸಬಲೀಕರಣಕ್ಕೆ ಒತ್ತು

ಮಹಿಳೆಯರು ಕೃಷಿ, ಪಶುಸಂಗೋಪನೆ, ಹಾಲು ಉತ್ಪಾದನೆ, ಸಣ್ಣ ಉದ್ಯಮಗಳಲ್ಲಿ ಭಾಗವಹಿಸಲು ಪ್ರತ್ಯೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳಿಗೆ ಕಾರ್ಯಾಗಾರ ಸ್ಥಳ, ಆರ್ಥಿಕ ನೆರವು ಮತ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಮೂಲಕ ಅವರ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಎಷ್ಟೇ ಆಧುನಿಕತೆ ಬಂದರೂ ಆಧ್ಯಾತ್ಮಿಕತೆ ಮತ್ತು ಸಂಸ್ಕೃತಿಯನ್ನು ಭಾರತೀಯರು ಮರೆಯದೆ ಮುಂದುವರಿಸುತ್ತಿದ್ದಾರೆ ಎನ್ನುವುದಕ್ಕೆ ಈ ಬ್ರಹ್ಮಕಲಶೋತ್ಸವವೇ ಸಾಕ್ಷಿ
-ಉಜಿರೆ ಜನಾರ್ದನ ದೇವಸ್ಥಾನದಲ್ಲಿ ದಿನೇಶ್ ಗುಂಡೂರಾವ್

-ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎಂಬ ಡಿವಿಜಿ ಕಗ್ಗ ನೆನೆಪಾಗುತ್ತೆ.

ದಿನ ಭವಿಷ್ಯ

ಮೇಷ ಅಶಾಂತ ಮನಸ್ಥಿತಿ. ವೃತ್ತಿ ಕ್ಷೇತ್ರದ ಕೆಲವು ಬೆಳವಣಿಗೆಯಿಂದ ಅಸಮಾಧಾನ. ಮನೆ ಸದಸ್ಯರ ಸಂಗದಲ್ಲಿ ನೆಮ್ಮದಿ. ಧನಪ್ರಾಪ್ತಿ.

ವೃಷಭ ಸಣ್ಣ ವಿಷಯಕ್ಕೂ ರೇಗುವ ಸನ್ನಿವೇಶ ಉಂಟಾದೀತು. ತಾಳ್ಮೆ ವಹಿಸಿ. ನಿಮ್ಮ ಕೆಲಸದಲ್ಲಿ ಬೇಕೆಂದೇ ಕೆಲವರು ತಪ್ಪು ಹುಡುಕುವರು.

ಮಿಥುನ ಸಂಗಾತಿಯ ವರ್ತನೆ ಅಸಮಾಧಾನ ಉಂಟು ಮಾಡಬಹುದು. ವಾಗ್ವಾದ ಸಂಭವ. ನಿಮ್ಮಿಂದ ತಾಳ್ಮೆಯ ನಡೆ ಅವಶ್ಯ. ಖರ್ಚು ಹೆಚ್ಚಲಿದೆ.

ಕಟಕ ಸಮಯಕ್ಕೆ ತಕ್ಕಂತೆ ಸೂಕ್ತ ನಿರ್ಧಾರ ತಾಳಿ. ಹಳೆಯ ನಿರ್ಧಾರಕ್ಕೇ ಅಂಟಿಕೊಂಡು ಕೂರದಿರಿ. ಆಪ್ತರಿಂದ ಶುಭ ಸುದ್ದಿ ಕೇಳಿಬಂದೀತು.

ಸಿಂಹ ಅಗತ್ಯಕ್ಕಿಂತ ಹೆಚ್ಚು ಹಣ ಖರ್ಚು ಚಿಂತೆ ತಂದೀತು. ನಿಮ್ಮ ಹಿತೈಷಿಗಳನ್ನು ಅವಗಣನೆ ಮಾಡಬೇಡಿ. ಪ್ರೀತಿಯಲ್ಲಿ ಯಶಸ್ಸು ಸಿಗಲಿದೆ.

ಕನ್ಯಾ ಕೆಲವು ಬೆಳವಣಿಗೆ ನಿರಾಶೆ ತರುವುದು. ಬಂಧುವಿನ ಜತೆ ವಿರಸ. ಯಶಸ್ಸಿನ ದಾರಿಯಲ್ಲಿ ವಿಘ್ನ ತಲೆದೋರಲಿದೆ. ಸಂಯಮವಿರಲಿ.

ತುಲಾ ಸಂಬಂಧಪಡದ ವಿಚಾರದಲ್ಲಿ ನೀವು ಸಿಲುಕುವಿರಿ. ನೆಮ್ಮದಿ ಹಾಳಾದೀತು. ಕೌಟುಂಬಿಕ ಸಹಕಾರ ಪಡೆಯಿರಿ. ಮಕ್ಕಳ ಸಾಧನೆ ತೃಪ್ತಿ.

ವೃಶ್ಚಿಕ ಇತ್ತೀಚಿನ ಕೆಲವು ಬೆಳವಣಿಗೆಗಳ ಕಾರಣದಿಂದ ಧಾರ್ಮಿಕ ಭಾವ ಹೆಚ್ಚಬಹುದು. ಕಷ್ಟ ಮರೆಯಲು ದೇವರ ಮೊರೆ ಹೋಗುವಿರಿ.

ಧನು ನಿಮ್ಮ ಸಾಧನೆಯ ಶ್ರೇಯಸ್ಸು ಇತರರು ಕಸಿದುಕೊಂಡಾರು. ಎಚ್ಚರ ದಿಂದಿರಿ. ಕೌಟುಂಬಿಕ ಬಿಕ್ಕಟ್ಟು. ಅತಿರೇಕದ ಪ್ರತಿಕ್ರಿಯೆ ತೋರದಿರಿ.

ಮಕರ ವ್ಯವಹಾರದ ಒತ್ತಡ ಮಧ್ಯೆಯೂ ಖುಷಿ ಪಡುವ ಪ್ರಸಂಗ ಉಂಟಾಗಲಿದೆ. ಆರ್ಥಿಕ ಉನ್ನತಿ. ವೈವಾಹಿಕ ಸಂಬಂಧ ಕೂಡಿಬಂದೀತು. ಆರೋಗ್ಯ ವೃದ್ಧಿ.

ಕುಂಭ ಇತರರ ಒಳ್ಳೆಯ ಕೆಲಸ ಶ್ಲಾಘಿಸಿರಿ. ನಿಮ್ಮ ವರ್ತನೆಯಿಂದ ಇತರರ ಮೆಚ್ಚುಗೆ ಗಳಿಸುವಿರಿ. ಕೌಟುಂಬಿಕ ಸಂತೋಷ. ಬಂಧುಗಳ ಭೇಟಿ.

ಮೀನ ಎಲ್ಲರನ್ನು ಕುರುಡಾಗಿ ನಂಬದಿರಿ. ನಿಮ್ಮನ್ನು ವಂಚಿಸಲು ಯತ್ನ ನಡೆಯುತ್ತದೆ. ಪ್ರೀತಿಯ ಅಭಿವ್ಯಕ್ತಿ ಪ್ರತಿಕೂಲ ಫಲಿತಾಂಶ ತಂದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 2,9,4,1

ಯುವಜನತೆಗೆ ಸಂಪಾದಕ ಮಹಾಬಲ ಸೀತಾಳಬಾವಿ ಕಿವಿಮಾತು

ಸ್ಪರ್ಧೆ ಸಮಾಜಕ್ಕೆ ಅವಶ್ಯ

ಬೆಂಗಳೂರು: ರಾಷ್ಟ್ರೋತ್ಥಾನದ ಪ್ರಬಂಧ ಸ್ಪರ್ಧೆಗಳು ಅದರದ್ದೇ ಆದ ಮೌಲ್ಯಗಳನು ಒಳಗೊಂಡಿದೆ. ಯುವ ಜನರಿಗಾಗಿ ಏರ್ಪಡಿಸುವ ಈ ರೀತಿಯ ಪ್ರಬಂಧ ಸ್ಪರ್ಧೆಗಳು ಇಂದಿನ ಸಮಾಜಕ್ಕೆ ತುಂಬಾ ಅವಶ್ಯವಾಗಿದೆ ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಂಪಾದಕ ಮಹಾಬಲ ಸೀತಾಳಬಾವಿ ಅಭಿಪ್ರಾಯಪಟ್ಟರು.

ಕೆಂಪೇಗೌಡ ನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಶವಶಿಲ್ಪ ಸಭಾಂಗಣದಲ್ಲಿ ಉತ್ಥಾನ ಮಾಸಪತ್ರಿಕೆಯಿಂದ ಶತಮಾನ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ : ವಿಚಾರ, ವಿಶೇಷತೆ ಮತ್ತು ಕೊಡುಗೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ 2025ರ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ಥಾನ ಮಾಸಪತ್ರಿಕೆ ಮಾಧ್ಯಮವಲಯದಲ್ಲೂ ಮೌಲ್ಯಕ್ಕಾಗಿ ಹೆಸರುವಾಸಿ. ಯುವಕರಿಗಾಗಿ ಆಯೋಜಿಸಿದ ಪ್ರಬಂಧ ಸ್ಪರ್ಧೆಯ ಮೂಲಕ ಮೌಲ್ಯಗಳನ್ನು ಉಳಿಸುವ ಅವಕಾಶವನ್ನು ಕಲ್ಪಿಸಿದೆ. ಸಮಾಜದಲ್ಲಿ ಮರೆಯಾಗುತ್ತಿರುವ ಮೌಲ್ಯಗಳನ್ನು ತಿಳಿಸಲು ಈ ರೀತಿಯ ಪ್ರಭಂದ ಸ್ಪರ್ಧೆಗಳು ಅವಶ್ಯಕ. ಈ ಕೆಲಸವನ್ನು ಉತ್ಥಾನ ಮಾಸಪತ್ರಿಕೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಎಲ್ಲಾ ಪತ್ರಿಕೆಗಳು ಇಂದು ಮಾರುಕಟ್ಟೆಯ ಮಾರ್ಗದಲ್ಲಿ ನಡೆಯುತ್ತಿವೆ. ಆದರೆ 60 ವರ್ಷಕ್ಕೂ ಹೆಚ್ಚಿನ ಕಾಲ ಉತ್ಥಾನ ಪತ್ರಿಕೆ ತನ್ನ ಮಾರ್ಗವನ್ನು ಬದಲಾಯಿಸಿಲ್ಲ. ಯಾವ ಆಶಯಕ್ಕೆ ಆರಂಭವಾಯಿತೋ ಅದೇ ಆಶಯವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆ. ಸಾಮಾಜಿಕ ಮೌಲ್ಯ, ದೇಶ ಪ್ರೇಮ ಹಾಗೂ ಜೀವನದ ಆದರ್ಶಗಳನ್ನು ಉತ್ಥಾನ ಜನರಿಗೆ ತಲುಪಿಸುತ್ತಿದೆ. ಸಂಸ್ಕೃತಿಯ ತತ್ವವನ್ನು ಇನ್ನೂ ಉಳಿಸಿಕೊಂಡಿದೆ. ಆದರೆ ಇದೇ ಸಮಯವನ್ನು ದಾಟಿದ ಹಲವು ಪತ್ರಿಕೆಗಳು ತಮ್ಮ ತತ್ವಗಳನ್ನು ಮರೆಯುತ್ತಿರುವುದು ದುರದೃಷ್ಟಕರ ಎಂದು ವಿಷಾದ ವ್ಯಕ್ತಪಡಿಸಿದರು. ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಮಾತನಾಡಿ, ನಮ್ಮಲ್ಲಿ ಇರುವ ಬರವಣಿಗೆಯ ಪ್ರತಿಭೆಯನ್ನು ಇನ್ನಷ್ಟು ವಿಸ್ತಾರಗೊಳಿಸುವುದು ಪ್ರಬಂಧ ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ ಎಂದರು.



ಹಿಂದು ಎನ್ನುವುದು ಜೀವ ಪದ್ಧತಿ: ರಾಜೇಶ್ ಪದ್ಮಾರ್

ಯಾವ ದೇವರನ್ನು ಪೂಜಿಸಲಾಗುತ್ತದೆ ಎನ್ನುವುದರ ಮೇಲೆ ಹಿಂದುತ್ವ ನಿಂತಿಲ್ಲ. ಭಾರತ ದೇಶದಲ್ಲಿ ಇರುವವರು ಎಲ್ಲರೂ ಹಿಂದೂಗಳೇ. ಹಿಂದೂ ಎನ್ನುವುದು ಒಂದು ಜೀವನದ ದೃಷ್ಟಿಯಾಗಿದೆ, ಜೀವನ ಪದ್ಧತಿಯಾಗಿದೆ. ಜೀವನವನ್ನು ಹೀಗೆ ನಡೆಸುತ್ತೇವೆ ಎನ್ನುವುದೇ ಹಿಂದುತ್ವವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗದೆ ಸರ್ವವ್ಯಾಪಿ ಮತ್ತು ಸರ್ವ ಸ್ಪರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅಖಿಲ ಭಾರತೀಯ ದೃಷ್ಟಿಕೋನವನ್ನು ಸಂಘ ಒಳಗೊಂಡಿದೆ ಎಂದು ರಾಜೇಶ್ ಪದ್ಮಾರ್ ವ್ಯಾಖ್ಯಾನಿಸಿದರು.

ವಿಜೇತರಿಗೆ ಬಹುಮಾನ ವಿತರಣೆ

ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪೂಜಾ ಮಹಾದೇವ ಸಾರವಾಡ ಪ್ರಥಮ ಸ್ಥಾನ, ಬೆಂಗಳೂರಿನ ಮನೋವಿಜ್ಞಾನ ಜ್ಯೋತಿ ನಿವಾಸ ಕಾಲೇಜಿನ ಸಹನಾ ಎಂ ದ್ವಿತೀಯ ಸ್ಥಾನ, ಬೆಳಗಾವಿಯ ಸುಂದರಬಾಯಿ ಬಿ. ಪಾಟೀಲ್ ವುಮೆನ್ಸ್ ಕಾಲೇಜ್ ಆಫ್ ಎಜುಕೇಷನ್‌ನ ಕಾವೇರಿ ಎಂ. ಹೆಗಡೆ ತೃತೀಯ ಸ್ಥಾನ ಪಡೆದಿದ್ದಾಳೆ. ಇದರೊಂದಿಗೆ ಹತ್ತು ಜನ ವಿದ್ಯಾರ್ಥಿಗಳಿಗೆ ಸಮಾದಾನಕರ ಬಹುಮಾನ ನೀಡಲಾಗಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಖಜಾಂಚಿ ಕೆ. ಎಸ್. ನಾರಾಯಣ್ ಉಪಸ್ಥಿತರಿದ್ದರು.

ಇರಾನ್ ಮೇಲೆ ಮಾರಕ ದಾಳಿ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಪುಟ ೧➡ ಅಮೆರಿಕ ಮತ್ತು ಇಸ್ರೇಲ್‌ನ ಭಾರೀ ದಾಳಿಯ ಕಾರಣದಿಂದಲೇ ಇರಾನ್ ಈ ಭರವಸೆ ನೀಡುವಂತಾಗಿದೆ ಎಂದಿದ್ದಾರೆ.

ಇರಾನ್ ಮಧ್ಯಪ್ರಾಚ್ಯದ ಮೇಲೆ ಹಿಡಿತ ಸಾಧಿಸಿ ಅದನ್ನೇ ಆಳಲು ಮುಂದಾಗಿತ್ತು. ಆದರೆ ಇನ್ನು ಅದು ಮಧ್ಯಪೂರ್ವ ದೇಶಗಳನ್ನು ಗೂಂಡಾಗಳಂತೆ ಬೆದರಿಸಲು ಸಾಧ್ಯವಾಗದು. ಇದರ ಬದಲಿಗೆ ಅದೀಗ ಮಧ್ಯಪೂರ್ವದ ಸೋತ ದೇಶವಾಗಿದ್ದು, ಅದು ಶರಣಾಗುವವರೆಗೆ ಅಥವಾ ಸಂಪೂರ್ಣ ಕುಸಿತ ಕಾಣುವವರೆಗೆ ಅನೇಕ ದಶಕಗಳ ಕಾಲ ಹೀಗಿರಬೇಕಾಗುವುದು ಎಂದು ಅಮೆರಿಕದ ರಿಪಬ್ಲಿಕನ್ ಪಕ್ಷದ ನಾಯಕನೂ ಆಗಿರುವ ಟ್ರಂಪ್ ಹೇಳಿದ್ದಾರೆ.

ಷರತ್ತಿಲ್ಲದೆ ಶರಣಾಗಲು ಒತ್ತಾಯ: ಇರಾನ್ ಬೇಷರತ್ತಾಗಿ ಶರಣಾಗಬೇಕೆಂದು ಟ್ರಂಪ್ ಒತ್ತಾಯಿಸಿದ್ದು, ಇದೊಂದೇ ಸಂಘರ್ಷವನ್ನು ಕೊನೆಗೊಳಿಸಲು ಇರುವ ಸ್ವೀಕಾರಾರ್ಹ ದಾರಿ. ಹೊಸ ನಾಯಕತ್ವ ಸ್ಥಾಪನೆಗೆ ಇರಾನ್ ಅವಕಾಶ ಮಾಡಿಕೊಟ್ಟಲ್ಲಿ ಆ ದೇಶದ ಆರ್ಥಿಕತೆ ಅಭಿವೃದ್ಧಿಗೆ ನೆರವಾಗುವುದಾಗಿ ಭರವಸೆ ನೀಡಿದ್ದಾರೆ. ಇರಾನಿನ ಇಸ್ಲಾಮಿಕ್ ರಿಪಬ್ಲಿಕ್ ಶರಣಾದಲ್ಲಿ, ಅಮೆರಿಕ ಮತ್ತು ಅದರ ಮಿತ್ರ ದೇಶಗಳು ಇರಾನನ್ನು ವಿನಾಶದಿಂದ ಮೇಲೆತ್ತಿ ಆರ್ಥಿಕವಾಗಿ ಹಿಂದೆಂದಿಗಿಂತ ಉತ್ತಮ, ಸಶಕ್ತ ದೇಶವನ್ನಾಗಿಸಲು ನೆರವಾಗಲಿವೆ ಎಂದಿದ್ದಾರೆ.

ಇರಾನ್‌ಗೆ ರಷ್ಯಾ ಮಾಹಿತಿ!

ಪುಟ ೧➡ ಅಮೆರಿಕದ ಅಧಿಕಾರಿಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಮತ್ತು ಇಂತಹ ಬೆಳವಣಿಗೆಗಳನ್ನು ತಮ್ಮ ಕಾರ್ಯಾಚರಣೆಯ ಯೋಜನೆಗಳಲ್ಲಿ ಪರಿಗಣಿಸುತ್ತಿದ್ದಾರೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಿಳಿಸಿದ್ದಾರೆ.

ರಷ್ಯಾ-ಇರಾನ್ ಸಂಬಂಧ: ಇರಾನ್‌ಗೆ ಗುಪ್ತಚರ ಅಥವಾ ಮಿಲಿಟರಿ ನೆರವು ನೀಡಲಾಗಿದೆಯೇ ಎಂಬ ಬಗ್ಗೆ ಪ್ರತಿಕ್ರಿಯಿಸಲು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ನಿರಾಕರಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರಷ್ಯಾ ಮತ್ತು ಇರಾನ್ ತಮ್ಮ ಸಂಬಂಧಗಳನ್ನು ಬಲಪಡಿಸಿಕೊಂಡಿವೆ. ಉಕ್ರೇನ್‌ನಲ್ಲಿನ ರಷ್ಯಾದ ಯುದ್ಧಕ್ಕೆ ಬೆಂಬಲವಾಗಿ ಟೆಹ್ರಾನ್ ಡ್ರೋನ್ ಮತ್ತು ಇತರ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ.

ಇರಾನ್‌ಗೆ ಕಾದಿದೆ ದೊಡ್ಡ ದಾಳಿ: ಯುಎಸ್

ಪುಟ ೧➡ ಇರಾನಿನ ನೌಕಾ ಪಡೆ ತೀವ್ರ ಹಾನಿಗೀಡಾಗಿದ್ದು, ಜತೆಗೆ ಇರಾನಿನ ಅನೇಕ ನಾಯಕರು, ಸೇನಾಧಿಕಾರಿಗಳು ಕೂಡ ಹತರಾಗಿದ್ದಾರೆ. ಇದೀಗ ಅಮೆರಿಕ ಇರಾನಿನ ಕ್ಷಿಪಣಿ ನೆಲೆಗಳ ಮೇಲೆ ದಾಳಿಗಳನ್ನು ನಡೆಸಲು ಮುಂದಾಗಿದೆ. ಇರಾನಿನ ಜಾಮ್ ಕ್ಷಿಪಣಿ ನೆಲೆ ಈಗಾಗಲೇ ಭಾರೀ ಹಾನಿಗೆ ತುತ್ತಾಗಿದೆ. ಇರಾನಿನಲ್ಲಿ ಈಗಾಗಲೇ 1230ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರೆ, ಲೆಬನಾನ್‌ನಲ್ಲಿ 200 ಮತ್ತು ಇಸ್ರೇಲ್‌ನಲ್ಲಿ 11 ಮಂದಿ ಬಲಿಯಾಗಿದ್ದಾರೆ.

ವರಿಷ್ಠರ ಮಾತಿನಂತೆ ನಡೆಯುವೆ: ಸಿಎಂ



ಪುಟ ೧➡ ಕೇಂದ್ರ ಸರ್ಕಾರ ನಮಗೆ ಕೊಡುವ ದುಡ್ಡು ಕೊಟ್ಟಿಲ್ಲ. ಅದರಿಂದ ನಮಗೆ ಹೊರೆ ಆಗಿದೆ. ಕೇಂದ್ರದಿಂದ ರಾಜ್ಯಕ್ಕೆ ಹೊರೆ ಹೆಚ್ಚುತ್ತಿದೆ. ಕೇಂದ್ರದ ಮನರೇಗಾದಿಂ ದಲೂ ರಾಜ್ಯಕ್ಕೆ ಹೊರೆಯಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಅಡುಗೆ ಅನಿಲ ದರ ಏರಿಕೆಗೆ ಕಿಡಿ: ಗ್ಯಾಸ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿದ ಸಿದ್ದರಾಮಯ್ಯ, ನರೇಂದ್ರ ಮೋದಿ ಬರುವುದಕ್ಕಿಂತ ಮುನ್ನ ಎಷ್ಟಿತ್ತು? ಅವರು ಬಂದು ಅದನ್ನು ಜಾಸ್ತಿ ಮಾಡಿದರು. ಅದರಿಂದ ಯಾರಿಗೆ ತೊಂದರೆ ಆಯ್ತು? ಜನರು, ಬಳಕೆದಾರರಿಗೆ ತೊಂದರೆ ಆಗಿದೆ ಎಂದು ದೂರಿದರು.

ಶ್ರೀಲಂಕಾ ಜಡ್ಜ್ ಅರ್ಜಿ ವಿಚಾರಣೆ

ಪುಟ ೧➡ **ಹಿತಾಸಕ್ತಿ ಸಂಘರ್ಷ ತಪ್ಪಿಸಲು ಭಾರತದಲ್ಲಿ ಅರ್ಜಿ:** ತಮ್ಮ ವಿರುದ್ಧ 2015 ಮತ್ತು 2020ರಲ್ಲಿ ಸುಳ್ಳು ಹಾಗೂ ಆಧಾರರಹಿತವಾದ ಮಾನಹಾನಿಕರ ಸುದ್ದಿಗಳನ್ನು ಪ್ರಕಟಿಸಲಾಗಿದೆ ಎಂದು ನ್ಯಾ. ನವಾಜ್ ಆರೋಪಿಸಿದ್ದಾರೆ. ಪ್ರಸ್ತುತ ತಾವು ಶ್ರೀಲಂಕಾದ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿರುವುದರಿಂದ ಅಲ್ಲಿನ ನ್ಯಾಯಾಲಯದಲ್ಲೇ ಅರ್ಜಿ ಸಲ್ಲಿಸಿದರೆ ಹಿತಾಸಕ್ತಿ ಸಂಘರ್ಷದ ಪ್ರಶ್ನೆ ಉದ್ಭವಿಸಬಹುದು ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ. ಯಾರೂ ಕೂಡ ತನ್ನ ಅಹವಾಲಿಗೆ ತಾನೇ ತೀರ್ಪುಗಾರನಾಗಬಾರದು ಎಂಬ ನೈಸರ್ಗಿಕ ನ್ಯಾಯದ ತತ್ವದ ಹಿನ್ನೆಲೆಯಲ್ಲಿ ತಾವು ಭಾರತದ ನ್ಯಾಯಾಲಯದ ಮೊರೆಹೋಗಿರುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ.

ಶ್ರೀಲಂಕಾ ಕೋರ್ಟ್ ಆಫ್ ಅಪೀಲ್‌ನ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ತಾವು ನೀಡಿದ್ದ ಕಾನೂನು ಅಭಿಪ್ರಾಯವನ್ನು ಕೆಲವು ಆನ್‌ಲೈನ್ ಸುದ್ದಿ ತಾಣಗಳಲ್ಲಿ ದುರುದ್ದೇಶಪೂರಿತವಾಗಿ ತಪ್ಪಾಗಿ ಉಲ್ಲೇಖಿಸಿವೆ ಮತ್ತು ಇದರಿಂದ ತಮ್ಮ ಘನತೆಗೆ ಕುಂದುಂಟಾಗಿದೆ ಎಂದು ಅವರು ದೂರಿದ್ದಾರೆ. ಭಾರತದ ಸಂವಿಧಾನವು ಘನತೆಯಿಂದ ಬದುಕುವ ಹಕ್ಕನ್ನು ಕೇವಲ ಭಾರತೀಯರಿಗೆ ಮಾತ್ರವಲ್ಲದೆ ವಿದೇಶಿಯರಿಗೂ ವಿಸ್ತರಿಸಿರುವುದರಿಂದ, ಈ ಅರ್ಜಿ ಪರಿಗಣಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಜನರ ಬಳಕೆಗೆ ಡೀಮ್ಡ್ ಅರಣ್ಯ ಪ್ರದೇಶ: ಜಾರ್ಜ್

ಮೂಡಿಗೆರೆ: ಕೊಡಗು- ಚಿಕ್ಕಮಗಳೂರು ಸೇರಿದಂತೆ ಪಶ್ಚಿಮಘಟ್ಟ ಪ್ರದೇಶದಲ್ಲಿ ವನ್ಯಜೀವಿ ಮಾನವ ಸಂಘರ್ಷ ತಡೆಗೆ ಈ ಬಾರಿ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಿಟ್ಟಿದ್ದಾರೆ ಎಂದು ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು. ಅವರು ಶನಿವಾರ ಪಟ್ಟಣದ ಅಡ್ಯಂತಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನಗಳ ಹಕ್ಕುಪತ್ರ, ಕಂದಾಯ ಗ್ರಾಮಗಳ ಹಕ್ಕುಪತ್ರ ಹಾಗೂ ಇತರೇ ಸವಲತ್ತುಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡೀಮ್ಡ್ ಫಾರೆಸ್ಟ್ ಪ್ರದೇಶ ಸಾರ್ವಜನಿಕ ಉಪಯೋಗಕ್ಕೆ ಬಳಸಲು ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ನಿರ್ಧರಿಸಿದ್ದಾರೆ. ಅದರಂತೆ ಜಂಟಿ ಸರ್ವೆ ಕಾರ್ಯ ನಡೆಯುತ್ತಿದ್ದು, ಈಗಾಗಲೇ 50 ಸಾವಿರ ಎಕರೆ ಭೂಮಿ ಸಾರ್ವಜನಿಕ ಉಪಯೋಗಕ್ಕೆ ಕೊಡುವ ಪ್ರಯತ್ನ ನಡೆದಿದೆ ಎಂದು ತಿಳಿಸಿದರು. ರಾಜ್ಯದಲ್ಲಿ 56 ಸಾವಿರ ಉದ್ಯೋಗ ಯುವಜನರಿಗೆ ನೀಡಲು ತೀರ್ಮಾನಿಸಲಾಗಿದೆ. ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಸುಲಭದ ಮಾತಲ್ಲ. ಆದರೂ ರಾಜ್ಯ ಸರ್ಕಾರ ಜನಪರವಾದ ಯೋಜನೆಗಳ ಜಾರಿ ಮಾಡುವ ಮೂಲಕ ಇತರೆ ರಾಜ್ಯಗಳಿಗಿಂತ ಉತ್ತಮ ಆಡಳಿತ ನಮ್ಮ ಸರಕಾರ ನೀಡುತ್ತಿದೆ ಎಂದರು. 1990ರಲ್ಲಿ ಬಂಗಾರಪ್ಪ ಮುಖ್ಯಮಂತ್ರಿಯಾದಾಗ ಆಶ್ರಯ ನಿವೇಶನ ನೀಡಲಾಗುತ್ತಿತ್ತು ಎಂದು ಹೇಳಿದರು. ಕ್ಷೇತ್ರದ ಶಾಸಕಿ ನಯನಾ ಮೋಟಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 1 ವರ್ಷದ ಹಿಂದೆ ಚಂದ್ರಲೋಕದಲ್ಲಿ ನಿವೇಶನ ಕೊಡ್ತಾರಾ ಎಂಬ ಟೀಕೆ ಬಂದಿತ್ತು. ಆದರೆ ಈಗ ಹೆಮ್ಮೆಯಿಂದ ಹೇಳುತ್ತೇನೆ. ಚಂದ್ರಲೋಕದಲ್ಲಿ ಅಲ್ಲ. ತಮ ಕ್ಷೇತ್ರದ ದಾರದಹಳ್ಳಿ ನಂದೀಪುರ, ತ್ರಿಪುರ, ಹಂತೂರು, ಜಾವಳಿ, ಬಿ.ಹೊಸಳ್ಳಿ, ತಳಿಹಳ್ಳಿ, ಬಸ್ಕಲ್, ಈ 8 ಗ್ರಾ.ಪಂ. ವ್ಯಾಪ್ತಿಯಲ್ಲಿ 242 ಫಲಾನುಭವಿಗಳಿಗೆ ನಿವೇಶನದ ಹಕ್ಕುಪತ್ರ ಕೊಡಲು ಮುಂದಾಗಿದ್ದೇವೆ. ಮಲೆಮನೆ ಮತ್ತು ಮದುಗುಂಡಿ ನಿರಾಶ್ರಿತರಿಗೆ ಭೂಮಿ ಕೊಡುವ ಕಾರ್ಯ ಮುಗಿಸಿದರೆ ತನಗೆ ತೃಪ್ತಿ ಸಿಗುತ್ತದೆ ಎಂದರು.

ಕುದುರೆಮುಖ ಲೇಬರ್ ಕಾಲೋನಿಯಲ್ಲಿರುವ ಸುಮಾರು 40 ಕುಟುಂಬಕ್ಕೆ ನಿವೇಶನ ಕೊಡುವ ಚಿಂತನೆ ಮಾಡಿರುವುದಾಗಿ ಹೇಳಿದರು.

ಮಾಜಿ ಸಚಿವೆ ಮೋಟಮ್ಮ, ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ. ಅಂಶುಮಂತ್, ರಾಜ್ಯ ಪರಿಸರ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಕ್ಷ ಎ.ಎನ್.ಮಹೇಶ್ ಮಾತನಾಡಿದರು. ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್, ಜಿ.ಪಂ.ಸಿಇಒ ಎಚ್.ಎಸ್. ಕೀರ್ತನಾ, ಬಿ.ಎಸ್. ಜಯರಾಂಗೌಡ, ಕೆ.ವೆಂಕಟೇಶ್, ರಮೇಶ್ ಹೊಸ್ಕೆರೆ, ಜಿತೇಂದ್ರಕುಮಾರ್, ನಟೇಶ್, ವಿಜಯಕುಮಾರ್, ತಹಶೀಲ್ದಾರ್ ಎಸ್. ಅಶ್ವಿನಿ ಮತ್ತಿತರರಿದ್ದರು.

ಲೋಕಾಯುಕ್ತ ದಾಳಿ: 6.82 ಕೋಟಿ ಮೌಲ್ಯದ ಆಸ್ತಿ ಪತ್ತೆ

ಹಾಸನ: ಮಹಾನಗರ ಪಾಲಿಕೆಯ ಇಂಜಿನಿಯರ್ ಸತ್ಯನಾರಾಯಣ ಅವರ ಮನೆ ಸೇರಿದಂತೆ ವಿವಿಧ ಕಡೆಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಸುಮಾರು 6 ಕೋಟಿ 82 ಲಕ್ಷ 54 ಸಾವಿರ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ. ಪಾಲಿಕೆ ಇಂಜಿನಿಯರ್ ಸತ್ಯನಾರಾಯಣ ಅವರಿಗೆ ಸಂಬಂಧಿಸಿದಂತೆ 7 ಕಡೆಗಳಲ್ಲಿ ಲೋಕಾಯುಕ್ತ ತಂಡ ದಾಳಿ ನಡೆಸಿ ಪರಿಶೀಲನೆ ನಡೆಸಿದೆ. ಪ್ರಾಥಮಿಕ ತನಿಖೆಯಲ್ಲಿ ಅವರ ಆದಾಯಕ್ಕಿಂತ ಶೇಕಡಾ 200.74 ರಷ್ಟು ಹೆಚ್ಚುವರಿ ಆಸ್ತಿ ಹೊಂದಿರುವ ಮಾಹಿತಿ ಲಭ್ಯವಾಗಿದೆ. ದಾಳಿಯ ವೇಳೆ 52 ಲಕ್ಷ ಮೌಲ್ಯದ 7 ನಿವೇಶನಗಳು, 5 ಕೋಟಿ 30 ಲಕ್ಷ ಮೌಲ್ಯದ 3 ಮನೆಗಳು ಹಾಗೂ 3 ಎಕರೆ 33 ಗುಂಟೆ ಕೃಷಿ ಜಮೀನು ಸೇರಿದಂತೆ ಒಟ್ಟು 5 ಕೋಟಿ 98 ಲಕ್ಷ 35 ಸಾವಿರ ರೂ. ಮೌಲ್ಯದ ಸ್ಥಿರಾಸ್ತಿ ಪತ್ತೆಯಾಗಿದೆ.

ನಿಶಾಂತ್ ಇಂದು ರಾಜಕೀಯಕ್ಕೆ

ಪುಟ ೧➡ ನಿಶಾಂತ್ ರಾಜಕೀಯ ಪ್ರವೇಶ ಪಕ್ಷದ ಕಾರ್ಯಕರ್ತರ ಇಚ್ಛೆಯಾಗಿದೆ ಎಂದು ತಿಳಿಸಿದ್ದಾರೆ.



ಹೊಸ ಪೀಳಿಗೆ ನೇತೃತ್ವದ ನಿರೀಕ್ಷೆ: ಮುಂದಿನ ಪೀಳಿಗೆಯ ನಾಯಕನಿಗೆ ಪಕ್ಷ ನಡೆಸುವ ಜವಾಬ್ದಾರಿ ವಹಿಸುವ ಉದ್ದೇಶದಿಂದ ನಿಶಾಂತ್ ಅವರನ್ನು ಕರೆತರಲಾಗುತ್ತಿದೆ ಎಂದು ರಾಜಕೀಯ ಪಂಡಿತರು ಲೆಕ್ಕಾಚಾರ ಹಾಕುತ್ತಿದ್ದಾರೆ. ನಿಶಾಂತ್ ಆಗಮನದಿಂದ ಪಕ್ಷದಲ್ಲಿ ಏನೆಲ್ಲಾ ಬದಲಾವಣೆ ಆಗಲಿದೆಯೆಂಬ ಕುತೂಹಲ ಸೃಷ್ಟಿಯಾಗಿದೆ.

ತಾಳ್ಮೆ ವಹಿಸಲು ನಿತೀಶ್ ಮನವಿ

ಮುಖ್ಯಮಂತ್ರಿ ನಿರ್ದೇಶನದ ಮೇರೆಗೆ ಶುಕ್ರವಾರ ಪಕ್ಷದ ಶಾಸಕಾಂಗ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಮುಖ್ಯಮಂತ್ರಿ ವಿಷಯ ತಿಳಿಸಿದ್ದು, ಪಕ್ಷದ ನಾಯಕರು, ಕಾರ್ಯಕರ್ತರು, ಶಾಸಕರು, ಸಂಸದರು ಮತ್ತು ಸಚಿವರು ತಾಳ್ಮೆಯಿಂದ ಇರಬೇಕೆಂದು ಮನವಿ ಮಾಡಿದ್ದರು. ತಾವು ಪಕ್ಷ ಬಿಟ್ಟು ಹೋಗುತ್ತಿಲ್ಲ. ಎಲ್ಲರ ಜತೆಗಿದ್ದು ಕೆಲಸ, ಪಕ್ಷದ ಸದಸ್ಯರ ಜತೆಗಿದ್ದು ಮಾರ್ಗದರ್ಶನ ಮಾಡುವುದಾಗಿ ನಿತೀಶ್ ಭರವಸೆ ನೀಡಿದ್ದಾರೆ. ಅವರ ಮಾತುಗಳನ್ನು ಆಲಿಸಿದ ಬಳಿಕ ನಿರ್ಧಾರವನ್ನು ಗೌರವಿಸಿದ್ದೇವೆ. ಆದರೆ ರಾಜ್ಯದ ಜನರಿಗೆ ಸಂತಸವಾಗಿಲ್ಲ ಎಂದು ಸಚಿವ ಶ್ರವಣ್ ಕುಮಾರ್ ತಿಳಿಸಿದ್ದಾರೆ.

ಶರಾವತಿ: ಸರ್ಕಾರಕ್ಕೆ ಹೈ ನೋಟಿಸ್

ಪುಟ ೧➡ ಈ ಯೋಜನೆಗೆ ಒಟ್ಟು 142.763 ಹೆಕ್ಟೇರ್ ಭೂಮಿಯ ಅಗತ್ಯವಿದೆ. ಅದರಲ್ಲಿ 102 ಹೆಕ್ಟೇರ್ ಪ್ರದೇಶವು ಭೌಗೋಳಿಕವಾಗಿ ಅಭಯಾರಣ್ಯದೊಳಗೆ ಮತ್ತು 39.715 ಹೆಕ್ಟೇರ್ ಪರಿಸರ ಸೂಕ್ಷ್ಮ ವಲಯದಲ್ಲಿದೆ. ಇಂತಹ ಬೃಹತ್ ಅಭಯಾರಣ್ಯ ಮತ್ತು ಪರಿಸರ ಸೂಕ್ಷ್ಮ ವಲಯದೊಳಗೆ ಜಲವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮೋದನೆ ನೀಡುವುದರಿಂದ ಬೃಹತ್ ಕಂಬ ನೆಡುವುದು, ಕಂಬಗಳ ನಡುವೆ ಹೆಚ್ಚಿನ ವೋಲ್ಟೇಜ್ ತಂತಿ ಎಳೆಯುವುದೂ ಸೇರಿದಂತೆ ಉತ್ಪಾದಿಸುವ ಜಲವಿದ್ಯುತ್ ರವಾನಿಸಲು ಪ್ರಸರಣ ಮಾರ್ಗಗಳ ನಿರ್ಮಾಣದಿಂದ ಅಮೂಲ್ಯ ವೃಕ್ಷ ಸಂಪತ್ತು ನಾಶವಾಗಲಿದೆ. ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಲಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ವನ್ಯಜೀವಿಗಳ ಪ್ರಯೋಜನಕ್ಕಾಗಿ ಮತ್ತು ಬೇಡದ ಉದ್ದೇಶಗಳಿಗಾಗಿ ವನ್ಯಜೀವಿ ಅಭಯಾರಣ್ಯ ಪ್ರದೇಶ ಬಳಕೆಗೆ ಅನುಮೋದನೆ ನೀಡುವ ಅಧಿಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಗೆ ಇಲ್ಲ. ಈ ನಿಟ್ಟಿನಲ್ಲಿ, ವನ್ಯಜೀವಿ ರಕ್ಷಣಾ ಕಾಯಿದೆ-1972ರ ಸೆಕ್ಷನ್ 29ರ ಅಡಿಯಲ್ಲಿ ವಿಧಿಸಲಾದ ನಿರ್ಬಂಧವನ್ನು ಗಮನದಲ್ಲಿ ಶರಾವತಿ ಕಣಿವೆಯ ಅಭಯಾರಣ್ಯ ಮತ್ತು ಅದರ ಪರಿಸರ ಸೂಕ್ಷ್ಮ ವಲಯದಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ ಯೋಜನೆಗೆ ಯಾವುದೇ ಅನುಮೋದನೆ ನೀಡಬಾರದು ಎಂದು ಕೋರಲಾಗಿದೆ.

ನನ್ನೇಲೆ ದೀದಿಗೇಕೆ ಕೋಪ?



ಪುಟ ೧➡ ಆದರೆ ಕೊನೆಯ ಕ್ಷಣದಲ್ಲಿ ಬಿಧಾನ್‌ನಗರದಲ್ಲಿ ಸಮ್ಮೇಳನ ನಡೆಸಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸರ್ಕಾರ ಅನುಮತಿ ನಿರಾಕರಿಸಿದೆ. ಬಿಧಾನ್‌ನಗರ ಬದಲಿಗೆ ಬಾಗ್ಡೋಗ್ರಾ ವಿಮಾನ ನಿಲ್ದಾಣ ಸಮೀಪದ ಗೋಶಾಯ್‌ಪುರ ಎಂಬ ಇನ್ನಷ್ಟು ನಿರ್ಬಂಧಿತ ಸ್ಥಳದಲ್ಲಿ ಸಮ್ಮೇಳನ ಆಯೋಜಿಸಲು ಆದೇಶಿಸಿದೆ.

ಭಾರೀ ವಿರೋಧ: ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿಗೇ ಗೌರವವಿಲ್ಲವೆಂದಾದರೆ ಸಾಮಾನ್ಯ ನಾಗರಿಕರ ಕಥೆಯೇನು ಎಂಬ ಪ್ರಶ್ನೆ ಜನಮಾನಸದಲ್ಲಿ ಉದ್ಭವಿಸಿದ್ದು, ಮಮತಾ ಅರಾಜಕತೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿದೆ.

ಐದು ಲಕ್ಷ ಜನ ಸೇರಬಹುದು: ರಾಷ್ಟ್ರಪತಿ ಮುರ್ಮು

ಗೋಶಾಯ್‌ಪುರದಲ್ಲಿನ ಕಾರ್ಯಕ್ರಮದ ಬಳಿಕ ಸಿಲಿಗುರಿಯ ಬಿಧಾನನಗರಕ್ಕೆ ರಾಷ್ಟ್ರಪತಿ ಭೇಟಿ ನೀಡಿದ ಸಂತಾಲ್ ಸಮುದಾಯದ ಜನರು ಮತ್ತು ಸ್ಥಳೀಯರ ಜತೆ ಸಂವಹನ ನಡೆಸಿದರು. ಬಿಧಾನನಗರದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ರಾಷ್ಟ್ರಪತಿ ಮುರ್ಮು ಮಾತನಾಡಿದ್ದು, ಇಲ್ಲಿ 5 ಲಕ್ಷಕ್ಕೂ ಹೆಚ್ಚು ಜನ ಸೇರಲು ವ್ಯವಸ್ಥೆ ಮಾಡಬಹುದು. ಆದರೆ ಇಲ್ಲಿ ಸಮ್ಮೇಳನ ನಡೆಸಿದರೆ ಜನ ಕಿಕ್ಕಿರಿದು ಸೇರುತ್ತಾರೆಂದು ಸ್ಥಳೀಯ ಆಡಳಿತ ಅನುಮತಿ ನೀಡಿಲ್ಲ ಎಂದು ಮುರ್ಮು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸಂತಾಲ್ ಜನರ ಅಭಿವೃದ್ಧಿ ನಡೆದಿದೆಯೇ?

ಪ್ರದೇಶದಲ್ಲಿ ಸಂತಾಲ್ ಬುಡಕಟ್ಟು ಜನಾಂಗದವರ ಅಭಿವೃದ್ಧಿ ನಡೆಯುತ್ತಿದೆಯೋ ಇಲ್ಲವೋ? ಸಮುದಾಯದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಂತಾಲ್ ಜನರಿಲ್ಲದೆ ಕುರ್ಚಿಗಳು ಖಾಲಿ ಖಾಲಿ ಇರುವುದನ್ನು ನೋಡಿದರೆ ಬಂಗಾಳದಲ್ಲಿ ಸಂತಾಲ್ ಸಮುದಾಯಕ್ಕೆ ಸರ್ಕಾರಿ ಸವಲತ್ತುಗಳೆಲ್ಲಾ ಸಿಗುತ್ತಿವೆಯೋ ಇಲ್ಲವೋ ಎಂಬ ಸಂಶಯ ನನಗೆ ಕಾಡುತ್ತಿದೆ ಎಂದು ಮುರ್ಮು ಕಿಡಿಕಾರಿದ್ದಾರೆ.

ಆಯೋಜಕರಿಗೆ ಹತಾಶೆ

ಕೊನೆಯ ಕ್ಷಣ ಹಲವು ಬದಲಾವಣೆಗಳಾಗಿದ್ದು, ಕನಿಷ್ಠ ಶೌಚಾಲಯ ವ್ಯವಸ್ಥೆ ಕಲ್ಪಿಸಲೂ ಆಯೋಜಕರಿಗೆ ಸಾಧ್ಯವಾಗಿಲ್ಲ. ಇದರಿಂದ ಸಮ್ಮೇಳನ ಆಯೋಜಕರೂ ಟಿಎಂಸಿ ಸರ್ಕಾರದ ವಿರುದ್ಧ ಹತಾಶೆ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿಗೆ ಅಪಮಾನ ನಾಚಿಕೆಗೇಡು: ಮೋದಿ

ಸ್ವತಃ ಆದಿವಾಸಿ ಸಮುದಾಯ ಪ್ರತಿನಿಧಿಸುವ ರಾಷ್ಟ್ರಪತಿಗಳು ವ್ಯಕ್ತಪಡಿಸಿದ ನೋವು ಮತ್ತು ವ್ಯಥೆ ದೇಶದ ಜನರ ಮನಸ್ಸಿಗೆ ದುಃಖ ಉಂಟುಮಾಡಿದೆ. ಟಿಎಂಸಿ ಸರ್ಕಾರ ಮಿತಿಮೀರಿದ ದುರ್ವರ್ತನೆ ತೋರಿದ್ದು, ರಾಷ್ಟ್ರಪತಿಗಾದ ಅಪಮಾನಕ್ಕೆ ಅವರ ಆಡಳಿತವೇ ನೇರ ಹೊಣೆ. ಇದರ ಜತೆ ಸಂತಾಲ್ ಸಂಸ್ಕೃತಿಯಂತಹ ಮಹತ್ವದ ವಿಚಾರವನ್ನು ಬಂಗಾಳ ಸರ್ಕಾರ ಕಡೆಗಣಿಸಿದ್ದು ದುರದೃಷ್ಟಕರ ಎಂದಿದ್ದಾರೆ. ರಾಷ್ಟ್ರಪತಿ ಪದವಿ ರಾಜಕೀಯಕ್ಕಿಂತ ಮೇಲಿನದ್ದು. ಆ ಹುದ್ದೆಯ ಪಾವಿತ್ರ್ಯವನ್ನು ಎಂದಿಗೂ ಗೌರವಿಸಬೇಕು. ಟಿಎಂಸಿ ಮತ್ತು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಬರಲೆಂದು ಆಶಿಸುವುದಾಗಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರಣ್ ಕಮತೆ ರಾಜ್ಯಕ್ಕೆ ಪ್ರಥಮ

ಬೆಳಗಾವಿ: ಚಿಕ್ಕೋಡಿ ತಾಲೂಕಿನ ಹತ್ತರವಾಟ ಗ್ರಾಮದ ಕಿರಣ್ ಸಣ್ಣಪ್ಪ ಕಮತೆ ಅವರು ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್ ಮತ್ತು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ಮಹತ್ವದ ಸಾಧನೆ ಮೆರೆದಿದ್ದಾರೆ.



ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್

ಬೆಳಗಾವಿಯ ಗೋಗಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಸಿವಿಲ್ ಪದವಿ ಪಡೆದಿರುವ ಕಿರಣ್ ಕಮತೆ, ಸದ್ಯ ಬೆಂಗಳೂರಿನ ಲೋಕೋಪಯೋಗಿ ಇಲಾಖೆ ಮುಖ್ಯ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಿರಣ್ ಅವರ ತಂದೆ ಡಾ. ಸಣ್ಣಪ್ಪ ಕಮತೆ ನಿಡಸೋಸಿಯ ಹೀರಾ ಶುಗರ್ಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ರುಕ್ಮಿಣಿ ಗೃಹಿಣಿಯಾಗಿಯಾಗಿದ್ದಾರೆ. ಕಿರಣ್ ಅವರ ವಿದ್ಯಾಭ್ಯಾಸದ ಹಾದಿ ವೈವಿಧ್ಯಮಯವಾಗಿದೆ. ಅವರು 1 ಮತ್ತು 2ನೇ ತರಗತಿಯನ್ನು ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಅಂಬೆಜೋಗಾಯಿಯ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿದ್ದಾರೆ. 3ರಿಂದ 8ನೇ ತರಗತಿಯನ್ನು ಹುಬ್ಬಳ್ಳಿಯ ಎಂ.ಆರ್. ಸಾಖರೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತಿದ್ದಾರೆ.

9 ಮತ್ತು 10ನೇ ತರಗತಿಯನ್ನು ಗದಗದ ಕೆಎಲ್ಇ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿಪ್ಪಾಣಿಯ ಜಿ.ಐ.ಬಾಗೇವಾಡಿ ಕಾಲೇಜಿನಲ್ಲಿ ಪಿಯುಸಿ ಸೈನ್ಸ್ ಮುಗಿಸಿದ್ದಾರೆ. ಗೋಗಟೆ ಕಾಲೇಜಿನಲ್ಲಿ ಬಿಇ ಸಿವಿಲ್ ಪದವಿ ಪಡೆದ ಅವರು 2023ರಲ್ಲಿ ಪಿಡಬ್ಲ್ಯುಡಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ನೇಮಕಾತಿ ಹೊಂದಿದ್ದರು. ಇದು ನನ್ನ ಕೊನೆಯ ಅವಕಾಶವಾಗಿತ್ತು. ಕೆಲಸ ಮಾಡುತ್ತಲೇ ದಿನಕ್ಕೆ ಐದಾರು ಗಂಟೆ ಓದುತ್ತಿದ್ದೆ. ಏನಾದರೂ ಆಗಲಿ ಈ ಸಲ ಪಾಸ್ ಆಗಲೇಬೇಕು ಎಂದುಕೊಂಡು ಪರೀಕ್ಷೆ ಬರೆದಿದ್ದೆ. 250 ರ್‍ಯಾಂಕ್ ಒಳಗೆ ಬರುವ ನಿರೀಕ್ಷೆ ಇತ್ತು. ಆದರೆ 53ನೇ ರ್‍ಯಾಂಕ್ ಬಂದಿರುವುದು ಹಾಗೂ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಸಿಕ್ಕಿರುವುದಕ್ಕೆ ಬಹಳಷ್ಟು ಖುಷಿಯಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಹೋಳಿ ಆಚರಣೆ



ರಂಗ ಪಂಚಮಿ ಅಂಗವಾಗಿ ಹುಬ್ಬಳ್ಳಿ ನಗರದ ವಿವಿಧೆಡೆ ಶನಿವಾರ ಹೋಳಿ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು.

ವಿದೇಶಾಂಗ ನೀತಿ ಉಲ್ಲಂಘನೆ

ಕಲಬುರಗಿ: ಕೇಂದ್ರ ಸರ್ಕಾರ ದೇಶದ ವಿದೇಶಾಂಗ ನೀತಿಯನ್ನು ಅಡವಿಟ್ಟಿದ್ದು, ಇದರ ಪರಿಣಾಮವಾಗಿ ಭಾರತದ ಗೌರವಕ್ಕೆ ಧಕ್ಕೆ ಉಂಟಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.



ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕದ ಉಪ ಕಾರ್ಯದರ್ಶಿ ದಿಲ್ಲಿಗೆ ಬಂದು ಭಾರತವನ್ನು ಚೀನಾದಷ್ಟು ಬೆಳೆಯಲು ಬಿಡುವುದಿಲ್ಲ ಎಂದು ಹೇಳುತ್ತಾರೆ. ಮತ್ತೊಬ್ಬರು ರಷ್ಯಾದಿಂದ ತೈಲ ಖರೀದಿ ಮಾಡಲು ನಾವೇ ಸೂಚಿಸಿದ್ದೇವೆ ಎಂದು ಹೇಳುತ್ತಾರೆ. ಈ ಹೇಳಿಕೆಗಳಿಗೆ ಒಬ್ಬರೂ ಕೇಂದ್ರ ಸಚಿವರು ವಿರೋಧ ವ್ಯಕ್ತಪಡಿಸಿಲ್ಲ ಎಂದು ಪ್ರಶ್ನಿಸಿದರು. ಇದು ನೇರವಾಗಿ ದೇಶದ ವಿದೇಶಾಂಗ ನೀತಿಯನ್ನು ಅಡವಿಟ್ಟಂತಾಗಿದೆ. ಇದರ ಪರಿಣಾಮವಾಗಿ ಪ್ರಧಾನಿ ನರೇಂದ್ರ ಮೋದಿಯವರ ಹಾಗೂ ದೇಶದ ಗೌರವಕ್ಕೂ ಧಕ್ಕೆಯಾಗಿದೆ ಎಂದು ಅವರು ಟೀಕಿಸಿದರು.

ಆರ್‌ಎಸ್‌ಎಸ್ ನಾಯಕರು ಎಲ್ಲಿದ್ದಾರೆ ಎಂದು ಪ್ರಶ್ನಿಸಿದ ಅವರು, ಅಮೆರಿಕದಲ್ಲಿ ಬಹಿರಂಗವಾಗುತ್ತಿರುವ ಎಪ್‌ಸ್ಟೀನ್ ಫೈಲ್‌ಗಳ ಬಗ್ಗೆ ಕೂಡ ಉಲ್ಲೇಖಿಸಿದರು. ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದಲ್ಲಿ ಮೋದಿಯವರ ರಾಜಕೀಯವನ್ನು ನಾಶ ಮಾಡುತ್ತೇವೆ ಎಂದು ಹೇಳಿರುವುದಾಗಿ ಆರೋಪಿಸಿದರು. ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ವಿಚಾರಕ್ಕೂ ಪ್ರತಿಕ್ರಿಯಿಸಿದ ಅವರು, ಇದಕ್ಕೆ ಉತ್ತರವನ್ನು ಬಿಜೆಪಿ ನಾಯಕರು ನೀಡಬೇಕು ಎಂದು ಹೇಳಿದರು. ನಟ ವಿಜಯ್ ಮತ್ತು ನಟಿ ರಶ್ಮಿಕಾ ಮಂದಣ್ಣ ಅವರನ್ನು ಭೇಟಿ ಮಾಡಲು ಪ್ರಧಾನಿಗೆ ಸಮಯವಿದ್ದರೆ, ಜನರ ಸಮಸ್ಯೆಗಳನ್ನು ಪರಿಹರಿಸಲು ಸಮಯ ಯಾಕಿಲ್ಲ ಎಂದು ಪ್ರಶ್ನಿಸಿದರು. ಕ್ರಿಕೆಟ್ ವಿಚಾರ ಪ್ರಸ್ತಾಪಿಸಿದ ಅವರು, ಪ್ರಧಾನಮಂತ್ರಿ ಸೆಮಿಫೈನಲ್ ಪಂದ್ಯಕ್ಕೆ ಶುಭಾಶಯ ಕೋರಿದ್ದಾರೆ. ನಾಳೆ ಫೈನಲ್ ಪಂದ್ಯಕ್ಕೂ ಹೋಗಬಹುದು ಎಂದು ಹೇಳಿದರು. ಮೋದಿಯವರು ಪಂದ್ಯ ನೋಡಲು ಹೋಗದಿದ್ದರೆ ಭಾರತ ಗೆಲ್ಲಬಹುದು ಎಂದು ಅಪಹಾಸ್ಯಗೈದ ಅವರು, ಇದನ್ನು ನಾನು ಸುಮ್ಮನೆ ಹೇಳುತ್ತಿಲ್ಲ, ಹಿಂದೆ ಉದಾಹರಣೆಗಳಿವೆ ಎಂದು ಹೇಳಿದರು.

ಕಿರುಸುದ್ದಿ

ಮಹಿಳಾ ಸಮಾವೇಶ ಇಂದು

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಮಹಿಳಾ ಜಾಗೃತಿ ಮೂಡಿಸುವ ದೃಷ್ಟಿಯಿಂದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವತಿಯಿಂದ ಎಬಿಜಿಪಿ ಬೆಂಗಳೂರು ಮಹಿಳಾ ಸಮಾವೇಶವು ಮಾ.8ರಂದು ಬೆಳಗ್ಗೆ 10.30ಕ್ಕೆ ಶೇಷಾದ್ರಿಪುರಂನ ಯಾದವಸ್ಮೃತಿಯಲ್ಲಿ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಜಾಹೀರಾತುಗಳಲ್ಲಿ ಮಹಿಳೆಯರ ಪಾತ್ರ ಹಾಗೂ ಅವರ ಅಸ್ಮಿತೆ ಹಾಗೂ ಘನತೆ. ಅದರಿಂದ ಸಮಾಜದಲ್ಲಿ ಆಗುತ್ತಿರುವ ಪರಿಣಾಮಗಳು ಈ ವಿಚಾರವಾಗಿ ಗೋಷ್ಠಿ ನಡೆಯಲಿದ್ದು, ಚರ್ಚಾಗೋಷ್ಠಿಯು ಇರಲಿದೆ. ಹಿರಿಯ ಪತ್ರಕರ್ತೆ ಕೆ.ಎಚ್. ಸಾವಿತ್ರಿ ಸುರೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎಬಿಜಿಪಿ ಕರ್ನಾಟಕ ಪ್ರಾಂತ ಅಧ್ಯಕ್ಷ ಡಾ. ನರಸಿಂಹ ನಕ್ಷತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಕಾನೂನು ತಜ್ಞೆ ಮೀರಾ ಬಾಯಿ ಫಡಕೆ ಮತ್ತು ಎಬಿಜಿಪಿ ಕರ್ನಾಟಕ ಪ್ರಾಂತದ ಉಪಾಧ್ಯಕ್ಷೆ ಡಾ. ವಿಜಯ ವಿಷ್ಣು ಭಟ್ ವಕ್ತಾರರಾಗಿ ಪಾಲ್ಗೊಳ್ಳಲಿದ್ದಾರೆ.

ಸಿಲಿಂಡರ್ ದರ ಏರಿಕೆಗೆ ಸಿಎಂ ವಿರೋಧ

ಬೆಂಗಳೂರು: ಗೃಹ ಬಳಕೆಯ ಸಿಲಿಂಡರ್ ಬೆಲೆ ಏರಿಕೆಯನ್ನು ವಿರೋಧಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದು, ಭಾರತದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿಹೋಗಿರುವ ಸಮಯದಲ್ಲಿಯೇ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ ಎಂದಿದ್ದಾರೆ. ಎಕ್ಸ್ ಖಾತೆಯಲ್ಲಿ ಕೇಂದ್ರ ಸರ್ಕಾರದ ನೀತಿಯನ್ನು ಟೀಕಿಸಿರುವ ಅವರು, ಗೃಹ ಬಳಕೆಯ ಸಿಲಿಂಡರ್‌ಗಳ ಬೆಲೆಯನ್ನು ಸುಮಾರು 60 ರೂ. ರಷ್ಟು ಹೆಚ್ಚಿಸಿರುವುದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನ ನಿರ್ವಹಣೆಯ ವೆಚ್ಚ ದುಬಾರಿಯಾಗಲಿದೆ ಎಂದು ತಿಳಿಸಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಅವರ ಪ್ರಕಾರ ವಿದೇಶಾಂಗ ನೀತಿಯು ಆರ್ಥಿಕ ನೀತಿಯ ಪರಿಣಾಮವಾಗಿದೆ. ನೆಹರೂ ಅವರು ಏಳೆಂಟು ದಶಕಗಳ ಹಿಂದೆಯೇ ನೀಡಿದ್ದ ಎಚ್ಚರಿಕೆ ಇಂದು ಅಕ್ಷರಶಃ ಸತ್ಯವಾಗಿದೆ. ರಾಜತಾಂತ್ರಿಕತೆ ಎನ್ನುವುದು ಕಾರ್ಯತಂತ್ರವಾಗದೆ, ಪ್ರದರ್ಶನದ ವಸ್ತುವಾಗಿ ಮಾರ್ಪಟ್ಟಾಗ, ಅದಕ್ಕೆ ಅನಿವಾರ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದ ಜನರು ಬಲಿಯಾಗುತ್ತಾರೆ ಎಂದು ಹೇಳಿದ್ದಾರೆ.

ಅರಳಿ ಮರಕ್ಕೆ ಲಾರಿ ಡಿಕ್ಕಿ: ಇಬ್ಬರ ಸಾವು

ತುಮಕೂರು: ತಾಲೂಕಿನ ನಾಗವಲ್ಲಿ ಸಮೀಪದ ರಂಗಾಪುರ ಬಳಿಯ ಸೋಪನಹಳ್ಳಿ ಗೇಟ್‌ನಲ್ಲಿ ಅರಳಿ ಮರಕ್ಕೆ ಲಾರಿ ಡಿಕ್ಕಿಯಾಗಿ ಇಬ್ಬರು ಮೃತಪಟ್ಟಿದ್ದಾರೆ. ಕೇರಳದ ರಷೀದ್ ಅಲಿ (25), ಅಮೀನ್ (23) ಮೃತರು. ಆಂಧ್ರಪ್ರದೇಶದಿಂದ ಕೇರಳಕ್ಕೆ ಲಾರಿಯಲ್ಲಿ ಕಡಪ ಕಲ್ಲು ಸಾಗಿಸುತ್ತಿದ್ದರು. ಚಾಲಕನ ನಿಯಂತ್ರಣದ ತಪ್ಪಿದ ಲಾರಿ ಮರಕ್ಕೆ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತದ ನಂತರ ಕುಣಿಗಲ್– ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಅಪಘಾತ ವಿಷಯ ತಿಳಿದು ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿದ್ದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಕುಣಿಗಲ್ ರಸ್ತೆಯಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕು. ಅದೃಷ್ಟವಶಾತ್ ಇವತ್ತು ಅರಳಿ ಮರದ ಕೆಳಗಡೆ ಯಾರೂ ಇರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹೆದ್ದಾರಿಯಲ್ಲಿ ಹಂಪ್ಸ್ ಅಳವಡಿಸಬೇಕು. ಅಪಘಾತ ನಿಯಂತ್ರಣಕ್ಕೆ ಆಗತ್ಯ ಕ್ರಮ ವಹಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕರ್ನಾಟಕ ಜಾಗತಿಕ ಬ್ರ್ಯಾಂಡ್: ಸಚಿವ ಡಾ. ಜಿ.ಪರಮೇಶ್ವರ

ಸುರಕ್ಷಿತ ಡಿಜಿಟಲ್ ವ್ಯವಸ್ಥೆ

ಬೆಂಗಳೂರು: ಕರ್ನಾಟಕವು ವಿಶ್ವದಲ್ಲೇ ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ಹೊಂದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.

ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಿಐಡಿ ಇ ಕೋಡ್ 3ನೇ ವರ್ಷದ ಸೈಬರ್ ಅಪರಾಧ ತನಿಖಾ ಶೃಂಗಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಕೇವಲ ಒಂದು ರಾಜ್ಯವಲ್ಲ, ಅದು ಜಾಗತಿಕ ಬ್ರ್ಯಾಂಡ್. ಜಗತ್ತು ಬೆಂಗಳೂರಿನತ್ತ ನೋಡಿದಾಗ, ನಾವೀನ್ಯತೆಯ ಭವಿಷ್ಯ ಕಾಣಿಸುತ್ತದೆ. ಉತ್ತಮ ಮತ್ತು ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ನಾವು ಹೊಂದಿದ್ದೇವೆ ಎಂದರು.

43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದೆ: ಸೈಬರ್ ದಾಳಿಗಳನ್ನು ತನಿಖೆ ಮಾಡಲು ಮತ್ತು ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲು ಅಗತ್ಯವಾದ ಕೌಶಲ್ಯ, ತರಬೇತಿ ಮತ್ತು ತಂತ್ರಜ್ಞಾನದೊಂದಿಗೆ ವಿಶೇಷ ಸೈಬರ್ ಅಪರಾಧ ಘಟಕಗಳನ್ನು ಸ್ಥಾಪಿಸುವ ಮೂಲಕ ರಾಜ್ಯ ಸರ್ಕಾರವು ಸೈಬರ್ ಅಪರಾಧಗಳನ್ನು ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳು ಮತ್ತು ಪ್ರಮುಖ ನಗರಗಳಲ್ಲಿ ಒಟ್ಟು 43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದೆ. ನಮ್ಮ ನಾಗರಿಕರಿಗೆ ಸೈಬರ್ ಸುರಕ್ಷತೆ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಸೈಬರ್ ಅಪರಾಧಗಳ ಪತ್ತೆ ಶೇ.15 ರಷ್ಟಿದೆ: ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಮಾತನಾಡಿ, ಡಿಜಿಟಲ್ ಸುರಕ್ಷತೆ ಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದರೂ, ಸೈಬರ್ ಅಪರಾಧಗಳ ಪತ್ತೆ ಹಚ್ಚುವ ಪ್ರಮಾಣವು ಕೇವಲ ಶೇ.10–15 ರಷ್ಟಿದೆ. ತಂತ್ರಜ್ಞಾನವು ಕೇವಲ ಉನ್ನತ ಮಟ್ಟದ ಕಚೇರಿಗಳಿಗೆ ಸೀಮಿತವಾಗದೆ, ಜನಸಾಮಾನ್ಯರು ನೇರವಾಗಿ ಸಂಪರ್ಕಿಸುವ ಪೊಲೀಸ್ ಠಾಣೆಗಳಿಗೆ ವಿಸ್ತರಿಸಿದಾಗ ಮಾತ್ರ ಸೈಬರ್ ಸವಾಲುಗಳನ್ನು ಎದುರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ ಡಾ. ಎಂ.ಎ.ಸಲೀಂ, ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೊಹಾಂತಿ, ಇನ್ಫೋಸಿಸ್ ಫೌಂಡೇಶನ್ ಟ್ರಸ್ಟಿ ಸುನೀಲ್ ಕುಮಾರ್ ಧಾರೇಶ್ವರ್, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಸಿಇಒ ವಿನಾಯಕ ಗೋಡ್ಸೆ, ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.



> ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರವು ರಾಜ್ಯದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ವಿವಿಧ ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳ ಸದಸ್ಯರು ಸೇರಿದಂತೆ 62 ಸಾವಿರಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದೆ.
> ■ ಡಾ. ಜಿ.ಪರಮೇಶ್ವರ, ಸಚಿವ

ಸೈಬರ್ ಕೈಂನಿಂದ 2031ರ ವೇಳೆಗೆ 12.2 ಟ್ರಿಲಿಯನ್ ನಷ್ಟ

ಸೈಬರ್ ಕಮಾಂಡ್‌ನ ಡಿಜಿಪಿ ಡಾ.ಪ್ರಣವ್ ಮೊಹಂತಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಸೈಬರ್ ಅಪರಾಧಗಳಿಂದ ಉಂಟಾಗುವ ಆರ್ಥಿಕ ನಷ್ಟವು 2031ರ ವೇಳೆಗೆ ಜಗತ್ತಿನಾದ್ಯಂತ ಸುಮಾರು 12.2 ಟ್ರಿಲಿಯನ್ ನಷ್ಟು ಮೊತ್ತದ ಹಾನಿಯಾಗುವ ಸಂಭವವಿದೆ. ಇದು ಭಾರತದ ಒಟ್ಟು ಆರ್ಥಿಕತೆಯ ಮೂರು ಪಟ್ಟು ಹೆಚ್ಚು ಎಂಬುದು ಆತಂಕಕಾರಿ ಸಂಗತಿ. ಇತ್ತೀಚಿನ ದಿನಗಳಲ್ಲಿ ಪ್ರತಿ ಸೆಕೆಂಡಿಗೆ ಸುಮಾರು 3,41,000 ಮೊತ್ತದ ಹಣ ಸೈಬರ್ ದಾಳಿಗಳಿಂದಾಗಿ ಲೂಟಿಯಾಗುತ್ತಿದೆ. ಆಧುನಿಕ ಡಿಜಿಟಲ್ ಯುಗದಲ್ಲಿ ಸೈಬರ್ ಅಪರಾಧಗಳು ಕೇವಲ ಕಂಪ್ಯೂಟರ್ ಸಿಸ್ಟಮ್‌ಗಳನ್ನು ಹ್ಯಾಕ್ ಮಾಡುವುದಕ್ಕೆ ಸೀಮಿತವಾಗಿಲ್ಲ. ಬದಲಾಗಿ ವಂಚಕರು ಈಗ ಮನುಷ್ಯನ ಮನಸ್ಸನ್ನೇ ಹ್ಯಾಕ್ ಮಾಡುವ ಸೋಷಿಯಲ್ ಇಂಜಿನಿಯರಿಂಗ್ ತಂತ್ರಕ್ಕೆ ಮೊರೆ ಹೋಗುತ್ತಿದ್ದಾರೆ ಎಂದರು.

ಒಳ ಮೀಸಲಾತಿ ಕಾಯ್ದೆ ಅನೂರ್ಜಿತ: ಛಲವಾದಿ

ಬೆಂಗಳೂರು: ಒಳ ಮೀಸಲಾತಿ ಸಂಬಂಧಿತ ಕಾಯ್ದೆಗೆ ಕೋರ್ಟ್ ಒಪ್ಪಿಗೆ ಇಲ್ಲದ ಕಾರಣ ರಾಜ್ಯಪಾಲರಿಂದ ಅಂಕಿತ ಪಡೆಯಬಾರದಿತ್ತು ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಕ್ಷೇಪಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಒಳ ಮೀಸಲಾತಿ ಶೇ. 15ರಿಂದ 17ಕ್ಕೆ ಏರಿಸಲಾಗಿತ್ತು. ನ್ಯಾ.ನಾಗಮೋಹನ್ ದಾಸ್ ಅವರ ವರದಿಯನ್ನೂ ಪಡೆದರು. ಅದರ ಪ್ರಕಾರವೇ 6, 6, 5 ಎಂದು ಹಂಚಿಕೆ ಮಾಡಿದ್ದರು. ಕಾಯ್ದೆ ಅನುಮೋದಿಸಿ ರಾಜ್ಯಪಾಲರಿಂದ ಅಂಕಿತವನ್ನೂ ಪಡೆದಿದ್ದರು. ನೀವ್ಯಾಕೆ ರಾಜ್ಯಪಾಲರ ಅಂಕಿತ ತೆಗೆದುಕೊಂಡಿರಿ? ನಿಮಗೆ ಪ್ರಜ್ಞೆ, ಬುದ್ಧಿ ಇಲ್ಲವೇ? ಅಂಕಿತ ಪಡೆದ ಮೇಲೆ ಅದನ್ನೇ ಜಾರಿಗೊಳಿಸಬೇಕಿತ್ತು. ಶೇ. 15ರ ಮೇಲೆ ಹಂಚಿಕೆ ಮಾಡುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದೀರಿ. ಹಾಗಾಗಿ, ಈ ಕಾಯ್ದೆ ಅನೂರ್ಜಿತ ಎಂದರು. ನೀವು ಯಾವ ರೀತಿ 56 ಸಾವಿರ ಹುದ್ದೆಗಳನ್ನು ತುಂಬುತ್ತೀರಿ? ಎಸ್‌ಸಿ, ಎಸ್‌ಟಿಗಳ ಪಾಲು ಏನು? ಧಾರವಾಡ ವಿವಿ, ಬಿಡಿಎ, ಸಾರಿಗೆ ಇಲಾಖೆಯಲ್ಲಿ ಎ, ಬಿ, ಸಿ ಪ್ರವರ್ಗಗಳನ್ನು ಯಾಕೆ ಪ್ರಕಟಿಸಿದ್ದೀರಿ? ಗೊಂದಲ ಯಾಕೆ ಸೃಷ್ಟಿಸಿದ್ದೀರಿ? ಎಂದು ಪ್ರಶ್ನಿಸಿದ ಅವರು, ಎಲ್ಲ ಹುದ್ದೆಗಳೂ ಪ್ರವರ್ಗ ಎ ಎಂದು ಬಂದಿವೆ. ಈಗ ಜಾತಿ ಸಂಘರ್ಷಕ್ಕೆ ಸಿದ್ದರಾಮಯ್ಯ ಅವರು ಕುಮ್ಮಕ್ಕು ಕೊಡುತ್ತಿದ್ದಾರೆ ಎಂದು ಟೀಕಿಸಿದರು.

2025–26ರಲ್ಲಿ 42,017 ಕೋಟಿ ರೂ., ಈ ಬಾರಿ 44,632 ಕೋಟಿ ರೂ. ಇಟ್ಟಿದ್ದಾಗಿ ಘೋಷಿಸಿದ್ದಾರೆ. 4 ವರ್ಷಗಳಲ್ಲಿ 1,56,701 ಕೋಟಿ ರೂ. ಕೊಟ್ಟ ಘೋಷಣೆ ಮಾಡಿದ್ದಾರೆ. ಆದರೆ, ಪೈಕಿ ಎಸ್‌ಸಿ-ಎಸ್‌ಟಿ ಕಲ್ಯಾಣ ಕಾರ್ಯಕ್ರಮಗಳಿಗೆ 25,291 ಕೋಟಿ ರೂ. ಮಾತ್ರ ಉಳಿದಿದೆ ಎಂದು ವಿವರಿಸಿದರು.

ಪರಿಶಿಷ್ಟ ವರ್ಗಗಳಿಗೆ ದೋಖಾ

ರಾಜ್ಯ ಸರ್ಕಾರದ 2026–27ರ ಆಯವ್ಯಯ ಪತ್ರವನ್ನು ಶುಕ್ರವಾರ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವ ಸಿದ್ದರಾಮಯ್ಯ ಮಂಡಿಸಿದ್ದಾರೆ. ರಾಜ್ಯ ಸರ್ಕಾರವು ಉಚಿತ, ಖಚಿತ, ನಿಶ್ಚಿತ ಎಂಬ ಘೋಷವಾಕ್ಯದಡಿ ಅಧಿಕಾರಕ್ಕೆ ಬಂದಿತ್ತು. ಪರಿಶಿಷ್ಟ ಜಾತಿ–ವರ್ಗಗಳಿಗೆ ವಿಶೇಷಗಳಿವೆ. ಅವರಿಗೆ ಘೋಷಣೆಗಳು ಉಚಿತ, ದೋಖಾ ಖಚಿತ, ನಂಬಿದವರ ಸರ್ವನಾಶ ನಿಶ್ಚಿತ ಎಂದು ವಿಶ್ಲೇಷಿಸಿದರು.

ಎಆರ್‌ಎಐ ಕೇಂದ್ರಕ್ಕೆ ಜಾಗ: ಎಚ್‌ಡಿಕೆ ಅಭಿನಂದನೆ

ಮಂಡ್ಯ: ಮಂಡ್ಯದಲ್ಲಿ ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಸಂಶೋಧನೆ ಮತ್ತು ಪರೀಕ್ಷಾ ಕೇಂದ್ರ ತೆರೆಯಲು 100 ಎಕರೆ ಭೂಮಿಯನ್ನು ನೀಡುವುದಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿಯೇ ಘೋಷಣೆ ಮಾಡಿರುವುದು ಸ್ವಾಗತಾರ್ಹ. ಇದಕ್ಕಾಗಿ ಸರ್ಕಾರ ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯದಲ್ಲಿ ಕೈಗಾರಿಕೆಗೆ ಅಭಿವೃದ್ಧಿಗೆ ಪೂರಕ ವ್ಯವಸ್ಥೆಯನ್ನು ಸೃಷ್ಟಿ ಮಾಡಬೇಕು. ಅದಕ್ಕಾಗಿ ಎಲ್ಲರೂ ಶ್ರಮಿಸಬೇಕು. ಎಆರ್‌ಎಐ ಕೇಂದ್ರ ಸ್ಥಾಪನೆಗೆ ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು 500 ಕೋಟಿ ವೆಚ್ಚ ಮಾಡುತ್ತಿದೆ. ನಂತರ ಇನ್ನೂ 500 ಕೋಟಿಗಳನ್ನು ಹೂಡಿಕೆ ಮಾಡಲಾಗುವುದು. ಆದಷ್ಟು ಬೇಗ ನನ್ನ ಸಚಿವಾಲಯದ ಅಧಿಕಾರಿಗಳು, ತಾಂತ್ರಿಕ ನಿಪುಣರು ಆಗಮಿಸಿ ಸ್ಥಳ ಪರಿಶೀಲನೆ ನಡೆಸುವರು. ಭೂಮಿಯನ್ನು ರಾಜ್ಯ ಸರ್ಕಾರ ಎಲ್ಲಿ ಕೊಡಲಿದೆ ಎಂಬುದನ್ನು ಎದುರು ನೋಡುತ್ತಿದ್ದೇವೆ. ಈಗಾಗಲೇ ಸರ್ಕಾರ ಗುರುತಿಸಿರುವ ಭೂಮಿ ಯೋಜನೆಗೆ ಸೂಕ್ತವೋ ಅಲ್ಲವೋ ಎಂದು ಪರಿಶೀಲನೆ ನಡೆಸುವರು ಎಂದರು.

ಈಗಾಗಲೇ ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನ ಕ್ಷೇತ್ರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಎಫ್‌ಕೆಸಿಸಿಐ ಪದಾಧಿಕಾರಿಗಳು ಸೇರಿ 50ಕ್ಕೂ ಹೆಚ್ಚು ಕೈಗಾರಿಕೋದ್ಯಮಿಗಳ ಸಭೆ ನಡೆಸಿದ್ದೇನೆ. ರಾಜ್ಯಕ್ಕೆ ಒಳ್ಳೆಯದಾಗಬೇಕು ಎನ್ನುವ ಉದ್ದೇಶದಿಂದ ನಾನು ಕೆಲಸ ಮಾಡುತ್ತಿದ್ದೇನೆ. ಯಾರನ್ನೋ ಮೆಚ್ಚಿಸಲು ಕೆಲಸ ಮಾಡುತ್ತಿಲ್ಲ. ಜನರ ಋಣ ತೀರಿಸಲು ಕೆಲಸ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.



ದಾಖಲೆ ಬಜೆಟ್ಟಿನ ದಾಖಲೆ ಹೊರೆ ಜನರ ಮೇಲೆ ಬೀಳಲಿದೆ

ಸಿದ್ದರಾಮಯ್ಯ ಅವರು ದಾಖಲೆ 17ನೇ ಬಜೆಟ್ ಮಂಡಿಸಿದ್ದಾರೆ ಸರಿ. ಹಾಗೆಯೇ ಜನರ ಮೇಲೆಯೂ ದಾಖಲೆಯ ಸಾಲದ ಹೊರೆ ಹೊರಿಸಿದ್ದಾರೆ. ಈ ದಾಖಲೆ ಬಜೆಟ್‌ನ ಹೊಡೆತ ಜನರ ಮೇಲೆ ಹೇಗೆ ಬೀಳುತ್ತೆ ಅಂತ ನೋಡಬೇಕು. ಆರ್ಥಿಕ ತಜ್ಞರು ಸಹ ಈ ಬಗ್ಗೆ ಹೇಳಿದ್ದಾರೆ. ಈ ಬಜೆಟ್‌ನ ಅಂಕಿ–ಅಂಶದಿಂದ ಸಾಕಷ್ಟು ಸಮಸ್ಯೆ ಆಗುತ್ತೆ ಎಂದು ಎಚ್ಚರಿಕೆ ನೀಡಿದ್ದಾರೆ. ರಾಜ್ಯದ ಸಾಲದ ಪ್ರಮಾಣ ವಿತ್ತೀಯ ಹೊಣೆಗಾರಿಕೆಯನ್ನು ಮೀರಿದೆ. ಮನಸೋ ಇಚ್ಛೆ ಸಾಲ ಮಾಡಿದ್ದಾರೆ. ಇದರ ಪರಿಣಾಮ ಮುಂದಿನ ದಿನಗಳಲ್ಲಿ ಗೊತ್ತಾಗುತ್ತೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಆ ವ್ಯಕ್ತಿ ಜತೆ ನನ್ನ ಹೋಲಿಕೆ ಮಾಡಬೇಡಿ

ಮದ್ದೂರು ಕ್ಷೇತ್ರದ ಶಾಸಕ ಕದಲೂರು ಉದಯ್ ಅವರು ಟೀಕೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಎಚ್.ಡಿ.ಕುಮಾರಸ್ವಾಮಿ ಅವರು, ಅವರ ಬಗ್ಗೆ ನಾನು ಚರ್ಚೆ ಮಾಡೋ ಅವಶ್ಯಕತೆ ಇಲ್ಲ. ಆ ವ್ಯಕ್ತಿ ಜತೆ ನನ್ನ ಯಾಕೆ ಹೋಲಿಕೆ ಮಾಡ್ತೀರಾ. ನಾನು ಶ್ರೀಲಂಕಾಗೆ ಹೋಗಿ ಜಾಮೀನು ಪಡೆಯುವವರೆಗೆ ಕೂತಿರಲಿಲ್ಲ ಎಂದು ಛೇಡಿಸಿದರು.

ಬಜೆಟ್ ಕುರಿತು ನಾಳೆ ಶಾಸಕರಿಗೆ ಕಾರ್ಯಾಗಾರ: ಸ್ಪೀಕರ್ ಖಾದರ್

ಮಂಗಳೂರು: ರಾಜ್ಯ ವಿಧಾನ ಮಂಡಲದ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಮಾ. 9ರಂದು ಶಾಸಕರಿಗಾಗಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.



ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿವೇಶನದಲ್ಲಿ ಮಂಡಿಸಲಾದ ಬಜೆಟ್ ಕುರಿತು ಮೂರು ವಾರಗಳ ಕಾಲ ಸುದೀರ್ಘ ಚರ್ಚೆಗೆ ಅವಕಾಶ ಇದೆ. ಇದಕ್ಕೆ ಪೂರ್ವಭಾವಿಯಾಗಿ ಬಜೆಟ್ ಕುರಿತು ಸಂಪೂರ್ಣ ಮಾಹಿತಿ ನೀಡಲು ಶಾಸಕರಿಗೆ ಈ ಕಾರ್ಯಾಗಾರವನ್ನು ಬೆಂಗಳೂರಿನ ಹೋಟೆಲ್ ಲಲಿತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದರು. 17 ಬಾರಿ ಬಜೆಟ್ ಮಂಡಿಸಿದ ಅನುಭವ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಹಿರಿಯ ಅಧಿಕಾರಿಗಳು ಕೂಡ ಭಾಗವಹಿಸಲಿದ್ದಾರೆ. ಬಜೆಟ್ ಎಂದರೇನು? ಅನುದಾನದ ಹಂಚಿಕೆ ಹೇಗೆ? ಅನುದಾನದ ಬಳಕೆ ಹೇಗೆ ಇತ್ಯಾದಿ ವಿಷಯಗಳ ಮೇಲೆ ಈ ಕಾರ್ಯಾಗಾರ ಬೆಳಕು ಚೆಲ್ಲಲಿದೆ. ಆದರೆ ಈ ಬಾರಿ ಮಂಡಿಸಿದ ಬಜೆಟ್‌ಗೂ ಈ ಕಾರ್ಯಾಗಾರಕ್ಕೂ ಯಾವುದೇ ಸಂಬಂಧ ವಿಲ್ಲ ಎಂದವರು ಸ್ಪಷ್ಟಪಡಿಸಿದರು. ಈ ಬಾರಿಯ ಬಜೆಟ್ ಸಾಲ ಮಾಡಿ ಮಂಡಿಸಿದ ಬಜೆಟ್ ಎಂಬ ಆರೋಪ, ಟೀಕೆಗಳು ಕೇಳಿಬರುತ್ತಿವೆ. ಆರೋಪಗಳು ಸಹಜ, ಕೇಂದ್ರದಲ್ಲೂ ಬಜೆಟ್ ಬಗ್ಗೆ ಟೀಕೆ ಆಗುತ್ತೆ. ಹಾಗೆಯೇ ರಾಜ್ಯದಲ್ಲೂ ಸಹಜ. ಪ್ರತಿಪಕ್ಷದ ಸದಸ್ಯರು ಅವರ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅವರಿಗೆ ಅವರ ಅಭಿಪ್ರಾಯ ತಿಳಿಸುವ ಅವಕಾಶ ಇದೆ.ಎಂದರು.

ಕೇಂದ್ರದ ಜತೆ ಕೈಜೋಡಿಸಿ: ಸೋಮಣ್ಣ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರ ಅಹಂಕಾರ ಬಿಟ್ಟು ಕೇಂದ್ರ ಸರ್ಕಾರದ ಜೊತೆ ಕೈಜೋಡಿಸಿ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಿವಿಮಾತು ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಪ್ರಧಾನಿ ನರೇಂದ್ರಮೋದಿ ಅವರ ಪಾರದರ್ಶಕ ಆಡಳಿತವನ್ನು ನೋಡಿ ಕಾಂಗ್ರೆಸ್ ಸರ್ಕಾರ ಕಲಿಯಬೇಕು. ಸಾಲದ ಪ್ರಮಾಣ ಏರಿಸುವ ಮೂಲಕ ರಾಜ್ಯವನ್ನು ಮಾರಾಟಕ್ಕೆ ಇಟ್ಟಿದ್ದಾರೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಇಂತಹ ಬಜೆಟ್ ನಿರೀಕ್ಷೆ ಮಾಡಿರಲಿಲ್ಲ ಎಂದರು. ನಾಲ್ಕು ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಿಸಿ ಅಲ್ಪಸಂಖ್ಯಾತ ವರ್ಗದವರಿಗೆ ನಾಲ್ಕು ಸಾವಿರ ಕೋಟಿ ರೂ. ಅನುದಾನ ನೀಡಿದ್ದಾರೆ ಎಂದರು.

ನ್ಯಾಯಾಲಯದ ಆದೇಶ ಎತ್ತಿಹಿಡಿದ ಹೈ

ಬೆಂಗಳೂರು: ಸ್ವಂತ ಮಗಳನ್ನು ತಾಯಿಯೇ ವೇಶ್ಯಾವಾಟಿಕೆ ದಂಧೆಗೆ ದೂಡಿದ ಆರೋಪ ಹಿನ್ನೆಲೆಯಲ್ಲಿ ವೇಶ್ಯಾವಾಟಿಕೆ ಜಾಲದಿಂದ ರಕ್ಷಿಸಲ್ಪಟ್ಟ ಸಂತ್ರಸ್ತೆಯನ್ನು ತಾಯಿಯ ಸುಪರ್ದಿಗೆ ವಹಿಸಲು ನಿರಾಕರಿಸಿದ್ದ ವಿಚಾರಣಾಧೀನ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿದೆ. ವ್ಯಾಜ್ಯದ ವಿಷಯವು ಅಪರಾಧದ ಬಗ್ಗೆ ಅಥವಾ ಸರ್ಕಾರ ಸಲ್ಲಿಸಿರುವ ಆರೋಪ ಪಟ್ಟಿಗೆ ಸಂಬಂಧಿಸಿದ್ದಲ್ಲ. ಬದಲಿಗೆ, ಸಂತ್ರಸ್ತೆ ಮತ್ತು ಇತರರ ಹೇಳಿಕೆಗಳು ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಒತ್ತಾಯಿಸಿದ್ದಾಳೆ ಎಂಬುದನ್ನು ಮೇಲ್ನೋಟಕ್ಕೆ ಸೂಚಿಸುತ್ತವೆ. ವೇಶ್ಯಾವಾಟಿಕೆ ದಂಧೆಯಿಂದ ಸಂತ್ರಸ್ತೆಯನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಕೇಂದ್ರದ ವಶದಲ್ಲಿರಿಸಿದ್ದರೆ, ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದಾಳೆ ಎಂಬ ಆರೋಪಗಳಿವೆ. ಇಂಥ ಸಂದರ್ಭದಲ್ಲಿ ಮಗುವನ್ನು ತಾಯಿಯ ವಶಕ್ಕೆ ನೀಡಬಾರದು ಎಂಬ ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರ ವಾದ ಸರಿಯಾಗಿದೆ ಎಂದು ನ್ಯಾಯಾಲಯ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಪ್ರಕರಣದ ಆರೋಪ ಪಟ್ಟಿ ಸಲ್ಲಿಸುವಾಗ ತಾಯಿಯ ಹೆಸರನ್ನು ಹೇಗೆ ಕೈಬಿಡಲಾಗಿದೆ ಎಂಬುದು ಅರ್ಥವಾಗದ ವಿಷಯವಾಗಿದೆ. ಮೇಲ್ನೋಟಕ್ಕೆ ಆಕೆ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ತಳ್ಳಿದ್ದಾಳೆ ಎಂಬ ಬಲವಾದ ಅನುಮಾನವಿದ್ದರೂ ಸಹ, ಆರೋಪ ಪಟ್ಟಿಯಲ್ಲಿ ಆಕೆಯ ಹೆಸರನ್ನು ಪೊಲೀಸರು ಹೇಗೆ ಬಿಡಲು ಸಾಧ್ಯ ಎಂದು ಪ್ರಶ್ನಿಸಿರುವ ನ್ಯಾಯಾಲಯವು ಸಂತ್ರಸ್ತೆಯನ್ನು ಅರ್ಜಿದಾರರ ವಶಕ್ಕೆ ನೀಡುವ ಬದಲು ಆಕೆಗೆ ಸುರಕ್ಷಿತ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದಿದೆ.

ದೆಹಲಿ ಮತ್ತು ಬಾಂಬೆ ಹೈಕೋರ್ಟ್‌ಗಳ ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಾಲಯ, ರಕ್ಷಿಸಲ್ಪಟ್ಟ ವ್ಯಕ್ತಿಗಳನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದಾಗ, ಮ್ಯಾಜಿಸ್ಟ್ರೇಟ್ ಅವರು ಸೆಕ್ಷನ್ 17(2)ರ ಅಡಿಯಲ್ಲಿ ಮೊದಲ ಬಾರಿಗೆ ಹಾಜರುಪಡಿಸಿದಾಗಲೇ ಅವರ ವಯಸ್ಸನ್ನು ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಆ ವ್ಯಕ್ತಿ 18 ವರ್ಷದೊಳಗಿನವರಾಗಿದ್ದು, ಕಾನೂನಿನ ಸಂಘರ್ಷಕ್ಕೊಳಪಟ್ಟ ಬಾಲಾಪರಾಧಿಯಾಗಿದ್ದರೆ ಬಾಲನ್ಯಾಯ ಮಂಡಳಿಗೆ ಅಥವಾ ಆ ವ್ಯಕ್ತಿಯು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಾಗಿದ್ದರೆ ಮಕ್ಕಳ ಕಲ್ಯಾಣ ಸಮಿತಿಗೆ ಪ್ರಕರಣವನ್ನು ವರ್ಗಾಯಿಸಬೇಕು ಎಂದು ಹೇಳಿದೆ.

ಮೇಲಿನ ತೀರ್ಪುಗಳ ಆಧಾರದಲ್ಲಿ, ತನ್ನ ಮಗಳನ್ನೇ ವೇಶ್ಯಾವಾಟಿಕೆ ದಂದೆಯಲ್ಲಿ ಬಳಸಿಕೊಳ್ಳುತ್ತಿದ್ದಾಳೆ ಎಂದು ಆರೋಪಿಸಲಾದ ತಾಯಿಗೆ ಮಗುವನ್ನು ಹಸ್ತಾಂತರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಯಾವುದೇ ವಿಚಾರಣಾ ಅರ್ಹತೆ (ಮೆರಿಟ್) ಹೊಂದಿರದ ಕಾರಣ ಅರ್ಜಿ ವಜಾಗೊಳಿಸಲಾಗುತ್ತಿದೆ ಎಂದು ಆದೇಶಿಸಿದೆ.



ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಕುಲ ಮತ್ತು ಶೀಲದಲ್ಲಿ ಸದಾ ಅಚಲನಾದವನು ಯಾರು?

◆ **ಸಜ್ಜನ ಮಹಾಪುರುಷ**

ಈ ಪ್ರಶ್ನೆಯು ಬಹಳ ವಿಶಿಷ್ಟವಾದದ್ದು. ಏಕೆಂದರೆ ಕಾಲ ಮತ್ತು ವ್ಯಕ್ತಿಯ ನಡುವೆ ಇರುವ ಸಂಬಂಧವನ್ನು ವಿವರಿಸುವ ಪ್ರಶ್ನೋತ್ತರ ಇದಾಗಿದೆ. ಕಾಲವೆಂಬುದು ಹೇಗೆ ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರಬಲ್ಲದು ಎಂಬುದು ಇಲ್ಲಿದೆ. ಪುರುಷನೊಬ್ಬನು ತನ್ನ ಶೀಲ ಮೊದಲಾದ ಗುಣಗಳನ್ನು ಅನೇಕ ಕಾರಣಗಳಿಂದ ಬದಲಿಸುತ್ತಾನೆ. ಎಲ್ಲವೂ ಇದ್ದಂತೆ ಇರುವುದಿಲ್ಲ. ವ್ಯಕ್ತಿಯ ಕುಲ ಮತ್ತು ಶೀಲಾ ಎಂಬುದನ್ನು ಬದಲಿಸಬಹುದು. ಅಂತಹ ಶಕ್ತಿ ಯಾವುದಕ್ಕೆ ಇದೆ? ಎಂದರೆ ಕಾಲಕ್ಕೆ ಇದೆ ಎಂಬುದು ಇಲ್ಲಿನ ಆಶಯ. ಹಾಗಾಗಿ ಅಂತಹ ಕಾಲ ಮತ್ತು ವ್ಯಕ್ತಿ ನಡುವೆ ಸಂಬಂಧ ಹೇಗಿದೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ

ಕೃತ ಪ್ರೇತ ದ್ವಾಪರ ಮತ್ತು ಕಲಿ ಎಂಬುದಾಗಿ ಕಾಲ ನಾಲ್ಕು ಬಗೆ. ಈ ನಾಲ್ಕರ ಹಿಂದಿರುವ ವಿಷಯವಾದರೂ ಏನು? ಈ ನಾಲ್ಕರ ಪ್ರಭೇದಕ್ಕೆ ಕಾರಣವೇನು? ಈ ಪ್ರಭೇದವು ಹೇಗೆ ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರುತ್ತದೆ? ಅತ್ಯಂತ ಪ್ರಧಾನವಾಗಿ ಯುಗ ಎಂಬ ಭೇದವು ಧರ್ಮದ ಹಿನ್ನೆಲೆಯಲ್ಲಿ ಬಂದಿದೆ. ಕೃತಯುಗದಲ್ಲಿ ಧರ್ಮವು ಪೂರ್ಣವಾಗಿ ಇರುತ್ತದೆ. ಪ್ರೇತಾಯುಗದಲ್ಲಿ ಅದೇ ಧರ್ಮವು ಕಾಲು ಭಾಗ ನಷ್ಟವಾಗುತ್ತದೆ. ಅಂದರೆ ಮುಕ್ಕಾಲು ಭಾಗ ಧರ್ಮ ಕಾಲು ಭಾಗ ಅಧರ್ಮ. ದ್ವಾಪರಯುಗದಲ್ಲಿ ಅರ್ಧ ಧರ್ಮ ಮತ್ತು ಅರ್ಧ ಅಧರ್ಮ. ಕಲಿಯುಗದಲ್ಲಿ ಮುಕ್ಕಾಲು ಭಾಗ ಅಧರ್ಮ ಕಾಲುಭಾಗ ಧರ್ಮ ಎಂಬುದಾಗಿ ಈ ಯುಗದ ಸ್ವಭಾವವನ್ನು ಧರ್ಮದ ಆಧಾರದ ಮೇಲೆ ಹೇಳಲಾಗಿದೆ. ಸೃಷ್ಟಿಯಲ್ಲಿ ಧರ್ಮದ ಕಾರಣದಿಂದ ಈ ವ್ಯತ್ಯಾಸವನ್ನು ಕಾಣಬಹುದು. ಆದರೆ ಈ ಪ್ರಶ್ನೆಯಲ್ಲಿ ಹೇಳಲಾದ ಸಜ್ಜನ ಅಥವಾ ಮಹಾಪುರುಷನ ಕುಲದಲ್ಲಾಗಲಿ ಅಥವಾ ಶೀಲದಲ್ಲಾಗಲಿ ಈ ಯುಗದ ಪರಿಣಾಮವಾಗಿ ಅಥವಾ ಕಾಲದ ಪರಿಣಾಮವಾಗಿ ಅವನಲ್ಲಿ ಯಾವ ವ್ಯತ್ಯಾಸನ್ನೂ ಕಾಣಲಾಗದು. ಕುಲ ಮತ್ತು ಶೀಲ ಇವೆರಡೂ ಪರಿವರ್ತಿತವಾಗುವುದು ಸಾಮಾನ್ಯವಾಗಿ ಬಹಳ ಕಷ್ಟ ಸಾಧ್ಯ.

ಅಂದರೆ ಒಬ್ಬ ವ್ಯಕ್ತಿಯ ಪರಿವರ್ತನೆಯನ್ನು ಅವನ ಕುಲಶೀಲದಲ್ಲಿ ನೋಡಬಹುದು. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಈ ಎರಡು ಮಾನದಂಡಗಳಿಂದಲೇ ಅಳೆಯುವುದುಂಟು. ವ್ಯಕ್ತಿ ಹೇಗಿದ್ದಾನೆ? ಎಂದರೆ ಅವನ ಕುಲವನ್ನು ಮತ್ತು ಶೀಲವನ್ನು ಪ್ರಶ್ನಿಸುವುದುಂಟು. ಮಹಾಪುರುಷನು ತನ್ನ ಕುಲಕ್ಕೆ ಕಳಂಕ ಬಾರದ ರೀತಿಯಲ್ಲಿ ವರ್ತಿಸುತಾನೆ. ಕಾಲದಲ್ಲಿ ಎಷ್ಟೇ ವೈಷಮ್ಯ ಕಂಡುಬಂದರೂ ಆತ ಕುಲದಲ್ಲೂ ಮತ್ತು ಶೀಲದಲ್ಲೂ ಅವಿಚಲಿತನಾಗಿಯೇ ಇರುತ್ತಾನೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಶ್ರೀರಾಮಚಂದ್ರ. ಆತ ತನ್ನ ಕುಲಕ್ಕೆ ಬರುವ ಕಳಂಕವನ್ನು ತಪ್ಪಿಸುವುದಕೋಸ್ಕರ ಸೀತಾಪರಿತ್ಯಾಗದಂತಹ ಕಾರ್ಯಗಳನ್ನು ತನ್ನ ಜೀವನದಲ್ಲಿ ಮಾಡುತ್ತಾನೆ. ಚಿಕ್ಕ ಸಂಗತಿಯನ್ನು ಅವಗಣಿಸದೆ ಪ್ರತಿಯೊಂದುಕ್ಕೂ ಮಾನ್ಯತೆಯನ್ನು ಕೊಡುವುದನ್ನು ಕಾಣಬಹುದು. ಅಂದರೆ ಯಾವುದೇ ನಿಮಿತ್ತವೂ ಮಹಪುರುಷನನ್ನು ಕದಲಿಸುವುದಿಲ್ಲ ಎಂದರ್ಥ. ಮಹಾಪುರುಷನ ಲಕ್ಷಣವಿದಲ್ಲವೇ?



ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ರಾಕ್ಷಸನ ಚರ್ಮದಿಂದಾದ ನಗಾರಿ

ಜರಾಸಂಧವಧೆಗಾಗಿ ಕೃಷ್ಣಾರ್ಜುನ-ಭೀಮಸೇನರು ಮಗಧದೇಶಕ್ಕೆ ಪ್ರಯಾಣಿಸಿದರಷ್ಟೆ. ಮಗಧವನ್ನು ಸಮೀಪಿಸುತ್ತಲೇ ಕೃಷ್ಣನು ಅದರ ಸೊಬಗನ್ನು ತಾನೇ ವರ್ಣಿಸಿದನು: ಈ ಪಂಚ ಪರ್ವತಗಳು ಹೇಗಿವೆ! ಮಹಾಶಿಖರಗಳನ್ನುಳ್ಳ ಇವು ತಂಪನೆಯ ನೆರಳುಳ್ಳ ಮರಗಳಿಂದ ತುಂಬಿವೆ. ಇವೈದೂ ಒಟ್ಟಿಗೆ ಸೇರಿ, ಪರಸ್ಪರ ಅಂಟಿಕೊಂಡಿದ್ದು, ಈ ಗಿರಿವ್ರಜನಗರವನ್ನು ಕಾಪಾಡುತ್ತಿರುವಂತಿದೆಯಲ್ಲವೇ? ಮರದ ಕೊಂಬೆಗಳ ಕೊನೆಗಳನ್ನು ಹೂಗಳು ದಟ್ಟವಾಗಿ ಸುತ್ತುವರೆದಿವೆ. ಆ ಹೂಗಳಾದರೂ ಮನೋಹರವೂ ಸುಗಂಧಭರಿತವೂ ಆಗಿವೆ; ಕಾಮಿಜನರಿಗೆ ಪ್ರಿಯವೆನಿಸುವ ಲೋಧ್ರಗಿಡಗಳ ಕಾಡುಗಳಿಂದ ತುಂಬಿವೆ.

ಕಠೋರವ್ರತ ಪಾಲಕರಾದ ಗೌತಮ ಮಹರ್ಷಿಗಳು ಮಕ್ಕಳನ್ನು ಪಡೆದದ್ದು ಈ ಎಡೆಯಲ್ಲಿಯೇ. ಅದೇ ಕಾರಣಕ್ಕೇ ಅವರು ಇಲ್ಲೇ ಇದ್ದು ಮಗಧದೇಶದ ರಾಜರನ್ನು ಅನುಗ್ರಹಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಅಂಗದೇಶ, ವಂಗದೇಶ ಮುಂತಾದ ದೇಶಗಳ ಮಹಾಬಲಶಾಲಿಗಳಾದ ರಾಜರುಗಳು ಇಲ್ಲಿಗೆ ಬಂದು ಸಂತೋಷವಾಗಿ ಇರುತ್ತಿದರು. ಅರ್ಜುನ, ನೋಡು ಈ ಆಕರ್ಷಕವಾದ ಪಿಪ್ಪಲಗಳ ಕಾಡುಗಳನ್ನು ಹಾಗೂ ಶುಭವಾದ ಲೋಧ್ರಗಳ ಕಾಡುಗಳನ್ನು. ಇವೆಲ್ಲವೂ ಗೌತಮರ ವಾಸಸ್ಥಾನಕ್ಕೆ ಸಮೀಪದಲ್ಲೇ ಹುಟ್ಟಿ ಬೆಳೆದುಕೊಂಡಿವೆ. ಈ ಸ್ಥಾನಕ್ಕೆ ಮನುವಿನ ಅನುಗ್ರಹವಾಗಿದೆ. ಎಂದೇ ಇಲ್ಲಿ ಎಂದೂ ಕ್ಷಾಮವಿಲ್ಲ. ಬೇರೆ ಅನುಗ್ರಹಗಳೂ ಈ ಎಡೆಗೆ ಉಂಟು.

ಹೀಗೆ ಈ ನಗರವು ರಮಣೀಯವಾಗಿರುವುದಲ್ಲದೆ ದುರಾಧರ್ಷವೂ ಆಗಿದೆ. ಇಂತಹ ಜಾಗದಲ್ಲಿ ಅರ್ಥಸಿದ್ಧಿಗಾಗಿ ಜರಾಸಂಧನು ನೆಲೆಯೂರಿದ್ದಾನೆ. ಇಂತಹವನ ಮನೆಗೇ ಹೋಗಿ ನಾವಿಂದು ಆತನ ದರ್ಪವನ್ನು ಅಡಗಿಸಲಿದ್ದೇವೆ ಎಂದನು.

ಹೀಗೆ ಮಾತುಕತೆಯಾದ ಮೇಲೆ ಕೃಷ್ಣಾರ್ಜುನ-ಭೀಮಸೇನರು ಮಗಧರಾಜಧಾನಿಯತ್ತ ಸಾಗಿದರು. ಅಲ್ಲಿ ನಾಲ್ಕುವರ್ಣದ ಜನಗಳೂ ಇದ್ದರು. ಜನರೆಲ್ಲರೂ ಹೃಷ್ಟಪುಷ್ಟರಾಗಿದ್ದರು. ಅನೇಕವಾದ ಉತ್ಸವಗಳಿಂದ ಕೂಡಿದ್ದ ಗಿರಿವ್ರಜವನ್ನು ಅವರು ತಲುಪಿದರು. ಆದರೆ ಅವರು ನಗರದ್ವಾರದ ಮೂಲಕ ಅದನ್ನು ಪ್ರವೇಶಿಸಲಿಲ್ಲ. ಬದಲಾಗಿ ಚೈತ್ಯಕಪರ್ವತವನ್ನು ಹತ್ತಿದರು. ಅದಾದರೂ ನಗರವಾಸಿಗಳಿಂದ ಪೂಜಿತವಾದದ್ದು, ಜನರಿಗೆ ಪ್ರಿಯವಾದದ್ದು. ಹಿಂದೆ ಅಲ್ಲೊಬ್ಬ ರಾಕ್ಷಸನಿದ್ದ. ಆತನ ಹೆಸರು ಋಷಭ. ಆತ ಮಾಂಸಭಕ್ಷಕ. ಜರಾಸಂಧನ ತಂದೆಯಾದ ಬೃಹದ್ರಥ ಅಲ್ಲಿಗೆ ಹೋಗಿ ಆತನನ್ನು ಸಂಹರಿಸಿದ. ಆತನ ಚರ್ಮವನ್ನು ಸುಲಿಸಿದ. ಮೂರು ಭೇರಿಗಳನ್ನು ಮಾಡಿಸಿ, ಆ ಭೇರಿಗಳಿಗೆ ಆ ರಾಕ್ಷಸನ ಚರ್ಮವನ್ನು ಬಳಸಿದ. ಆ ಭೇರಿಗಳು ಹೇಗಿದ್ದುವೆಂದರೆ, ಒಮ್ಮೆ ಸದ್ದು ಮಾಡಿದರೆ ಸಾಕು, ಅವುಗಳ ಮೇಲೆ ದಿವ್ಯಪುಷ್ಪಗಳ ವರ್ಷವಾಗುತ್ತಿತ್ತು. ಹಾಗಿದ್ದ ಆ ಮೂರೂ ನಗಾರಿಗಳನ್ನು ಭೀಮಾರ್ಜುನರು ಧ್ವಂಸ ಮಾಡಿದರು. ಅದಂತೂ ಜರಾಸಂಧನ ಶಿರಸ್ಸನ್ನು ಮೆಟ್ಟಿದ ಹಾಗೆಯೇ ಭಾಸವಾಯಿತು.

ಆ ಬಳಿಕ ಆ ಪರ್ವತದ ಶೃಂಗವನ್ನು ಹತ್ತಿದರು. ಆ ಶೃಂಗವು ಸ್ಥಿರವಾಗಿತ್ತು, ಸುವಿಪುಲವಾಗಿತ್ತು. ಗಂಧಗಳಿಂದಲೂ ಮಾಲೆಗಳಿಂದಲೂ ಅದನ್ನು ಅರ್ಚಿಸುವುದು ಅಲ್ಲಿಯ ಜನರ ಸಂಪ್ರದಾಯವಾಗಿತ್ತು. ಹಾಗೆ ಸುಪ್ರತಿಷ್ಠಿತವಾದ ಆ ಪರ್ವತಶಿಖರವನ್ನು ತಮ್ಮ ವಿಪುಲವಾದ ಬಾಹುಗಳಿಂದಲೇ ಹೊಡೆದುರುಳಿಸಿದರು. ಬಳಿಕ ಹರ್ಷದಿಂದ ಕೂಡಿದವರಾಗಿ ಪುರಪ್ರವೇಶವನ್ನು ಮಾಡಿದರು.

ಹೀಗೊಂದು ಕಿಟ್ಟಿ ಪಾರ್ಟಿ ಅನುಭವ

"ಈ ತಿಂಗಳ ಕಿಟ್ಟಿ ಪಾರ್ಟಿಯನ್ನ ನಮ್ಮ ಮನೇಲೇ ಮಾಡು'' ಎಂದೆ. ಮಡದಿ ಹೌಹಾರಿದಳು. ಸಂಶಯಗ್ರಸ್ತಳಾದಳು. ಸನಿಹ ಬಂದಳು. "ಹುಷಾರಾಗಿದ್ದೀರಾ?'' ಎಂದು ಕೇಳಿದಳು.

ಅವಳು ಅಷ್ಟು ಸನಿಹ ಬಂದೇ ತಿಂಗಳುಗಳಾಗಿದ್ದವು. ಆ ಸಾಮೀಪ್ಯ ನನ್ನಲ್ಲಿ ರೋಮ್ಯಾನ್ಸಿನ ಚಿಲುಮೆಯೊಂದನ್ನು ಚಿಮ್ಮಿಸಿತ್ತು.

ಮಡದಿ ನನ್ನ ಕೈ ಹಿಡಿದಳು. ಗೋಡೆಯ ಗಡಿಯಾರದತ್ತ ತಿರುಗಿದಳು.

ಮನೆಯ ಸನಿಹದ ನರ್ಸಿಂಗ್ ಹೋಮಿನಲ್ಲಿ ಹೆಡ್ ನರ್ಸ್ ಆಗಿರುವ ಅವಳು ನನ್ನ ನಾಡಿಬಡಿತವನ್ನು ಪರೀಕ್ಷಿಸುತ್ತಿದ್ದಾಳೆಂದು ತಿಳಿಯಿತು. ರೋಮ್ಯಾನ್ಸಿನ ಕನಸು ಹರಿದಿತ್ತು.

"ನಾಡಿಬಡಿತ ಸರಿಯಿರುವುದರಿಂದ ಮೈಯೇನೋ ಸರಿಯಿದೆ ಎಂದಾಯಿತು. ಆದರೆ ತಲೆ? ಹೋದ ಸರತಿಯ ಕಿಟ್ಟಿ ಪಾರ್ಟಿಯನ್ನು ಮರೆತಿರಾ?''

ಮರೆಯುವುದುಂಟೇ! ಎಂಟು ತಿಂಗಳ ಹಿಂದಿನ ಕಥೆ. ಇವರಿಗೆ ಆಗದ ಅದ್ಯಾವುದೋ ಮಹಿಳೆಯು ಅದ್ಯಾವುದೋ ಸ್ಪರ್ಧೆಯಲ್ಲಿ ಸೋತಿದ್ದನ್ನು ಸಂಭ್ರಮಿಸಲೆಂದು ಸಭೆ ಸೇರಿತ್ತು. ವಿಧವಿಧವಾದ ಸೆಂಟುಗಳು, ಪೌಡರುಗಳ ಗಂಧಮಿಶ್ರಣವು ನಾನು ತಳ್ಳಲ್ಪಟ್ಟಿದ್ದ ಮೂಲೆಕೋಣೆಯ ಮೂಲೆಮೂಲೆಗೂ ಪಸರಿಸಿ ತಲೆ ಧಿಂ ಎಂದಿತ್ತು. ಸೇರಿದ್ದ ಇಪ್ಪತ್ತು ಹೆಂಗಳೆಯರು ಇದ್ದ ನಾಲ್ಕು ಗಂಟೆಗಳಲ್ಲಿ ಮೂರು ಮೂರು ಬಾರಿ ಡ್ರೆಸ್ ಬದಲಾಯಿಸಿಕೊಂಡರು; ಮೇಕಪ್ ಮಾಡಲೆಂದೇ ಬ್ರಷ್ಷುಪಾಣಿಗಳ ದಂಡೊಂದು ನಿಯಮಿತವಾಗಿತ್ತು. ಇಪ್ಪತ್ತು ಲಲನೆಯರು ವಿವಿಧ ಪರ್ಮುಟೇಷನ್ & ಕಾಂಬಿನೇಷನ್ನಿನಲ್ಲಿ ಗುಂಪುಗಟ್ಟಿ ಸದರಿ ಗುಂಪುಗಳಲ್ಲಿ ಇಲ್ಲದಿದ್ದವರ ಜನ್ಮ ಜಾಲಾಡುವುದರ ಮೂಲಕ ಆನಂದತುಂದಿಲರಾಗಿದ್ದರು.

ಮರುದಿನ ಬೆಳಗ್ಗೆ ಕಣ್ಬಿಟ್ಟಾಗ ಕುರುಕ್ಷೇತ್ರ ಯುದ್ಧದ ಹತ್ತೊಂಬತ್ತನೆಯ ದಿನವನ್ನು ಕಂಡಂತಾಯಿತು. ಕುರುಕ್ಷೇತ್ರದ ರಣರಂಗವು ನೆತ್ತರಿನಿಂದ ತೋಯ್ದು ಕೆಂಪಾಗಿದ್ದರೆ ನಮ್ಮ ಮನೆಯನ್ನು ಕಂಡ ಗೀತರಚನಕಾರರು

ಕೆಂಪಾದವೋ ಎಲ್ಲ ಕೆಂಪಾದವೋ
ಬಳಸಿದ್ದ ಪ್ಲೇಟು ಸ್ಪೂನು
ಹರಡಿದ್ದ ಕಾರ್ಪೆಟ್ಟೆಲ್ಲ
ಸಾಸ್ ಮತ್ತು ಕೆಚಪ್ಪಿಂದ ಕೆಂಪಾದವೋ
ಗೋಡೆ ಡೋರ್ ಫ್ರೇಮುಗಳು ಕೆಂಪಾದವೋ

ಎಂದು ಹಾಡು ಬರೆಯುತ್ತಿದ್ದುದು ನಿಶ್ಚಿತ. ಕೆಂಪು ಬಣ್ಣಕ್ಕೆ ಕೆಚಪ್ಪು ಸಾಸ್‌ಗಳಲ್ಲದೆ ಕೆಲವರ ತುಟಿಯ ರಂಗು, ಕೆಲವರು ಬಳಿದುಕೊಂಡ ಕೆನ್ನೆಯ ರೌಜ್ ಎಲ್ಲವೂ ಕಾರಣವಾಗಿದ್ದವು. ಅರ್ಬನ್ ಕ್ಲೀನಿಂಗಿನವರು ಮೂರು ದಿನಗಳ ಕಾಲ ಮೆತ್ತಿದ ಖಾದ್ಯಗಳನ್ನೆಲ್ಲ ಗೋಡೆ, ಮೇಜು, ಕುರ್ಚಿಗಳಿಂದ ಕಿತ್ತಿ ತೆಗೆದ ನಂತರ ಇಡೀ ಹಜಾರ, ಪೀಠೋಪಕರಣಗಳಿಗೆ ಬಣ್ಣ ಹೊಡೆಸುವ, ಥಳಥಳಗೊಳಿಸುವ ಕೆಲಸವು ಮತ್ತಷ್ಟು ವಾರಗಳು ಹಿಡಿದಿದ್ದವು.

"ಈ ತಿಂಗಳ ಕಿಟ್ಟಿ ಪಾರ್ಟಿಯ ಡೇಟ್ ವುಮೆನ್ಸ್ ಡೇಯಂದು ಬೀಳುತ್ತಿದೆ. ಈ ವುಮೆನ್ಸ್ ಡೇಯ ಥೀಮ್ 'ಗಿವ್ ಟು ಗೇಯ್ನ್.' ಆ ಥೀಮಿಗೆ ಅನುಗುಣವಾಗಿ ಲೇನಾದೇನಾ ಇರುವುದು ಸೂಕ್ತ'' ಎಂದೆ; ಗತದ ಕರಾಳತೆಯನ್ನು ಕಡೆಗಣಿಸಿದ್ದೆ.

"ಮುಂದಿನ ಆಗುಹೋಗುಗಳಿಗೆ ನಾನು ಜವಾಬ್ದಾರಳಲ್ಲ'' ಎಂಬ ಡಿಸ್‌ಕ್ಲೈಮರ್ ಅನ್ನು ಮಡದಿಯು ಕೂಡಲೆ ಮುಂದಿಟ್ಟಳು. ಅಸ್ತು ಎಂದೆ.

ಮಾರ್ಚ್ ಎಂಟರ ಬೆಳಗ್ಗೆ ಮೊದಲು ಹಾಜರಾದುದು ಮಿಸ್ಟರಿ ಮೀನಾಕ್ಷಿ. ಮೀನಾಕ್ಷಿಯ ವಯಸ್ಸನ್ನು ಈವರೆಗೆ ಯಾರೆಂದರೆ ಯಾರೂ ಕಂಡುಹಿಡಿಯಲು ಸಾಧ್ಯವಾಗಿಲ್ಲವಂತೆ. ಶಾಲೆಗೊಂದು, ವರನಿಗೊಂದು,



ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com

ಸರ್ಕಾರಿ ಸವಲತ್ತಿಗೊಂದು ಎನ್ನುತ್ತಾ ಐದಾರು ಡೇಟ್ಸ್ ಆಫ್ ಬರ್ತ್ ಹೊಂದಿದ್ದ ಮೀನಾಕ್ಷಿ ಕಡೆಯ ಎರಡು ದಶಕಗಳಿಂದಲೂ ಕೆಲವರೊಡನೆ ತನಗೆ ಹದಿನೆಂಟು ವಯಸ್ಸೆಂದೂ, ಕೆಲವರೊಡನೆ ಇಪ್ಪತ್ತೊಂದು ವಯಸ್ಸೆಂದೂ ಹೇಳಿಕೊಂಡು ಬಂದಿರುವುದೇ 'ಮಿಸ್ಟರಿ ಮೀನಾಕ್ಷಿ' ಎಂಬ ಬಿರುದಿನ ಹಿನ್ನೆಲೆಯಂತೆ.

ಮೀನಾಕ್ಷಿ ಬರುತ್ತಲೇ "ಮಿಸ್ಟರ್ ಪಾಂಡು, ನಿಮ್ಮ ಕಾರ್ ಸ್ವಲ್ಪ ಬೇಕಿತ್ತಲ್ಲ. ಈ ಡ್ರೆಸ್ಸಿಗೆ ಮ್ಯಾಚ್ ಆಗೋ ಹೇರ್‌ಪಿನ್ನನ್ನ ಮನೇಲೇ ಬಿಟ್ಟಂದ್ಬಿಟ್ಟೆ'' ಎಂದಳು ಮಿನಿಮಮ್ ಡಬಲ್ ಷೋಡಶಿ.

'ಗಿವ್ ಟು ಗೇಯ್ನ್' ಥೀಮ್ ನೆನಪಾಯಿತು. ಕಾರ್ ಕೀ ಕೊಟ್ಟೆ.



ಎರಡನೆಯ ಎಂಟ್ರಿ ಪಕ್ಕದ ರಸ್ತೆಯ ರಾಕಿಂಗ್ ರಚನಾ. ಊಹೂಂ. ನೀವು ಅಂದುಕೊಂಡಂತೆ ರಚನಾ ರಾಕ್ ಸ್ಟಾರ್ ಅಲ್ಲ. ಅವಳ ತಂದೆ ಕ್ವಾರಿ ಕಂಟ್ರಾಕ್ಟರ್, ಈಕೆ ವಜ್ರದಿಂದ ಹಿಡಿದು ಸಕಲ ಅಶ್ಮಾಭರಣಗಳ ಪ್ರಿಯೆ. "ಕಲ್ಲು ಸಿಕ್ಕರೆ ಕೊಳ್ಳುವೆ; ನಾನೆಲ್ಲವೂ' ಎಂಬುದು ಅವಳ ಇಷ್ಟಗೀತೆ. 'ಒಂದು ತೊಗೊಂಡ್ರೆ ಇನ್ನೊಂದುಚಿತ' ಸ್ಕೀಮಿನಲ್ಲಿ ಎಂಟರ್ ಆದ ರಚನಾ "ಅಂಕಲ್, ನಿಮ್ಮ ರೂಮ್ ಯೂಸ್ ಮಾಡ್ಕೊಳ್ತೀನಿ'' ಎನ್ನುತ್ತಾ ಮುನ್ನಡೆದಳು. "ಪ್ಲೀಸ್ ಫೀಲ್ ಎಟ್ ಹೋಂ'' ಎಂದೆ. ಅನ್ನಬಾರದಾಗಿತ್ತು.

ಆನಂತರ ಒಬ್ಬೊಬ್ಬರಾಗಿ ಮಹಿಳಾಮಣಿಗಳು ಬಂದು, ಮಿನಿ ಗುಂಪುಗಳನ್ನು ಮಾಡಿಕೊಂಡು ತಮಗನುಕೂಲವಾದ ಕೊಠಡಿಗಳನ್ನು ಸೇರಿ, ತಮಗೆ ಅನುಕೂಲವೆನಿಸುವ ವಸ್ತುಗಳನ್ನು ಬಳಸತೊಡಗಿದರು. ಟಾನಿಯಾ ನನ್ನವಳ ಹೇರ್ ಡ್ರೈಯರ್ ಅನ್ನು ಬಳಸಿದರೆ ಮಂಗಳಾ ಅಡುಗೆಮನೆಯಿಂದ ಸೌತೆಕಾಯಿಗಳನ್ನು ತಂದು ನನ್ನ ರಿಕ್ಲೈನರ್‌ನಲ್ಲಿ ಕುಳಿತು ಆಗಷ್ಟೇ ಪಾರ್ಲರ್ ಕೋರ್ಸ್ ಮಾಡುತ್ತಿದ್ದ ರೂಪಕಲಾಳಿಗೆ ಕೊಟ್ಟು, 'ಫೇಷಿಯಲ್ ಮಾಡೇ' ಎನ್ನುತ್ತಾ ಅವಳಿಗೆ 'ಹ್ಯಾಂಡ್ಸಾನ್ ಎಕ್ಸ್‌ಪಿರೀಯನ್ಸ್' ಕೊಡಲು ಉದ್ಯುಕ್ತಳಾದಳು.

"ಕಿಟ್ಟಿ ಪಾರ್ಟಿಗೆ ಮನೆಯಿಂದಲೇ ಮೇಕಪ್ ಮಾಡ್ಕೊಂಡು ಬರೋದು ಪದ್ಧತಿ ಅಲ್ವೇ?'' ಎಂದು ಪಿಸುಪ್ರಶ್ನಿಸಿದೆ.

"ಯೂಷುಯಲಿ ಹಾಗೇ ಮಾಡ್ತಾರೆ. ಆದರೆ ಗಿವ್ ಟು ಗೇಯ್ನ್ ಥೀಮ್ ಗೋಸ್ಕರ ಹೀಗೆ'' ಎಂದಳು ಮಡದಿ.

"ವಾಟ್ ಡೂ ಯೂ ಮೀನ್?''

"ಇವರು ಅವರಿಗೆ ಅವಕಾಶವನ್ನ ಗಿವ್‌ತಾರೆ; ಅವರು ಇವರು ಸುಂದರವಾಗುವ ಅವಕಾಶವನ್ನ ಕಲ್ಪಿಸ್ತಾರೆ. ಅವರು ಎಕ್ಸ್‌ಪೀರಿಯನ್ಸ್ ಗೇಯ್ನ್ ಮಾಡ್ತಾರೆ, ಇವರು ಲುಕ್ಸ್ ಗೇಯ್ನ್ ಮಾಡ್ತಾರೆ.'' ವಿವರಿಸಿದಳು ಮನದನ್ನೆ.

ಅಂತೂ ಮಂದಿ ಸೇರಿದ ಮೂರು ಗಂಟೆಗಳಿಗೆ ಪಾರ್ಟಿ ಶುರುವಾಯಿತು. ಕೆಲವರು ಹಾಡಿದರು, ಕೆಲವರು ಹಾಡಿದೆ ಎಂದುಕೊಂಡರು. ಅಂತಹ ಹಾಡುಗಳನ್ನು ಕೇಳಿದಂತಹ ಕೆಲವರ ಮನದಲ್ಲಿ

ಅನಿಸುತಿದೆ ಯಾಕೋ ಇಂದು ಸಿಂಗಿಂಗೆ ಇಲ್ಲವು ಎಂದು
ಸ್ಟೀಲಿನ ಪ್ಲೇಟ ಮೇಲೆ ನೈಫ್ ಕೆರೆದ ಸೌಂಡ್ ಇದು ಎಂದು
ಆಹಾ ಎಂಥ ಯಾತನೆ!
ನಿಲ್ಲಿಸದಿರೆ ಇಂಥ ಸದ್ದು ಗತಿ ENTನೇ

ಎಂಬ ಸಾಲುಗಳು ಮೂಡಿರಲೇಬೇಕು. ಅರಚುಕಲೆಯ ನಂತರ ಕುಲುಕುಕಲೆಯ ಪ್ರದರ್ಶನ ಆರಂಭವಾಯಿತು. ಅದನ್ನೇ ಕೆಲವರು ಡ್ಯಾನ್ಸ್ ಎಂದು ಕರೆದರು. ಮೂರನೆಯ ಮನೋರಂಜನೆಯ ಅಂಗವಾಗಿ ಮ್ಯೂಸಿಕಲ್ ಚೇರ್ ಆಡಿದರು. ಅವರು ಆಡಿದ ರಭಸಕ್ಕೆ ಆ ಆಟಕ್ಕೆ ಮರುನಾಮಕರಣ ಮಾಡಿ 'ಕುರ್ಚಿಪುಡಿ' ಆಟ ಎನ್ನಬೇಕೆನಿಸಿತು.

ಸೇರಿದ ಆರು ಗಂಟೆಗಳ ನಂತರ ಮಹಿಳಾಮಣಿಗಳು ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡಿದರು. ಕಡೆಯ ಲಲನೆ ಹೊರನಡೆದಾಗ ರೈಲ್ವೇಯವರ ಕ್ಯಾಲೆಂಡರ್ ಬದಲಾಗಿತ್ತು. ಮೂಲಾ ನಕ್ಷತ್ರದವನಾದ ನಾನು ಆ ಲಲನೆಯರ ಚೀರಾಟ, ಚೀರಾಟ, ಗಾಳಿಮಾತುಗಳ ರಭಸಕ್ಕೆ ಸಿಲುಕಿ ಬಿರುಗಾಳಿಯಲ್ಲಿನ ತರಗೆಲೆಯಂತಾಗಿದ್ದೆ.

ಮರುದಿನ ಕಣ್ಬಿಟ್ಟಾಗ ಎಂಟು ತಿಂಗಳ ಹಿಂದಿನ ಕುರುಕ್ಷೇತ್ರವೇ ವಾಸಿಯೆನಿಸಿತ್ತು. "ಮೊದಲೇ ಹೇಳಿದ್ದೆ. ನೀವು ಕೇಳಲಿಲ್ಲ'' ಎಂದು ಕೆಂಡ ಕಾರಿದಳು ಸತಿ. "ಕಾರಣ ಇತ್ತು ಕಣೆ. ಇಲ್ಲಿ ಯಾರಾದರೂ ಚೆನ್ನಾಗಿ ಹಾಡಿದರೆ, ಕುಣಿದರೆ, ಭಾಷಣ ಮಾಡಿದರೆ ನಮ್ಮ ಕ್ಲಬ್ಬಿನ ಜನರಲ್ ಬಾಡಿ ಎಲೆಕ್ಷನ್ನಿಗೆ ಕರೆಯೋಣ ಅಂತ ಪ್ಲ್ಯಾನ್ ಹಾಕಿದ್ದೆ. ಅವರಿಗೆ ಅವಕಾಶ ಗಿವ್ವಿಸಿ ನಮ್ಮಲ್ಲಿಗೆ ನ್ಯೂ ಟ್ಯಾಲೆಂಟನ್ನು ಗೇಯ್ನ್ ಮಾಡೋಣ ಅನ್ಕೊಂಡಿದ್ದೆ. ಆದರೆ ಇಲ್ಲಿ ಹಾಡಿದವರನ್ನು ಗುಂಪು ಚದುರಿಸಲು, ಕುಣಿದವರನ್ನು ಭೂತ ಬಿಡಿಸಲು, ಭಾಷಣ ಮಾಡಿದವರನ್ನು ನಿದ್ರೆಮಾತ್ರೆಯಾಗಿ ಬಳಸಲು ಸಾಧ್ಯವಷ್ಟೆ'' ಎಂದೆ.

"ಫುಲ್ಲು ವೇಸ್ಟೂನ್ನಿ!''

"ಹಾಗೇನಿಲ್ಲ. ಮೀನಾಕ್ಷಿಗೆ ಕಾರ್ ಕೊಟ್ಟೆ; ಎರಡು ಡೆಂಟು, ಒಂದು ಸಿಗ್ನಲ್ ಜಂಪ್ ಕೇಸು ಗೇಯ್ನ್ ಆಗಿದೆ. ರಚನಾಗೆ ರೂಮ್ ಕೊಟ್ಟು 'ಫೀಲ್ ಎಟ್ ಹೋಂ' ಅಂದೆ. ಅವಳು ಬೆಡ್ ಮೇಲೆ ಒದ್ದೆ ಟವಲ್ ಹಾಕಿದಳು. ಸಿಕ್ಕ ಸಿಕ್ಕ ಕಡೆಯಲ್ಲಿ ಟಿಶ್ಯೂಗಳನ್ನ ಎಸೆದಳು. ಕಿಟಕಿಯ ಕರ್ಟನ್‌ಗೆ ಫ್ರೆಂಚ್ ಫ್ರೈಸ್ ತಿಂದು ಕೈ ಒರೆಸಿಕೊಂಡಳು. ಹೆಚ್ಚಾದ ಲಿಪ್‌ಸ್ಟಿಕ್ಕನ್ನ ಪಿಲ್ಲೋ ಕವರ್‌ನಿಂದ ಒರೆಸಿಕೊಂಡಳು. ಅಂತೂ ಅವರ ಮನೆಯಲ್ಲಿ ಹೇಗಿರ್ತಾಳೋ ಹಾಗಿದ್ದಳು. ಅವಳಿಗೆ ಸ್ವಾತಂತ್ರ್ಯ ಕೊಟ್ಟೆ, ನಾನು ಯಾರಿಗೆ ಯಾವ ಮಾತನ್ನ ಎಲ್ಲಿ ಆಡಬಾರದು ಅನ್ನೋ ಜ್ಞಾನವನ್ನ ಗೇಯ್ನ್ ಮಾಡ್ದೆ. ನನ್ನ ಕಥೆ ಹಾಗಿರಲಿ, ನೀನು ಏನು ಕೊಟ್ಟೆ, ಏನು ಪಡೆದೆ?'' ಎಂದೆ.

"ನಿಮ್ಮ ಮಾತಿಗೆ ಬೆಲೆ ಕೊಟ್ಟೆ. ಹಾಗೆ ಬೆಲೆ ಕೊಟ್ಟಿದ್ದು ಮಣ್ಣಿನ್ನೋ ಕೆಲಸ ಅನ್ನೋ ಪರಿಜ್ಞಾನವನ್ನ ಪಡೆದೆ. From give to gain to give to groan! ಒಳ್ಳೆಯ ಫಜೀತಿಯಾಯ್ತು'' ಎಂದು ಟೆರಿಬಲ್ ಸುಸ್ತಿನಲ್ಲೂ ಕೆಂಗಣ್ಣಾದಳು ಸತಿ. "ಆಮೆನ್'' ಎಂದೆ.

ಅಧ್ಯಯನಪೂರ್ಣ ಕೃತಿ 'ಔಶನಸ ಚಾಣಕ್ಯ'

ಚಾಣಕ್ಯರ ಅಸಾಧಾರಣ ವ್ಯಕ್ತಿತ್ವವನ್ನು ಒಂದೇ ಕಡೆ ಸಮಗ್ರವಾಗಿ ಕಟ್ಟಿಕೊಡುವಲ್ಲಿ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ' ಯಶಸ್ವಿಯಾಗಿದೆ. ಈ ಪುಸ್ತಕವು ಇಂದು ಬಿಡುಗಡೆಯಾಗಲಿದೆ.

▶ **ಅಶ್ವಿನಿ ಹೊದಲ**



ಭಾರತೀಯ ಇತಿಹಾಸವನ್ನು ವೈದಿಕ ಮತ್ತು ಪುರಾಣೇತಿಹಾಸ, ಪ್ರಾಚೀನ ಮತ್ತು ಮಧ್ಯಕಾಲೀನ ಹಾಗೂ ಆಧುನಿಕ ಇತಿಹಾಸ ಎಂಬುದಾಗಿ ಮೂರು ಕಾಲಘಟ್ಟದಲ್ಲಿ ವಿಶ್ಲೇಷಿಸಬಹುದು. ಶ್ರುತಿ-ಸ್ಮೃತಿಗಳು, ಧರ್ಮಸೂತ್ರಗಳ ಅನುಷ್ಠಾನವನ್ನು ರಾಮಾಯಣ-ಮಹಾಭಾರತಗಳಲ್ಲಿ ಕಾಣಬಹುದು. ಮಹಾಭಾರತದ ಕಾಲಕ್ಕೆ ಬಂದಾಗ ಅನೇಕ ಬೃಹತ್ ಸಾಮ್ರಾಜ್ಯಗಳು, ರಾಜವಂಶಗಳು, ಚಕ್ರವರ್ತಿಗಳು ಆರ್ಯಾವರ್ತವನ್ನು ಆಳಿಹೋಗಿದ್ದರು. ಕೌರವ-ಪಾಂಡವರು ಬೃಹಸ್ಪತಿನೀತಿ ಮತ್ತು ಶುಕ್ರನೀತಿಗಳನ್ನು ಸಂಪೂರ್ಣ ಅನುಸರಿಸಿದ್ದು ಇಡೀ ಮಹಾಭಾರತದುದ್ದಕ್ಕೂ ಕಾಣಬಹುದು. ಅರ್ಥನೀತಿ, ದಂಡನೀತಿ, ರಾಜನೀತಿಯಾದಿಯಾಗಿ ಸಾಮ್ರಾಜ್ಯ ಸ್ಥಾಪನೆ ಮತ್ತು ನಿರ್ವಹಣೆಗೆ ರಾಜನಾದವ ಪಾಲಿಸಬೇಕಾದ ಅನುಶಾಸನಗಳನ್ನು ಭೀಷ್ಮ ಮತ್ತು ವಿದುರರು ಮಹಾಭಾರತದಲ್ಲಿ ವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಆದರೆ ಮಹಾಭಾರತದ (ಕ್ರಿ.ಪೂ. 3102) ನಂತರದಲ್ಲಿ ಮತ್ತೊಂದು ರಾಜ್ಯಶಾಸ್ತ್ರ ಬಹಳ ಖ್ಯಾತವಾಯಿತು ಅದೇ ಚಾಣಕ್ಯನ ಅರ್ಥಶಾಸ್ತ್ರ. ತನಗಿಂತ ಪೂರ್ವದಲ್ಲಿದ್ದ ಶುಕ್ರನೀತಿ ಮತ್ತು ಬೃಹಸ್ಪತಿನೀತಿಯನ್ನು ಆಗಿನ ಕಾಲಘಟ್ಟಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಚಾಣಕ್ಯ ರಚಿಸಿದ ರಾಜನೀತಿ ಸರ್ವಕಾಲಕ್ಕೂ ಅನ್ವಯಿಸುವಂತದ್ದು. ಇಂದು ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ದೇಶಗಳು ತಮ್ಮ ರಾಷ್ಟ್ರೀಯ ನೀತಿಗಳನ್ನು ಚಾಣಕ್ಯನ ಅರ್ಥಶಾಸ್ತ್ರದ ಮೇಲೆಯೇ ರಚಿಸಿಕೊಂಡಿವೆ.

ಭಾರತ ಯುದ್ಧ ಮುಗಿದು ಪಾಂಡವರು 36 ವರ್ಷಗಳ ಆಳ್ವಿಕೆ ನಡೆಸಿದರು. ಆನಂತರದಲ್ಲಿ ಬೃಹದ್ರಥ, ಪ್ರದ್ಯೋತ, ಶಿಶುನಾಗ ವಂಶದ ರಾಜರು ಸುಮಾರು 1500 ವರ್ಷ ಮಗಧವನ್ನು ಆಳಿದರು. ಭೌಗೋಳಿಕವಾಗಿ 16 ಮಹಾಜನಪದಗಳಲ್ಲಿ ಮಗಧವು ಪ್ರಮುಖವಾಗಿತ್ತು. ಮಗಧದ ಸಾರ್ವಭೌಮತ್ವದ ಅಧಿಪತ್ಯವು ಶಿಶುನಾಗರ ನಂತರ ನಂದ ವಂಶದ ರಾಜರ ತೆಕ್ಕೆಗೆ ಬಿತ್ತು. ನಂದವಂಶದ ಕೊನೆಯ ದೊರೆ ಸುಮಾಲ್ಯನಂದನ ವಿಷಯ ಲೋಲುಪತೆಯಿಂದ ಮಹಾಜನಪದವೊಂದು ಅರಾಜಕತೆಯತ್ತ ಸಾಗುತ್ತಿದ್ದಾಗಲೇ ಗ್ರೀಕ್ ದೊರೆ ಅಲೆಕ್ಸಾಂಡರ್ ಭಾರತದ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಲು ಸಿಂಧೂನದಿಯ ಸಮೀಪ ಬೀಡುಬಿಟ್ಟಿದ್ದ. ಅಲ್ಲಿಂದ ಆರಂಭವಾಗುವುದೇ ರೋಚಕ ಇತಿಹಾಸ. ಒಳಗಿನ ರಾಜಕೀಯ ಶಿಥಿಲತೆ ಮತ್ತು ಹೊರಗಿನಿಂದ ಯವನರ ದಾಳಿ ಎರಡಕ್ಕೂ ಪರಿಹಾರವೆಂದರೆ ಅಖಂಡ ಭಾರತವನ್ನು ಏಕಚಕ್ರಾಧಿಪತ್ಯದ ಕೆಳಗೆ ತರುವುದು. ಚಾರಿತ್ರಿಕವಾಗಿ ಇದೊಂದು ಮಹತ್ವದ ಘಟ್ಟವೆನಿಸುತ್ತದೆ. ಹೊಸದೊಂದು ಬದಲಾವಣೆಯ ಅನಿವಾರ್ಯತೆಯನ್ನು ಮನಗಂಡ ಧೀಮಂತ ಮಹಾಗುರು ಚಾಣಕ್ಯರು ಮಗಧವನ್ನು ಮೋರಿಯಾ ಜನಪದದ ರಾಜಕುಮಾರನಾದ ಚಂದ್ರಗುಪ್ತನನ್ನು ಆ ಮಹಾನ್ ಕಾರ್ಯಕ್ಕೆ ತರಬೇತುಗೊಳಿಸಿದ ಪರಿ ನಿಜಕ್ಕೂ ಕುತೂಹಲಕಾರಿ. ಚಾಣಕ್ಯರ ಕಾರ್ಯವೈಖರಿ, ವಿದ್ವತ್ತು, ತಂತ್ರಗಾರಿಕೆ ಎಲ್ಲವನ್ನೂ ವಿಷದವಾಗಿ ಒಳಗೊಂಡಿರುವ ಐತಿಹಾಸಿಕ ಕಾದಂಬರಿಯೇ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ'. ಮಹಾಜನಪದಗಳ ಆಗಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ವ್ಯವಸ್ಥೆಗಳ ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ಕನ್ನಡದಲ್ಲಿ ಚಾಣಕ್ಯರ ಕುರಿತಾಗಿ ಕೆಲವು ಕಾದಂಬರಿಗಳು ಬಂದಿದ್ದರೂ ಈ ಪುಸ್ತಕ ಅವರ ಪರಿಪೂರ್ಣ ವ್ಯಕ್ತಿತ್ವವನ್ನು ಕಾಲ್ಪನಿಕವಾಗಿರಿಸದೇ ಐತಿಹಾಸಿಕ ಹಿನ್ನೆಲೆಯಲ್ಲಿ ನೈಜವಾಗಿ ಕಟ್ಟಿಕೊಡುತ್ತದೆ.



ಒಂದು ಸಾಮ್ರಾಜ್ಯ ಸ್ಥಾಪನೆ ಎಂದರೆ ಒಂದು ಸಾಲಿನಲ್ಲಿ ದಾಖಲಾಗುವ ಇತಿಹಾಸವಲ್ಲ. ಮೌರ್ಯ ಸಾಮ್ರಾಜ್ಯ ಸ್ಥಾಪನೆಯ ಮೂಲಕ ಸುಭದ್ರ ಭಾರತ ನಿರ್ಮಾಣಕ್ಕಾಗಿ ಚಾಣಕ್ಯರು ಅನುಸರಿಸಿದ ತಂತ್ರಗಾರಿಕೆ ಎಂಥವರನ್ನೂ ನಿಬ್ಬೆರಗಾಗಿಸುವಂತದ್ದು. ಸಮಸ್ತ ಆರ್ಯಾವರ್ತ, ಆರ್ಯ ಸಂಸ್ಕೃತಿಯ ಮೇಲೆ ವಿದೇಶೀಯರ ದಾಳಿಯನ್ನು ವಿರೋಧಿಸಲು, ಅವರು ಭಾರತದೊಳಗೆ ಪ್ರವೇಶಿಸದಂತೆ ತಡೆಯಲು, ಆಂತರಿಕ ಕಲಹಗಳನ್ನು ಸೃಷ್ಟಿಸಿಕೊಂಡು ವಿದೇಶೀಯರ ಕೈಗೆ ಭಾರತವನ್ನು ಒಪ್ಪಿಸಲು ಸಿದ್ಧರಾಗಿದ್ದ ದುರ್ಬಲ ರಾಜರನ್ನು ನಿರ್ಮೂಲ ಮಾಡುವಂತಹ ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದವರು ಚಾಣಕ್ಯರು. ಪ್ರಬಲವಾದ ಚಕ್ರವರ್ತಿಯೊಬ್ಬನ ನಾಯಕತ್ವದಿಂದ ಮಾತ್ರವೇ ಭಾರತದ ಐಕ್ಯತೆ ಸಾಧ್ಯವೆಂಬುದನ್ನು ಮನಗಂಡ ಚಾಣಕ್ಯರು ತಕ್ಷಶಿಲೆಯಿಂದ ಮಗಧಕ್ಕೆ ಬಂದು ದುರ್ಬಲ ರಾಜರನ್ನೆಲ್ಲ ತಂತ್ರಗಾರಿಕೆಯಿಂದ ತಮ್ಮ ಹಿಡಿತಕ್ಕೆ ತೆಗೆದುಕೊಂಡು, ಸಣ್ಣಸಣ್ಣ ಜನಪದಗಳ ಜನರನ್ನು ಒಟ್ಟುಗೂಡಿಸಿ ಗ್ರೀಕ್‌ಸೇನೆಯನ್ನು ಹಿಮ್ಮೆಟ್ಟುವಂತೆ ಮಾಡಿ, ದುಷ್ಟ ನಂದರಾಜನ ದುರಾಡಳಿತವನ್ನು ಅಂತ್ಯಗೊಳಿಸಿ, ಚಂದ್ರಗುಪ್ತನಿಂದ ಮೌರ್ಯ ಸಾಮ್ರಾಜ್ಯ ಸ್ಥಾಪಿಸಿದ ಧೀಮಂತ ವ್ಯಕ್ತಿ. ಔಶನಸವೆಂಬ ವಿಚಿತ್ರ ಮತ್ತು ನಿಗೂಢ ತಂತ್ರಗಾರಿಕೆಯೊಂದು ಪ್ರಾಚೀನದಲ್ಲಿ ಇತ್ತಾದರೂ ಅದರ ಪರಿಪೂರ್ಣ ಪ್ರಯೋಗವನ್ನು ಕೃತಿಕಾರರು ಪ್ರಪ್ರಥಮ ಬಾರಿಗೆ ಕನ್ನಡಕ್ಕೆ ಪರಿಚಯಿಸಿದ್ದಾರೆ. ಅಂದಿನ ಕಾಲಕ್ಕೆ ಕುಟಿಲ ರಾಜಕೀಯ ತಂತ್ರವಾದ ಔಶನಸ ನೀತಿಯಲ್ಲಿ ಪರಿಣತರಾಗಿದ್ದ ಬೆರಳೆಣಿಕೆಯಷ್ಟು ಜನರಲ್ಲಿ ಪ್ರಾಚಾರ್ಯ ಚಾಣಕ್ಯರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.


ಅದಾಗಲೇ ಮಗಧವು ಬಹುದೊಡ್ಡ ಸಾಮ್ರಾಜ್ಯವಾಗಿತ್ತು. ಕ್ರಯ-ವಿಕ್ರಯಗಳ ವಹಿವಾಟು ಉನ್ನತಸ್ತರದಲ್ಲಿ ಅಭಿವೃದ್ಧಿಗೊಂಡಿತ್ತು. ಪೂರ್ವದಿಂದ ಹೊರಟ ವಣಿಕರು ಕೋಸಲ, ಕಾಶೀ, ಶ್ರಾವಸ್ತಿ, ಪಾಂಚಾಲ, ಕೇಕಯದ ಮಾರ್ಗವಾಗಿ ಗಾಂಧಾರ, ಕಾಂಭೋಜದೆಡೆಗೆ ತೆರಳುತ್ತಿದ್ದರು. ಸಾರ್ಥ ಎಂಬ ಸುಸುಜ್ಜಿತ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಯೇ ರಾಜ್ಯ ಕೋಶಗಳನ್ನು ತುಂಬಿಸುವ ಆರ್ಥಿಕ ಪ್ರಮುಖ ಮೂಲವಾಗಿತ್ತು. ಸಾರ್ಥಗಳು ಮಹಾನಗರಗಳನ್ನು ಹಾದುಹೋಗುವಾಗ ನಡೆಯುವ ಚಟುವಟಿಕೆಗಳು, ಅಲ್ಲಿನ ರಕ್ಷಣಾ ವ್ಯವಸ್ಥೆ, ವಿಭಿನ್ನ ಸಂಸ್ಕೃತಿಗಳ ಮಿಶ್ರಣ, ಭಾಷಾ ಕಲೆಗಳು, ಎಲ್ಲವನ್ನೂ ಕೃತಿಕಾರರು ವಿಶೇಷವಾಗಿ ಪರಿಚಯಿಸಿದ್ದಾರೆ. ಪ್ರಾಯಶಃ ಸಾರ್ಥದ ಪರಿ ಕಲ್ಪನೆಯೇ ಚಾಣಕ್ಯರಿಗೆ ಅರ್ಥನೀತಿಯನ್ನು ಸಾರ್ವ ಕಾಲಿಕ ವಾಗಿರುವಂತೆ ರಚಿಸುವುದು ಸಾಧ್ಯವಾಯಿತು. ಮೊಘಲರು ಭಾರತವನ್ನು ಪ್ರವೇಶಿಸಿದ ನಂತರದಲ್ಲಿ ಈ ಸಾರ್ಥವೆಂಬ ವ್ಯಾಪಾರ ಪದ್ಧತಿ ಕಣ್ಣಿಗೆ ಕಾಣದಂತೆ ನಶಿಸಿತು.

ಒಂದು ರಾಷ್ಟ್ರದ ಉಳಿವಿಗೆ ಧರ್ಮಮೂಲದಿಂದ ಬರುವ ಅರ್ಥವೇ ಅತ್ಯಂತ ಪ್ರಮುಖವಾದದ್ದು. ದಂಡ ಮತ್ತು ತೆರಿಗೆ ಕೋಶಕ್ಕೆ ಮೂಲವಾದರೂ ಅದಕ್ಕೊಂದು ಚೌಕಟ್ಟು ಇರಬೇಕು. ಜನರು ಅರ್ಥ ವ್ಯವಸ್ಥೆಯಿಂದ ದೂರ ಸರಿದರೆ ಅಥವಾ ಅನಗತ್ಯ ಸ್ವೇಚ್ಛಾಕಾರ್ಯಗಳಲ್ಲಿ ನಿರತರಾದರೆ ಅದು ಇಡೀ ರಾಷ್ಟ್ರವನ್ನು ಅವನತಿಗೆ ದೂಡುತ್ತದೆ. ರಾಜನಾದವನಿಗೆ ಜಿತೇಂದ್ರಿಯತ್ವವೇ ಪ್ರಧಾನ, ಆತ ರಾಜಪೀಠವನ್ನು ಅಲಂಕರಿಸಿದರೂ ವಿಲಾಸೀಜೀವನ ನಡೆಸದೇ ಸಂನ್ಯಾಸಿಯಂತೆಯೇ ಜೀವಿಸಬೇಕು ಎಂಬುದು ಚಾಣಕ್ಯರ ತತ್ತ್ವ. ಶಿಥಿಲವಾಗುತ್ತಿದ್ದ ರಾಜಕೀಯ ವ್ಯವಸ್ಥೆಗೆ ಅವಶ್ಯವಾಗಿರಲೇಬೇಕಾದ ಆಡಳಿತಾತ್ಮಕ ಕ್ರಮಗಳು, ಸೇನಾ ವ್ಯವಸ್ಥೆ, ಗೂಢಚರ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ರಾಜತಂತ್ರಗಳು, ನೆರೆಹೊರೆ ರಾಜ್ಯಗಳೊಂದಿಗಿನ ಸೌಹಾರ್ದತೆ, ಬಾಹ್ಯ ಆಕ್ರಮಣಗಳನ್ನು ಬಗ್ಗುಬಡಿಯುವ ಆಂತರಿಕ ಭದ್ರತೆ, ರಾಜ್ಯಾಡಳಿತದಲ್ಲಿರುವ ಪ್ರತಿಯೊಬ್ಬನ ಜವಾಬ್ದಾರಿ ಮತ್ತು ಕರ್ತವ್ಯಗಳು, ಎಲ್ಲವನ್ನೂ ಚಾಣಕ್ಯರು ಹೇಗೆ ನಿರ್ವಹಿಸಿದರು ಎಂಬುದನ್ನು ಪುಸ್ತಕ ಓದಿಯೇ ತಿಳಿಯಬೇಕು.

ಪ್ರಬಲ ಮತ್ತು ಸದೃಢ ರಾಷ್ಟ್ರನಿರ್ಮಾಣಕ್ಕಾಗಿ ತಮ್ಮ ಇಡೀ ಜೀವನವನ್ನೇ ವಿನಿಯೋಗಿಸಿಕೊಂಡವರು ಆಚಾರ್ಯ ಚಾಣಕ್ಯರು. ಅವರ ಇಡೀ ಜೀವನವೇ ಅಧ್ಯಯನಕ್ಕೆ ಯೋಗ್ಯವಾದ್ದು. ಆರ್ಯಸಂಸ್ಕೃತಿ, ಆರ್ಯಪರಂಪರೆ, ಆರ್ಯದೇಶವನ್ನು ಸದಾ ಏಕತ್ರವಾಗಿರಿಸಲು ಶ್ರಮಿಸಿದ ಅಸಾಧಾರಣ ವ್ಯಕ್ತಿತ್ವವನ್ನು ಒಂದೇ ಕಡೆ ಸಮಗ್ರವಾಗಿ ಕಟ್ಟಿಕೊಡುವಲ್ಲಿ ಸದ್ಯೋಜಾತ ಭಟ್ಟರ 'ಔಶನಸ ಚಾಣಕ್ಯ' ಯಶಸ್ವಿಯಾಗಿದೆ. ಪ್ರತಿಯೊಂದು ಅಧ್ಯಾಯವು ರೋಮಾಂಚನವನ್ನುಂಟುಮಾಡುತ್ತದೆ. ಓದುಗನ ಮನಸ್ಸನ್ನು ಅಂದಿನ ಕಾಲಕ್ಕೆ ಕೊಂಡೊಯ್ದು ವಿಹರಿಸುವಂತೆ ಮಾಡುವುದಂತೂ ಸತ್ಯ. ಚಾಣಕ್ಯರನ್ನು ಧಾರಾವಾಹಿಗಳಲ್ಲೋ, ಚಲನಚಿತ್ರಗಳಲ್ಲೋ ಕಾಲ್ಪನಿಕವಾಗಿ ಚಿತ್ರಿಸಿಕೊಂಡು ಅವರ ವ್ಯಕ್ತಿತ್ವವನ್ನು ಸಂಕುಚಿತಗೊಳಿಸಿ ಇದಮಿತ್ಥಂ ಎಂದು ತಿಳಿಯುವುದರ ಬದಲಾಗಿ ಚಾಣಕ್ಯರ ನೈಜವ್ಯಕ್ತಿತ್ವವನ್ನು ಅರಿಯಲು ಇತಿಹಾಸಕಾರರಾದ ಸದ್ಯೋಜಾತ ಭಟ್ಟರ ಅಧ್ಯಯನಪೂರ್ಣ ಕೃತಿ 'ಔಶನಸ ಚಾಣಕ್ಯ'ವನ್ನು ಎಲ್ಲರೂ ಓದಲೇಬೇಕೆಂಬ ಆಗ್ರಹ ನನ್ನದು. ಇಂದು ಬಿಡುಗಡೆಯಾಗುತ್ತಿರುವ ಕನ್ನಡ ಸಾಹಿತ್ಯಲೋಕಕ್ಕೆ ಅತ್ಯುತ್ತಮ ಕಾಣಿಕೆಯಾದ ಕೃತಿಗೆ ಮತ್ತು ಕೃತಿಕಾರರಿಗೆ ಅಭಿನಂದನೆಗಳು.

ಜನೌಷಧಿ ಅಗ್ಗವೂ ಹೌದು, ವಿಶ್ವಾಸಾರ್ಹವೂ ಹೌದು; ಉಳಿತಾಯದೊಂದಿಗೆ ಆರೋಗ್ಯ ರಕ್ಷಣೆ

▶ **ಜೆ.ಪಿ.ನಡ್ಡಾ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು**



ಒಂದು ರಾಷ್ಟ್ರದ ಪ್ರಗತಿಯ ನಿಜವಾದ ಅಳತೆಗೋಲು ಅಲ್ಲಿನ ನಾಗರಿಕರು ಆರೋಗ್ಯ ರಕ್ಷಣೆಯಂತಹ ಮೂಲಭೂತ ಆವಶ್ಯಕತೆಗಳನ್ನು ಎಷ್ಟು ಸುಲಭವಾಗಿ ಪಡೆಯುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ದಶಕಗಳ ಕಾಲ, ಔಷಧಿಗಳ ಹೆಚ್ಚಿನ ಬೆಲೆಯು ಭಾರತದ ಲಕ್ಷಾಂತರ ಜನರ ಆರೋಗ್ಯ ಮತ್ತು ಕ್ಷೇಮಕ್ಕೆ ಪ್ರಮುಖ ಆರ್ಥಿಕ ಅಡಚಣೆಯಾಗಿತ್ತು. ಈ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಪ್ರಾರಂಭವಾದ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (ಪಿಎಂಬಿಜೆಪಿ), ಬ್ರಾಂಡೆಡ್ ಔಷಧಿಗಳಿಗಿಂತ ಗಣನೀಯವಾಗಿ ಕಡಿಮೆ ಬೆಲೆಗೆ ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಒದಗಿಸುವ ಮೂಲಕ ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿನ ನಿರ್ಣಾಯಕ ಕೊರತೆಯನ್ನು ನೀಗಿಸಿದೆ. ಆಳವಾದ ವ್ಯವಸ್ಥಿತ ಬದಲಾವಣೆಯನ್ನು ತಂದಿದೆ.

ಜಾಗತಿಕವಾಗಿ, ಜೆನೆರಿಕ್ ಔಷಧಿಗಳು ಸುಲಭವಾಗಿ ಲಭ್ಯವಾಗುವ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿವೆ. ಪ್ರಪಂಚದಾದ್ಯಂತ ಶೇ.80-90 ರಷ್ಟು ವೈದ್ಯರು ಬರೆಯುವ ಚೀಟಿಗಳಲ್ಲಿ ಇವುಗಳೇ ಇರುತ್ತವೆ. ಅಗತ್ಯ ಔಷಧಿಗಳ ಲಭ್ಯತೆಯನ್ನು ವಿಸ್ತರಿಸುವಲ್ಲಿ ಇವು ನಿರ್ಣಾಯಕ ಪಾತ್ರ ವಹಿಸಿವೆ. ಜೆನೆರಿಕ್ ಔಷಧಿಗಳು ಪ್ಯಾಕೇಜಿಂಗ್, ಲೇಬಲಿಂಗ್ ಮತ್ತು ನಿಷ್ಕ್ರಿಯ ಘಟಕಾಂಶಗಳಲ್ಲಿ ವ್ಯತ್ಯಾಸ ಹೊಂದಿರಬಹುದು, ಆದರೆ ಇವುಗಳು ಅವುಗಳ ಚಿಕಿತ್ಸಕ ಪರಿಣಾಮದ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಅಧ್ಯಯನಗಳು ತೋರಿಸಿವೆ. ಇವು ಡೋಸೇಜ್, ಸುರಕ್ಷತೆ, ಸಾಮರ್ಥ್ಯ, ಗುಣಮಟ್ಟ ಮತ್ತು ಉದ್ದೇಶಿತ ಬಳಕೆಯ ವಿಷಯದಲ್ಲಿ ಬ್ರಾಂಡೆಡ್ ಔಷಧಿಗಳಿಗೆ ಸಮನಾಗಿರುತ್ತವೆ ಮತ್ತು ಅದೇ ಕಟ್ಟುನಿಟ್ಟಾದ ಉತ್ಪಾದನಾ ಮತ್ತು ಗುಣಮಟ್ಟದ ಮಾನದಂಡಗಳನ್ನು ಅನುಸರಿಸುತ್ತವೆ.

ಪಿಎಂಬಿಜೆಪಿ ಎನ್ನುವುದು ಕೇವಲ ಚಿಲ್ಲರೆ ವ್ಯಾಪಾರದ ಒಂದು ವಿಧಾನವಲ್ಲ; ಇದು ಭಾರತದ ಆರೋಗ್ಯ ವ್ಯವಸ್ಥೆಯ ರಚನಾತ್ಮಕ ಬಲವರ್ಧನೆಯನ್ನು ಪ್ರತಿನಿಧಿಸುತ್ತದೆ. ಇದು ಈ ವರ್ಷದ ಜನೌಷಧಿ ಸಪ್ತಾಹದ ವಿಷಯವಾದ "ಜನೌಷಧಿ ಸಸ್ತೀ ಭೀ, ಭರೋಸೆಮಂದ್ ಭೀ, ಸೇಹತ್ ಕಿ ಬಾತ್, ಬಚತ್ ಕೆ ಸಾತ್'' (ಜನೌಷಧಿ ಅಗ್ಗವೂ ಹೌದು, ವಿಶ್ವಾಸಾರ್ಹವೂ ಹೌದು, ಉಳಿತಾಯದೊಂದಿಗೆ ಆರೋಗ್ಯದ ರಕ್ಷಣೆ) ಎಂಬುದರಲ್ಲಿ ಪ್ರತಿಫಲಿಸುತ್ತದೆ, 18,000 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳ ನಿರಂತರವಾಗಿ ವಿಸ್ತರಿಸುತ್ತಿರುವ ಜಾಲದ ಮೂಲಕ, ಈ ಯೋಜನೆಯು ಔಷಧಿಗಳು ಮಾರುಕಟ್ಟೆ ದರಕ್ಕಿಂತ ಶೇ.50ರಿಂದ 80ರಷ್ಟು ಕಡಿಮೆ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಿದೆ. ಇದು ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಕುಟುಂಬಗಳಿಗೆ ಬೆಂಬಲ ನೀಡುತ್ತಿದೆ.

ಈ ಯೋಜನೆಯ ಪ್ರಮಾಣವು ಅದರ ಉತ್ಪನ್ನಗಳ ಪಟ್ಟಿಯಲ್ಲಿಯೂ ಕಂಡುಬರುತ್ತದೆ. ಜನೌಷಧಿಯು 29 ವಿಭಿನ್ನ ಚಿಕಿತ್ಸಾ ಕ್ಷೇತ್ರಗಳನ್ನು ಒಳಗೊಂಡಿರುವ 2,110 ಔಷಧಿಗಳು ಮತ್ತು 315 ಶಸ್ತ್ರಚಿಕಿತ್ಸಾ ಉತ್ಪನ್ನಗಳ ಬೃಹತ್ ಸಂಗ್ರಹವನ್ನು ಹೊಂದಿದೆ. ಭಾರತೀಯ ಔಷಧಗಳು ಮತ್ತು ವೈದ್ಯಕೀಯ ಸಾಧನಗಳ ಬ್ಯೂರೋ (ಪಿಎಂಬಿಐ) ನೇರ ಉಸ್ತುವಾರಿಯಲ್ಲಿ, ಈ ಉತ್ಪನ್ನಗಳ ವಿಸ್ತರಣೆಯು ಮಾರುಕಟ್ಟೆ ವಿಶ್ಲೇಷಣೆ, ಪಾಲುದಾರರ ತೊಡಗಿಸಿಕೊಳ್ಳುವಿಕೆ ಮತ್ತು ಸಮರ್ಪಿತ ತಜ್ಞರ ಸಮಿತಿಯ ಕಟ್ಟುನಿಟ್ಟಿನ ಮೇಲ್ವಿಚಾರಣೆಯನ್ನು ಒಳಗೊಂಡಿರುವ ಒಂದು ಕ್ರಿಯಾತ್ಮಕ ಮತ್ತು ದತ್ತಾಂಶ ಆಧಾರಿತ ಪ್ರಕ್ರಿಯೆಯಾಗಿದೆ. ಇದು ಯೋಜನೆಯು ದೇಶದ ಬದಲಾಗುತ್ತಿರುವ ಆರೋಗ್ಯ ಅವಶ್ಯಕತೆಗಳು ಮತ್ತು ಔಷಧೀಯ ಬೇಡಿಕೆಗಳಿಗೆ ಅನುಗುಣವಾಗಿರುವುದನ್ನು ಖಚಿತಪಡಿಸುತ್ತದೆ. ಬಲವಾದ ನಿಯಂತ್ರಕ ಮೇಲ್ವಿಚಾರಣೆಯೊಂದಿಗೆ, ಭಾರತೀಯ ಔಷಧ ಕಂಪನಿಗಳು ಅಮೆರಿಕ, ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟದಂತಹ ಕಟ್ಟುನಿಟ್ಟಾದ ಮಾರುಕಟ್ಟೆಗಳು ಸೇರಿದಂತೆ 200ಕ್ಕೂ ಹೆಚ್ಚು ದೇಶಗಳಲ್ಲಿ ವಿಶ್ವಾಸಾರ್ಹ ಪೂರೈಕೆದಾರರಾಗಿ ಬೆಳೆದಿವೆ. ಭಾರತೀಯ ಔಷಧ ಕಂಪನಿಗಳು ಲ್ಯಾಟಿನ್ ಅಮೆರಿಕ, ಆಫ್ರಿಕಾ ಮತ್ತು ಪೂರ್ವ ಯುರೋಪಿನಂತಹ ಉದಯೋನ್ಮುಖ ಮಾರುಕಟ್ಟೆಗಳಿಗೂ ವಿಸ್ತರಿಸುತ್ತಿವೆ.

ಈ ಉದ್ಯಮವು 'ಬಯೋಸಿಮಿಲರ್ಸ್', ಜೈವಿಕ ಔಷಧಿಗಳ ಜೆನೆರಿಕ್ ಆವೃತ್ತಿಗಳ ಮೇಲೆ ಗಮನ ಹರಿಸುತ್ತಿದೆ, ಜತೆಗೆ ಸಂಕೀರ್ಣ ಜೆನೆರಿಕ್ಸ್ ಮತ್ತು ವಿಶೇಷ ಔಷಧಿಗಳನ್ನು ತಯಾರಿಸಲು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚಿನ ಹೂಡಿಕೆ ಮಾಡುತ್ತಿದೆ.ಈ ದೂರದೃಷ್ಟಿಯ ಯೋಜನೆಗಳು ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವಾಗಿ ಮಾತ್ರವಲ್ಲದೆ, ಕೈಗೆಟುಕುವ ಔಷಧಿ ಕ್ಷೇತ್ರದಲ್ಲಿ ಭವಿಷ್ಯದ ನಾವೀನ್ಯತೆ ನಾಯಕನನ್ನಾಗಿ ರೂಪಿಸುತ್ತಿವೆ.

ಬಹು-ಪದರದ ಗುಣಮಟ್ಟ ಭರವಸೆ ಚೌಕಟ್ಟಿನ ಮೂಲಕ, 'ಕಡಿಮೆ ಬೆಲೆ ಎಂದರೆ ಉತ್ಪಾದನಾ ಗುಣಮಟ್ಟದಲ್ಲಿ ರಾಜಿ' ಎಂಬ ಮಿಥ್ಯೆಯನ್ನು ಪಿಎಂಬಿಜೆಪಿ ಪರಿಣಾಮಕಾರಿಯಾಗಿ ತೊಡೆದುಹಾಕಿದೆ. ಜಾಗತಿಕ ಉತ್ಪಾದನಾ ಮಾನದಂಡಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ಡಬ್ಲ್ಯುಎಚ್ ಒ-ಜಿಎಂಪಿ ಪ್ರಮಾಣೀಕೃತ ತಯಾರಕರಿಂದ ಔಷಧಿಗಳನ್ನು ಖರೀದಿಸಲಾಗುತ್ತದೆ. ಪ್ರತಿ ಬ್ಯಾಚ್ ಔಷಧಿಯು ಔಷಧಾಲಯದ ಶೆಲ್ಫ್ ತಲುಪುವ ಮೊದಲು ರಾಷ್ಟ್ರೀಯ ಪರೀಕ್ಷೆ, ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತೆ ಮಂಡಳಿ (ಎನ್‌ಎಬಿಎಲ್) ಅನುಮೋದಿತ ಪ್ರಯೋಗಾಲಯಗಳಲ್ಲಿ ಕಟ್ಟುನಿಟ್ಟಾದ ಮೌಲ್ಯೀಕರಣಕ್ಕೆ ಒಳಗಾಗಬೇಕು ಎಂಬುದು ನಿಯಮವಾಗಿದೆ. ಈ ಔಷಧಗಳು ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ, 1940 ಅನ್ನು ಅನುಸರಿಸುತ್ತವೆ. ಲಭ್ಯತೆ, ಗುಣಮಟ್ಟ ಮತ್ತು ಕೈಗೆಟುಕುವ ದರ ಎಂಬ ಮೂರು ಸ್ತಂಭಗಳ ಮೇಲೆ ಕೇಂದ್ರೀಕರಿಸುವ ಮೂಲಕ, ಪಿಎಂಬಿಜೆಪಿ ಲಕ್ಷಾಂತರ ಜನರ ವೈದ್ಯಕೀಯ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಿದೆ. ನಿರಂತರ ಸಾಂಸ್ಥಿಕ ಬೆಂಬಲ, ಹೆಚ್ಚುತ್ತಿರುವ ಸಾರ್ವಜನಿಕ ಜಾಗೃತಿ ಮತ್ತು ಮತ್ತಷ್ಟು ಮೂಲಸೌಕರ್ಯ ಸುಧಾರಣೆಗಳೊಂದಿಗೆ, ಪ್ರತಿ ಜಿಲ್ಲೆಯಲ್ಲಿ 'ಜನೌಷಧಿ ಕೇಂದ್ರ' ಎಂಬ ದೃಷ್ಟಿಕೋನವು ಈಗ ಕೇವಲ ಆಶಯವಾಗಿ ಉಳಿದಿಲ್ಲ?ಅದು ನನಸಾಗುತ್ತಿರುವ ವಾಸ್ತವವಾಗಿದೆ.

ಕಿರುಸುದ್ದಿ

ಕೆನರಾ ಸಂಧ್ಯಾ ಕಾಲೇಜಿನಲ್ಲಿ ರ‍್ಯಾಂಕ್ ವಿಜೇತ ವಿದ್ಯಾರ್ಥಿಗೆ ಸನ್ಮಾನ



ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ ಜೂನ್–ಜುಲೈ 2025ರಲ್ಲಿ ನಡೆಸಿದ ಅಂತಿಮ ಬಿ.ಕಾಂ. ಪದವಿ ಪರೀಕ್ಷೆಯಲ್ಲಿ ಮೂರನೇ ರ‍್ಯಾಂಕ್ ಪಡೆದ ಮಂಗಳೂರಿನ ಕೆನರಾ ಸಂಧ್ಯಾ ಕಾಲೇಜಿನ ಆಚಲ್ ಪ್ರವೀಣ್ ಉಳ್ಳಾಲ್ ಅವರನ್ನು ಆಡಳಿತ ಮಂಡಳಿಯ ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯ ಬಸ್ತಿ ಪುರುಷೋತ್ತಮ ಶೆಣೈ, ಕಾಲೇಜಿನ ಸಂಚಾಲಕ ಸಿಎ ಎಂ. ವಾಮನ ಕಾಮತ್ ಹಾಗೂ ಪ್ರಾಂಶುಪಾಲೆ ಪ್ರೊ. ಅನಿಲಾ ಕಾಮತ್ ಉಪಸ್ಥಿತರಿದ್ದರು.

ಕೆಲಸಕ್ಕೆ ಹೋದ ಮಹಿಳೆ ನಾಪತ್ತೆ

ಉಡುಪಿ: ಕಲ್ಸಂಕದ ಮಾಂಡವಿ ಸ್ಟೇರ್ ಮಾಲ್‌ನಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆ. ಬಾಗಲಕೋಟೆ ಮೂಲದ, ನಿಟ್ಟೂರು ನಿವಾಸಿ ದೀಪಾ (34) ನಾಪತ್ತೆಯಾದವರು. ಮಾ. 3ರಂದು ಕೆಲಸಕ್ಕೆ ತೆರಳಿದ್ದ ಇವರು ಸಂಜೆಯಾದರೂ ಮನೆಗೆ ಮರಳಿಲ್ಲ. ವಿಚಾರಿಸಿದಾಗ ಅಂದು ಇವರು ಕೆಲಸಕ್ಕೂ ಹಾಜರಾಗಿಲ್ಲ ಎಂದು ತಿಳಿದು ಬಂದಿದೆ. ಮೊಬೈಲ್ ಫೋನ್ ಅನ್ನು ಮನೆಯಲ್ಲೇ ಬಿಟ್ಟು ಹೋಗಿದ್ದು, ಎಲ್ಲಿಯೂ ಪತ್ತೆಯಾಗಿಲ್ಲ. ಪತಿ ನಾಗಯ್ಯ ನೀಡಿದ ದೂರಿನಂತೆ ಉಡುಪಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟಪಾಡಿ ಬಸ್ ನಿಲ್ದಾಣದಲ್ಲಿ ವ್ಯಕ್ತಿ ಮೃತದೇಹ ಪತ್ತೆ

ಉಡುಪಿ: ಕಟಪಾಡಿಯ ಸರ್ವಿಸ್ ಬಸ್ ನಿಲ್ದಾಣದಲ್ಲಿ ಕೂಲಿ ಕಾರ್ಮಿಕನೊಬ್ಬನ ಮೃತದೇಹ ಪತ್ತೆಯಾಗಿದೆ. ಬಾಗಲಕೋಟೆ ಜಿಲ್ಲೆಯ ಬಾದಮಿ ಮೂಲದ ಕನಕಪ್ಪ (30) ಮೃತಪಟ್ಟ ವ್ಯಕ್ತಿ. ಕಳೆದ 4 ತಿಂಗಳಿನಿಂದ ಉಡುಪಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಇವರಿಗೆ ಮದ್ಯಪಾನದ ಹವ್ಯಾಸವಿತ್ತು ಎನ್ನಲಾಗಿದೆ. ಮಾ. 4ರಂದು ಮಧ್ಯಾಹ್ನ ಬಸ್ ನಿಲ್ದಾಣದಲ್ಲಿ ಮಲಗಿದ್ದ ಇವರು ಎಬ್ಬಿಸಲು ಹೋದಾಗ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಮೃತರ ತಂದೆ ಭೀಮಪ್ಪ ಮನ್ನೂರ ನೀಡಿದ ದೂರಿನಂತೆ ಕಾಪು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಅಳಿಕೆ ಫ್ರೆಂಡ್ಸ್ (ರಿ) ಗಂಜಿಮಠ ಹಾಗೂ ಊರ ಹತ್ತು ಸಮಸ್ತರು, ಅಳಿಕೆ ಪದವು, ವಯಾ ಗಂಜಿಮಠ.
2. ಶ್ರೀ ದುರ್ಗಾಪರಮೇಶ್ವರೀ ಭಕ್ತ ವೃಂದ, ಸಜಿಪ ಮಾಗಣೆ, ಸಜಿಪ ಮೂಡ, ಬಂಟ್ವಾಳ (ತಾ).
3. ಭಾರತ್ ಬೀಡಿ, ಶುಭ ಬೀಡಿ ಕಾರ್ಮಿಕರು ಮತ್ತು ಹತ್ತು ಸಮಸ್ತರು, ಅಡ್ಡೂರಿನಲ್ಲಿ.
4. ನೀಲಾಧರ್ ಬಿ. ಶೆಟ್ಟಿಗಾರ್, 'ಸಾಯಿ ನಿವಾಸ', ತಾಳಿಪಾಡಿ ವಯಾ ಕಿನ್ನಿಗೋಳಿ.
5. ದೊಡ್ಡಣ್ಣ ಶೆಟ್ಟಿ, ಗುಂಡಿಂಜ, 'ದೇವಿಪ್ರಸಾದ್', ಸಣ್ಣಮುಂಡಬೆಟ್ಟು, ಮೂಡುಪೆರಾರ.
6. ಅಜ್ಜಿಬೆಟ್ಟುಪದವು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಅಜ್ಜಿಬೆಟ್ಟು, ವಾಮದಪದವು.
7. ಎರ್ಮಾಳ್ ಗಣಪತಿ ಭಟ್, 'ವಿಘ್ನೇಶ್', ಎರ್ಮಾಳ್, ಅದಮಾರು ರಸ್ತೆ, ಉಚ್ಚಿಲ, ಕಾಪು.

ಶ್ರೀ ಧರ್ಮಸ್ಥಳ ಮೇಳ
ಮಾಸ್ತಿಕಟ್ಟೆಯಲ್ಲಿ
ಹತ್ತು ಸಮಸ್ತರು, ಮಾಸ್ತಿಕಟ್ಟೆ

ಶ್ರೀ ಸಾಲಿಗ್ರಾಮ ಮೇಳ
ಹೆಬ್ರಿ ಬೇಳಂಜೆಯಲ್ಲಿ ಕಾಲಮಿತಿ ಯಕ್ಷಗಾನ
ರಾತ್ರಿ 8ರಿಂದ - **ಮಹಾಮಂತ್ರಿ ದುಷ್ಟಬುದ್ಧಿ**

ಶ್ರೀ ಪೆರ್ಡೂರು ಮೇಳ
ಸಂತೆಗುಲಿಯ ಮಹಾಸತಿ ಕ್ರೀಡಾಂಗಣ:
ಹರ ಹರ ಶಂಕರ

ಶ್ರೀ ಹನುಮಗಿರಿ ಮೇಳ
ಬ್ರಹ್ಮಾವರ ಚೇರ್ಕಾಡಿಯಲ್ಲಿ

ಶ್ರೀ ಪಾವಂಜೆ ಮೇಳ
ಬಂಟ್ವಾಳ ಜಕ್ರಿಬೆಟ್ಟು ಗೋವಿಂದ ರೆಸಿಡೆನ್ಸಿಯ ಎದುರುಗಡೆ- **ಶ್ರೀ ದೇವಿ ಮಹಾತ್ಮೆ**



ಮುಲ್ಕಿ ಲಿಂಗಪ್ಪಯ್ಯ ಕಾಡಿನ 40ನೇ ವರ್ಷದ ಶ್ರೀ ಚನ್ನ ಮಲ್ಲಿಕಾರ್ಜುನ ಮಠದ ಜಾತ್ರಾ ಮಹೋತ್ಸವದ ಪ್ರಯುಕ್ತ ವಾರ್ಷಿಕ ಹೋಳಿ ಆಚರಣೆಯನ್ನು ಶ್ರೀ ಮಠದ ಬಳಿ ಆಚರಿಸಲಾಯಿತು. ಶ್ರೀಮಠದ ಅಧ್ಯಕ್ಷ ವಿಠಲ್ ಎನ್. ಎಂ., ಭೀಮಶಂಕರ ಆರ್. ಕೆ., ಉಮೇಶ್ ಮುಲ್ಕಿ, ಶಿವಾನಂದ ಆರ್. ಕೆ., ಮಂಜುನಾಥ್ ಮೋರಟಗಿ, ಸಾಗರ್, ತಿರುಪತಿ, ದೇವಿಪ್ರಸಾದ್, ಪಾಂಡುರಂಗ, ರಾಘು ಮನೂರ್, ನಂಜುಂಡ, ರಾಹುಲ್, ಜಟ್ಟಿಂಗರಾಯ, ಪ್ರಶಾಂತ್ ಬಿಕೆ, ಪ್ರವೀಣ್ ಅಲ್ಲೂರು ಹಾಗೂ ಶ್ರೀಮಠದ ಸದ್ಭಕ್ತರು ಸೇರಿ ಆಚರಣೆ ಮಾಡಿದರು.

ಹೆಮ್ಮಾಡಿಯ ಜಾದೂಗಾರ ಪ್ರಕಾಶ್ ಹೆಮ್ಮಾಡಿ 'ಹೌದಿನಿ ಮಿಲ್ಕ್ ಕ್ಯಾನ್ ಎಸ್ಕೇಪ್' ಜಾದೂ

ಕುಂದಾಪುರ: ಜಾದೂ ಇತಿಹಾಸದ ದಂತಕಥೆ ಜಾದೂಗಾರ ಹ್ಯಾರಿ ಹೌದಿನಿಯವರ 100 ನೇ ಪುಣ್ಯಸ್ಮರಣೆ ಕೇರಳದ ತಿರುವಂತಪುರದಲ್ಲಿ ನಡೆದಿದ್ದು, ಈ ಕಾರ್ಯಕ್ರಮದಲ್ಲಿ ಹೆಮ್ಮಾಡಿಯ ಜಾದೂಗಾರ ಪ್ರಕಾಶ್ ಹೆಮ್ಮಾಡಿಯವರು 'ಹೌದಿನಿ ಮಿಲ್ಕ್ ಕ್ಯಾನ್ ಎಸ್ಕೇಪ್' ಜಾದೂ ಪ್ರದರ್ಶಿಸಿ, ಎಲ್ಲರ ಗಮನಸೆಳೆದಿದ್ದಾರೆ ಎಂದು ವಿಠ್ಠಲ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಪ್ರವರ್ತಕ ಕೊರ್ಗಿ ವಿಠ್ಠಲ್ ಶೆಟ್ಟಿ ಹೇಳಿದರು.



ಅವರು ಶುಕ್ರವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ದೇಶದ ವಿವಿಧ ರಾಜ್ಯಗಳಿಂದ ಜಾದೂಗಾರರು ಭಾಗವಹಿಸಿದ್ದ ಈ ಪ್ರದರ್ಶನದಲ್ಲಿ 'ಹೌದಿನಿ ಮಿಲ್ಕ್ ಕ್ಯಾನ್ ಎಸ್ಕೇಪ್' ಜಾದೂ ಪ್ರದರ್ಶಿಸಲು ಪ್ರಕಾಶ್ ಹೆಮ್ಮಾಡಿ ಅವರಿಗೆ ಅವಕಾಶ ದೊರಕಿರುವುದು ಹೆಮ್ಮೆಯ ಸಂಗತಿ. ಕಳೆದ 25 ವರ್ಷಗಳಿಂದ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಇವರು ಈವರೆಗೆ ಸುಮಾರು 4 ಸಾವಿರಕ್ಕೂ ಮಿಕ್ಕಿ ಪ್ರದರ್ಶನವನ್ನು ನೀಡಿ ಎಲ್ಲರ ಗಮನ ಸೆಳೆದಿದ್ದಾರೆ ಎಂದರು.

ಹೌದಿನಿ ಮಿಲ್ಕ್ ಎಸ್ಕೇಪ್ ಜಾದೂ ಬಗ್ಗೆ ಪ್ರಕಾಶ್ ಹೆಮ್ಮಾಡಿ ಮಾಹಿತಿ ನೀಡಿ, ಇದೊಂದು 118 ವರ್ಷಗಳ ಹಿಂದೆ ಹ್ಯಾರಿ ಹೌದಿನಿ ಪ್ರದರ್ಶಿಸಿದ ಸಾಹಸಮಯ ಜಾದೂ ಆಗಿದ್ದು, ವಿಶ್ವದಲ್ಲಿ 4 ರಿಂದ 5 ಮಂದಿ ಜಾದುಗಾರರು ಮಿಲ್ಕ್ ಕ್ಯಾನ್ ಎಸ್ಕೇಪ್ ಜಾದೂ ಪ್ರದರ್ಶಿಸಿದ್ದರೆ, 2002ರಲ್ಲಿ ದೇಶದಲ್ಲಿಯೇ ನಾನು ಮೊದಲ ಬಾರಿಗೆ ಪ್ರದರ್ಶಿಸಿದ್ದೇನೆ. ಸರಪಳಿಗಳಿಂದ ಬಂಧಿಸಲ್ಪಟ್ಟು, 150 ಲೀಟರ್ ನೀರು ತುಂಬಿದ ಹಾಲಿನ ಕ್ಯಾನ್‌ನೊಳಗೆ ಮಾಯವಾಗುವ ಜಾದೂ ಇದಾಗಿದ್ದು, ಆ ಬಳಿಕ ಹೊರಬಂದು, ಎಲ್ಲರನ್ನು ಬೆರಗುಗೊಳಿಸುವ ಭಯಾನಕ ಅಪಾಯಕಾರಿ ಜಾದೂ ಎಂದವರು ತಿಳಿಸಿದರು.

ಪ್ರಕಾಶ್ ಹೆಮ್ಮಾಡಿ ಪತ್ನಿ ನೇತ್ರಾವತಿ ಹೆಮ್ಮಾಡಿ, ಕುಂದಾಪುರ ನಾಗರಾಜ್, ಹಟ್ಟಿಯಂಗಡಿ ಮೇಳದ ರಂಜಿತ್ ಶೆಟ್ಟಿ ವಕ್ವಾಡಿ ಸುದ್ದಿಗೋಷ್ಠಿಯಲ್ಲಿದ್ದರು.

ಕಾಸರಗೋಡು ಜಿಲ್ಲೆಯಲ್ಲಿ ಆಪರೇಷನ್ ಸೈ–ಹಂಟ್ ಪ್ರಕಾರ ವ್ಯಾಪಕ ದಾಳಿ: 36 ಪ್ರಕರಣ ದಾಖಲು

34 ಆನ್‌ಲೈನ್ ವಂಚಕರ ಬಂಧನ

ಕಾಸರಗೋಡು: ಜಿಲ್ಲೆಯಲ್ಲಿ ಆನ್‌ಲೈನ್ ವಂಚನಾ ಜಾಲ ವ್ಯಾಪಕಗೊಂಡಿದೆ. ಆದರಂತೆ ಆನ್‌ಲೈನ್ ಮೂಲಕ ಹಣಕಾಸಿನ ವಂಚನೆ ನಡೆಸುತ್ತಿರುವ ವಂಚಕರಿಗಾಗಿ ಬಾಡಿಗೆಗೆ ಬ್ಯಾಂಕ್ ಖಾತೆಗಳನ್ನು ನೀಡುವವರನ್ನು ಪತ್ತೆಹಚ್ಚಲು ಆಪರೇಷನ್ ಸೈ – ಹಂಟ್ ಎಂಬ ಹೆಸರಿನಲ್ಲಿ ಪೊಲೀಸರು ವ್ಯಾಪಕ ಕಾರ್ಯಾಚರಣೆ ಆರಂಭಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ 36 ಕೇಸುಗಳನ್ನು ದಾಖಲಿಸಿಕೊಳ್ಳಲಾಗಿದೆ. ಅಲ್ಲದೆ 34 ಮಂದಿಯನ್ನು ಬಂಧಿಸಲಾಗಿದೆ. ಈ ಪೈಕಿ ಅತೀ ಹೆಚ್ಚು ಎಂಬಂತೆ ಕಾಸರಗೋಡು ನಗರ ಪೊಲೀಸ್ ಠಾಣೆಯಲ್ಲಿ 12 ಪ್ರಕರಣಗಳನ್ನು ದಾಖಲಿಸಲಾಗಿದೆ. ಮಾತ್ರವಲ್ಲದೆ ಕಾಸರಗೋಡು ನಗರದ ವಿವಿಧ ಕೇಂದ್ರಗಳಲ್ಲಿ ಅತ್ಯಂತ ರಹಸ್ಯವಾಗಿ ಕಾರ್ಯಾಚರಣೆ ಏರ್ಪಡಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನಿರ್ದೇಶನದಂತೆ ಜಿಲ್ಲಾ ಸೈಬರ್ ಕ್ರೈಮ್ ಪೊಲೀಸರು ಮತ್ತು ಸೈಬರ್ ಸೆಲ್ ಇವುಗಳ ಜಂಟಿ ಆಶ್ರಯದಲ್ಲಿ ಎಎಸ್‌ಪಿ ಮತ್ತು ಡಿವೈಎಸ್‌ಪಿ ನೇತೃತ್ವದಲ್ಲಿ ವಿಶೇಷ ಪೊಲೀಸರ ತಂಡವು ಕಾರ್ಯಾಚರಣೆ ನಡೆಸುತ್ತಿದೆ. ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಾಗಿ ಒಟ್ಟು 104 ಕೇಂದ್ರಗಳಲ್ಲಿ ದಾಳಿ ಮತ್ತು ತಪಾಸಣೆ ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿ 34 ಮಂದಿ ವಂಚಕರನ್ನು ಸೆರೆಹಿಡಿದು ಸಮಗ್ರ ವಿಚಾರಣೆಗೊಳಪಡಿಸಲಾಗಿದೆ. ದಾಳಿಯ ಮೊದಲು ಸೈಬರ್ ಅಪರಾಧ ಕೃತ್ಯಗಳಲ್ಲಿ ಒಳಗೊಂಡವರ ಬ್ಯಾಂಕ್ ಖಾತೆಗಳನ್ನು ಸೈಬರ್ ತಜ್ಞರ ನೇತೃತ್ವದಲ್ಲಿ ಸಮಗ್ರವಾಗಿ ಪರಿಶೀಲಿಸಿ ಅದರ ಆಧಾರದಲ್ಲಿ ಪೊಲೀಸ್ ಕಾರ್ಯಾಚರಣೆಯನ್ನು ಆರಂಭಿಸಲಾಗಿದೆ.





ಹಣದ ವರ್ಗಾವಣೆ ಬಗ್ಗೆ ನಡೆಯುತ್ತಿದೆ ತನಿಖೆ

ಆಪರೇಷನ್ ಸೈ - ಹಂಟ್ ಪ್ರಕಾರ ಪೊಲೀಸರು ಸೆರೆಹಿಡಿದವರ ಬ್ಯಾಂಕ್ ಖಾತೆಯಿಂದ ಆ ಹಣ ಎಲ್ಲಿಗೆ ವರ್ಗಾವಣೆಗೊಂಡಿದೆ ಎಂಬ ಕುರಿತು ಪೊಲೀಸರು ಸಮಗ್ರ ತನಿಖೆ ನಡೆಸುತ್ತಿದ್ದಾರೆ. ಅದರ ಜಾಡು ಹಿಡಿದು ಸೈಬರ್ ವಂಚನೆಗಾರರನ್ನು ತಮ್ಮ ಬಲೆಗೆ ಬೀಳಿಸುವ ನಿಟ್ಟಿನಲ್ಲಿ ಪೊಲೀಸರು ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ಈ ಮೂಲಕ ಕಾಸರಗೋಡು ಜಿಲ್ಲೆಯಲ್ಲಿ ಆನ್‌ಲೈನ್ ಆರ್ಥಿಕ ವಂಚಕರನ್ನು ಸಂಪೂರ್ಣವಾಗಿ ಮಟ್ಟಹಾಕಲು ರೂಪುರೇಷೆ ಸಿದ್ಧಪಡಿಸಲಾಗಿದ್ದು, ಆದರೆ ಕಾರ್ಯಾಚರಣೆಯ ದೃಷ್ಟಿಯಿಂದ ಸಂಪೂರ್ಣ ಮಾಹಿತಿ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಜಿಲ್ಲಾ ಪೊಲೀಸ್ ಇಲಾಖೆ ಹೇಳಿದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ನಡೆಯುತ್ತಿರುವ ಆನ್‌ಲೈನ್ ಆರ್ಥಿಕ ಮಹಾವಂಚಕನ್ನು ಬಂಧಿಸಿ ಕಠಿಣ ಶಿಕ್ಷೆಗೊಳಪಡಿಸಬೇಕೆಂದು ಸಾರ್ವಜನಿಕ ವಲಯವೂ ಆಗ್ರಹಿಸಿದೆ.

ಈ ನಿಟ್ಟಿನಲ್ಲಿ ಕಾಸರಗೋಡು ಪೊಲೀಸ್ ಉಪ ವಿಭಾಗದಲ್ಲಿ 20, ಬೇಕಲ ಪೊಲೀಸ್ ಉಪ ವಿಭಾಗದಲ್ಲಿ 9 ಮತ್ತು ಹೊಸದುರ್ಗ ಪೊಲೀಸ್ ಉಪ ವಿಭಾಗದಲ್ಲಿ 5 ಪ್ರಕರಣಗಳನ್ನು ದಾಖಲಿಸಿ ತನಿಖೆಗೊಳಪಡಿಸಲಾಗಿದೆ. ಬಂಧನಕ್ಕೊಳಗಾದವರ ಬ್ಯಾಂಕ್ ಖಾತೆಗಳನ್ನು ಸೈಬರ್ ವಂಚಕರ ತಂಡವು ಬಾಡಿಗೆಗೆ ಪಡೆದುಕೊಂಡು ಅಂತಹ ಖಾತೆಗಳಿಗೆ ವಿವಿಧ ವ್ಯಕ್ತಿಗಳಿಂದ ವಂಚಿಸಿದ ಹಣವನ್ನು ಜಮಾ ಮಾಡಿಸುತ್ತಾರೆ.

ನಂತರ ಬಾಡಿಗೆ ಬ್ಯಾಂಕ್ ಖಾತೆದಾರರು ಆ ಹಣವನ್ನು ವಂಚಕರ ಬ್ಯಾಂಕ್ ಖಾತೆಗಳಿಗೆ ಕಳುಹಿಸಿಕೊಡುತ್ತಾರೆ. ಇದಕ್ಕಾಗಿ ಇಂತಹ ಬಾಡಿಗೆ ಬ್ಯಾಂಕ್ ಖಾತೆದಾರರಿಗೆ ಆರ್ಥಿಕ ವಂಚನೆಗಾರರು ನಿಗದಿತ ಮೊತ್ತದ ಕಮಿಷನ್ ಹಣ ನೀಡುತ್ತಾರೆ. ವಂಚನೆಗೆ ಸಂಬಂಧಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಲ್ಲಿ ಬಾಡಿಗೆ ಬ್ಯಾಂಕ್ ಖಾತೆದಾರರು ಮೊದಲಿಗೆ ನೇರವಾಗಿ ಸಿಲುಕಿಕೊಳ್ಳುತ್ತಾರೆ.

- ಕಾರ್ಯಾಚರಣೆ ಯಲ್ಲಿ 36 ಕೇಸುಗಳನ್ನು ದಾಖಲಿಸಿಕೊಳ್ಳಲಾಗಿದೆ.
- ಕಾಸರಗೋಡು ನಗರ ಪೊಲೀಸ್ ಠಾಣೆಯಲ್ಲಿ 12 ಪ್ರಕರಣಗಳನ್ನು ದಾಖಲಿಸಲಾಗಿದೆ.

ನಿಜವಾದ ಆರ್ಥಿಕ ಮಹಾವಂಚನೆಗಾರರು ಪ್ರಕರಣಗಳಿಂದ ತಪ್ಪಿಸಿಕೊಳ್ಳುತ್ತಾರೆ. ಈ ರೀತಿಯಾಗಿ ಹಣದ ಆಸೆ, ಆಮಿಷಗಳಿಗೆ ಬಲಿಯಾಗಿ ಸೈಬರ್ ವಂಚನೆಗಾರರಿಗೆ ತಮ್ಮ ಬ್ಯಾಂಕ್ ಖಾತೆಗಳನ್ನು ಬಾಡಿಗೆಗೆ ನೀಡುವವರು ಕಾಸರಗೋಡು ಜಿಲ್ಲೆಯಲ್ಲಿ ಅನೇಕ ಮಂದಿ ಇದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಇನ್ನೊಂದೆಡೆ ಜಿಲ್ಲೆಯಲ್ಲಿ ನಡೆಯುತ್ತಿರುವ ಇಂತಹ ಮಹಾವಂಚನೆಯಲ್ಲಿ ದೇಶದ ವಿವಿಧ ರಾಜ್ಯಗಳ ವಂಚನಾ ಜಾಲವೂ ಸೇರಿದೆ ಎಂದು ಪೊಲೀಸರಿಗೆ ರಹಸ್ಯ ಮಾಹಿತಿ ಲಭಿಸಿದೆ.

ಶಿಮಂತೂರು ಶ್ರೀ ಆದಿ ಜನಾರ್ದನ ದೇವಸ್ಥಾನದ ವರ್ಷಾವಧಿ ಜಾತ್ರೆ

ವಿಜೃಂಭಣೆಯ ಹಗಲು ರಥೋತ್ಸವ

ಮುಲ್ಕಿ: ಶಿಮಂತೂರು ಶ್ರೀ ಆದಿ ಜನಾರ್ದನ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವದ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ಶುಕ್ರವಾರ ಶ್ರೀ ದೇವರ ಹಗಲು ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಪ್ರಾರ್ಥನೆ ಮಹಾಪೂಜೆ ನಡೆದು ಶ್ರೀ ದೇವರ ಹಗಲು ರಥೋತ್ಸವ, ಪಲ್ಲಪೂಜೆ, ಮಹಾ ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಶ್ರೀ ದೇವರ ಉತ್ಸವ ಬಲಿ, ಭೂತ ಬಲಿ, ಶಯನೋತ್ಸವ ವಿಜೃಂಭಣೆಯಿಂದ ನಡೆಯಿತು.

ಈ ಸಂದರ್ಭ ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ, ಮಾಜೀ ಮೊಕ್ತೇಸರ ಚಂದ್ರಹಾಸ ಶೆಟ್ಟಿ, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ರೂಪಾ ವಿಷ್ಣುಮೂರ್ತಿ ಭಟ್, ಶಶಿಕಲಾ ಎನ್. ಕುಂದರ್, ಶಾಂತಾರಾಮ ಹೆಗ್ಡೆ ತೆಂಗಾಳಿ, ನಂದನಾ ಶೆಟ್ಟಿ ಕುಬೆವೂರು, ಅರುಣ್ ಕುಮಾರ್ ಕಟ್ಟಪುಣಿ,, ಬಾಬಾ ರಂಜನ್ ಶೆಟ್ಟಿ, ಸತೀಶ್ ಶೆಟ್ಟಿ, ಶ್ರೀಕಾಂತ್ ಶೆಟ್ಟಿ ಕೆಂಚನಕೆರೆ, ರಘುರಾಮ ಶೆಟ್ಟಿ ಪರೆಂಕಿಲ, ಜಯ ಶೆಟ್ಟಿ ಮುಂಬೈ, ಶಂಕರ್ ಮಾಸ್ಟರ್, ವಿಶ್ವನಾಥ ಶೆಟ್ಟಿ, ನಾಗರಾಜ ಶೆಟ್ಟಿ, ಜಯಕರ ಶೆಟ್ಟಿ ಮುಂಬೈ ಮೋಹನ್ ಕೋಟ್ಯಾನ್ ಶಿಮಂತೂರು, ಬಾಲಕೃಷ್ಣ ಶೆಟ್ಟಿ, ಪದ್ಮಿನಿ ವಿಜಯಕುಮಾರ್ ಶೆಟ್ಟಿ, ಚಂದ್ರಹಾಸ ಸುವರ್ಣ, ಉದಯ ಕುಮಾರ್ ಶೆಟ್ಟಿ ಅಧಿಧನ್, ಹರೀಶ್ ಶೆಟ್ಟಿ, ದಿನೇಶ್ಚಂದ್ರ ಅಜಿಲ, ಸುರೇಶ್ ಶೆಟ್ಟಿ, ಗೋಪಾಲ, ಬಾಲಕೃಷ್ಣ ಶೆಟ್ಟಿ ಅಂಬೆಲಬೀಡು, ಶಿಮಂತೂರು, ಯುವಕ ಮಂಡಲ ಮಹಿಳಾ ಭಜನಾ ಮಂಡಳಿಯ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.



- ಕ್ಷೇತ್ರದಲ್ಲಿ ಶನಿವಾರ ಬೆಳಗ್ಗೆ ಕವಾಟೋದ್ಘಾಟನೆ, ತುಲಾಭಾರ ಸೇವೆ, ರಾತ್ರಿ ಪಲ್ಲಕ್ಕಿ ಉತ್ಸವ, ಮಹಾರಥೋತ್ಸವ ನಡೆಯಿತು.

ಮಾಜಿ ಶಾಸಕ ಬೋಪಯ್ಯ ವಿರುದ್ಧ ಸುಳ್ಳು ಆಪಾದನೆ: ಬಿಜೆಪಿಯಿಂದ ಎಸ್.ಪಿ.ಗೆ ದೂರು

ಮಡಿಕೇರಿ: ಮಾಜಿ ಶಾಸಕ ಹಾಗೂ ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಆಪಾದನೆ ಮಾಡಲಾಗುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮಡಿಕೇರಿ ನಗರ ಬಿಜೆಪಿ ಮಹಿಳಾ ಮೋರ್ಚಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ.

ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆ, ಕುಶಾಲನಗರದ ಗುಮ್ಮನಕೊಲ್ಲಿಯ ಜಿ.ಆರ್. ಪುಷ್ಪಲತಾ ಅಡ್ಮಿನ್ ಆಗಿರುವ ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್ ವಾಟ್ಸಾಪ್ ಗ್ರೂಪ್‌ನಲ್ಲಿ ಪೊನ್ನಂಪೇಟೆ ತಾಲೂಕಿನ ತೆರಾಲು ಗ್ರಾಮದ ಬಿ.ಜಿ. ಸುನಿತಾ ಎಂಬವರು ಫೆ. 27 ರಂದು ನಾಪೋಕ್ಲುವಿನಲ್ಲಿ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಸಲ್ಲದ ಆರೋಪಗಳನ್ನು ಮಾಡಿದ್ದಾರೆ. ಇದನ್ನು ಹಾಕತ್ತೂರು ವಲಯ 3 ಬೂತ್ ಎಂಬ ಗ್ರೂಪ್‌ನಲ್ಲಿ ಭೀಷ್ಮ ಎಂಬವರ ಪತ್ನಿ ಫಾರ್ವರ್ಡ್ ಮಾಡಿದ್ದಾರೆ. ಈ ಸಂದೇಶದಲ್ಲಿ 'ಹಾಲಿ ಶಾಸಕರು ಇಸ್ಮಾಯಿಲ್ ಅವರಿಗೆ ಸಹಾಯ ಮಾಡುತ್ತಿಲ್ಲ. ಇದನ್ನು ಅವರು ಕೆಜಿಬಿಯೊಂದಿಗೆ ಹಂಚಿಕೊಂಡಿದ್ದಾರೆ' ಎಂಬುದಾಗಿ ಸುಳ್ಳು ಆಪಾದನೆ ಮಾಡಲಾಗಿದೆ. ಇಂತಹ ಸುಳ್ಳು ಆಪಾದನೆ ಮಾಡಿ ಜಿಲ್ಲೆಯಲ್ಲಿ ಜಾತಿ ಮತ್ತು ಕೋಮು ಸಂಘರ್ಷ ಉಂಟು ಮಾಡುತ್ತಿರುವವರನ್ನು ಪತ್ತೆ ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಲಾಗಿದೆ.



- ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್‌ನ ವಾಟ್ಸಾಪ್ ಗ್ರೂಪ್‌ನಲ್ಲಿ ಸುಳ್ಳು ಆರೋಪಗಳು
- ಕ್ರಮಕ್ಕೆ ಪೊಲೀಸ್ ಇಲಾಖೆಗೆ ಆಗ್ರಹ

ದೂರು ನೀಡುವ ಸಂದರ್ಭ ಬಿಜೆಪಿ ಮಹಿಳಾ ಮೋರ್ಚಾ ನಗರ ಅಧ್ಯಕ್ಷೆ ಸೌಮ್ಯ, ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ಕಾರ್ಯದರ್ಶಿ ಕನ್ನಿಕೆ, ನಗರ ಕಾರ್ಯದರ್ಶಿ ನವ್ಯಾ, ಬಿಜೆಪಿ ಜಿಲ್ಲಾ ವಕ್ತಾರ ಮಹೇಶ್ ಜೈನಿ, ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ನಾಗೇಶ್ ಕುಂದಲ್ಪಾಡಿ, ಬಿ.ಕೆ. ಜಗದೀಶ್, ಅರುಣ್ ಶೆಟ್ಟಿ, ಗಜೇಂದ್ರ, ಪೂಣಚ್ಚ, ಅಜಿತ್ ನಾಣಯ್ಯ, ಬಿ.ಎ. ಹರೀಶ್, ಕಾಂಗೀರ ಅಶ್ವಿನ್, ತೆಕ್ಕಡೆ ಶೋಭಾ ಮತ್ತಿತರರು ಇದ್ದರು.

ನಾರಾವಿ ಶ್ರೀ ಸೂರ್ಯನಾರಾಯಣ ದೇವಳ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ನಡೆದ 5 ನೇ ದಿನ ಧಾರ್ಮಿಕ ಸಭೆ

ವಸುಧೈವ ಕುಟುಂಬಕಂ ಅರ್ಥ ಮಾಡಿಕೊಳ್ಳೋಣ

ಬೆಳ್ತಂಗಡಿ: ನಮ್ಮ ಧರ್ಮದ ಚೌಕಟ್ಟಿನೊಳಗೆ ನಮ್ಮ ಬದುಕನ್ನು ನಡೆಸುವುದರ ಜೊತೆಗೆ ಪರಧರ್ಮ ಸಹಿಷ್ಣುತೆಗೂ ಪ್ರಾಮುಖ್ಯತೆ ಕೊಡಬೇಕು ಎಂದು ಮಾಜಿ ಸಚಿವ ಬಿ. ರಮಾನಾಥ ರೈ ಹೇಳಿದರು.

ಅವರು ಗುರುವಾರ ನಾರಾವಿ ಶ್ರೀ ಸೂರ್ಯನಾರಾಯಣ ದೇವರ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ನಡೆದ 5 ನೇ ದಿನ ಧಾರ್ಮಿಕ ಸಭೆಯಲ್ಲಿ ಮಾತನಾಡಿದರು.

ಹಿಂದೂ ಧರ್ಮಕ್ಕೆ ಶ್ರೇಷ್ಠತೆಯನ್ನು ಕೀರ್ತಿಯನ್ನು ತಂದು ಕೊಟ್ಟದ್ದು ವಸುಧೈವ ಕುಟುಂಬಕಂ ಎಂಬ ಮಾತು. ಇದರ ವ್ಯಾಪಕತೆಯನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯ. ಸುಕೃತ ಕಾರ್ಯ ಮಾಡಿದರೆ ಮತ್ತೊಮ್ಮೆ ಮನುಷ್ಯನಾಗಿ ಹುಟ್ಟಲು ಸಾಧ್ಯ. ಮೈಲಿಗೆ ಇಲ್ಲದ ಮನಸ್ಸನ್ನು ಇಟ್ಟುಕೊಂಡು ಪೂಜೆ ಮಾಡೋಣ ಎಂದರು.

ಮೂಡಬಿದರೆ ಎಕ್ಸಲೆಂಟ್ ಕಾಲೇಜಿನ ಅಧ್ಯಕ್ಷ ಯುವರಾಜ ಜೈನ್ ಅವರು, ನಂಬಿಕೆ ಹಾಗೂ ವಿಶ್ವಾಸ ನಮ್ಮೊಳಗಿದ್ದರೆ ಯಶಸ್ಸು ನಿಶ್ಚಿತ. ನಾವು ಮಾಡುವ ಪ್ರತಿಯೊಂದು ಭಗವಂತ ಇದ್ದಾನೆ. ಆತ ಕೊಡಬೇಕಾದ್ದನ್ನು ಕೊಟ್ಟೆ ಕೊಡುತ್ತಾನೆ. ಪ್ರೀತಿಯಿಂದ ಸ್ವೀಕರಿಸುವ ಮನೋಭಾವ ನಮ್ಮಲ್ಲಿರಬೇಕು ಎಂದರು.



ಬ್ರಹ್ಮಕಲಶೋತ್ಸವದಲ್ಲಿ ಮಿಂದೆದ್ದ ಶ್ರೀ ಸೂರ್ಯನಾರಾಯಣ

ಶುಕ್ರವಾರ ಬೆಳಿಗ್ಗೆ 10.44 ರ ವೃಷಭ ಲಗ್ನ ಸುಮೂಹೂರ್ತದಲ್ಲಿ ಸುವರ್ಣ ನದಿ ತಟದಲ್ಲಿರುವ ಶ್ರೀ ಸೂರ್ಯನಾರಾಯಣನಿಗೆ ಬ್ರಹ್ಮ ಕಲಶಾಭಿಷೇಕ ನೆರವೇರಿತು. ನಾರಾವಿ ಹಾಗೂ ಸುತ್ತಮುತ್ತಲಿನ ಸಹಸ್ರಾರು ಭಕ್ತರು ಅಭಿಷೇಕವನ್ನು ವೀಕ್ಷಿಸಿದರು.

ಅಧ್ಯಕ್ಷತೆಯನ್ನು ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶ್ರೀನಿವಾಸ ಕಿಣಿ ವಹಿಸಿದ್ದರು.

ಬೆಳ್ತಂಗಡಿ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಸಂಪತ್ ಬಿ. ಸುವರ್ಣ, ಹೊಸ್ಮಾರು ಸುರೇಶ್ ಕುಮಾರ್ ಶೆಟ್ಟಿ, ಉದ್ಯಮಿಗಳಾದ ಗಣಪತಿ ಹೆಗಡೆ, ಜಿನೇಂದ್ರ ಜೈನ್, ಜಿಲ್ಲಾಕೆಡಿಪಿ ಸದಸ್ಯ ಸಂತೋಷ್ ಕುಮಾರ್, ಬಡಕವು ಗುತ್ತು ರಕ್ಷಿತ್ ಜೈನ್, ವಕೀಲರುಗಳಾದ ಮುರಳೀಧರ ಭಟ್, ರತ್ನವರ್ಮ ಬುಣ್ಣು, ನವೀನ್ ಶೆಟ್ಟಿ, ಕುತ್ಲೂರು ಕೊಡಮಣಿತ್ತಾಯ ದೈವಸ್ಥಾನದ ಅಧ್ಯಕ್ಷ ಪ್ರಭಾಕರ ಬುಣ್ಣು, ಓಡೀಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ದಿನೇಶ್ ಮೂಲ್ಯ, ನಾವರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಯಾನಂದ ಕುರಲ್ಲ, ವಿನುತಾ ಆಚಾರ್ಯ, ರವಿರಾಜ್ ಜೈನ್, ದಿನೇಶ್ ಕೋಟ್ಯಾನ್ ಸಾವ್ಯ, ಶುಭಕರ ಇದ್ದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ರಕ್ಷಿತ್ ಶಿವರಾಂ, ದೇವಳದ ಆಡಳಿತೆ ಮೊಕ್ತೇಸರ ರವೀಂದ್ರ ಪೂಜಾರಿ ಬಾಂದೊಟ್ಟು ಇದ್ದರು.

ಮುಖ್ಯ ಶಿಕ್ಷಕ ಪ್ರಭಾಕರ ನಾರಾವಿ ಸ್ವಾಗತಿಸಿದರು. ಶಿಕ್ಷಕ ನಾಗೇಶ್ ವಂದಿಸಿದರು. ದೀಪಕ್ ಅಡ್ಯಾರ್ ಕಾರ್ಯಕ್ರಮ ನಿರ್ವಹಿಸಿದರು.

ಮಾ. 23ರಿಂದ ಕೆನರಾ ಕಾಲೇಜಿನಲ್ಲಿ 'ಕ್ಯಾನ್ ಫೆಸ್ಟ್':ಲೋಗೊ ಅನಾವರಣ



ಮಂಗಳೂರು: ನಗರದ ಕೆನರಾ ಕಾಲೇಜಿನಲ್ಲಿ ಮಾ. 23, 24 ಮತ್ತು 26ರಂದು ನಡೆಯಲಿರುವ ವಾಣಿಜ್ಯ, ನಿರ್ವಹಣಾ, ವಿಜ್ಞಾನ ಮತ್ತು ಗಣಕ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗುವ ಅಂತರ್–ಕಾಲೇಜು ಉತ್ಸವ 'ಕ್ಯಾನ್ ಫೆಸ್ಟ್ 2026' ಹಾಗೂ ಎನ್‌ಎಸ್‌ಎಸ್ ಸ್ವಯಂ ಸೇವಕರಿಗಾಗಿ ಆಯೋಜಿಸಲಾಗುವ ಸ್ಪರ್ಧಾವಳಿ ಸೃಜನ 2026ರ ಲೋಗೊ ಅನಾವರಣ ಕಾರ್ಯಕ್ರಮ ಕಾಲೇಜು ಆವರಣದಲ್ಲಿ ಗುರುವಾರ ನಡೆಯಿತು.

ಕಾಲೇಜಿನ ಸಂಚಾಲಕ ಸಿಎ ಎಂ. ಜಗನ್ನಾಥ ಕಾಮತ್ ಅವರು ಲೋಗೊ ಅನಾವರಣಗೊಳಿಸಿ ಮಾತನಾಡಿ, ಇಂತಹ ಅಂತರ ಕಾಲೇಜು ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯ ಅನಾವರಣಕ್ಕೆ ವೇದಿಕೆಯನ್ನೊದಗಿಸುವ ಜೊತೆಗೆ ಆತ್ಮವಿಶ್ವಾಸವನ್ನು ವೃದ್ಧಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಹೇಳಿದರು.

ಕಾಲೇಜಿನ ವ್ಯವಸ್ಥಾಪಕ ಕೆ. ಶಿವಾನಂದ ಶೆಣೈ, ಪ್ರಾಂಶುಪಾಲೆ ಡಾ. ಪ್ರೇಮಲತಾ, ಕಾರ್ಯಕ್ರಮ ಸಂಯೋಜಕಿ, ಕನ್ನಡ ವಿಭಾಗ ಮುಖ್ಯಸ್ಥೆ ವಾಣಿ ಯು.ಎಸ್. ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಕಾಲೇಜಿನ ವಿಭಾಗ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ವಿವಿಧ ನೃತ್ಯಗಳನ್ನು ಪ್ರದರ್ಶಿಸಿದರು.

ಮಂಗಳೂರು ವಿವಿಯಲ್ಲಿ 'ಯಕ್ಷಮಂಗಳ' ಪ್ರಶಸ್ತಿ ಪ್ರದಾನ



• **ಕೊಣಾಜೆ:** ಯಕ್ಷಗಾನ ನಮ್ಮ ನಾಡಿನ ವೈಶಿಷ್ಟ್ಯಪೂರ್ಣವಾದ ಕಲೆಯಾಗಿದೆ. ನನಗೆ ಮತ್ತು ಯಕ್ಷಗಾನ ನಡುವೆ ಅವಿನಾಭಾವ ಸಂಬಂಧವಿದೆ. ನನ್ನ ಬದುಕಿನುದ್ದಕ್ಕೂ ಮಂಗಳೂರಿನ ಹಿಂದಿನ ಸರಕಾರಿ ಕಾಲೇಜು ಹಳೆ ವಿದ್ಯಾರ್ಥಿಯಾಗಿದ್ದು ಮಂಗಳೂರು ಮಣ್ಣಿನ ಋಣ ಮರೆಯಲು ಯಾವತ್ತೂ ಸಾಧ್ಯವಿಲ್ಲ. ಸರಕಾರಿ ಕಾಲೇಜಿನಲ್ಲಿ ಸಿಕ್ಕಿದ ಆ ಶಿಕ್ಷಣ ನನ್ನ ಬದುಕನ್ನು ಸಮಗ್ರವಾಗಿ ರೂಪಿಸಿತು ಎಂದು ಉದ್ಯಮಿ ಡಾ.ಪಿ. ದಯಾನಂದ ಪೈ ಹೇಳಿದರು.

ಅವರು ಶನಿವಾರ ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ. ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ 2025–26ನೇ ಸಾಲಿನ ಯಕ್ಷಮಂಗಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಯಕ್ಷಗಾನ ರಂಗದ ಹಿರಿಯ ಕಲಾವಿದ ಕಪ್ಪೆಕೆರೆ ಸುಬ್ರಾಯ ಭಾಗವತ (ಅವರ ಅನುಪಸ್ಥಿತಿಯಲ್ಲಿ ಸಹೋದರ ಮಹಾಬಲ ಹೆಗಡೆ), ಯಕ್ಷಗಾನ ಗುರುಗಳಾದ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಹಿರಿಯ ಯಕ್ಷಗಾನ ಅರ್ಥಧಾರಿ ಜಬ್ಬಾರ್ ಸಮೊ ಅವರಿಗೆ ಯಕ್ಷಮಂಗಳ ಪ್ರಶಸ್ತಿ ಹಾಗೂ ಕೃಷ್ಣಪ್ರಕಾಶ್ ಉಳಿತ್ತಾಯ ಅವರಿಗೆ ಕೃತಿ ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡಿದರು.

ಎಲ್ಲ ಕಲೆಗಳಿಗಿಂತ ಶ್ರೇಷ್ಠವಾದ ಯಕ್ಷಗಾನ ಸಂಪದ್ಭರಿತ ಕಲೆಯದರೂ ಕಲಾವಿದರ ಬದುಕು ಸಂಕಷ್ಟದಲ್ಲಿದೆ. ಕಲಾವಿದರಿಗೆ ಆರ್ಥಿಕ ರಕ್ಷಣೆಯೂ ಅಗತ್ಯ. ಬಹಳಷ್ಟು ಕಲಾವಿದರಿಗೆ ಮಾಸಾಶನ ಕೊಡುತ್ತಾ ಬಂದಿದ್ದೇನೆ. ಹಣ ಸಂಪಾದನೆ ಮಾಡುತ್ತಾ ಹೋಗುವುದು ಶ್ರೀಮಂತಿಕೆ ಅಲ್ಲ. ನಾನಂತೂ ಜನರಿಗೆ ಸಮಾಜಕ್ಕೆ ನಮ್ಮಿಂದಾದ ಸೇವೆ ಮಾಡುತ್ತೇನೆ. ದೇವರು ಕೊಟ್ಟಿದ್ದನ್ನು ಸಮಾಜಕ್ಕೆ ಕೊಡುತ್ತಾ ಬಂದಿದ್ದೇನೆ. ಹಾಗೆಯೇ ಇತರ ಕ್ಷೇತ್ರಗಳಿಗೂ ಅನುದಾನ ನೀಡುತ್ತಾ ಬಂದಿರುವುದು ಮನಸ್ಸಿಗೆ ಸಂತಸ ಕೊಟ್ಟಿದೆ. ಮಂಗಳೂರು ವಿವಿಯ ಯಕ್ಷಗಾನ ಅಧ್ಯಯನ ಕೇಂದ್ರವು ಯಕ್ಷಗಾನ ಅಧ್ಯಯನಕ್ಕೆ ಪೂರಕವಾಗಿ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸಂತಸ ತಂದಿದೆ ಎಂದರು.

ಶೈಕ್ಷಣಿಕ ಆಯಾಮ

ಅಧ್ಯಕ್ಷತೆ ವಹಿಸಿದ ವಿವಿಯ ಕುಲಪತಿ ಪ್ರೊ. ಪಿ. ಎಲ್. ಧರ್ಮ ಅವರು ಮಾತನಾಡಿ, ಹಿಂದಿನ ಮಂಗಳೂರು ಸರಕಾರಿ ಕಾಲೇಜು ವಿಶ್ವವಿದ್ಯಾಲಯ ಕಾಲೇಜು ಆಗಿ ರೂಪುಗೊಂಡ ಬಳಿಕ ಕಳೆದ ಕೆಲವು ವರ್ಷಗಳಿಂದ ಆಗುತ್ತಿರುವ ಪ್ರಮಾದಕ್ಕೆ ಕ್ಷಮೆ ಕೇಳುತ್ತಾ ಅದಕ್ಕೆ ಮತ್ತೆ ಗತ ವೈಭವ ಸಾರುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ. ಹಾಗೆಯೇ ಮಂಗಳೂರು ವಿವಿಯು ಯಕ್ಷಗಾನದಲ್ಲಿ ಭರತನಾಟ್ಯ ಶೈಲಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ವಿಶೇಷ ಪರೀಕ್ಷೆಯನ್ನು ನಡೆಸಿ ಯಕ್ಷಗಾನಕ್ಕೆ ಒಂದು ಶೈಕ್ಷಣಿಕ ಆಯಾಮವನ್ನು ನೀಡಲು ಚಿಂತನೆಗಳು ನಡೆದಿವೆ ಎಂದರು.

ಹಾವೇರಿ ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿನ್ನಪ್ಪ ಗೌಡ ಪ್ರಶಸ್ತಿ ಪುರಸ್ಕೃತರ ಅಭಿನಂದನೆ ಭಾಷಣ ಮಾಡುತ್ತಾ ಮೂವರು ಪ್ರಶಸ್ತಿ ಪುರಸ್ಕೃತರು ಕೂಡಾ ಯಕ್ಷಗಾನದ ಪರಂಪರೆಯನ್ನು ಉಳಿಸಿ ಬೆಳೆಸುತ್ತಿರುವ ಕಲಾವಿದರಾಗಿದ್ದಾರೆ. ಡಾ.ದಯಾನಂದ ಪೈ ಅವರು ಕಲೆ,ಆರೋಗ್ಯ, ಶೈಕ್ಷಣಿಕ ಕ್ಷೇತ್ರಗಳಿಗೆ ಕೊಡುಗೆ ನೀಡಿದ ಹೃದಯ ಶ್ರೀಮಂತಿಕೆಯ ವ್ಯಕ್ತಿಯಾಗಿದ್ದಾರೆ ಎಂದರು.

ಪ್ರಶಸ್ತಿ ಪುರಸ್ಕೃತರಾದ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಹಿರಿಯ ಯಕ್ಷಗಾನ ಅರ್ಥಧಾರಿ ಜಬ್ಬಾರ್ ಸಮೊ ಹಾಗೂ ಕೃಷ್ಣ ಪ್ರಕಾಶ್ ಉಳಿತ್ತಾಯ ಅವರು ಅನಿಸಿಕೆ ವ್ಯಕ್ತಪಡಿಸಿ ಕೃತಜ್ಞತೆ ಸಲ್ಲಿಸಿದರು.

ಸಮಾರಂಭದಲ್ಲಿ ಡಾ. ಪಿ. ದಯಾನಂದ ಪೈ, ಪತ್ನಿ ಮೋಹಿನಿ ದಯಾನಂದ ಪೈ, ಮಂಗಳೂರು ವಿವಿ ಕುಲಸಚಿವ ಪ್ರೊ. ಗಣೇಶ್ ಸಂಜೀವ್ ಹಾಗೂ ಪರೀಕ್ಷಾಂಗ ಕುಲಸಚಿವ ದೇವೇಂದ್ರಪ್ಪ ಉಪಸ್ಥಿತರಿದ್ದರು.

ಡಾ. ಶಶಿರೇಖ, ಯಕ್ಷಗುರು ದೀವಿತ್ ಕೋಟ್ಯಾನ್, ಡಾ. ಶ್ರೀದೇವಿ ಕಲ್ಲಡ್ಕ ಅವರು ಸನ್ಮಾನ ಪತ್ರ ವಾಚಿಸಿದರು. ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಧನಂಜಯ ಕುಂಬ್ಳೆ ಸ್ವಾಗತಿಸಿದರು. ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನಾಧಿಕಾರಿ ಡಾ. ಸತೀಶ್ ಕೊಣಾಜೆ ವಂದಿಸಿದರು. ಕಲಾವಿದೆ ಸಾಯಿಸುಮ ನಾವಡ ಕಾರ್ಯಕ್ರಮ ನಿರೂಪಿಸಿದರು.

ವಿಶೇಷವೆಂದರೆ ಕಾರ್ಯಕ್ರಮ ನಿರೂಪಣೆ, ಸನ್ಮಾನ, ಗಾನ ಅಭಿನಂದನೆ ಎಲ್ಲವೂ ಯಕ್ಷಗಾನ ಶೈಲಿಯಲ್ಲಿ ನಿರೂಪಣೆಗೊಂಡಿದ್ದು ಸೇರಿದ ಕಲಾಸಕ್ತರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು.

ಡಾ. ಪಿ. ದಯಾನಂದ ಪೈಗಳಿಂದ 1ಕೋಟಿ ರೂ. ಅನುದಾನ ಹಸ್ತಾಂತರ

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ ಯಕ್ಷಗಾನ ಕೇಂದ್ರದಲ್ಲಿ ಯಕ್ಷಗಾನ ಸಂಬಂಧಿ ಅಧ್ಯಯನ ಸಂಶೋಧನೆಯನ್ನು ವಿಸ್ತರಿಸುವ ಉದ್ದೇಶಕ್ಕಾಗಿ ಬೆಂಗಳೂರಿನ ಡಾ. ಪಿ. ದಯಾನಂದ ಪೈಗಳು ಒಂದು ಕೋಟಿ ರೂ.ಗಳ ವಿಶೇಷ ಅನುದಾನವನ್ನು ಡಿ.ಡಿ. ಮೂಲಕ ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅವರಿಗೆ ಹಸ್ತಾಂತರಿಸಿದರು. ಹಾಗೆಯೇ ಯಕ್ಷಗಾನ ಕಲಾಕೇಂದ್ರದ ಕಟ್ಟಡದ ಪ್ರತಿಧ್ವನಿ ನಿವಾರಿಸಿ ಮರುವಿನ್ಯಾಸದ ಖರ್ಚು ಭರಿಸುವ ಭರವಸೆ ನೀಡಿದರು.

ಸಿಡಿಮದ್ದು ಸ್ಫೋಟ ಪ್ರಕರಣ : ಓರ್ವನ ಬಂಧನ

• **ವಿಟ್ಲ:** ಕಂಬಳಬೆಟ್ಟು ನೂಜಿಯಲ್ಲಿ ನಡೆದ ಸಿಡಿಮದ್ದು ಸ್ಫೋಟಕ್ಕೆ ಸಂಬಂಧಿಸಿದಂತೆ ಪರವಾನಿಗೆ ಇಲ್ಲದೆ ಸುಡುಮದ್ದು ಘಟಕ ನಡೆಸುತ್ತಿದ್ದಾತನನ್ನು ವಿಟ್ಲ ಪೊಲೀಸರು ಬಂಧಿಸಿದ್ದಾರೆ.

ವಿಟ್ಲ ಮುಡ್ನೂರು ಗ್ರಾಮದ ಕಂಬಳಬೆಟ್ಟು ನೂಜಿ ಎಂಬಲ್ಲಿ ಸುಡುಮದ್ದು ಸ್ಫೋಟಗೊಂಡಿದ್ದು, ಸ್ಥಳೀಯ ನಿವಾಸಿ ಅಬ್ದುಲ್ ಗಫೂರ್ ಎಂಬಾತ ಅಕ್ರಮವಾಗಿ ಶೆಡ್ ನಿರ್ಮಿಸಿ, ಯಾವುದೇ ಪರವಾನಗಿ ಪಡೆಯದೇ ಸುಡುಮದ್ದುಗಳನ್ನು ತಯಾರಿಸಿ, ಯಾವುದೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯತನದಿಂದ ಮತ್ತು ಬೇಜಾವಬ್ದಾರಿಯಿಂದ ಅಕ್ರಮವಾಗಿ ದಾಸ್ತಾನಿರಿಸಿದ ಸುಡುಮದ್ದುಗಳು ಸ್ಫೋಟಗೊಂಡಿದೆ. ಕಂದಾಯ ನಿರೀಕ್ಷಕರಾದ ರವಿ ಅವರೊಂದಿಗೆ ಘಟನಾ ಸ್ಥಳಕ್ಕೆ ತೆರಳಿದಾಗ ತಿಳಿದು ಬಂದ ಬಗ್ಗೆ ವಿಟ್ಲ ಮುಡ್ನೂರು ಪ್ರಭಾರ ಗ್ರಾಮ ಕರಣಿಕ ಸತೀಶ್ ಸುವರ್ಣ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಸ್ಫೋಟದ ಪರಿಣಾಮ ಸುತ್ತಮುತ್ತಲಿನ ಮರಗಳು ಸುಟ್ಟು ಹೋಗಿದ್ದು ಯಾವುದೇ ಪ್ರಾಣಹಾನಿ ಸಂಭವಿಸಿರುವುದಿಲ್ಲ. ಪೊಲೀಸ್ ಇಲಾಖೆ ತನಿಖೆ ನಡೆಸಿ ಆರೋಪಿತ ಅಬ್ದುಲ್ ಗಫೂರ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದೆ.

ಆಳ್ವಾಸ್ ಹೆಲ್ತ್ ಸೆಂಟರ್: ಇಂದು ಉಚಿತ ಶಸ್ತ್ರಚಿಕಿತ್ಸಾ ಶಿಬಿರ

• **ಮೂಡುಬಿದಿರೆ:** ಆಳ್ವಾಸ್ ಹೆಲ್ತ್ ಸೆಂಟರ್ ವತಿಯಿಂದ ಮಾ. 8ರಂದು ಬೆಳಿಗ್ಗೆ 10ರಿಂದ 1 ಘಂಟೆಯವರೆಗೆ ಮೂಡುಬಿದಿರೆಯ ಆಳ್ವಾಸ್ ಹೆಲ್ತ್ ಸೆಂಟರ್‌ನಲ್ಲಿ ಉಚಿತ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಹೈಡ್ರೋಸಿಲ್, ಮೂಲವ್ಯಾಧಿ, ಹರ್ನಿಯ, ಥೈರಾಯ್ಡ್ ಸಮಸ್ಯೆ, ಮಧುಮೇಹ ಪಾದದ ಚಿಕಿತ್ಸೆ, ಅಬ್ಸೆಸ್ ಡ್ರೆನೇಜ್, ಪಿತ್ತ ಕೋಶದ ಕಲ್ಲುಗಳ ಚಿಕಿತ್ಸೆ, ಸ್ತನದ ಗಡ್ಡೆ/ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಸೇರಿದಂತೆ ಮುಂತಾದ ರೋಗಗಳಿಗೆ ಉಚಿತ ಶಸ್ತ್ರ ಚಿಕಿತ್ಸೆ ಹಾಗೂ ತಜ್ಞರ ಸಲಹೆ ಲಭಿಸಲಿದೆ. ಹೊಟ್ಟೆ ನೋವು, ವಿಶೇಷವಾಗಿ ಬಲಭಾಗದಲ್ಲಿ ತೀವ್ರ ನೋವು, ಹೊಟ್ಟೆಯಲ್ಲಿ ಅಥವಾ ದೇಹದ ಬೇರೆ ಭಾಗದಲ್ಲಿ ಗಡ್ಡೆ, ಹರ್ನಿಯದ ಲಕ್ಷಣಗಳು,ಮಲಬದ್ಧತೆ ಜೊತೆಗೆ ರಕ್ತ ಸ್ರಾವ, ಮಲದ್ವಾರದಲ್ಲಿ ನೋವು/ಉಬ್ಬರಗಳ ಸಂಧರ್ಭದಲ್ಲಿ ಸಾಮಾನ್ಯ ಶಸ್ತ್ರ ಚಿಕಿತ್ಸೆಯ ಆಗತ್ಯವಿರುವುದರಿಂದ ಈ ಶಿಬಿರದ ಮೂಲಕ ಉಚಿತ ಶಸ್ತ್ರಚಿಕಿತ್ಸೆಯ ಪ್ರಯೋಜನವನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗಾಗಿ 9945722671 ಸಂಖ್ಯೆಯನ್ನು ಸಂಪರ್ಕಿಸಲು ಕೋರಲಾಗಿದೆ.

ಕೊನೆಗೂ ಹುಟ್ಟೂರು ತಲುಪಿದ ಸಾಂಜೋ ಸುನಿಲ್ ಪಾರ್ಥಿವ ಶರೀರ

• **ಕಡಬ:** ಐರ್ಲೆಂಡ್‌ನ ರಾಜಧಾನಿ ಡಬ್ಲಿನ್‌ನಲ್ಲಿ ಫೆಬ್ರವರಿ 19 ರಂದು ಅನುಮಾನಾಸ್ಪದವಾಗಿ ಮೃತಪಟ್ಟಿದ್ದ ಕಡಬ ತಾಲೂಕು ಕುಟ್ರುಪಾಡಿ ಗ್ರಾಮದ ವಿಮಲಗಿರಿ ನಿವಾಸಿ ಮೂಲದ ಯುವಕ ಸಾಂಜೊ ಸುನಿಲ್ ಅವರ ಪಾರ್ಥಿವ ಶರೀರ ಕೊನೆಗೂ ಶನಿವಾರ ಸಂಜೆ ಹುಟ್ಟೂರು ತಲುಪಿದ್ದು, ಕುಟುಂಬದವರ ಆಕ್ರಂದನದ ನಡುವೆ ಪಾರ್ಥಿವ ಶರೀರವನ್ನು ಗ್ರಾಮಸ್ಥರ ಅಂತಿಮ ದರ್ಶನಕ್ಕೆ ಇರಿಸಲಾಯಿತು. ರವಿವಾರ ಮಧ್ಯಾಹ್ನ ಕುಟ್ರುಪಾಡಿಯ ವಿಮಲಗಿರಿ ಸಂತ ಮರಿಯಮ್ಮ ಮಲಂಕರ ಕ್ಯಾಥೋಲಿಕ್ ಚರ್ಚ್ ನಲ್ಲಿ ಮೃತರ ಅಂತ್ಯಸಂಸ್ಕಾರ ನಡೆಯಲಿದೆ.

ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿಯಾಗಿ ಬಾಲಕ ಮೃತ್ಯು

• **ಕಾಸರಗೋಡು:** ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿಯಾಗಿ ಬಾಲಕ ಮೃತಪಟ್ಟ ಘಟನೆ ಕೊಲ್ಲಂಗಾನ ಸಮೀಪ ಶನಿವಾರ ಮಧ್ಯಾಹ್ನ ನಡೆದಿದೆ. ಎವುಂಜೆ ನಿವಾಸಿ ಸಿದ್ದಿಕ್ ಮತ್ತು ಶಮ್ಸಿನಾ ದಂಪತಿಯ ಪುತ್ರ ಅಹ್ಮದ್ ಜಾಕೀರ್ (7) ಮೃತಪಟ್ಟ ಬಾಲಕ.

ಸಾಮಗ್ರಿಗಳನ್ನು ಖರೀದಿಸಲೆಂದು ಕೊಲ್ಲಂಗಾನಕ್ಕೆ ತಲುಪಿ ರಸ್ತೆ ದಾಟುತ್ತಿದ್ದಾಗ ಕಾಸರಗೋಡಿನಿಂದ ಮಾನ್ಯಕ್ಕೆ ಹೋಗುತ್ತಿದ್ದ ಕಾರು ಡಿಕ್ಕಿ ಹೊಡೆದಿದೆ. ಗಂಭೀರಾವಸ್ಥೆಯಲ್ಲಿದ್ದ ಬಾಲಕನ್ನು ತಕ್ಷಣ ಕಾಸರಗೋಡಿನ ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿತ್ತಾದರೂ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲ. ಅಹ್ಮದ್ ಜಾಕೀರ್ ಬೇಳ ಕಿಳಿಂಗಾರು ಬಡ್ಸ್ ಶಾಲೆಯ ವಿದ್ಯಾರ್ಥಿಯಾಗಿದ್ದಾನೆ. ಮೃತನು ಇಬ್ಬರು ಸಹೋದರರನ್ನು ಅಗಲಿದ್ದಾನೆ.

ಪುತ್ತೂರು ಮಾರುಕಟ್ಟೆ ಧಾರಣೆ

7-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 260 - 470
ಚೋಲ್ ಅಡಿಕೆ	: 505 - 530
ಡಬಲ್ ಚೋಲ್	: 555 - 530
ಹೊಸ ಪಟೋರ	: 360 - 410
ಹಳೆ ಪಟೋರ	: 390 - 420
ಹೊಸ ಉಳ್ಳಿ	: 115 - 300
ಹಳೆ ಉಳ್ಳಿ	: 105 - 305
ಹೊಸ ಕೋಕಾ	: 300 - 350
ಹಳೆ ಕೋಕಾ	: 355 - 375
ಹೊಸ ಕರಿಗೋಟು	: 240 - 270
ಹಳೆ ಕರಿಗೋಟು	: 240 - 270
ಹಸಿ ಕೊಕ್ಕೋ	: 80 - 110
ಒಣ ಕೊಕ್ಕೋ	: 320 - 350
ಕಾಳುಮೆಣಸು ಧಾರಣೆ	
ಕಾಳುಮೆಣಸು	: 465 - 660
ರಬ್ಬರ್ ಧಾರಣೆ : ಗ್ರೇಡ್	
ರಬ್ಬರ್ ಗ್ರೇಡ್	-197 - 211.50
ರಬ್ಬರ್ ಸ್ಕ್ರಾಪ್	- 130-131

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-745) ಡ್ರಾ ಮಾರ್ಚ್ 7ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KW 527791 (CHITTUR)

Consolation Prize Rs.5,000/-
KN 527791 KO 527791 KP 527791 KR 527791
KS 527791 KT 527791 KU 527791 KV 527791
KX 527791 KY 527791 KZ 527791

2nd Prize Rs.25,00,000/- [25 Lakhs]
KO 470890 (KOTTAYAM)

3rd Prize Rs.10,00,000/- [10 Lakhs]
KU 104663 (PALAKKAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0597 0805 1825 2852 2909 3025 3762 4181 4303 4388 4600 5439 6253 6398 7851 8159 8385 9452 9807

5th Prize Rs.2,000/-
0499 2432 6249 6438 6767 7962

6th Prize Rs.1,000/-
0601 0643 0646 0703 1119 1470 1875 2191 2399 3143 3232 3770 5046 5182 5594 5800 6795 7177 7178 7763 8029 8736 9231 9358 9929

7th Prize Rs.500/-
0029 0069 0085 0181 0196 0256 0404 0659 0760 0833 1037 1093 1139 1156 1287 1537 1719 2644 2701 2727 2880 3052 3076 3555 3619 3700 3753 3881 3959 4355 4439 4564 4569 4659 4782 4911 5188 5248 5253 5422 5486 5576 5646 5678 5733 6031 6126 6222 6532 6588 6805 6964 7252 7501 7555 7667 7846 7998 8105 8243 8323 8337 8346 8544 8669 8676 8764 8856 8894 8909 8942 9160 9494 9560 9584 9801

8th Prize Rs.200/-
0011 0223 0389 0552 0612 0847 0981 1399 1420 1679 1691 1891 2131 2224 2225 2315 2402 2480 2571 2591 2604 2691 2882 2907 2915 2923 2969 3190 3204 3382 3389 3419 3626 3683 3688 3706 3885 4148 4178 4366 4409 4576 4594 4596 4658 4705 4837 4994 5047 5323 5372 5380 5384 5405 5540 5753 5780 5806 5810 6161 6188 6235 6547 6656 6683 6715 6906 6914 7009 7026 7260 7316 7476 7568 7583 7716 8212 8265 8306 8398 8466 8550 8763 8956 9096 9299 9373 9394 9627 9683 9685 9715

9th Prize Rs.100/-
0049 0057 0082 0157 0529 0577 0600 0622 0813 0839 0869 0913 0941 1035 1297 1306 1315 1345 1371 1397 1455 1478 1482 1493 1519 1581 1828 1829 1841 1925 2046 2172 2188 2441 2490 2573 2599 2720 2822 2975 3039 3070 3145 3185 3440 3596 3649 3901 4209 4233 4240 4277 4285 4301 4309 4378 4382 4434 4472 4512 4529 4572 4606 4662 4693 4701 4728 4876 4924 4950 4962 5088 5138 5211 5319 5381 5420 5498 5591 5627 5695 5722 5743 5744 5898 6065 6067 6084 6229 6234 6245 6353 6388 6446 6464 6469 6488 6604 6614 6635 6640 6661 6765 6797 7085 7091 7107 7207 7265 7295 7435 7484 7494 7518 7543 7596 7637 7680 7730 7753 7833 7850 8146 8325 8370 8434 8563 8572 8574 8775 8787 8940 8995 9121 9219 9240 9276 9395 9623 9633 9705 9709 9919 9957



ಎಲ್ಲೆಡೆ ದಟ್ಟ ಹೊಗೆ | ಘರ್ಷಣೆ ಇನ್ನಷ್ಟು ದಿನಗಳಿಗೆ ವಿಸ್ತರಿಸುವ ಸಾಧ್ಯತೆ

ದಾಳಿ-ಪ್ರತಿ ದಾಳಿಗೆ ಮಧ್ಯಪ್ರಾಚ್ಯ ತತ್ತರ!

ದುಬೈ: ಇಸ್ರೇಲ್ ಶನಿವಾರ ಮುಂಜಾನೆ ಇರಾನ್ ರಾಜಧಾನಿ ಟೆಹ್ರಾನ್ ಮೇಲೆ ಹೊಸ ಸರಣಿ ದಾಳಿಗಳನ್ನು ನಡೆಸಿದ್ದು, ಇಡೀ ನಗರ ಸ್ಫೋಟದ ಸದ್ದಿನಿಂದ ನಡುಗಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಈ ನಡುವೆ, ಅತ್ಯಂತ ಭೀಕರ ಬಾಂಬ್ ದಾಳಿಗಳು ಇನ್ನು ಮುಂದೆ ನಡೆಯಲಿವೆ ಎಂದು ಅಮೆರಿಕ ಎಚ್ಚರಿಸಿರುವುದು, ಘರ್ಷಣೆ ಇನ್ನಷ್ಟು ದಿನಗಳಿಗೆ ವಿಸ್ತರಿಸುವ ಸೂಚನೆ ನೀಡಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೋ, ವಿಡಿಯೋಗಳಲ್ಲಿ, ಪಶ್ಚಿಮ ಟೆಹ್ರಾನ್‌ನಲ್ಲಿ ಸರಣಿ ಸ್ಫೋಟಗಳ ನಂತರ ಕಪ್ಪು ಹೊಗೆ ಆವರಿಸುತ್ತಿರುವುದು ಕಂಡುಬಂದಿದೆ. ವಿಶಾಲ ವ್ಯಾಪ್ತಿಯ ಕ್ಷಿಪಣಿಗಳನ್ನು ಬಳಸಿ ದಾಳಿಗಳನ್ನು ಆರಂಭಿಸಿರುವುದಾಗಿ ಇಸ್ರೇಲ್ ದೃಢಪಡಿಸಿದೆ. ಇದೇ ವೇಳೆ ಇರಾನ್ ಉಡಾಯಿಸಿದ ಕ್ಷಿಪಣಿಗಳನ್ನು ತಡೆಹಿಡಿದಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ.

ಅಮೆರಿಕದ ನಿಲುವು ಮತ್ತು ಮಿಲಿಟರಿ ಬೆಂಬಲ: ಈ ಮಧ್ಯೆ, ಅಮೆರಿಕಾದ ಡೊನಾಲ್ಡ್ ಟ್ರಂಪ್ ಆಡಳಿತ, ಇಸ್ರೇಲ್‌ಗೆ 151 ಮಿಲಿಯನ್ ಡಾಲರ್ ಮೌಲ್ಯದ ಹೊಸ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿದೆ. ಈ ಮೂಲಕ ಇರಾನ್ ಮೇಲೆ ಮತ್ತಷ್ಟು ಒತ್ತಡ ಹೇರಲಾಗಿದೆ. ಇರಾನ್ ಬೇಷರತ್ತಾಗಿ ಶರಣಾಗುವವರೆಗೆ ಯಾವುದೇ ಮಾತುಕತೆ ಸಾಧ್ಯವಿಲ್ಲ ಎಂದು ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ರಷ್ಯಾ ಮತ್ತು ರಾಜತಾಂತ್ರಿಕ ನಡೆಗಳು

ಈ ಪ್ರದೇಶದಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಲು ರಷ್ಯಾ ಇರಾನ್‌ಗೆ ಮಾಹಿತಿ ಹಂಚಿಕೊಳ್ಳುತ್ತಿದೆ ಎಂದು ಅಮೆರಿಕದ ಗುಪ್ತಚರ ಅಧಿಕಾರಿಗಳು ಗಂಭೀರ ಆರೋಪ ಮಾಡಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿ, ಆರಂಭಿಕ ದಾಳಿಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಸಂತಾಪ ಸೂಚಿಸಿದ್ದಾರೆ.

ಉತ್ತರಾಧಿಕಾರಿ ವಿಚಾರ, ಅಮೆರಿಕ ವಿರುದ್ಧ ಇರಾನ್ ಕೆಂಡ

ಯುದ್ಧದ ಆರಂಭಿಕ ದಾಳಿಗಳಲ್ಲಿ ಹತ್ಯೆಗೀಡಾದ ಖಮೇನಿ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ತಾನೂ ಭಾಗಿಯಾಗಬೇಕು ಎಂದು ಟ್ರಂಪ್ ಮಾಧ್ಯಮ ಸಂಸ್ಥೆಗಳಿಗೆ ತಿಳಿಸಿದ್ದಾರೆ. ಟ್ರಂಪ್ ಅವರ ಈ ಹೇಳಿಕೆಯನ್ನು ವಿಶ್ವಸಂಸ್ಥೆಯಲ್ಲಿನ ಇರಾನ್ ರಾಯಭಾರಿ ಅಮೀರ್ ಸಯೀದ್ ಇರವಾನಿ ಖಂಡಿಸಿದ್ದಾರೆ. ಇರಾನ್ ತನ್ನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ವಿದೇಶಿ ಶಕ್ತಿಯ ಹಸ್ತಕ್ಷೇಪವನ್ನು ಒಪ್ಪುವುದಿಲ್ಲ ಮತ್ತು ಎಂದಿಗೂ ಅನುಮತಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

ಹೆಚ್ಚುತ್ತಿರುವ ಸಾವು-ನೋವು, ಜಾಗತಿಕ ಆತಂಕ

ಈ ಯುದ್ಧದಲ್ಲಿ ಈವರೆಗೆ ಇರಾನ್‌ನಲ್ಲಿ ಕನಿಷ್ಠ 1,230, ಲೆಬನಾನ್‌ನಲ್ಲಿ 200 ಮತ್ತು ಇಸ್ರೇಲ್‌ನಲ್ಲಿ ಸುಮಾರು 12 ಜನರು ಮೃತಪಟ್ಟಿದ್ದಾರೆ. ಆರು ಅಮೆರಿಕನ್ ಸೈನಿಕರು ಕೂಡ ಹತ್ಯೆಗೀಡಾಗಿದ್ದಾರೆ. ಈ ಸಂಘರ್ಷದಿಂದಾಗಿ ಗಲ್ಫ್ ರಾಷ್ಟ್ರಗಳ ಇಂಧನ ರಫ್ತಿಗೆ ಅಡ್ಡಿಯಾಗಬಹುದು ಮತ್ತು ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 150 ಡಾಲರ್‌ಗೆ ಏರಬಹುದು, ಎಂದು ಕತಾರ್ ಆತಂಕ ವ್ಯಕ್ತಪಡಿಸಿದೆ. ಈಗಾಗಲೇ ಕಚ್ಚಾ ತೈಲ ಬೆಲೆ ಕಳೆದ ಎರಡು ವರ್ಷಗಳಲ್ಲೇ ಮೊದಲ ಬಾರಿಗೆ 90 ಡಾಲರ್ ಗಡಿ ದಾಟಿದೆ.



151.8 ದಶಲಕ್ಷ ಡಾಲರ್ ವೆಚ್ಚ | ಸಂಸತ್ ಒಪ್ಪಿಗೆ ಇಲ್ಲದೆ ನೇರ ಅನುಮೋದನೆ

ಇಸ್ರೇಲ್‌ಗೆ 12,000 ಬಾಂಬ್ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

ವಾಷಿಂಗ್ಟನ್: ಇರಾನ್ ಯುದ್ಧದ ಮಧ್ಯೆ ಇಸ್ರೇಲ್ ಮನವಿ ಮೇರೆಗೆ 151.8 ದಶಲಕ್ಷ ಡಾಲರ್ ಮೌಲ್ಯದ 12,000 ಬಾಂಬ್‌ಗಳ ತುರ್ತು ಮಾರಾಟಕ್ಕೆ ಅಮೆರಿಕ ಸಂಸತ್ತಿನ ಅನುಮತಿ ಇಲ್ಲದೆಯೇ ಟ್ರಂಪ್ ಸರ್ಕಾರ ನೇರ ಅನುಮೋದನೆ ನೀಡಿದೆ. ಮಧ್ಯ ಪ್ರಾಚ್ಯದಲ್ಲಿ ಇರಾನ್ ಮೇಲಿನ ಯುದ್ಧ ಗಂಭೀರ ರೂಪ ತಾಳಿದ್ದು, ತಲಾ 1,000 ಪೌಂಡ್ ಭಾರದ 12,000 ಬಿಎಲ್‌ಯು -110ಎ/ಬಿ ಬಾಂಬ್‌ಗಳಿಗಾಗಿ ಇಸ್ರೇಲ್ ಮನವಿ ಮಾಡಿತ್ತು. ಈ ಮಾರಾಟದಲ್ಲಿ ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಯೂ ಇರುವುದರಿಂದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಅವರು ತಕ್ಷಣವೇ ಅನುಮೋದನೆ ನೀಡಿದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಸಂಸತ್ತಿನ ಒಪ್ಪಿಗೆ ಇಲ್ಲದೆ ಅನುಮೋದನೆ: ಸಾಮಾನ್ಯವಾಗಿ ಶಸ್ತ್ರಾಸ್ತ್ರ ಮಾರಾಟ ಒಪ್ಪಂದಗಳಿಗೆ ಅಮೆರಿಕ ಸಂಸತ್ತಿನ ಅನುಮತಿ ಪಡೆಯಬೇಕು. ಆದರೆ ಇಸ್ರೇಲ್ ತುರ್ತು ಮನವಿಗೆ ಸ್ಪಂದಿಸಿದ ರುಬಿಯೋ ಅನುಮೋದನೆ ನೀಡಿದ್ದಾರೆ. ಈ ಒಪ್ಪಂದವು, ಪ್ರಸ್ತುತ ಮತ್ತು ಭವಿಷ್ಯದ ಆಕ್ರಮಣಗಳನ್ನು ಎದುರಿಸುವಲ್ಲಿ ಇಸ್ರೇಲ್ ಸಾಮರ್ಥ್ಯ ಬಲವರ್ಧಿಸಲಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ. ಹೊಸ ಪ್ಯಾಕೇಜ್‌ನಲ್ಲಿ ಬಾಂಬ್‌ಗಳಷ್ಟೇ ಅಲ್ಲದೆ ಎಂಜಿನಿಯರಿಂಗ್, ಲಾಜಿಸ್ಟಿಕ್ಸ್ ಮತ್ತು ತಾಂತ್ರಿಕ ಸೇವೆಗಳನ್ನೂ ಒದಗಿಸಲಿದೆ.



30ಕ್ಕೂ ಹೆಚ್ಚು ಯುದ್ಧನೌಕೆಗಳನ್ನು ಮುಳುಗಿಸಿದ ಅಮೆರಿಕ

ವಾಷಿಂಗ್ಟನ್: ಇರಾನ್ ವಿರುದ್ಧ ಯುದ್ಧ ಆರಂಭವಾದಾಗಿನಿಂದ ಈವರೆಗೆ ಅಮೆರಿಕ ಇರಾನ್‌ನ 30ಕ್ಕೂ ಹೆಚ್ಚು ನೌಕಾಪಡೆ ಹಡಗುಗಳನ್ನು ಮುಳುಗಿಸಿದೆ, ಎಂದು ಯುನೈಟೆಡ್ ಸ್ಟೇಟ್ಸ್ ಸೆಂಟ್ರಲ್ ಕಮಾಂಡ್ (ಸೆಂಟ್‌ಕಾಮ್) ನ ಉನ್ನತ ಮಿಲಿಟರಿ ಕಮಾಂಡರ್ ತಿಳಿಸಿದ್ದಾರೆ. ಅಮೆರಿಕದ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಅಡ್ಮಿರಲ್ ಬ್ರಾಡ್ ಕೂಪರ್ ಮಾತನಾಡಿ, ನಾಶಪಡಿಸಲಾದ ಹಡಗುಗಳಲ್ಲಿ ಎರಡನೇ ಮಹಾಯುದ್ಧದ ಕಾಲದ ವಿಮಾನವಾಹಕ ನೌಕೆಯ ಗಾತ್ರದಷ್ಟೇ ದೊಡ್ಡದಾದ ಇರಾನ್‌ನ 'ಡ್ರೋನ್-ವಾಹಕ' ಹಡಗು ಕೂಡ ಸೇರಿದೆ. ಸಂಘರ್ಷದ ಆರಂಭಿಕ ದಿನಗಳಿಗೆ ಹೋಲಿಸಿದರೆ ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ಸುಮಾರು ಶೇ. 90 ರಷ್ಟು ಕುಸಿದಿವೆ ಎಂದು ಹೇಳಿದ್ದಾರೆ. ಇರಾನ್‌ನ ಮಿಲಿಟರಿ ಮೂಲಸೌಕರ್ಯಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಸತತ ದಾಳಿಗಳು ಹಾಗೂ ಇರಾನ್‌ನ ಡ್ರೋನ್ ಬೆದರಿಕೆಗಳನ್ನು ಎದುರಿಸಲು ವಿನ್ಯಾಸಗೊಳಿಸಲಾದ 'ಲೂಕಾಸ್' ಅಟ್ಯಾಕ್ ಡ್ರೋನ್‌ಗಳಂತಹ ಹೊಸ ತಂತ್ರಜ್ಞಾನಗಳ ಬಳಕೆಯೇ ಈ ಕುಸಿತಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಪ್ರಾದೇಶಿಕ ವ್ಯಾಪ್ತಿಗೆ ಹರಡಿದ ಯುದ್ಧ

ಈ ಸಂಘರ್ಷ ಈಗ ಉಭಯ ದೇಶಗಳ ಗಡಿ ಮೀರಿ ಹರಡುತ್ತಿದೆ. ಬಹ್ರೇನ್ ಮೇಲೆ ಇರಾನ್ ದಾಳಿ ನಡೆಸಿದ ಬೆನ್ನಲ್ಲೇ ಅಲ್ಲಿ ವಾಯುದಾಳಿಯ ಮುನ್ನೆಚ್ಚರಿಕೆ ಸೈರನ್ ಮೊಳಗಿದೆ. ಸೌದಿ ಅರೇಬಿಯಾದ ಶೈಬಾ ತೈಲ ಕೇಂದ್ರದತ್ತ ಬರುತ್ತಿದ್ದ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಮತ್ತು ಅಮೆರಿಕದ ಪಡೆಗಳಿರುವ ಪ್ರಿನ್ಸ್ ಸುಲ್ತಾನ್ ವಾಯು ನೆಲೆಯನ್ನು ಗುರಿಯಾಗಿಸಿಕೊಂಡಿದ್ದ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ತಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ ಗೆಲುವಿಗೆ ಪಾದ್ರಿ ಪ್ರಾರ್ಥನೆ

ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ಶ್ವೇತಭವನದಲ್ಲಿ ಯುದ್ಧದ ಬಗ್ಗೆ ಪಾದ್ರಿಯೊಬ್ಬರು ಪ್ರಾರ್ಥಿಸುತ್ತಿರುವ ವಿಡಿಯೋ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಉಲ್ಬಣಗೊಳ್ಳುತ್ತಿದ್ದಂತೆ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ನಾನು ನಿಮ್ಮ ಅನುಗ್ರಹಕ್ಕಾಗಿ ನಿಮ್ಮ ರಕ್ಷಣೆಗಾಗಿ ಪ್ರಾರ್ಥಿಸುತ್ತೇನೆ. ನಮ್ಮ ಪಡೆಗಳಿಗೆ ಮತ್ತು ನಮ್ಮ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ಅನುಗ್ರಹ ಮತ್ತು ರಕ್ಷಣೆಗಾಗಿ ನಾನು ಪ್ರಾರ್ಥಿಸುತ್ತೇನೆ ಎಂದು ಪಾದ್ರಿ ಹೇಳುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ.



ನೆರೆ ರಾಷ್ಟಗಳಿಗೆ ಕ್ಷಮೆ ಕೇಳಿದ ಇರಾನ್ ಅಧ್ಯಕ್ಷ

ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ಯುದ್ಧದ ಸಮಯದಲ್ಲಿ ಪ್ರಾರಂಭಿಸಿದ ದಾಳಿಗಳಿಗಾಗಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಅವರು ನೆರೆಯ ರಾಷ್ಟ್ರಗಳಿಗೆ ಕ್ಷಮೆಯಾಚಿಸಿದ್ದಾರೆ. ಇಸ್ರೇಲ್ ಅವರು ಮೊದಲು ದಾಳಿ ಮಾಡುವವರೆಗೆ ನಾವು ಅದರ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಇರಾನ್‌ನಿಂದ ದಾಳಿಗೊಳಗಾದ ನೆರೆಯ ರಾಷ್ಟ್ರಗಳಿಗೆ ನಾನು ನನ್ನ ಪರವಾಗಿ ಮತ್ತು ರಾಷ್ಟ್ರದ ಪರವಾಗಿ ಕ್ಷಮೆಯಾಚಿಸುತ್ತೇನೆ. ಮಧ್ಯಂತರ ನಾಯಕತ್ವ ಮಂಡಳಿಯು ಶುಕ್ರವಾರ ನೆರೆಯ ದೇಶಗಳ ಮೇಲೆ ಯಾವುದೇ ದಾಳಿಗಳನ್ನು ಮಾಡಲಾಗುವುದಿಲ್ಲ. ಆ ದೇಶಗಳಿಂದ ನಮ್ಮ ಮೇಲೆ ದಾಳಿ ನಡೆಯದ ಹೊರತು ಯಾವುದೇ ಕ್ಷಿಪಣಿಗಳನ್ನು ಹಾರಿಸಲಾಗುವುದಿಲ್ಲ ಎಂದು ಒಪ್ಪಿಕೊಂಡಿದೆ ಎಂದು ಪೆಜೆಷ್ಕಿಯನ್ ಇರಾನಿನ ರಾಜ್ಯ ಟಿವಿ ಪ್ರಸಾರ ಮಾಡಿದ ಭಾಷಣದಲ್ಲಿ ಹೇಳಿದರು. ಅಂತೆಯೇ ಇರಾನ್ ಮೇಲೆ ದಾಳಿ ಮಾಡಿ ತಮ್ಮ ಸರ್ವೋಚ್ಚ ನಾಯಕ ಖಮೆನಿ ಹತ್ಯೆ ಮಾಡಿದ ಇಸ್ರೇಲ್-ಅಮೆರಿಕವನ್ನ ಕ್ಷಮಿಸೋ ಮಾತೇ ಇಲ್ಲ. ತಮ್ಮ ದೇಶವು ಇಸ್ರೇಲ್ ಮತ್ತು ಅಮೆರಿಕ ಮುಂದೆ ಎಂದೂ ಶರಣಾಗುವುದಿಲ್ಲ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

ಇರಾನ್ ಹೊಸ ಅಧ್ಯಾಯಕ್ಕೆ ಬಲಪಂಥೀಯ ಪಕ್ಷ ಸ್ಥಾಪನೆ

ಟೆಹ್ರಾನ್: ಇರಾನ್ ರಾಷ್ಟ್ರೀಯವಾದಿ ಬಣ ಹೊಸ ಪಕ್ಷ ಸ್ಥಾಪನೆಯೊಂದಿಗೆ ದಶಕಗಳ ಇಸ್ಲಾಮಿಕ್ ಆಡಳಿತದ ನಂತರ ಇರಾನ್‌ನ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದಿದೆ. ಇಸ್ಲಾಮಿಕ್ ಕ್ರಾಂತಿಗೂ ಮುನ್ನ ರಾಷ್ಟ್ರಧ್ವಜದಲ್ಲಿದ್ದ ಸಿಂಹ ಮತ್ತು ಸೂರ್ಯ ಬಲಪಂಥೀಯ ಪಕ್ಷದ ಚಿಹ್ನೆಯಾಗಿ ಮರಳಿವೆ. ಇರಾನ್‌ನ ದಮಾವಂದ್ ಪರ್ವತದಲ್ಲಿ ಖಡ್ಗ ಹಿಡಿದ ಸಿಂಹ ಮತ್ತು ಸೂರ್ಯೋದಯ, ಹಳೆಯ ಪರ್ಷಿಯನ್ ಸಂಪ್ರದಾಯವಾದಿ ಸಂಕೇತಗಳನ್ನು ಕನ್ಸರ್ವೇಟಿವ್ ಪಕ್ಷ (ಸಿಪಿಐ) ತನ್ನ ಧ್ವಜದಲ್ಲಿ ಬಳಸಿಕೊಂಡಿದೆ.



ಕಿರುಸುದ್ದಿ

ಭಾರತದೊಂದಿಗೆ ರಕ್ಷಣಾ ಸಹಕಾರ ವಿಸ್ತರಣೆಗೆ ಬದ್ಧ

ಹೊಸದಿಲ್ಲಿ: ಭಾರತದೊಂದಿಗೆ ವಿಶೇಷವಾಗಿ ಸುಧಾರಿತ ಡ್ರೋನ್ ತಂತ್ರಜ್ಞಾನಗಳಲ್ಲಿ ರಕ್ಷಣಾ ಸಹಕಾರವನ್ನು ವಿಸ್ತರಿಸಲು ಪೋಲೆಂಡ್ ಎದುರು ನೋಡುತ್ತಿದೆ ಎಂದು ಪೋಲೆಂಡ್ ವಿದೇಶಾಂಗ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರ್ಥಿಕ ಅಭಿವೃದ್ಧಿ ಮತ್ತು ತಂತ್ರಜ್ಞಾನ ಸಚಿವಾಲಯದ ಅಧೀನ ಕಾರ್ಯದರ್ಶಿ ಮೈಕೆಲ್ ಬರಾನೋವ್ಸ್ಕಿ ಅವರು ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ, ಭಾರತವನ್ನು ಕೇವಲ ಮಾರುಕಟ್ಟೆಯಾಗಿ ಮಾತ್ರವಲ್ಲದೆ ಕಾರ್ಯತಂತ್ರದ ಪಾಲುದಾರನಾಗಿ ನೋಡುವುದಕ್ಕೆ ಒತ್ತು ನೀಡಿದರು.

ತೈಲ ಆಮದು: ಸ್ವತಂತ್ರ ನಿಲುವು ಸ್ಪಷ್ಟಪಡಿಸಿದ ಭಾರತ

ಹೊಸದಿಲ್ಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಭಾರತಕ್ಕೆ ಯಾವುದೇ ರಾಷ್ಟ್ರದ ಅನುಮತಿಯ ಅಗತ್ಯವಿಲ್ಲ, ದೇಶ ಈ ವಿಚಾರದಲ್ಲಿ ಸ್ವಾಯತ್ತತೆಯನ್ನು ಬಿಟ್ಟುಕೊಟ್ಟಿಲ್ಲ, ಎಂದು ಭಾರತೀಯ ಅಧಿಕಾರಿಗಳು ದೃಢಪಡಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿಸಲು ಅಮೆರಿಕಾ ಭಾರತಕ್ಕೆ ತಾತ್ಕಾಲಿಕ ಸಡಿಲಿಕೆ ನೀಡಿರುವುದಾಗಿ ಹೇಳಿಕೆ ಬಂದ ಬೆನ್ನಲ್ಲೇ ಶನಿವಾರ ಈ ಸ್ಪಷ್ಟನೆ ನೀಡಲಾಗಿದೆ.

ಎಲ್‌ಪಿಜಿ ಬೆಲೆ 60 ರೂ. ಏರಿಕೆ, ಹೊಸ ದರ ಜಾರಿ

ಹೊಸದಿಲ್ಲಿ: ಇರಾನ್ ಯುದ್ಧದ ನಡುವೆ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ದೇಶಾದ್ಯಂತ 60 ರೂ. ಏರಿಕೆಯಾಗಿದ್ದು, ಶನಿವಾರವೇ ಹೊಸ ದರವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. 14.2 ಕೆ.ಜಿ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 60 ರೂ. ಹೆಚ್ಚಿಸಲಾಗಿದೆ. ಅದೇ ರೀತಿ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 115 ರೂ.ನಷ್ಟು ಹೆಚ್ಚಿಸಲಾಗಿದೆ. ಇವುಗಳು ಹೋಟೆಲ್, ರೆಸ್ಟೋರೆಂಟ್ ಮತ್ತು ಸಣ್ಣ ಉದ್ಯಮಗಳ ಮೇಲೆ ಪರಿಣಾಮ ಬೀರಲಿದೆ.



ಇದೇವೇಳೆ ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಭರವಸೆ ನೀಡಿದ್ದು, ಗ್ರಾಹಕರು ತೈಲ ಪೂರೈಕೆ ವ್ಯತ್ಯಯಗಳ ಬಗ್ಗೆ ಚಿಂತಿಸಬೇಕಾದ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ. ಭಾರತೀಯರಿಗೆ ಕೈಗೆಟಕುವ ದರದಲ್ಲಿ ಇಂಧನ ಲಭ್ಯತೆ ನೋಡಿಕೊಳ್ಳುವುದು ನಮ್ಮ ಪ್ರಾಥಮಿಕ ಆದ್ಯತೆಯಾಗಿದೆ ಎಂದು ಸಚಿವರು ಎಕ್ಸ್ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ದೇಶದಲ್ಲಿ ಇಂಧನ ಕೊರತೆ ಇದೆಯೆಂಬ ವದಂತಿಯನ್ನು ಅವರು ತಳ್ಳಿಹಾಕಿದ್ದು, ಆಧಾರರಹಿತ ವರದಿ ಎಂದಿದ್ದಾರೆ.

ಬೆಂಗಳೂರಿನಲ್ಲಿ ಎಲ್‌ಪಿಜಿ ದರ: ಬೆಂಗಳೂರಿನಲ್ಲಿ 14.2 ಕೆ.ಜಿ. ಗೃಹ ಬಳಕೆ ಸಿಲಿಂಡರ್ ಬೆಲೆ 855.5ರಿಂದ 915.5 ರೂ. ತಲುಪಿದೆ. 19 ಕೆ.ಜಿ. ಎಲ್‌ಪಿಜಿ ಬೆಲೆ 144 ರೂ. ಏರಿಕೆ ಕಂಡು 1958 ರೂ. ತಲುಪಿದೆ.

ವಿದೇಶಿ ಕರೆನ್ಸಿ ಸಂಪತ್ತು ಹೆಚ್ಚಳ: ಆರ್‌ಬಿಐ ವರದಿ

ಹೊಸದಿಲ್ಲಿ: ಅತ್ತ ಇಸ್ರೇಲ್ -ಇರಾನ್ ಸಂಘರ್ಷ ಮುಂದುವರಿದಿರುವಂತೆಯೇ, ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ಜನತೆಗೆ ಮಹತ್ವದ ಸುದ್ದಿ ನೀಡಿದೆ. ವಿದೇಶಿ ವಿನಿಮಯ ಮೀಸಲಿನ ಅತಿದೊಡ್ಡ ಭಾಗವೆಂದು ಪರಿಗಣಿಸಲಾದ ವಿದೇಶಿ ಕರೆನ್ಸಿ ಸಂಪತ್ತು 561ಮಿ.ಡಾ.ಗಳಷ್ಟು ಹೆಚ್ಚಳಗೊಂಡು ಫೆ.27ಕ್ಕೆ ಅಂತ್ಯಗೊಂಡ ವಾರದಲ್ಲಿ 573. 12ಬಿಲಿಯನ್ ಡಾಲರ್‌ಗೇರಿರುವುದಾಗಿ ಆರ್‌ಬಿಐ ಮಾಹಿತಿ ನೀಡಿದೆ.

ಸಾರ್ವಕಾಲಿಕ ದಾಖಲೆ: ಅಂತಾರಾಷ್ಟ್ರೀಯ ಉದ್ವಿಗ್ನತೆಯ ಸನ್ನಿವೇಶದಲ್ಲೇ ಭಾರತದ ವಿದೇಶಿ ವಿನಿಮಯ ಮೀಸಲು 4.88ಬಿ.ಡಾ. ಏರಿಕೆಯಾಗಿ ಸಾರ್ವಕಾಲಿಕ ದಾಖಲೆಯಾದ 728.49ಬಿ.ಡಾ.ತಲುಪಿರುವುದು ಆರ್‌ಬಿಐ ಬಿಡುಗಡೆಗೊಳಿಸಿದ ಅಂಕಿ-ಅಂಶಗಳಿಂದ ವ್ಯಕ್ತವಾಗಿದೆ. ಇದು ಭಾರತದ ಆರ್ಥಿಕ ತಳಹದಿ ಸುಭದ್ರವಾಗಿರುವುದನ್ನು ಎತ್ತಿತೋರಿದೆ. ಡಾಲರ್ ಲೆಕ್ಕದಲ್ಲಿ ಹೇಳುವುದಾದರೆ , ಈ ಸೊತ್ತುಗಳು ಇತರ ಪ್ರಮುಖ ಕರೆನ್ಸಿಗಳಾದ ಯುರೋ, ಬ್ರಿಟಿಷ್ ಪೌಂಡ್ ಸ್ಟೆರ್ಲಿಂಗ್, ಜಪಾನಿನ ಯೆನ್‌ನಂತಹವುಗಳ ಮೌಲ್ಯಗಳಲ್ಲಿ ಆಗುತ್ತಿರುವ ಏರಿಳಿತಗಳ ಪರಿಣಾಮದ ಹೊರತಾಗಿಯೂ ಈ ಮೀಸಲು ಇರುವುದು ಗಮನಾರ್ಹವಾಗಿದೆ.

ಭಾರತೀಯ ಕೇಂದ್ರೀಯ ಬ್ಯಾಂಕ್‌ನ ಚಿನ್ನದ ಮೀಸಲು ಪ್ರಮಾಣ ಕೂಡ 4.14ಬಿಲಿಯನ್ ಡಾ.ಗಳಷ್ಟು ಹೆಚ್ಚಳಗೊಂಡು 131.63ಬಿ.ಡಾ.ಗಳಿಗೇರಿದೆ.ವಿಶೇಷ ಹಿಂತೆಗೆತ ಹಕ್ಕುಗಳು(ಎಸ್‌ಡಿಆರ್) ಕೂಡ 26ಮಿ.ಡಾ.ಹೆಚ್ಚಳವಾಗಿ 18.87ಬಿ.ಡಾ.ಗೇರಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ನಲ್ಲಿ ಭಾರತೀಯ ಮೀಸಲು ಕೂಡ 158ಮಿ.ಡಾ.ಹೆಚ್ಚಳಗೊಡಯ 4.87ಬಿ.ಡಾ.ತಲುಪಿರುವುದಾಗಿಯೂ ಅಂಕಿ-ಅಂಶಗಳು ತಿಳಿಸಿವೆ.

ಮುಂದಿನ ವರ್ಷಾಂತ್ಯಕ್ಕೆ ಏಡ್ಸ್ ನಿಯಂತ್ರಣ ಗುರಿ

ಹೊಸದಿಲ್ಲಿ: ಮಿಷನ್ ಏಡ್ಸ್ ಸುರಕ್ಷಾ ಅನ್ವಯದಲ್ಲಿ, ಭಾರತವು 2027ರ ಡಿಸೆಂಬರ್ 1ರ ವಿಶ್ವ ಏಡ್ಸ್ ದಿನದ ವೇಳೆಗೆ ಎಚ್‌ಐವಿ ನಿಯಂತ್ರಣ ಸಾಧಿಸುವ ಗುರಿ ಹೊಂದಲಿದೆ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ (ನ್ಯಾಕೊ) ಮಹಾನಿರ್ದೇಶಕ ಡಾ. ರಾಕೇಶ್ ಗುಪ್ತಾ ಹೇಳಿದ್ದಾರೆ.



ದೇಶಾದ್ಯಂತ ಅನುಷ್ಠಾನಗೊಳ್ಳುತ್ತಿರುವ 'ಮಿಷನ್ ಏಡ್ಸ್ ಸುರಕ್ಷಾ' ಭಾಗವಾಗಿ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯು ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ 'ಸುರಕ್ಷಾ ಸಂಕಲ್ಪ ಕಾರ್ಯಗಾರ'ವನ್ನು ಉದ್ದೇಶಿ ಮಾತನಾಡಿದ ಅವರು, ಭಾರತದಲ್ಲಿ ಎಚ್‌ಐವಿ ಸಾಂಕ್ರಾಮಿಕವನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರುವ ಗುರಿ ಹೊಂದಲಾಗಿದೆ. 2027ರ ಡಿಸೆಂಬರ್ 1ರೊಳಗೆ ದೇಶವನ್ನು ಎಚ್‌ಐವಿ ಮುಕ್ತವಾಗಿಸಲು ಕೇಂದ್ರ ಸರ್ಕಾರವು 'ಮಿಷನ್ ಏಡ್ಸ್ ಸುರಕ್ಷಾ' ಮೂಲಕ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ, ಜಾಗತಿಕ ಗುರಿಗಳಾದ 95-95-99 ಸಾಧಿಸುವ ಗುರಿ ಹೊಂದಿದೆ. ಹೆಚ್ಚಿನ ಎಚ್‌ಐವಿ ಪ್ರಭಾವ ಮತ್ತು ಸೋಂಕಿನ ಪ್ರಮಾಣವಿರುವ 219 ಆದ್ಯತೆಯ ಜಿಲ್ಲೆಗಳನ್ನು ದೇಶಾದ್ಯಂತ ಗುರುತಿಸಲಾಗಿದೆ. ಸೋಂಕಿನ ಪ್ರಮಾಣ, ಪ್ರಸ್ತುತತೆ, ರೋಗದ ಹೊರೆ ಮತ್ತು ಹೆಚ್ಚಿನ ಅಪಾಯದ ಗುಂಪುಗಳ ಆಧಾರದ ಮೇಲೆ ಗುರುತಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕದ ಎಚ್‌ಐವಿ ಸ್ಥಿತಿಗತಿ ಬಗ್ಗೆ ವಿಶೇಷ ಗಮನ ಹರಿಸಲಾಗುತ್ತಿದೆ. ರಾಜ್ಯದಲ್ಲಿ ಎಚ್‌ಐವಿ ಪ್ರಸ್ತುತತೆ ಶೇ. 0.44ರಷ್ಟಿದ್ದು, ಇದು ರಾಷ್ಟ್ರೀಯ ಸರಾಸರಿಯಾದ ಶೇ.0.2ಗಿಂತ ಹೆಚ್ಚಾಗಿದೆ ಎಂದಿದ್ದಾರೆ.

ಡೇರಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಖುಲಾಸೆ

ಚಂಡೀಗಢ: 2002ರ ಪತ್ರಕರ್ತ ರಾಮ್ ಚಂದರ್ ಛತ್ರಪತಿ ಕೊಲೆ ಪ್ರಕರಣದಲ್ಲಿ, ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಸಿಂಗ್‌ನನ್ನು ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ಶನಿವಾರ ಖುಲಾಸೆ ಮಾಡಿದೆ. ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ಮತ್ತು ನ್ಯಾಯಮೂರ್ತಿ ವಿಕ್ರಮ್ ಅಗರ್ವಾಲ್ ಅವರನ್ನೊಳಗೊಂಡ ವಿಭಾಗೀಯ ಪೀಠ, 2019ರ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ್ದ ಜೀವಾವಧಿ ಶಿಕ್ಷೆಯ ತೀರ್ಪನ್ನು ರದ್ದುಗೊಳಿಸಿದೆ. ಡೇರಾದಲ್ಲಿ ನಡೆಯುತ್ತಿದ್ದ ಲೈಂಗಿಕ ಶೋಷಣೆಯನ್ನು ಬಹಿರಂಗಪಡಿಸಿದ್ದಕ್ಕಾಗಿ ಸಿರ್ಸಾದಲ್ಲಿ ಛತ್ರಪತಿ ಮೇಲೆ ಗುಂಡು ಹಾರಿಸಲಾಗಿತ್ತು. ಈ ಪ್ರಕರಣದಲ್ಲಿ ರಾಮ್ ರಹೀಂ ವಿರುದ್ಧ ವಿದ್ದ ಆರೋಪಗಳನ್ನು ಹೈಕೋರ್ಟ್ ವಜಾಗೊಳಿಸಿದೆ. ಆದರೆ, ಪ್ರಕರಣದ ಇತರ ಮೂವರು ಆರೋಪಿಗಳ ಶಿಕ್ಷೆಯನ್ನು ಎತ್ತಿ ಹಿಡಿಯಲಾಗಿದೆ. ಈ ಪ್ರಕರಣದಲ್ಲಿ ಬಿಡುಗಡೆಯಾಗಿದ್ದರೂ, ಅತ್ಯಾಚಾರ ಪ್ರಕರಣದಲ್ಲಿ 20 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿರುವ ರಾಮ್ ರಹೀಂ, ರೋಹ್ಟಕ್‌ನ ಸುನಾರಿಯಾ ಜೈಲಿನಲ್ಲೇ ಇರಲಿದ್ದಾನೆ.

ಐರಿಸ್ ದೆನಾ ಮುಳುಗಡೆಗೂ ಮುನ್ನ ಕೊಚ್ಚಿಯಲ್ಲಿ ಲವಣ್ ಡಾಕ್

ಮಾನವೀಯ ದೃಷ್ಟಿಯಿಂದ ಲಂಗರಿಗೆ ಅವಕಾಶ

ಹೊಸದಿಲ್ಲಿ: ಇರಾನ್ ಯುದ್ಧನೌಕೆ ಐರಿಸ್ ದೆನಾವನ್ನು ಅಮೆರಿಕ ನೌಕಾಪಡೆ ಹಿಂದು ಮಹಾಸಾಗರದಲ್ಲಿ ಮುಳುಗಿಸಿದ ಬಗ್ಗೆ ಮೊದಲ ಪ್ರತಿಕ್ರಿಯೆ ನೀಡಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅದೇ ದಿನ ಇರಾನ್‌ನ ಇನ್ನೊಂದು ಯುದ್ಧನೌಕೆ ಲವಣ್‌ಗೆ ಮಾನವೀಯತೆ ದೃಷ್ಟಿಯಿಂದ ನಿಲುಗಡೆಗೆ ಅವಕಾಶ ಮಾಡಿಕೊಟ್ಟಿದ್ದೆವು ಎಂದು ಹೇಳಿದ್ದಾರೆ.

ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದ 2026ರಲ್ಲಿ ಮಾತನಾಡಿದ ಸಚಿವ ಜೈಶಂಕರ್, ನಾನೂ ವಿಶ್ವಸಂಸ್ಥೆಯ ಸಮುದ್ರ ಕಾನೂನು ಒಪ್ಪಂದ 1982 ಮತ್ತು ಅಂತಾರಾಷ್ಟ್ರೀಯ ಕಾನೂನು ಬೆಂಬಲಿಸುತ್ತೇವೆ. ಆದರೆ ಇರಾನ್ ಮನವಿ ಮಾಡಿದ್ದರಿಂದ ಮಾನವೀಯ ದೃಷ್ಟಿಯಿಂದ ಕೊಚ್ಚಿಯಲ್ಲಿ ಡಾಕ್ ಮಾಡಲು ಅವಕಾಶ ನೀಡಿದ್ದೆವು ಎಂದು ಹೇಳಿದ್ದಾರೆ.

ಮಾ.1ರಂದು ಅವರಿಗೆ ಒಳಗೆ ಪ್ರವೇಶಿಸಲು ಅನುಮತಿಸಿದ್ದೆವು. ಇಲ್ಲಿಗೆ ತಲುಪಲು ಅವರಿಗೆ ಕೆಲವು ದಿನಗಳು ಬೇಕಾದವು. ನಂತರ ಇರಾನ್ ಹಡಗುಗಳು ಕೊಚ್ಚಿಯಲ್ಲಿ ಲಂಗರು ಹಾಕಿದ್ದವು. ಬಹಳಷ್ಟು ಯುವ ಕ್ಯಾಡೆಟ್‌ಗಳು ಇದ್ದರು. ಐರಿಸ್ ಲವಣ್ ಅಷ್ಟೇ ಅಲ್ಲ, ಇನ್ನೂ ಎರಡು ಯುದ್ಧನೌಕೆಗಳಿದ್ದವು ಎಂದು ಜೈಶಂಕರ್ ತಿಳಿಸಿದ್ದಾರೆ. ಹಡಗುಗಳು ಇಲ್ಲಿಗೆ ಫ್ಲೀಟ್ ರಿವ್ಯೂ ನಡೆಸಲು ಬಂದಾಗ ಮತ್ತು ಇಲ್ಲಿಂದ ಹೊರಟಾಗಿನ ಪರಿಸ್ಥಿತಿ ಸಂಪೂರ್ಣ ಬೇರೆಯದೇ ಆಗಿತ್ತು. ಆದರೆ ಕೆಟ್ಟ ಪರಿಸ್ಥಿತಿಯಲ್ಲಿ ಸಿಲುಕಿದ್ದರು. ಅದರಲ್ಲೊಂದು (ಐರಿಸ್ ದೆನಾ) ಶ್ರೀಲಂಕಾ ಸಮೀಪ ದುರದೃಷ್ಟವಶಾತ್ ದಾಳಿಗೆ ಒಳಗಾಗಿದ್ದು, ಅದರಲ್ಲಿ ಒಬ್ಬರೂ ಉಳಿದಿಲ್ಲ ಎಂದು ಜೈಶಂಕರ್ ವಿವರಿಸಿದರು.

ಹಿಂದು ಮಹಾಸಾಗರದಲ್ಲಿ ಭಾರತವೊಂದೇ ರಕ್ಷಣೆ ನೀಡುತ್ತದೆ. ಆದರೆ ಸತ್ಯಾಂಶ ತಿಳಿಯದೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಕಳೆದ 5 ದಶಕಗಳಿಂದ ಡೀಗೋ ಗಾರ್ಸಿಯಾ (ಬ್ರಿಟನ್-ಅಮೆರಿಕ ಜಂಟಿ ರಹಸ್ಯ ಮಿಲಿಟರಿ ದ್ವೀಪ) ಹಿಂದು ಮಹಾಸಾಗರದಲ್ಲಿದೆ ಎಂದು ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಆಪರೇಷನ್ ಎಪಿಕ್ ಫ್ಯೂರಿ ಅನ್ವಯದಲ್ಲಿ ದೆನಾ ಯುದ್ಧನೌಕೆಯ ಮೇಲೆ ಅಮೆರಿಕ ಫೆ.28ರಂದು ದಾಳಿ ನಡೆಸಿತ್ತು. ಅದರಲ್ಲಿದ್ದ 80ಕ್ಕೂ ಹೆಚ್ಚು ನಾವಿಕರು ಬಲಿಯಾಗಿದ್ದು, 32 ಮಂದಿಯನ್ನು ಶ್ರೀಲಂಕಾ ನೌಕಾಪಡೆ ರಕ್ಷಿಸಿತ್ತು.

ಭಾರತದ ಪ್ರಗತಿ ತಡೆರಹಿತ

ಭಾರತದ ಪ್ರಗತಿ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಒಂದು ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಇತರ ರಾಷ್ಟ್ರಗಳು ಪಾತ್ರ ವಹಿಸುತ್ತವೆ. ಆದರೆ ಭಾರತದ ಪ್ರಗತಿಯನ್ನು ಭಾರತವೇ ನಿರ್ಧರಿಸಲಿದೆ ಎಂದು ಸಚಿವ ಜೈಶಂಕರ್ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಭಾರತವನ್ನು ದೂರ ಮಾಡಿ ಪಾಕ್ ಗೆಳೆತನ ಸೂಕ್ತವಲ್ಲ ಎಂದ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ

ಸಂಬಂಧ ನಿಭಾಯಿಸುವಲ್ಲಿ ಎಡವಿದ ಟ್ರಂಪ್

ಹೊಸದಿಲ್ಲಿ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದೊಂದಿಗಿನ ಸಂಬಂಧಗಳನ್ನು ನಿಭಾಯಿಸುವಲ್ಲಿ ಭಾರೀ ದೊಡ್ಡ ತಪ್ಪುಗಳನ್ನು ಎಸಗಿದ್ದಾರೆ ಎಂಬುದಾಗಿ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಟೋನಿ ಅಬೋಟ್ ಹೇಳಿದ್ದಾರೆ.



ಭಾರತವನ್ನು ದೂರ ಮಾಡಿ ಪಾಕಿಸ್ತಾನಿ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಸ್ವಾಗತ ಹೇಳಿದ ಟ್ರಂಪ್ ನಿಲುವು ಭಾರೀ ಪ್ರಮಾದವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ತಾನು ಟ್ರಂಪ್‌ರ ವಿದೇಶಾಂಗ ನೀತಿಯ ಜಾಗತಿಕ ಅಭಿಮಾನಿಯಲ್ಲ. ಟ್ರಂಪ್ ಎಸಗಿದ ಮೂರು ನಿರ್ದಿಷ್ಟ ತಪ್ಪುಗಳನ್ನು ಅವರು ಎತ್ತಿತೋರಿದ್ದು, ಇದರಲ್ಲಿ ಭಾರತವನ್ನು ಅನಪೇಕ್ಷಿತವಾಗಿ ದೂರವಿಟ್ಟ ನಿಲುವು ಟ್ರಂಪ್ ಎಸಗಿದ ಭಾರೀ ದೊಡ್ಡ ತಪ್ಪು.ಮೊದಲು ಭಾರತದ ಮೇಲೆ ದಂಡನಾ ಸುಂಕ ಹೇರಿದರು. ತಾನು ಭಾರತ -ಪಾಕಿಸ್ತಾನ ಸಂಘರ್ಷವನ್ನು ನಿಲ್ಲಿಸಿದ್ದು ತಾನೇ ಎಂದು ಹೇಳಿಕೊಂಡಿದ್ದು. ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಶ್ವೇತಭವನದಲ್ಲಿ ಸ್ವಾಗತ ಕೋರಿದ್ದು ಇವೆಲ್ಲ ಟ್ರಂಪ್ ಮಾಡಿದ ದೊಡ್ಡ ಎಡವಟ್ಟುಗಳು ಎಂದು ಅವರು ಎನ್‌ಡಿಟಿವಿಗೆ ನೀಡಿದ ಸಂದರ್ಶನವೊಂದರಲ್ಲಿ ಬೊಟ್ಟು ಮಾಡಿದರು.ಪಾಕಿಸ್ತಾನ ಭಾರತದ ವಿರುದ್ಧ ಭಯೋತ್ಪಾದನೆಯನ್ನು ಪ್ರಾಯೋಜಿಸುವ ದೇಶ ಎಂಬುದು ನಿಸ್ಸಂದೇಹದ ವಿಷಯವಾಗಿರುವುದಷ್ಟೇ ಅಲ್ಲದೆ, ದೀರ್ಘಕಾಲದಿಂದ ಇಂತಹ ಕೆಲಸವನ್ನು ಮಾಡುತ್ತಾ ಬಂದಿರುವುದು ಸರ್ವವೇದ್ಯವಾಗಿರುವಾಗ ಟ್ರಂಪ್ ನಡೆ ದೊಡ್ಡ ಪ್ರಮಾದ ಎಂದರು.

ಭಾರತದೊಂದಿಗೆ ಫೆಬ್ರವರಿಯಲ್ಲಿ ಮುಕ್ತ ವ್ಯಾಪಾರ ಒಪ್ಪಂದವೊಂದನ್ನು ಘೋಷಿಸುವ ಮೂಲಕ ಟ್ರಂಪ್ ಭಾರತದೊಂದಿಗಿನ ಉದ್ವಿಗ್ನತೆಯನ್ನು ಭಾಗಶಃ ಸರಿಪಡಿಸಿಕೊಂಡರು. ಈ ಒಪ್ಪಂದದಂತೆ ಟ್ರಂಪ್ ಭಾರತದ ಅನೇಕ ವಸ್ತುಗಳ ಮೇಲಿನ ಸುಂಕಗಳನ್ನು ಕಡಿಮೆ ಮಾಡಿದರು.ಕೊನೆಗೆ ಹೇಗೋ ತನ್ನ ಮಹಾನ್ ಮಿತ್ರರಲ್ಲಿ ಒಬ್ಬರೆಂದು ಗುರುತಿಸಿದ ಮೋದಿಯವರ ಜೊತೆ ಮರಳಿ ಸ್ನೇಹ ಸಾಧಿಸಿಕೊಂಡರು.ಇದಕ್ಕೂ ಮುನ್ನ ಟ್ರಂಪ್ ಭಾರತದ ವಿರುದ್ಧ ಶೇ.25ರಷ್ಟು ಪ್ರತೀಕಾರದ ಸುಂಕ ವಿಧಿಸಿದ್ದಲ್ಲದೆ, ರಷ್ಯಾದಿಂದ ತೈಲ ಖರೀದಿಸುತ್ತಿರುವುದಕ್ಕಾಗಿ ಭಾರತದ ಮೇಲೆ ಮತ್ತೆ ಶೇ.25ರಷ್ಟು ಹೆಚ್ಚುವರಿ ಸುಂಕ ಹೇರಿದ್ದರು. ಅನಂತರ ಅಮೆರಿಕದ ಸುಪ್ರೀಂಕೋರ್ಟ್ ಕೂಡ ಟ್ರಂಪ್ ಹೇರಿದ ಸುಂಕವನ್ನು ಹಿಂಪಡೆಯುವಂತೆ ಆದೇಶಿಸಿತ್ತು.

ಪ್ರಸಕ್ತ ಮಧ್ಯಪ್ರಾಚ್ಯದ ಸಂಘರ್ಷ ವಿಸ್ತರಿಸುತ್ತಿದ್ದು, ಇದು ಸದ್ಯ ಕೊನೆಗೊಳ್ಳುವ ಸಾಧ್ಯತೆ ಕಂಡು ಬರದಿರುವುದರಿಂದ ಉಂಟಾಗಿರುವ ಅನಿಶ್ಚಿತತೆಯ ಕುರಿತಂತೆ ಅವರನ್ನು ಕೇಳಲಾಯಿತು. ಇರಾನಿನಲ್ಲಿ ಆಡಳಿತ ವ್ಯವಸ್ಥೆ ಬದಲಾಗುವ ಸಾಧ್ಯತೆಯ ಬಗ್ಗೆ ಏನೂ ಹೇಳಲಾಗದು. ಆದಾಗ್ಯೂ ತಕ್ಷಣಕ್ಕೆ ಇಂತಹ ಸಾಧ್ಯತೆ ಇಲ್ಲ. ಯಾಕೆಂದರೆ ಇರಾನಿನ ಈಗಿನ ಆಡಳಿತ ಇನ್ನೂ ಇರಾನಿನ ಕೆಲವು ವರ್ಗಗಳ ಮೇಲೆ ಹಿಡಿತ ಹೊಂದಿದೆ. ಇದನ್ನು ಕೀಳಂದಾಜಿಸಲಾಗದು ಎಂದು ಅವರು ಹೇಳಿದರು. ಆದಾಗ್ಯೂ ಇರಾನಿನಲ್ಲಿನ ಹಾಲಿ ಅಪವಿತ್ರ ಮತೀಯ ನಿರಂಕುಶತೆಯಿಂದ ಹೊರಬರಲು ಸಾಧ್ಯವಾದಲ್ಲಿ ಅದೊಂದು ಪ್ರಮುಖ ಪರಿಣಾಮವಾಗಬಹುದು. ಜತೆಗೆ ಇರಾನಿನಲ್ಲಿ ಇನ್ನು ಹಾಲಿ ಸರಕಾರವೇ ಇರಲಿ ಅಥವಾ ಬದಲಿ ಸರಕಾರವೇ ಬಂದರೂ ಹಿಂದಿನ ಆಕ್ರಮಣಕಾರಿ ಸಾಮರ್ಥ್ಯ ಇರಾನಿಗೆ ಉಳಿಯಲಾರದು ಎಂದರು.

ದ್ವಿತೀಯ ಪಿಯು ಪರೀಕ್ಷೆ ಹಾಜರಾತಿ

ಮಂಗಳೂರು: ಮಾ.7ರಂದು ಶನಿವಾರ ನಡೆದ ದ್ವಿತೀಯ ಪರೀಕ್ಷೆಯ ಹಾಜರಾತಿ ವಿವರ ಇಂತಿವೆ. ಐಚ್ಛಿಕ ಕನ್ನಡ ಪರೀಕ್ಷೆಗೆ ನೋಂದಾಯಿತ 78 ಮಂದಿ ಹಾಜರಾದ್ದರು, 3 ಮಂದಿ ಗೈರು ಹಾಜರಾಗಿದ್ದರು. ಬ್ಯುಸಿನೆಸ್ ಸ್ಟಡೀಸ್ ಪರೀಕ್ಷೆಗೆ 14863 ಮಂದಿ ಹಾಜರಾಗಿದ್ದರು, 119 ಮಂದಿ ಗೈರು ಹಾಜರಾಗಿದ್ದರು ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಶ್ರೀನಿವಾಸ ಶೆಟ್ಟಿ

ಕಾರ್ಕಳ: ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ನಲ್ಲೂರಿನ ನಿವೃತ್ತ ಯೋಧ, ನಲ್ಲೂರು ಬಿರಾಲು ದರ್ಖಾಸು ಚಂದ್ರು ಶೆಟ್ಟಿ ಮತ್ತು ನರ್ಸಿ ಶೆಟ್ಟಿ ದಂಪತಿಯ ಪುತ್ರ ನಲ್ಲೂರು ಬೀರಾಲುಪೇಟೆ, ಶ್ರೀನಿವಾಸ ಸದನ ನಿವಾಸಿ ಶ್ರೀನಿವಾಸ ಶೆಟ್ಟಿ (87) ಮಾರ್ಚ್ 6ರಂದು ಸ್ವಗೃಹದಲ್ಲಿ ನಿಧನರಾದರು. 1971–72ರಲ್ಲಿ ಜರಗಿದ ಭಾರತ ಪಾಕಿಸ್ತಾನ ಯುದ್ಧದ ಸಂದರ್ಭ ಸೇನೆಯಲ್ಲಿ ಸೇವೆ ಸಲ್ಲಿಸಿದ್ದರು. ಶ್ರೀನಿವಾಸ್ ಶೆಟ್ಟಿಯವರು ನಿವೃತ್ತಿಯ ಬಳಿಕ ಮಂಗಳೂರು ಮತ್ತು ಬೆಂಗಳೂರು ವಿಮಾನ ನಿಲ್ದಾಣದಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಕೃಷಿ ಕಾರ್ಯದಲ್ಲಿಯೂ ತೊಡಗಿಸಿಕೊಂಡಿದ್ದರು. ಮೃತರು ಮಕ್ಕಳಾದ ಯತೀಶ್ ಶೆಟ್ಟಿ, ರೂಪಾ ರವೀಂದ್ರ ಶೆಟ್ಟಿ, ರೇಖಾ ಸುರೇಶ ಶೆಟ್ಟಿ, ರೇಶ್ಮಾ ಶಿವಾನಂದ ಶೆಟ್ಟಿ, ಸೊಸೆ ವಿಜಯ ಯತೀಶ್ ಶೆಟ್ಟಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಕಮಲಾ ಗಂಗಯ ಸಪಲ್ಯ

ಬಂಟ್ವಾಳ: ಇಲ್ಲಿನ ಕೊಯಿಲ ಗ್ರಾಮದ ಗೋವಿಂದಬೆಟ್ಟು ನಿವಾಸಿ, ಕೃಷಿಕ ದಿವಂಗತ ಗಂಗಯ ಸಪಲ್ಯ ಇವರ ಪತ್ನಿ ಕಮಲಾ ಗಂಗಯ ಸಪಲ್ಯ (90) ಇವರು ಅಸೌಖ್ಯದಿಂದ ಶುಕ್ರವಾರ ಮಧ್ಯಾಹ್ನ ಸ್ವ ಗೃಹದಲ್ಲಿ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.



ಚೋಮಾರು

ಬದಿಯಡ್ಕ: ಪೆರ್ಲ ಪಡ್ರೆ ಸಮೀಪದ ಪಡ್ಪು ದಿ.ಗುರುವ ಎಂಬವರ ಪತ್ನಿ ಚೋಮಾರು (99) ನಿಧನರಾದರು. ಮೃತರು ಮಕ್ಕಳಾದ ಕೃಷ್ಣ(ಬೇಡು), ಐತ್ತಪ್ಪ, ಲಕ್ಷ್ಮಣ ಅವರನ್ನು ಅಗಲಿದ್ದಾರೆ.



ಗುರುವಪ್ಪ ಮಾದಾರ್

ಮುಲ್ಕಿ: ಇಲ್ಲಿನ ಕೆ ಎಫ್ ರಾಮನಗರ ಲಿಂಗಪ್ಪಯ್ಯಕಾಡು ವಾಸಿ, ಮೂಲತಃ ವಿಜಾಪುರದ ಬಗಳೂರಿನವರಾದ ಗುರುವಪ್ಪ ಶಿವಲಿಂಗಪ್ಪ ಮಾದಾರ್ (66) ಹೃದಯಾಘಾತದಿಂದ ಶುಕ್ರವಾರ ಮುಂಜಾನೆ ಸ್ವಗೃಹದಲ್ಲಿ ನಿಧನರಾದರು.ಅವರಿಗೆ ಪತ್ನಿ ಹಾಗೂ ಓರ್ವ ಪುತ್ರ ಇದ್ದಾರೆ. ಸುಮಾರು 20 ವರ್ಷಗಳ ಹಿಂದೆ ಮುಲ್ಕಿಗೆ ಆಗಮಿಸಿದ್ದ ಅವರು ಎನ್ಎಮ್ಪಿಟಿ ಉದ್ಯೋಗಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಲಿಂಗಪ್ಪಯ್ಯಕಾಡು ಶ್ರೀ ಮಲ್ಲಿಕಾರ್ಜುನ ಮಠದ ಸಮಿತಿಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದರು.



ಹೊನ್ನಪ್ಪ ಪೂಜಾರಿ

ಉಪ್ಪಿನಂಗಡಿ: ಇಲ್ಲಿನ ಪುಳಿತ್ತಡಿ ಗೌಂಡತ್ತಿಗೆ ನಿವಾಸಿ ಹೊನ್ನಪ್ಪ ಪೂಜಾರಿ (66) ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ಶುಕ್ರವಾರ ನಿಧನ ಹೊಂದಿದರು. ಮೃತರು ಬೀದಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿ ನಿವೃತ್ತಿಯಾಗಿದ್ದರು. ಮೃತರು ಪತ್ನಿ, ಬೆಂಗಳೂರಿನಲ್ಲಿ ಉದ್ಯಮ ನಡೆಸುತ್ತಿರುವ ಪುತ್ರ ನಟೇಶ್ ಪೂಜಾರಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.



ಶೀಲಾವತಿ ಎಸ್.

ಪೆರ್ಲ: ಸ್ವರ್ಗ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕಿ ಶೀಲಾವತಿ ಎಸ್.(62) ಅವರು ಅಲ್ಪಕಾಲದ ಅನಾರೋಗ್ಯದಿಂದ ಕಾಸರಗೋಡು ಕಾರವಲ್ ಆಸ್ಪತ್ರೆಯಲ್ಲಿ ಮಾ.4ರಂದು ನಿಧನರಾದರು. ಅವರು ಬೆಟ್ಟಂಪಾಡಿ ಗ್ರಾಮದ ಪಾರ ಕಿರಿಯ ಪ್ರಾಥಮಿಕ ಶಾಲೆ, ದೂಮಡ್ಕ ಹಿರಿಯ ಪ್ರಾಥಮಿಕ ಶಾಲೆ, ಪಾಣಾಜೆ ಗ್ರಾಮದ ಆರ್ಲಪದವು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕುಂಬ್ರ ಕೆ.ಪಿ.ಎಸ್.ಸಿ. ಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸಿ 2024ರಲ್ಲಿ ನಿವೃತ್ತಿ ಹೊಂದಿದ್ದರು. ಮೃತರು ಪತಿ ಅಚ್ಯುತ, ಮೂವರು ಪುತ್ರಿಯರು, ಓರ್ವ ಪುತ್ರ, ಬಂಧು ಬಳಗವನ್ನು ಅಗಲಿದ್ದಾರೆ.



ನಾರಾಯಣಿ ಅಮ್ಮ

ಮುಳ್ಳೇರಿಯ: ಕಾರಡ್ಕ ಚಾಯಿತ್ತಲ ಮಂಜತ್ ನಿವಾಸಿ ದಿ.ಮಂಜತ್ ಚಂದು ನಾಯರ್ ಅವರ ಪತ್ನಿ ಇಡಯಿಲ್ಯಂ ನಾರಾಯಣ ಅಮ್ಮ (86) ನಿಧನ ಹೊಂದಿದರು. ಮೃತರು ಮಕ್ಕಳಾದ ಇ.ರಾಧಾ, ಇ.ಭಾಸ್ಕರನ್, ಇ.ಸುಕುಮಾರನ್, ಇ.ಪ್ರಭಾಕರನ್, ಇ.ಗೀತಾ, ಇ.ಶೋಭನಾ ಅವರನ್ನು ಅಗಲಿದ್ದಾರೆ.



ನಾರಾವಿ ಶ್ರೀ ಸೂರ್ಯ ನಾರಾಯಣ ದೇವಸ್ಥಾನದಲ್ಲಿ ನಡೆಯುತ್ತಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮಕ್ಕೆ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ರಾಜೇಂದ್ರ ಕುಮಾರ್ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ರಕ್ಷಿತ್ ಶಿವರಾಂ, ದೇವಸ್ಥಾನದ ಮುಖ್ಯ ಅರ್ಚಕ ಕೃಷ್ಣ ತಂತ್ರಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರವೀಂದ್ರ ಪೂಜಾರಿ ಬಾಂದೊಟ್ಟು, ಬ್ರಹ್ಮ ಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ವಿನಯ್ ಹೆಗ್ಡೆ, ಕಾರ್ಯಾಧ್ಯಕ್ಷ ಮಹಾವೀರ ಜೈನ್, ವ್ಯವಸ್ಥಾಪನಾ ಸಮಿತಿ ಸದಸ್ಯ ದಿವಾಕರ ಭಂಡಾರಿ ಸೇರಿದಂತೆ ಬ್ರಹ್ಮಕಲಶೋತ್ಸವ ಸಮಿತಿ ಪದಾಧಿಕಾರಿಗಳು, ವ್ಯವಸ್ಥಾಪನಾ ಸಮಿತಿ ಸದಸ್ಯರು ಇದ್ದರು.

ಯು.ಸಿ.ಇ.ಇ.ಡಿ ಪ್ರವೇಶ ಪರೀಕ್ಷೆ ಫಲಿತಾಂಶ ಪ್ರಕಟ

ಕಾರ್ಕಳದ ಕ್ರಿಯೇಟಿವ್ ಕಾಲೇಜಿನ ಸೂರಜ್ ಸುರೇಶ್ ರಾಷ್ಟ್ರಮಟ್ಟದಲ್ಲಿ 518ನೇ ರ್‍ಯಾಂಕ್

ಕಾರ್ಕಳ: ದೇಶದ ಅತ್ಯುನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಯಾದ ಐಐಟಿ ಮುಂಬೈ, ಐಐಟಿ ದಿಲ್ಲಿ, ಐಐಟಿ ಗುವಾಹಟಿ, ಐಐಟಿ ಹೈದರಾಬಾದ್, ಐಐಟಿ ರೂರ್ಕಿ ಮತ್ತು ಐಐಟಿ ಜಬಲಪುರ್ ಸಂಸ್ಥೆಗಳಿಗೆ ಬ್ಯಾಚುಲರ್ ಆಫ್ ಡಿಸೈನ್ ಕೋರ್ಸ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಜನವರಿ 18 ರಂದು ನಡೆದ ಯು.ಸಿ.ಇ.ಇ.ಡಿ ಪ್ರವೇಶ ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಕಾಲೇಜಿನ ಸೂರಜ್ ಸುರೇಶ್ ರಾಷ್ಟ್ರಮಟ್ಟದಲ್ಲಿ ಜನರಲ್ ವಿಭಾಗದಲ್ಲಿ 518 ರ್‍ಯಾಂಕ್ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳಾದ ಭೂಮಿಕಾ ವೈ.



OBC- NCL ವಿಭಾಗದಲ್ಲಿ 1378ನೇ ರ್‍ಯಾಂಕ್, ಸಂಕೀರ್ತ್ ರಾಜ್ ಕೆ.

» ಜನವರಿ 18 ರಂದು ನಡೆದ ಯು.ಸಿ.ಇ.ಇ.ಡಿ ಪ್ರವೇಶ ಪರೀಕ್ಷೆಯಲ್ಲಿ 518 ರ್‍ಯಾಂಕ್

ಜಿ.1381ನೇ ರ್‍ಯಾಂಕ್, ಚಿರಂತ್ ಕೆ.ಎನ್. OBC- NCL ವಿಭಾಗದಲ್ಲಿ 1507ನೇ ರ್‍ಯಾಂಕ್ ಗಳಿಸಿ ಮುಂದಿನ ಹಂತದ ಕೌನ್ಸೆಲಿಂಗ್ ಪ್ರಕ್ರಿಯೆಗೆ ಅರ್ಹತೆ ಪಡೆದುಕೊಂಡಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಪ್ರಾಂಶುಪಾಲರು, ಆಡಳಿತ ಮಂಡಳಿ, ಪರೀಕ್ಷಾ ಸಂಯೋಜಕರಾದ ಸುಮಂತ್ ದಾಮ್ಲೆ, ಉಪನ್ಯಾಸಕ ವರ್ಗದವರು ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

ಹೂಳು ತುಂಬಿರುವ ನೀರಿನ ಸೆಲೆ | ಐದು ಕೋಟಿ ರೂ. ಮಂಜೂರು | ಗ್ರಾಮಸ್ಥರಲ್ಲಿ ಆಶಾಕಿರಣ

ಕಡುಬಿನ ಕೆರೆ ಅಭಿವೃದ್ಧಿಯಾದೀತೆಂದು?

ಗಂಗೊಳ್ಳಿ : ಎರಡು ದಶಕಗಳಿಂದ ಅಭಿವೃದ್ಧಿ ಕಾಣದೆ ಸೊರಗಿ ಹೋಗಿದ್ದ ಕುಂದಾಪುರ ತಾಲೂಕಿನ ಅತ್ಯಂತ ದೊಡ್ಡ ಕೆರೆಗಳಲ್ಲಿ ಒಂದಾಗಿರುವ ಹೊಸಾಡು ಗ್ರಾಮದ ಕಡುಬಿನ ಕೆರೆಯ ಅಭಿವೃದ್ಧಿಗೆ 5 ಕೋಟಿ ಅನುದಾನ ಮಂಜೂರಾಗಿದ್ದು, ಈ ಭಾಗದ ಜನರಲ್ಲಿ ಹೊಸ ಆಶಾಕಿರಣ ಮೂಡಿದೆ.

ಸುತ್ತಮುತ್ತಲಿನ ಪ್ರದೇಶದ ಜನರ ನೀರಿನ ದಾಹ ತೀರಿಸುತ್ತಿದ್ದ ಸುಮಾರು 7.7 ಎಕರೆ ವಿಸ್ತೀರ್ಣದ ಕಡುಬಿನ ಕೆರೆಯಲ್ಲಿ ಹೂಳು ಮಣ್ಣು ತುಂಬಿಕೊಂಡು ಹೋಗಿದ್ದು, ಬರಡು ಭೂಮಿಯಾಗಿ ಮಾರ್ಪಟ್ಟಿದೆ. ಹೀಗಾಗಿ ಕಡುಬಿನ ಕೆರೆ ಅಭಿವೃದ್ಧಿಗೊಳಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕೊಪ್ಪರಿಗೆ, ಕಮ್ಮಾರಕೊಡ್ಲು, ಮೂಗಿನಬೈಲು, ಕೋಟೆಮಕ್ಕಿ, ಮೈರ್‌ಮನೆ ಪ್ರದೇಶದ 400 ಎಕರೆಗೂ ಅಧಿಕ ಕೃಷಿ ಭೂಮಿಗೆ ಮತ್ತು ಅಕ್ಕಪಕ್ಕದ ಸುಮಾರು 200ಕ್ಕೂ ಮಿಕ್ಕಿ ಮನೆಗಳಲ್ಲಿನ ಬಾವಿಗಳಿಗೆ ಕಡುಬಿನ ಕೆರೆಯ ನೀರಿನ ಜಲಮೂಲವೇ ಪ್ರಮುಖವಾಗಿದೆ. ಕೆರೆಯ ನೀರಿನಾಶ್ರಯದ ಅಡಿಯಲ್ಲಿ ಈ ಪ್ರದೇಶದಲ್ಲಿ ಕೃಷಿಕರು ಕೃಷಿ ಚಟುವಟಿಕೆ ನಡೆಸುತ್ತಿದ್ದರೆ, ಬಾವಿಗಳಲ್ಲಿ ಸಾಕಷ್ಟು ನೀರು ದೊರೆಯುತ್ತಿದೆ. ಕೆರೆಯಲ್ಲಿ ಅಗಾಧ ಪ್ರಮಾಣದ ಹೂಳು ಮಣ್ಣು ತುಂಬಿಕೊಂಡಿದ್ದು ಅವಧಿಗೆ ಮುನ್ನವೇ ಕೆರೆ ನೀರು ಬರಿದಾಗುತ್ತಿದ್ದರಿಂದ ಇತ್ತೀಚಿನ ವರ್ಷಗಳಲ್ಲಿ ಕೃಷಿಕರು ಭತ್ತದ ಬೆಳೆಯಿಂದ ಹಿಂದೆ ಸರಿಯುತ್ತಾ ಇದ್ದಾರೆ. ಈ ಭಾಗದಲ್ಲಿ ವರ್ಷದಿಂದ ವರ್ಷಕ್ಕೆ ಕೃಷಿ ಭೂಮಿ ಹಡಿಲು ಬೀಳುತ್ತಿರುವ ಪ್ರಮಾಣವು ಅಧಿಕವಾಗಿದ್ದು ಆತಂಕದ ಬೆಳವಣಿಗೆಯೂ ಆಗಿದೆ.





ಹೂಳು, ಗಿಡಗಂಟಿಗಳಿಂದ ಆವೃತವಾಗಿ ಬರಡು ಭೂಮಿಯಂತಾಗಿರುವ ಹೊಸಾಡು ಗ್ರಾಮದ ಕಡುಬಿನ ಕೆರೆ

ಕೆರೆ ಹೂಳೆತ್ತಿ ಅಭಿವೃದ್ಧಿಗೊಳಿಸಿ

ಕೆರೆಯ ನೀರನ್ನು ನಂಬಿಕೊಂಡು ರೈತರು ದಶಕಗಳ ಹಿಂದೆ ಮೂರು ಬೆಳೆಯನ್ನು ಬೆಳೆಯಲಾಗುತ್ತಿದ್ದರು. ಮೇ ಕೊನೆಯ ತನಕವೂ ನೀರು ತುಂಬಿಕೊಳ್ಳುತ್ತಿದ್ದ ಕಡುಬಿನ ಕೆರೆ ನೀರು ಇತ್ತೀಚಿನ ವರ್ಷಗಳಲ್ಲಿ ಫೆಬ್ರವರಿಯಲ್ಲೆ ಬರಿದಾಗುತ್ತಿದೆ. ವಿಶಾಲವಾದ ಆಟದ ಮೈದಾನದಂತೆ ಗೋಚರಿಸುವ ಕೆರೆಯಲ್ಲಿ ಬೇಸಿಗೆಯ ಸಮಯದಲ್ಲಿ ಹಕ್ಕಿ ಕುಡಿಯುವಷ್ಟು ನೀರು ನಿಲ್ಲದೆ ಬಂಜರು ಭೂಮಿಯಂತೆ ಗೋಚರಿಸುತ್ತದೆ. ಸಣ್ಣ ನೀರಾವರಿ ಇಲಾಖೆಯ ಅಧೀನಕ್ಕೆ ಒಳಪಟ್ಟ ಕಡುಬಿನ ಕೆರೆ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದ ಧೋರಣೆಯಿಂದ ಅಭಿವೃದ್ಧಿ ಕಾಣದೆ ಎರಡು ದಶಕಗಳೆ ಕಳೆದು ಹೋಗಿದೆ ಎಂದು ಹೊಸಾಡು ಗ್ರಾಮದ ಕೃಷಿಕರು ದೂರಿದ್ದಾರೆ. ವರ್ಷದಿಂದ ವರ್ಷಕ್ಕೆ ಕೆರೆ ಅತಿಕ್ರಮಣ ಹೆಚ್ಚುತ್ತಿದ್ದು, ಕೆರೆ ಜಾಗವನ್ನು ಸರ್ವೇ ಮಾಡಿ ಕೆರೆ ಸಂರಕ್ಷಣೆ ಮಾಡಬೇಕು. ಕೃಷಿಕರ ಜೀವನಾಡಿಯಾಗಿದ್ದ ಕಡುಬಿನ ಕೆರೆಯನ್ನು ಅಭಿವೃದ್ಧಿ ಪಡಿಸಿ ಎಂಬ ಕೂಗು ರೈತಾಪಿ ವರ್ಗದಿಂದ ಕೇಳಿ ಬಂದಿದೆ.

ಶಿಥಿಲಾವಸ್ಥೆಯಲ್ಲಿ ಕೆರೆಯ ದಂಡೆ

ಕೆರೆ ದಂಡೆಯ ಮೇಲೆ ಮುಳ್ಳಿನ ಪೊದೆ, ಗಿಡಗಂಟಿ ಬೃಹತ್ ಮರಗಳು ಬೆಳೆದುಕೊಂಡಿದ್ದು ಕೆರೆ ದಂಡೆಯ ಮೇಲೆ ನಡೆದಾಡಲು ಸಾಧ್ಯವಿಲ್ಲ. ದಂಡೆಯ ಎರಡು ಬದಿಯ ಕಲ್ಲುಗಳು ಜಾರಿದ್ದು ಶಿಥಿಲಾವಸ್ಥೆಗೆ ತಲುಪಿದೆ. ಹೀಗಾಗಿ ಕೆರೆಯ ದಂಡೆಯನ್ನು ಪುನರ್ ನಿರ್ಮಿಸುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಪುನಶ್ಚೇತನಗೊಳಿಸಬೇಕು

ಕಡುಬಿನ ಕೆರೆಯ ಅಭಿವೃದ್ಧಿ ಬಗ್ಗೆ ಹಲವಾರು ವರ್ಷಗಳಿಂದ ಮನವಿ ಮಾಡಿಕೊಳ್ಳುತ್ತಿದ್ದು, ಸರಕಾರ 5 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಕೆರೆಯ ಮಣ್ಣನ್ನು ಹೂಳೆತ್ತಿ ಸಮಗ್ರವಾಗಿ ಅಭಿವೃದ್ಧಿಗೊಳಿಸಬೇಕು. ಸರಕಾರದ ಅನುದಾನದ ಸದ್ಬಳಕೆ ಮಾಡಿಕೊಂಡು ಕಡುಬಿನ ಕೆರೆಯನ್ನು ಪುನಶ್ಚೇತನಗೊಳಿಸಬೇಕು

■ **ರಾಘವೇಂದ್ರ ಶೆಟ್ಟಿ,** ಸ್ಥಳೀಯರು, ಹೊಸಾಡು ಗ್ರಾಮ

» ಜನರ ನೀರಿನ ದಾಹ ತೀರಿಸುತ್ತಿದ್ದ ಸುಮಾರು 7.7 ಎಕರೆ ವಿಸ್ತೀರ್ಣದ ಕಡುಬಿನ ಕೆರೆಯಲ್ಲಿ ಹೂಳು ಮಣ್ಣು ತುಂಬಿಕೊಂಡು ಹೋಗಿದ್ದು, ಬರಡು ಭೂಮಿಯಾಗಿ ಮಾರ್ಪಟ್ಟಿದೆ.

ದಕ್ಷಿಣ ಕನ್ನಡ – ಉಡುಪಿ ಮೀನು ಮಾರಾಟ ಫೆಡರೇಶನ್

ಉಡುಪಿ ಜಿಲ್ಲಾಸ್ಪತ್ರೆಗೆ ರೋಗಿಗಳ ಸೇವೆಗಾಗಿ ಎಕ್ಸ್‌ರೇ ಯಂತ್ರ ಹಸ್ತಾಂತರ

ಉಡುಪಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಷನ್ ಮಂಗಳೂರು ಇದರ ವತಿಯಿಂದ ಉಡುಪಿ ಜಿಲ್ಲಾಸ್ಪತ್ರೆಯ ರೋಗಿಗಳ ಸೇವೆಗಾಗಿ ಕೊಡುಗೆಯಾಗಿ ನೀಡಿದ ಎಕ್ಸ್ ರೇ ಯಂತ್ರದ ಹಸ್ತಾಂತರವನ್ನು ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಯಶ್‌ಪಾಲ್ ಸುವರ್ಣ ನೇರವರಿಸಿದರು.

ಬಳಿಕ ಮಾತನಾಡಿದ ಅವರು, ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾ ಸರ್ಜನ್ ಎಕ್ಸ್ ರೇ ಸೇವೆಯಲ್ಲಿ ವ್ಯತ್ಯಯದಿಂದ ರೋಗಿಗಳಿಗೆ ಸಮಸ್ಯೆ ಉಂಟಾಗುತ್ತಿರುವ ಬಗ್ಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಮೀನು ಮಾರಾಟ ಫೆಡರೇಶನ್ ಮೂಲಕ ಜಿಲ್ಲಾಸ್ಪತ್ರೆಗೆ ನೂತನ ಎಕ್ಸ್ ರೇ ಯಂತ್ರವನ್ನು ನೀಡಿದ್ದು, ಇದರಿಂದ ಜಿಲ್ಲಾಸ್ಪತ್ರೆಯಲ್ಲಿ ದಿನನಿತ್ಯ ಚಿಕಿತ್ಸೆಗೆ ಬರುವ ನೂರಾರು ರೋಗಿಗಳಿಗೆ ಸಹಕಾರಿಯಾಗಲಿದೆ ಎಂದರು.

ಜಿಲ್ಲಾಸ್ಪತ್ರೆಯ ಸರ್ಜನ್ ಡಾ. ಅಶೋಕ್ ಮಾತನಾಡಿ, ಜಿಲ್ಲಾಸ್ಪತ್ರೆಯ ರೋಗಿಗಳ ಸೇವೆಗೆ ಎಕ್ಸ್ ರೇ ಯಂತ್ರವನ್ನು ಮೀನು ಮಾರಾಟ ಫೆಡರೇಶನ್ ವತಿಯಿಂದ ಕೊಡುಗೆಯಾಗಿ ನೀಡಿದ ಶಾಸಕ ಯಶ್‌ಪಾಲ್ ಸುವರ್ಣ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರಿಗೆ ಅಭಿನಂಧನೆ ಸಲ್ಲಿಸಿದರು.



» ಜಿಲ್ಲಾಸ್ಪತ್ರೆಯಲ್ಲಿ ದಿನನಿತ್ಯ ಚಿಕಿತ್ಸೆಗೆ ಬರುವ ನೂರಾರು ರೋಗಿಗಳಿಗೆ ಸಹಕಾರಿಯಾಗಲಿದೆ

ಈ ಸಂದರ್ಭದಲ್ಲಿ ಮೀನು ಮಾರಾಟ ಫೆಡರೇಷನ್ ಉಪಾಧ್ಯಕ್ಷ ದೇವಪ್ಪ ಕಾಂಚನ್, ನಿರ್ದೇಶಕರಾದ ರಾಮಚಂದ್ರ ಕುಂದರ್, ಸುರೇಶ್ ಸಾಲ್ಯಾನ್, ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಸದಸ್ಯರಾದ ರಶ್ಮಿ ಸಿ. ಭಟ್, ಸುಂದರ ಕಲ್ಮಾಡಿ, ಶ್ರೀ ಯೋಗೀಶ್ ಸಾಲ್ಯಾನ್, ಟಿ. ಜಿ. ಹೆಗ್ಡೆ, ಹರೀಶ್ ಶೆಟ್ಟಿ, ಎಡ್ಲಿನ್ ಕರ್ಕಡ, ಮೀನುಗಾರ ಮುಖಂಡರಾದ ದಯಾನಂದ ಸುವರ್ಣ, ಜಗನ್ನಾಥ ಕಡೆಕಾರ್, ಸುಭಾಷ್ ಮೆಂಡನ್, ಸತೀಶ್ ಕುಂದರ್, ನಾಗರಾಜ ಸುವರ್ಣ, ರತ್ನಾಕರ ಸಾಲ್ಯಾನ್, ಸುಂದರ ಸಾಲ್ಯಾನ್, ವಿನಯ ಕರ್ಕೇರ, ಕರುಣಾಕರ ಸಾಲ್ಯಾನ್, ನಾಗರಾಜ ಕುಂದರ್, ಮಿಥುನ್ ಕುಂದರ್, ಕೃಷ್ಣ ಕೋಟ್ಯಾನ್, ಗೀತಾ ಕರ್ಕೇರ, ಉಡುಪಿ ನಗರ ಬಿಜೆಪಿ ಅಧ್ಯಕ್ಷರಾದ ದಿನೇಶ್ ಅಮೀನ್, ಗ್ರಾಮಾಂತರ ಬಿಜೆಪಿ ಅಧ್ಯಕ್ಷರಾದ ರಾಜೀವ್ ಕುಲಾಲ್, ಪ್ರಮುಖರಾದ ಸುನೀಲ್ ನೇಜಾರು, ಸುಭಾಷಿತ್, ರಾಘವೇಂದ್ರ ಆಚಾರ್ಯ, ಸುನೀತಾ ಭಂಡಾರಿ, ಸುಧಾಕರ ಪ್ರಭು, ಉಡುಪಿ ಜಿಲ್ಲಾಸ್ಪತ್ರೆಯ ನಿವಾಸಿ ವೈದ್ಯಾಧಿಕಾರಿ ಡಾ. ವಾಸುದೇವ, ವೈದ್ಯರಾದ ಡಾ. ಅಮ್ನ ಮೊದಲಾದವರು ಉಪಸ್ಥಿತರಿದ್ದರು.

‘ದೈವಜ್ಞ ಯುನಿಟಿ ಕಪ್- 2026 (ಸೀಸನ್-2)’ ಆರಂಭ

ಇಂದು ಸಮಾರೋಪ ಸಮಾರಂಭ

ಮಂಗಳೂರು: ಎಸ್.ಎಲ್. ಶೇಟ್ ಹಾಗೂ ಎಂ. ರಘುನಾಥ ಶೇಟ್ ಮೆಮೊರಿಯಲ್ ಚಾರಿಟೇಬಲ್ ಟ್ರಸ್ಟ್ ಆಶ್ರಯದಲ್ಲಿ ಆಯೋಜಿಸಲಾದ ‘ದೈವಜ್ಞ ಯುನಿಟಿ ಕಪ್– 2026 (ಸೀಸನ್–2)’ ದೈವಜ್ಞ ಏಕತಾ ಕ್ರಿಕೆಟ್ ಪಂದ್ಯಾಟದ ಉದ್ಘಾಟನಾ ಸಮಾರಂಭ ಮಾ. 6ರಂದು ಮಂಗಳೂರು ನಗರದ ಉರ್ವ ಕ್ರಿಕೆಟ್ ಮೈದಾನದಲ್ಲಿ ಕ್ರೀಡಾ ಉತ್ಸಾಹದ ನಡುವೆ ನೆರವೇರಿತು.

ಕಾರ್ಯಕ್ರಮವನ್ನು ರಣಜಿ ಅಂಪೈರ್ ಹಾಗೂ ಬಿಸಿಸಿಐ ಪ್ಯಾನೆಲ್ ಅಂಪೈರ್ ಆಗಿರುವ ಕೇಶವ್ ಸುಬ್ರಾಯ ಕೊಲ್ಲೆ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಎಸ್. ಎಲ್. ಶೇಟ್ – ಎಂ. ರಘುನಾಥ ಶೇಟ್ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಎಂ. ಪ್ರಶಾಂತ್ ಶೆಟ್ ವಹಿಸಿದ್ದರು. ಟ್ರಸ್ಟಿಗಳಾದ ಹೇಮಂತ್ ಶೇಟ್, ನಿಶಾಂತ್ ಶೇಟ್ ಉಪಸ್ಥಿತರಿದ್ದರು.

ಕೋಶಾಧಿಕಾರಿ ರಾಘವೇಂದ್ರ ಶೇಟ್, ಸಂಚಾಲಕ ಎಸ್. ಸುಬ್ರಮಣ್ಯ ಶೇಟ್, ವಿಗ್ನೇಶ್ ಶೇಟ್, ಮಾಧ್ಯಮ ಪ್ರಸಾರ ಪ್ರವೀಣ್ ಕುಮಾರ್ ರೇವಣ್ಕರ್ ಹಾಗೂ ಅರ್ಜುನ್ ಶೇಟ್ ಕದ್ರಿ, ಸಮಿತಿಯ ಸದಸ್ಯರಾದ ವಿಮಲೇಶ್ ಶೇಟ್, ವಿಶ್ವೇಶ್ ಶೇಟ್, ಮುಕುಂದ ಶೇಟ್, ವೆಂಕಟೇಶ್ ಎನ್. ಶೇಟ್, ಪ್ರಶಾಂತ್ ವೇರ್ಣೇಕರ್ ಹಾಗೂ ಅಶ್ವಿನ್ ಶೇಟ್ ಕದ್ರಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ನವೀನ್ ಶೇಟ್ ನಿರ್ವಹಿಸಿದರು, ಕಾರ್ಯದರ್ಶಿ ಗುರುರಾಜ್ ಶೇಟ್ ಧನ್ಯವಾದಗಳು ಅರ್ಪಿಸಿದರು. ಈ ಸಂದರ್ಭದಲ್ಲಿ ಯುವ ಕ್ರಿಕೆಟ್ ಆಟಗಾರ ರೋಹನ್ ರೇವಣ್ಕರ್ (ಮಂಗಳೂರು) ಹಾಗೂ ದೇಹದಾರ್ಢ್ಯ ಕ್ರೀಡಾಪಟು ಸಂತೋಷ್ ಸೋಮೇಶ್ವರ ಆವಾಜಿ (ಧಾರವಾಡ) ಅವರನ್ನು ಸನ್ಮಾನಿಸಲಾಯಿತು.

ಉದ್ಘಾಟನೆಯ ಬಳಿಕ ವಿವಿಧ ತಂಡಗಳ ನಡುವೆ ಕ್ರಿಕೆಟ್ ಪಂದ್ಯಾಟಗಳು ಆರಂಭಗೊಂಡವು. ಈ ಕ್ರೀಡಾಕೂಟವು ಮಾರ್ಚ್ 8ರವರೆಗೆ ನಡೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ 28 ತಂಡಗಳು ಹಾಗೂ 400ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದಾರೆ.

ಮಾರ್ಚ್ 8ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಟ್ರೋಫಿ ಹಾಗೂ ಬಹುಮಾನಗಳನ್ನು ವಿತರಿಸಲಾಗುವುದು. ಈ ಸಮಾರಂಭಕ್ಕೆ ಅಖಿಲ ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ರವಿ ಎಸ್. ಗಾಂವ್ಕರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ದೈವಜ್ಞ ಸಮಾಜದ ಎಲ್ಲಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ರೀಡಾಪಟುಗಳನ್ನು ಉತ್ತೇಜಿಸುವಂತೆ ಸಂಘಟಕರು ಮನವಿ ಮಾಡಿದ್ದಾರೆ.

ಕಾರ್ಯಕ್ರಮದಲ್ಲಿ ಸಮಾಜದ ಗಣ್ಯರು, ಕ್ರೀಡಾಭಿಮಾನಿಗಳು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.



ಈ ಕ್ರೀಡಾಕೂಟವು ಮಾರ್ಚ್ 8ರವರೆಗೆ ನಡೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ 28 ತಂಡಗಳು ಹಾಗೂ 400ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದಾರೆ.

ರಾಜ್ಯ ಬಜೆಟ್ ಕುರಿತು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿಕೆ

ಇದು ಸಮತೋಲನ ಅಲ್ಲ, ಓಲೈಕೆ ಬಜೆಟ್

ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಅಲ್ಪಸಂಖ್ಯಾತ ಮುಸಲ್ಮಾನರಿಗೆ ಏಕಪಕ್ಷೀಯ ಯೋಜನೆಗಳನ್ನು ಘೋಷಿಸುವ ಮೂಲಕ ಇದು ಮತಬ್ಯಾಂಕ್ ರಾಜಕೀಯದ ಅಲ್ಪಸಂಖ್ಯಾತರನ್ನು ಓಲೈಸುವ ಬಜೆಟ್ ಆಗಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದರು.

ಅಲ್ಪಸಂಖ್ಯಾತರಿಗೆ ವಿವಿಧ ಯೋಜನೆಗಳು, ಸಬ್ಸಿಡಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಹಿಂದುಳಿದ ವರ್ಗ, ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಬಜೆಟ್‌ನಲ್ಲಿ ಯಾವುದೇ ಯೋಜನೆ ಘೋಷಿಸಿಲ್ಲ. ಸಮತೋಲನದ ಬಜೆಟ್ ನೀಡುವುದು ಬಿಟ್ಟು, ಓಲೈಕೆ ಬಜೆಟ್ ಮಂಡಿಸಲಾಗಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಆರೋಪಿಸಿದರು.

ಕಾಂಗ್ರೆಸ್ ಸರಕಾರ ರಾಜ್ಯದ ಜನತೆಯ ಮೇಲೆ ಸಾಲದ ಹೊರೆಯನ್ನು ಹೊರಿಸಿದೆ. ಬಜೆಟ್‌ನ ಶೇ.20ರಷ್ಟು ಹಣ ಸಾಲದ ಬಡ್ಡಿಗೆ ಹೋಗಲಿದೆ. 37 ಸಾವಿರ ಕೋಟಿ ರೂ. ಹಣ ಗುತ್ತಿಗೆದಾರರಿಗೆ ನೀಡಲು ಬಾಕಿ ಇದೆ. ಹೊಸ ಕಾಮಗಾರಿ ಕೈಗೆತ್ತಿಕೊಳ್ಳಲು ಸರಕಾರದ ಬಳಿ ಹಣವಿಲ್ಲ. ಹಳೆಯ ಕಾಮಗಾರಿಗಳ ಬಿಲ್ ಪಾವತಿ ಆಗುತ್ತಿಲ್ಲ. ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಯಾವುದೇ ಕಾಮಗಾರಿಗಳು ಅನುಷ್ಠಾನವಾಗುತ್ತಿಲ್ಲ. ದಲಿತರಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗುತ್ತಿದೆ. ಹಾಲು ಉತ್ಪಾದಕರಿಗೆ ಸರಕಾರದ ಪ್ರೋತ್ಸಾಹಧನ 9 ತಿಂಗಳಿನಿಂದ ಬಾಕಿ ಇದೆ. ವಿವಿಧ ನಿಗಮಗಳಿಗೆ ಅನುದಾನ ಕಡಿತ ಮಾಡಲಾಗಿದೆ ಎಂದು ಆಪಾದಿಸಿದರು.

ಅಬಕಾರಿ ಇಲಾಖೆಯಲ್ಲಿ ತೆರಿಗೆ ವಸೂಲಿಗೆ ಟಾರ್ಗೆಟ್ ನೀಡಲಾಗಿದ್ದು, ಇದು ಅಮಲು ಪ್ರೇರಿತ ಸರಕಾರವಾಗಿದೆ. ಮದ್ಯ ಮಾರಾಟದ ಮೂಲಕ ಯುವಜನತೆಯನ್ನು ಮದ್ಯದ ಕೂಪಕ್ಕೆ ತಳ್ಳುವ ಪ್ರಯತ್ನ ಕಾಂಗ್ರೆಸ್ ಸರಕಾರದಿಂದ ಆಗುತ್ತಿದೆ. ಕರಾವಳಿಯಲ್ಲಿ ಕಂಬಳಕ್ಕೆ ಯಾವುದೇ ಅನುದಾನ ನೀಡಿಲ್ಲ. ಐಟಿ ವಿಸ್ತರಣೆ, ಕೈಗಾರಿಕಾ ಹೂಡಿಕೆ ಆಕರ್ಷಣೆಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾವ ಇಲ್ಲ. ಮೀನುಗಾರಿಕೆಗೆ ಯಾವುದೇ ಹೊಸ ಯೋಜನೆ ಘೋಷಿಸಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಭೂಕುಸಿತ ತಡೆಗೆ, ಕಡಲು ಕೊರೆತ ತಡೆಗೆ ಬಜೆಟ್‌ನಲ್ಲಿ ಯೋಜನೆ, ಅನುದಾನ ನೀಡಿಲ್ಲ. ವೆನ್ಲಾಕ್ ಆಸ್ಪತ್ರೆ ಮೇಲ್ದರ್ಜೆ ಪ್ರಸ್ತಾಪವೇ ಇಲ್ಲ. ಒಟ್ಟಿನಲ್ಲಿ ಕಾಂಗ್ರೆಸ್ ಸರಕಾರ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪೂರ್ಣ ಕಡೆಗಣಿಸಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ, ಹಿರಿಯ ಮುಖಂಡರಾದ ನಿತಿನ್‌ಕುಮಾರ್, ರವಿಶಂಕರ ಮಿಜಾರ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷ ಡಾ. ಮಂಜುಳಾ ರಾವ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಜಿಲ್ಲಾ ವಕ್ತಾರ ಅರುಣ್ ಶೇಟ್, ಮಾಧ್ಯಮ ಪ್ರಮುಖ್ ವಸಂತ ಪೂಜಾರಿ ಉಪಸ್ಥಿತರಿದ್ದರು.



ಶಕ್ತಿ ವಿದ್ಯಾಸಂಸ್ಥೆಯಲ್ಲಿ ಮಹಿಳಾ ದಿನಾಚರಣೆ



ಮಂಗಳೂರು: ಶಕ್ತಿ ವಸತಿ ಶಾಲೆಯಲ್ಲಿ ಮಾ. 7ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಪೋಷಕರಾದ ಆರ್.ಟಿ.ಒ ಅಧಿಕಾರಿ ಪೂರ್ಣಿಮ ಭಟ್, ಡಾ. ಪರಿಣೀತ ಸಂಜೀವ್ ನಾಯ್ಕ್, ಮಹಾಲಕ್ಷ್ಮಿ ಮೆಹರಾಜ್, ಪುನೀತಾ ವೈ. ಬಿ. ಮೊದಲಾದವರನ್ನು ಗೌರವಿಸಲಾಯಿತು. ಶಕ್ತಿ ಸಂಸ್ಥೆಯ ಮಹಿಳಾ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳಿಗೆ ಉಡುಗೊರೆಯನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳಿಗೆ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಯಿತು.

ಕಿರುಸುದ್ದಿ

ಭಾರತೀಯರ ನಿಶ್ಯಬ್ದವೇ ನಮ್ಮ ಗುರಿ: ಸ್ಯಾಂಟ್ನರ್

ಅಹಮದಾಬಾದ್: ಕ್ರೀಡಾಂಗಣದಲ್ಲಿ ಸೇರುವ ಲಕ್ಷಾಂತರ ಭಾರತದ ಅಭಿಮಾನಿಗಳನ್ನು ನಿಶ್ಯಬ್ದಗೊಳಿಸುತ್ತೇವೆ ಎಂಬ ಎದುರಾಳಿ ನಾಯಕರ ಹೇಳಿಕೆಯ ಸರದಿ ಮುಂದುವರೆದಿದೆ. ಭಾನುವಾರದಂದು ಭಾರತ ಹಾಗೂ ಕಿವೀಸ್ ತಂಡಗಳು ಎದುರಾಗಲಿವೆ. ಇದಕ್ಕೂ ಮುನ್ನ ಶನಿವಾರದಂದು ನಡೆದಿರುವ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಕೂಡ ಅದೇ ಹೇಳಿಕೆ ನೀಡಿದ್ದಾರೆ. 2023ರ ವಿಶ್ವಕಪ್ ವೇಳೆ ಆಸ್ಟ್ರೇಲಿಯಾ ನಾಯಕ ಹೇಳಿದ್ದ ಮಾತೊಂದು ನೆನಪಿಗೆ ಇಟ್ಟುಕೊಂಡಿರುವ ಸ್ಯಾಂಟ್ನರ್ ನಾವು ಅಭಿಮಾನಿಗಳನ್ನು ನಿಬ್ಬರಗಾಗಿಸುವಂತೆ ಮಾಡುತ್ತೇವೆ ಎಂದು ಪ್ರತಿಪಾದಿಸಿದರು. ಈ ಹಿಂದೆ ಇಂಗ್ಲೆಂಡ್‌ನ ಸ್ಯಾಮ ಕರ್ರನ್ ಕೂಡ ಸೆಮಿಫೈನಲ್ ಪಂದ್ಯಕ್ಕೂ ಮುನ್ನ ಇದೇ ಮಾತು ಹೇಳಿದ್ದರು.

ಬೂಮ್ರಾ ಬಗ್ಗೆ ಎಚ್ಚರಿಕೆ: ಬೂಮ್ರಾ ಅವರ ಬೌಲಿಂಗ್‌ಗೆ ನ್ಯೂಜಿಲೆಂಡ್‌ನ ಉತ್ತರವೇನು ಎಂಬ ಪ್ರಶ್ನೆಗೆ ಸ್ಯಾಂಟ್ನರ್ ಉತ್ತರಿಸಿ, ಬೂಮ್ರಾ ಒಬ್ಬರು ವಿಶ್ವ ದರ್ಜೆ ಬೌಲರ್. ಅವರ ಬಗ್ಗೆ ಚರ್ಚೆಗಳು ತಂಡದಲ್ಲಿ ನಡೆದಿರುತ್ತವೆ, ನಾವು ಕೂಡ ಮಾಡಿದ್ದೇವೆ. ಬೂಮ್ರಾ ಅಲ್ಲದೆ ಭಾರತ ತಂಡದಲ್ಲಿ ಎಲ್ಲರೂ ಬೆಸ್ಟ್ ಬೌಲರ್‌ಗಳೇ ಇದ್ದಾರೆ. ಅವರ ಬಗ್ಗೆ ಕೂಡ ನಾವು ತಯಾರಿ ಮಾಡಿಕೊಂಡಿದ್ದೇವೆ ಎಂದರು.

ಹೊಸದೇನಾದರೂ ಹೇಳಿ: ಸೂರ್ಯಕುಮಾರ್

ಅಹಮದಾಬಾದ್: ಎಲ್ಲರೂ ಅದೇ ಸಾಲುಗಳನ್ನು ಹೇಳುತ್ತಿದ್ದಾರೆ. ಹೊಸದೇನಾದರೂ ಹೇಳಿ ಎಂದು ಸೂರ್ಯಕುಮಾರ್ ಯಾದವ್ ಸ್ಯಾಂಟ್ನರ್ ಅವರ ನಿಶ್ಯಬ್ದ ಹೇಳಿಕೆಗೆ ಪ್ರತ್ಯುತ್ತರ ನೀಡಿದರು. ಮಾಧ್ಯಮಗೋಷ್ಠಿಯಲ್ಲಿ ಮಾತನಾಡುತ್ತಾ ಅವರು, ಫೈನಲ್ ಆಡುವ ಬಗ್ಗೆ ನಮಗೆ ಎಲ್ಲರಿಗೂ ಹೆಮ್ಮೆಯಿದೆ. ಹಾಗೇ ಒಂದು ಉತ್ಸಾಹವಿದೆ. ನಮ್ಮ ತಂಡದಲ್ಲಿ ಉತ್ತಮ ವಾತಾವರಣವಿದ್ದು ನಾವು ದೊಡ್ಡ ಫಲಿತಾಂಶ ಪಡೆಯುತ್ತೇವೆ ಎಂಬ ನಂಬಿಕೆ ನನಗಿದೆ ಎಂದರು. ನಾಯಕನಾಗಿ ನನಗೆ ಒಂದಿಷ್ಟು ಒತ್ತಡಗಳಿರುವುದು ಸಹಜ. ಅದನ್ನು ನಾನು ತಿರಸ್ಕರಿಸಲಾಗುವುದಿಲ್ಲ. ಆದರೆ ಉತ್ತಮ ಆಟವೇ ನಮ್ಮ ಉತ್ತರ ಎಂದು ಪ್ರತಿಪಾದಿಸಿದರು.

10-ಕೆ ಬೆಂಗಳೂರು ಸ್ಪರ್ಧೆಗೆ ಮಹಿಳಾ ತಂಡ ಪ್ರಕಟ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಮುಂಚಿತವಾಗಿ, ಪ್ರೊಕ್ಯಾಮ್ ಇಂಟರ್ ನ್ಯಾಷನಲ್ ಏಪ್ರಿಲ್ 26 ರ ಭಾನುವಾರ ನಡೆಯಲಿರುವ ಟಿಸಿಎಸ್ ವರ್ಲ್ಡ್ 10-ಕೆ ಬೆಂಗಳೂರಿನ 18ನೇ ಆವೃತ್ತಿಗೆ ಎಲ್ಲಾ ಮಹಿಳಾ ವೇಗಿಗಳ ತಂಡವನ್ನು ಘೋಷಿಸಿದೆ. ಆವೃತ್ತಿಯಲ್ಲಿ 9,000 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದಾರೆ.

ಸ್ಪರ್ಧಿಗಳ-ಸ್ಪರ್ಧಿಸುವ ಓಟದ ಪಟ್ಟಿ: ಮೆಹ್ವಿಶ್ ಹುಸೇನ್ (ಸಮಯ: 50 ನಿಮಿಷ) (ಮಂಗಳೂರು); ಜಯಶ್ರೀ ವನಮ (55 ನಿಮಿಷ; ತೆಲಂಗಾಣ); ಡಾ.ಬೆನೀತಾ ಕಿರಣ್ (56 ನಿಮಿಷ; ಬೆಂಗಳೂರು); ನಿಯಾತಿ ಕೋಟಿಯಾನ್ (58 ನಿಮಿಷ; ಬೆಂಗಳೂರು); ಪಾಯಲ್ ಅಶರ್ (60 ನಿಮಿಷ; ಮುಂಬೈ); ಇಂದುಮತಿ ನಾಯರ್ (60 ನಿಮಿಷ; ಬೆಂಗಳೂರು); ಲಕ್ಷ್ಮಿ ರೂಪೇಶ್ (65 ನಿಮಿಷ; ಬೆಂಗಳೂರು); ಡಾ.ಮೀನಾಕ್ಷಿ ಹರಿಹರನ್ (70 ನಿಮಿಷ; ಗುವಾಹಟಿ); ಜಾಹ್ನವಿ ಗೌಡ (70 ನಿಮಿಷ) ಬೆಂಗಳೂರು); ದಿವ್ಯ ಮಾದಯ್ಯ (70 ನಿಮಿಷ; ಕೂರ್ಗ್); ಸಂಗೀತಾ ಕುಮಾರಿ (75 ನಿಮಿಷ) ಬೆಂಗಳೂರು); ಸಾರಿಕಾ ಶರ್ಮ (80 ನಿಮಿಷ, ಅಹಮದಾಬಾದ್); ಸೋನಿ ಕುಮಾರಿ (83 ನಿಮಿಷ) ಬೆಂಗಳೂರು); ನರ್ಮದಾ ಜೆ (85 ನಿಮಿಷ; ಬೆಂಗಳೂರು).

ಶಾಟ್‌ಪುಟ್: ತಜೀಂದರ್‌ಪಾಲ್‌ಗೆ ಚಿನ್ನ

ಚಂಡೀಗಢ: ಏಷ್ಯನ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಹಾಗೂ ರಾಷ್ಟ್ರೀಯ ದಾಖಲೆಯ ಧಾರಕ ತಜೀಂದರ್‌ಪಾಲ್ ಸಿಂಗ್ ತೂರ್ ಪಟಿಯಾಲಾದಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ ತ್ರೋಸ್ ಸ್ಪರ್ಧೆಯ ಮೊದಲ ದಿನವೇ ಶಾಟ್‌ಪುಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಪಂಜಾಬ್‌ನ ಅಥ್ಲೀಟ್ ತೂರ್ ಮೊದಲ ಪ್ರಯತ್ನದಲ್ಲೇ ಇಪ್ಪತ್ತು ದಶಮಾಂಶ ಐದು ಒಂದು ಮೀಟರ್ ದೂರಕ್ಕೆ ಶಾಟ್‌ಪುಟ್ ಎಸೆದು ಚಿನ್ನದ ಪದಕ ತನ್ನದಾಗಿಸಿಕೊಂಡರು. ಪಟಿಯಾಲಾದ ರಾಷ್ಟ್ರೀಯ ಕ್ರೀಡಾ ಸಂಸ್ಥೆಯ ಮೈದಾನದಲ್ಲಿ ನಡೆಯುತ್ತಿರುವ ಈ ಎರಡು ದಿನಗಳ ಸ್ಪರ್ಧೆಯಲ್ಲಿ ಅವರು ತಮ್ಮ ಈ ವರ್ಷದ ಅತ್ಯುತ್ತಮ ಪ್ರದರ್ಶನ ನೀಡಿದರು. ನನ್ನ ಪ್ರದರ್ಶನದಿಂದ ತೃಪ್ತಿಯಿದೆ, ಎಂದು ತೂರ್ ಸ್ಪರ್ಧೆಯ ಬಳಿಕ ಹೇಳಿದರು. ತೂರ್ ಒಟ್ಟು ಮೂರು ಪ್ರಯತ್ನಗಳಲ್ಲಿ ಇಪ್ಪತ್ತು ಮೀಟರ್ ಗಡಿ ದಾಟಿದರು. ಇಪ್ಪತ್ತು ದಶಮಾಂಶ 02 ಮೀಟರ್ ಮತ್ತು ಇಪ್ಪತ್ತು ದಶಮಾಂಶ 07 ಮೀಟರ್ ದೂರಕ್ಕೆ ಕೂಡ ಎಸೆದು ಉತ್ತಮ ಲಯದಲ್ಲಿರುವುದನ್ನು ತೋರಿಸಿದರು. ಉಳಿದ ಮೂರು ಪ್ರಯತ್ನಗಳಲ್ಲಿ ಮಾನ್ಯ ಅಳತೆ ದಾಖಲಾಗಲಿಲ್ಲ. ಈ ಋತುವಿನಲ್ಲಿ ಅವರ ಪ್ರಮುಖ ಗುರಿ ಜಪಾನ್‌ನಲ್ಲಿ ನಡೆಯಲಿರುವ ಮುಂದಿನ ಏಷ್ಯನ್ ಕ್ರೀಡಾಕೂಟದಲ್ಲಿ ಮತ್ತೆ ಚಿನ್ನದ ಪದಕ ಉಳಿಸಿಕೊಳ್ಳುವುದಾಗಿದೆ. ಅದಕ್ಕಾಗಿ ಈ ವರ್ಷ ನಂತರದ ಹಂತದಲ್ಲಿ ಅತ್ಯುತ್ತಮ ಫಾರ್ಮ್ ತಲುಪುವಂತೆ ತರಬೇತಿ ನಡೆಸುತ್ತಿರುವುದಾಗಿ ಅವರು ತಿಳಿಸಿದ್ದಾರೆ.

ಟಿ20 ವಿಶ್ವಕಪ್ ಗೆದ್ದು ಬೀಗಲಿ ಭಾರತ

ನ್ಯೂಜಿಲೆಂಡ್-ಭಾರತ ಫೈನಲ್ ಪಂದ್ಯ ಇಂದು | ಚೋಕರ್ಸ್ ಪಟ್ಟ ಕಳಚುವುದೇ ಕಿವೀಸ್?

ಅಹಮದಾಬಾದ್: ಒಂದು ತಿಂಗಳು, 20 ತಂಡಗಳು, 55 ಪಂದ್ಯಗಳು, ಸಾವಿರಾರು ರನ್ನುಗಳು, ನೂರಾರು ವಿಕೆಟ್‌ಗಳು, ಕ್ಯಾಚಿನ ರೋಮಾಂಚನ, ವಿಕೆಟ್‌ನ ಅಗ್ರೆಶನ್, ಶತಕದ ಸೆಲಬ್ರೇಶನ್ ಜೊತೆಗೆ ಗೆಲುವಿನ ಹಂಬಲ, ಸೋಲಿನ ಆಘಾತದೊಂದಿಗೆ ಪಂದ್ಯದ ಕೊನೆಯ ಕ್ಷಣದ ಆತಂಕ.. ಇಷ್ಟೆಲ್ಲಾ ನಡೆದಿರುವುದಕ್ಕೆ ಸಾಕ್ಷಿಯಾಗಿರುವ ಜಗತ್ತಿನ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ ದಿನ ಬಂದಿದೆ. ಪ್ರತಿಷ್ಠಿತ ಟಿ20 ವಿಶ್ವಕಪ್ ಪಂದ್ಯಾವಳಿಯ ಅಂತಿಮ ಪಂದ್ಯ ಭಾನುವಾರ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ಹಾಗೂ ಚೋಕರ್ಸ್ ಪಟ್ಟ ಹೊತ್ತಿಕೊಂಡಿರುವ ನ್ಯೂಜಿಲೆಂಡ್ ತಂಡಗಳು ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ತೀವ್ರ ಹಣಾಹಣಿಯ ನಂತರ ಈ ಮಾದರಿಯ ಕ್ರಿಕೆಟ್‌ನ ಚಾಂಪಿಯನ್‌ಗಳು ಸಿಗಲಿದ್ದಾರೆ. ಕಿರೀಟ ಧರಿಸಿದವರೇ ಈ ಸರ್ತಿಯ ರಾಜ ಎನಿಸಿಕೊಳ್ಳಲಿದ್ದಾರೆ. ಲೀಗ್ ಹಂತದ ನಾಲ್ಕು, ಸೂಪರ್ 8ರಲ್ಲಿ ಮೂರು ಮತ್ತು ಸೆಮಿಫೈನಲ್ ಗೆಲುವಿನೊಂದಿಗೆ ಪಂದ್ಯಾವಳಿಯ ಎರಡು ಬೆಸ್ಟ್ ತಂಡಗಳು ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ತಲುಪಿವೆ. ಅಭ್ಯಾಸಗಳನ್ನು ನಡೆಸುತ್ತಿವೆ, ಕೋಚ್‌ಗಳು ಪಿಚ್‌ಗೆ ಅಂಟಿಕೊಂಡು ಯೋಜನೆಗಳನ್ನು ರೂಪಿಸುತ್ತಿದ್ದರು. ಅಂಪೈಯರ್‌ಗಳು ಲೆಕ್ಕಾಚಾರ ಮಾಡಿಕೊಳ್ಳುತ್ತಿದ್ದರು. ಮೈದನಾದ ಹೊರಕ್ಕೆ ಅಭಿಮಾನಿಗಳ ದಂಡು, ತಮ್ಮ ತಂಡ ಬೆಂಬಲಿಸಲು ಕಾದು ನಿಂತಿದ್ದರು. ಮೈದಾನದ ತುಂಬಾ ಕ್ಯಾಮೆರಾಗಳು ಡ್ರಿಲ್ ಮಾಡುತ್ತಿದ್ದವು, ಜಾಹೀರಾತಿನ ಭರಾಟೆ ಜೋರಾಗಿಯೇ ಇತ್ತು. ಒಟ್ಟಿನಲ್ಲಿ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಟಿಪಿಕಲ್ ಫೈನಲ್ ಆಯೋಜಿತ ಕ್ರೀಡಾಂಗಣದಂತೆ ಕಾಣಿಸುತ್ತಿತ್ತು. ದೊಡ್ಡ ಹಣಾಹಣಿಗೆ ಅಣಿಯಾಗುತ್ತಿತ್ತು.

ಅಭ್ಯಾಸದಲ್ಲಿ ಮುಳುಗಿದ ಭಾರತ ತಂಡ

ಆಡುವರು ಹನ್ನೊಂದು ಜನರು. ಆದರೆ ಫೈನಲ್ ಪಂದ್ಯಕ್ಕೂ ಮುನ್ನ ನಡೆಯುತ್ತಿದ್ದ ಅಭ್ಯಾಸದಲ್ಲಿ ಭಾರತದ ಪ್ರತಿಯೊಬ್ಬರೂ ಅತ್ಯಂತ ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಅಭ್ಯಾಸ ಮಾಡುವುದು ಕಂಡುಬಂದಿತ್ತು. ವಿಶೇಷವಾಗಿ ಭಾರತಕ್ಕಾಗಿ ಪ್ರತಿಯೊಂದು ವಿಭಾಗಕ್ಕೂ ಕೋಚ್‌ಗಳಿದ್ದಾರೆ. ಅವರವರ ಕೆಲಸದಲ್ಲಿ ಅವರು ತೊಡಗಿದ್ದರು. ಶಿವಂ ದುಬೆ, ಸೂರ್ಯ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ ಸೇರಿದಂತೆ ವಿವಿಧ ಬ್ಯಾಟರ್‌ಗಳು ಪ್ಯಾಡಿನೊಂದಿಗೆ ಮೈದಾನದಲ್ಲಿ ಅಬ್ಬರಿಸಿದರು. ತಂಡದಲ್ಲಿ ಅವಕಾಶ ಪಡೆಯದ ರಿಂಕು ಸಿಂಗ್ ಮತ್ತು ವಾಷಿಂಗ್ಟನ್ ಸುಂದರ್ ಕೂಡ ಬ್ಯಾಟಿಂಗ್ ಮಾಡಿದರು. ಇಶಾನ್ ಕಿಶನ್ ಮತ್ತು ಅಭಿಷೇಕ್ ಶರ್ಮ ಫೈನಲಿಗಾಗಿ ಹೆಚ್ಚಿನ ಬೆವರು ಸುರಿಸುವುದು ಕಂಡುಬಂದಿತು. ಬೌಲರ್‌ಗಳೂ ಅದೇ ಹಂತದಲ್ಲಿ ಅಭ್ಯಾಸ ನಡೆಸುತ್ತಿದ್ದರು. ಮಾರ್ನೆ ಮಾರ್ಕಲ್ ತಮ್ಮ ವಿಭಿನ್ನ ಯೋಜನೆಗಳೊಂದಿಗೆ ಸಲಹೆಗಳನ್ನು ನೀಡುತ್ತಿದ್ದರು.

ಭಾರತಕ್ಕಿದು ನಾಲ್ಕನೇ ಫೈನಲ್

ಭಾರತ ನಾಲ್ಕನೇ ಬಾರಿ ಫೈನಲ್ ಆಡುತ್ತಿದೆ. ಮೂರನೇ ಟ್ರೋಫಿಗಾಗಿ ಕಾದಾಟ ನಡೆಸುತ್ತಿದೆ.



ದುಬಾರಿಯಾಗದಿರುವುದೇ ಸವಾಲು

ಇನ್ನೊಂದು ಬದಿಯಲ್ಲಿ ಭಾರತ ಉತ್ತಮ ಬೌಲಿಂಗ್ ಮಾಡಿದ್ದರೂ ವರುಣ್ ಚಕ್ರವರ್ತಿ ಸೇರಿದಂತೆ ಪ್ರಮುಖ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಹಾಗೂ ಹಾರ್ದಿಕ್ ಪಾಂಡ್ಯ ಮಾತ್ರ ದೊಡ್ಡ ಪರಿಣಾಮ ನೀಡುತ್ತಿದ್ದಾರೆ. ಅರ್ಶದೀಪ್ ಸಿಂಗ್ ವೈಡ್‌ಗಳಿಂದ ಹಿನ್ನಡೆ ಅನುಭವಿಸಿದ್ದಾರೆ. ಸ್ಪಿನ್ ವಿಭಾಗದಲ್ಲಿ ಅಕ್ಷರ್ ಪಟೇಲ್ ವಿಕೆಟ್ ಕಿತ್ತರೂ ಕಳೆದೆರಡು ಪಂದ್ಯಗಳಲ್ಲಿ ವರುಣ್ ಚಕ್ರವರ್ತಿ ದಂಡಿಸಿಕೊಂಡಿದ್ದಾರೆ. ಬೌಲಿಂಗ್‌ನಲ್ಲಿ ದುಬಾರಿಯಾಗದಿರುವುದೇ ಭಾರತಕ್ಕೆ ಸವಾಲಾದಂತಿದೆ.

ತಂಡಗಳು

ಭಾರತ: ಸಂಜು ಸ್ಯಾಮ್ಸನ್ (ಕೀಪರ್), ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮ, ಇಶಾನ್ ಕಿಶನ್, ತಿಲಕ್ ವರ್ಮ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಮಹಮ್ಮದ್ ಸಿರಾಜ್, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್.

ನ್ಯೂಜಿಲೆಂಡ್: ಟಿಮ್ ಸೀಫರ್ಟ್ (ಕೀಪರ್), ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ರಚಿನ್ ರವೀಂದ್ರ, ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪ್ಮನ್, ಡೇರಿಲ್ ಮಿಚೆಲ್, ಜೇಮ್ಸ್ ನೀಶಮ್, ಕೋಲ್ ಮೆಕಾಂಚಿ, ಮ್ಯಾಟ್ ಹೆನ್ರಿ, ಲಾಕಿ ಫರ್ಗುಸನ್, ಡೆವೊನ್ ಕಾನ್ವೇ, ಕೈಲ್ ಜೇಮಿಸನ್, ಇಶ್ ಸೋಧಿ, ಜಾಕೋಬ್ ಡಫಿ,

ಅಲ್ಲಿಂದ ಇಲ್ಲಿಯವರೆಗೆ ಭಾರತ	
ಎದುರಾಳಿ	ಫಲಿತಾಂಶ
ಅಮೆರಿಕ	29 ರನ್ ಜಯ
ನಮೀಬಿಯಾ	93 ರನ್ ಜಯ
ಪಾಕಿಸ್ತಾನ	61 ರನ್ ಜಯ
ನೆದರ್ಲೆಂಡ್ಸ್	17 ರನ್ ಜಯ
ಸೂಪರ್-8 ಪಂದ್ಯಗಳಲ್ಲಿ	
ಎದುರಾಳಿ	ಫಲಿತಾಂಶ
ದ.ಆಫ್ರಿಕಾ	76 ರನ್ ಸೋಲು
ಜಿಂಬಾಬ್ವೆ	72 ರನ್ ಜಯ
ವಿಂಡೀಸ್	5 ವಿಕೆಟ್ ಜಯ
ಸೆಮಿಫೈನಲ್	
ಇಂಗ್ಲೆಂಡ್	7 ರನ್ ಜಯ

ಅಲ್ಲಿಂದ ಇಲ್ಲಿಯವರೆಗೂ ಕಿವೀಸ್	
ಎದುರಾಳಿ	ಫಲಿತಾಂಶ
ಅಫ್ಘಾನ್	5 ವಿಕೆಟ್ ಗೆಲುವು
ಯುಎಇ	10 ವಿಕೆಟ್ ಗೆಲುವು
ದ.ಆಫ್ರಿಕಾ	7 ರನ್ ಸೋಲು
ಕೆನಡಾ	8 ವಿಕೆಟ್ ಗೆಲುವು
ಸೂಪರ್-8	
ಎದುರಾಳಿ	ಫಲಿತಾಂಶ
ಪಾಕಿಸ್ತಾನ	ರದ್ದು
ಶ್ರೀಲಂಕಾ	61 ರನ್ ಗೆಲುವು
ಇಂಗ್ಲೆಂಡ್	4 ವಿಕೆಟ್ ಸೋಲು
ದ.ಆಫ್ರಿಕಾ	9 ವಿಕೆಟ್ ಗೆಲುವು

ಪಿಚ್ ವರದಿ

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದ್ದಾರೆ. ಹೆಚ್ಚಿನ ಬೌನ್ಸ್ ಇರುವುದರಿಂದ ಬ್ಯಾಟರ್‌ಗಳಿಗೆ ಸಹಾಯಕವಾಗಲಿದೆ. ಸ್ಪಿನ್ ಬೌಲರ್‌ಗಳಿಗೆ ಅಲ್ಪ ಲಾಭ ನೀಡಲಿದೆ. ಮಳೆ ಸಾಧ್ಯತೆ ಕಮ್ಮಿ. ಹೆಚ್ಚಿನ ಪಂದ್ಯಗಳಲ್ಲಿ 190 ದಾಟಿದ್ದೇ ಉದಾಹರಣೆ ಇದೆ. ಟಾಸ್ ಗೆದ್ದ ತಂಡ ಬ್ಯಾಟಿಂಗ್ ಆಯ್ದುಕೊಳ್ಳಬಹುದು

ನ್ಯೂಜಿಲೆಂಡ್ ಮೇಲೆ ಒತ್ತಡದ ಕಾವು

ಹತ್ತಾರು ವರ್ಷಗಳಿಂದ ವಿಶ್ವಕಪ್ ಅಂತಹ ದೊಡ್ಡ ಟೂರ್ನಿಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತಲೇ ಬಂದಿರುವ ನ್ಯೂಜಿಲೆಂಡ್ ಗಮನ ಸೆಳೆದೇ ಹೊರಹೋಗುತ್ತದೆ. ಆದರೆ ದುರಾದೃಷ್ಟವಷಾತ್ ಕಪ್ ಮಾತ್ರ ತೆಗೆದುಕೊಂಡು ಹೋಗಿಲ್ಲ. ಅದಕ್ಕಾಗಿ ಈ ತಂಡವನ್ನು ಚೋಕರ್ಸ್ ಅನ್ನುತ್ತಾರೆ. ಇದೇ ಮಾತು ಈಗ ನ್ಯೂಜಿಲೆಂಡ್ ತಂಡಕ್ಕೆ ಒಂದು ಕಡೆ ಸವಾಲಾಗಿ ಬರುತ್ತಿದ್ದರೆ ಒಂದು ಕಡೆ ಒತ್ತಡವಾಗಿ ಕಾಡುತ್ತಿದೆ. ಮೊದಲ ಪಂದ್ಯದಿಂದಲೂ ಉತ್ತಮ ಆರಂಭ ಪಡೆಯುತ್ತಿರುವ ಕಿವೀಸ್ ದೊಡ್ಡ ಸ್ಕೋರ್‌ಗಳನ್ನೇ ನಿರ್ಮಿಸುತ್ತಿದೆ. ಹಂಗೆ ಬೌಲಿಂಗ್‌ನಲ್ಲೂ ಸ್ಪಿನ್ ಹಾಗೂ ವೇಗದ ಸಂಯೋಜನೆಯೊಂದಿಗೆ ಎದುರಾಳಿಗಳನ್ನು ಕಾಡುತ್ತಿದೆ. ಕೊಂಚ ವಿಶ್ವಾಸ, ಕೊಂಚ ಪ್ರತಿರೋಧದೊಂದಿಗೆ ವಿಶ್ವಾಸ! ಸಜ್ಜಾಗಿ ನಿಂತಂತಿದೆ ಕಿವೀಸ್.

ಬ್ಯಾಟಿಂಗ್ ಬಲವೇ ಭಾರತದ ಶಕ್ತಿ

ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಪಂದ್ಯಗಳಲ್ಲಿ ವಿಫಲವಾಗಿದ್ದ ಬ್ಯಾಟಿಂಗ್ ಪಡೆ ಮತ್ತೆ ತನ್ನ ಲಯಕ್ಕೆ ಬಂದಿದೆ. ಕಳೆದ ಎರಡು ಪಂದ್ಯಗಳಲ್ಲಿ ವಿಂಡೀಸ್ ಹಾಗೂ ಇಂಗ್ಲೆಂಡ್ ಮೇಲೆ ದೊಡ್ಡ ಮೊತ್ತವನ್ನು ಗಳಿಸಿದೆ ಭಾರತ ಬ್ಯಾಟಿಂಗ್ ಪಡೆ. ಆರಂಭಿಕರಾದ ಅಭಿಷೇಕ್ ಶರ್ಮ ಅವರ ಕಳಪೆ ಪ್ರದರ್ಶನದ ಮಧ್ಯಯೂ, ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಆಸರೆಯಾಗಿದ್ದಾರೆ. ಕಳೆದ ಎರಡೂ ಪಂದ್ಯಗಳಲ್ಲಿ ಅವರೇ ಪಂದ್ಯಶ್ರೇಷ್ಠ ಆಟಗಾರ. ಇನ್ನು ಮೂರನೇ ಕ್ರಮಾಂಕದಲ್ಲಿ ಇಶಾನ್ ಕಿಶನ್ ಕೂಡ ಅಷ್ಟೇ ಪರಿಣಾಮಕಾರಿ ಆಟವಾಡುತ್ತಿದ್ದಾರೆ. ಇನ್ನು ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ ದೊಡ್ಡ ಬಲವನ್ನೇ ನೀಡುತ್ತಿದ್ದಾರೆ. ಸೂರ್ಯ ಸ್ವಲ್ಪ ಹಿನ್ನಡೆ ಅನುಭವಿಸಿದರೂ ಹಾರ್ದಿಕ್ ಪಾಂಡ್ಯ, ತಿಲಕ್ ವರ್ಮಾ ಸಿಕ್ಕ ಅವಕಾಶದಲ್ಲಿ ದೊಡ್ಡ ಪರಿಣಾಮ ಬೀರಿಸುತ್ತಿದ್ದಾರೆ. ಭಾರತಕ್ಕೆ ಬ್ಯಾಟಿಂಗ್ ಚಿಂತೆಯೇ ಇಲ್ಲ.

ಪಂದ್ಯದ ವಿವರ

ಯಾವಾಗ: ಭಾನುವಾರ, **ಎಲ್ಲಿ:** ಅಹಮದಾಬಾದ್, **ಸಮಯ:** ಸಂಜೆ 7, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಡಬಲ್ಸ್ ಫೈನಲ್‌ನಲ್ಲಿ ಭಾರತೀಯ ಜೋಡಿ ಕಮಾಲ್

ವೈಷ್ಣವಿ-ಅಂಕಿತಾ ಚಾಂಪಿಯನ್ಸ್!

▸ ರಾಚಪ್ಪಾ ಜಂಬಗಿ

ಕಲಬುರಗಿ: ಕಳೆದ ಮೂರನಾಲ್ಕು ದಿನಗಳಿಂದ ಟೆನಿಸ್ ಕ್ರೀಡಾಂಗಣದಲ್ಲಿ ಬಲವಾದ ಪ್ರದರ್ಶನ ನೀಡಿರುವ ವೈಷ್ಣವಿ ಅಡ್ಕರ್ ಹಾಗೂ 8ನೇ ಶ್ರೇಯಾಂಕಿತ ಅಂಕಿತಾ ರೈನಾ ಜೋಡಿಯು ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪಂದ್ಯದ ಚಾಂಪಿಯನ್ ಪಟ್ಟ ಗೆದ್ದು ಬೀಗಿದೆ.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಲಾನ್ ಟೆನಿಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಟಿಎಫ್ ಡಬ್ಲ್ಯೂ 35 ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್ ಪಂದ್ಯದಲ್ಲಿ ಎದುರಾಳಿ ಭಾರತೀಯ ಆಕಾಂಕ್ಷಾ ದಿಲೀಪ್ ನಿಟ್ಟೂರೆ, ಸೋಹಾ ಸಾಧಿಕ್ ಜೋಡಿಯನ್ನು 6-2,6-2 ಅಂತರದಲ್ಲಿ ಮಣಿಸಿ ಮಹಿಳಾ ಡಬಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿತು.

ಪಂದ್ಯದ ಆರಂಭದಲ್ಲೇ ಎರಡೂ ಜೋಡಿಗಳು ತಮ್ಮ ಸರ್ವಿಸ್ ಗೇಮ್‌ಗಳನ್ನು ಉಳಿಸಿಕೊಂಡರೂ, ಬಳಿಕ ನೆಟ್ ಬಳಿ ಅಡ್ಕರ್ ಚುರುಕು ಆಟ ಹಾಗೂ ರೈನಾ ಅವರ ನಿಖರ ಶಾಟ್‌ಗಳ ನೆರವಿನಿಂದ ಎದುರಾಳಿಗಳ ಸರ್ವಿಸ್‌ನ್ನು ಬ್ರೇಕ್ ಮಾಡಿದ ಅಡ್ಕರ್- ರೈನಾ ಜೋಡಿ ಮೊದಲ ಸೆಟ್ ಅನ್ನು 6-2 ಅಂತರದಲ್ಲಿ ಗೆದ್ದು ಮುನ್ನಡೆ ಪಡೆದುಕೊಂಡಿತು. ಮುಂದಿನ ಸೆಟ್‌ಗಳಲ್ಲಿ ಕೂಡ ಗೆಲುವಿನಾಟ ಆಡಿದ ಈ ಜೋಡಿ ಮುನ್ನಡೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಕೊನೆಯಲ್ಲಿ ನೆಟ್ ಬಳಿ ಅಡ್ಕರ್ ಹೊಡೆದ ಅದ್ಭುತ ಬ್ಯಾಕ್ ಹ್ಯಾಂಡ್ ಶಾಟ್ ಕಿರೀಟವನ್ನು ಖಚಿತಪಡಿಸಿತು.



'ನಮಸ್ಕಾರ ಕಲಬುರಗಿ' ಇಲ್ಲಿ ನಾನು ಎರಡನೇ ಬಾರಿಗೆ ಐಟಿಎಫ್ ಪಂದ್ಯ ಆಡುತ್ತಿದ್ದೇನೆ. ಇಲ್ಲಿಯ ಬಿಸಿಲಿನ ಜೊತೆಗೆ ಅಭಿಮಾನಿಗಳ ಬೆಂಬಲ ಕೂಡ ಚೆನ್ನಾಗಿದೆ. ಫೈನಲ್‌ನಲ್ಲಿ ಆಕಾಂಕ್ಷಾ, ಸಾಧಿಕ್ ಜೋಡಿ ಕೂಡ ಚೆಂದದ ಆಟವಾಡಿದೆ. ಕೆ.ಎಸ್.ಎಲ್.ಟಿ ಹಾಗೂ ಕಲಬುರಗಿ ಮಂದಿಗೆ ತುಂಬಾ ಥ್ಯಾಂಕ್ಸ್.

■ ಅಂಕಿತಾ ರೈನಾ, ಟೆನಿಸ್ ಆಟಗಾರ್ತಿ

ಸಿಂಗಲ್ಸ್‌ನಲ್ಲೂ ಇವರದ್ದೇ ದರ್ಬಾರ್!

ಕೂಟದಲ್ಲಿ ಹೆಡ್‌ಲೈನ್ ಆಗಿ ಮೆರೆಯುತ್ತಿರುವ ಈ ಇಬ್ಬರ ಆಟ ಬರೀ ಡಬಲ್ಸ್‌ಗೆ ಮಾತ್ರ ಸಿಮೀತವಾಗಿರಲೇ ಇಲ್ಲ. ಪರಾಕ್ರಮ ಮೆರೆದು ಉಪಾಂತ್ಯಕ್ಕೆ ತಲುಪಿದ್ದ ಈ ಇಬ್ಬರೂ ವೈಯಕ್ತಿಕ ಆಟಗಳಲ್ಲೂ ಅಷ್ಟೇ ಚೆಂದವಾಗಿ ಆಡಿದರು. ಸಿಂಗಲ್ಸ್ ಸೆಮಿಫೈನಲ್ ಪಂದ್ಯಗಳಲ್ಲಿ ವೈಷ್ಣವಿ ಹಾಗೂ ಅಂಕಿತಾ ಕ್ರಮವಾಗಿ ನೆದರ್ಲ್ಯಾಂಡ್ಸ್ ಅಗ್ರ ಆಟಗಾರ್ತಿ ಜಾಸ್ಮಿನ್ ಗಿಂಬ್ರೇರ್ ಹಾಗೂ ಥೈಲ್ಯಾಂಡಿನ ಥಾಸ್ಪಾರ್ನ್ ವಿರುದ್ಧ ಗೆದ್ದು, ಮುಂದಿನ ಹಂತವಾದ ಸಿಂಗಲ್ಸ್ ಫೈನಲ್ ಪ್ರವೇಶ ಪಡೆದರು. ಜೋಡಿ ಚಾಂಪಿಯನ್ ಈಗ ಎದುರಾಗಲಿರುವುದೇ ವಿಶೇಷ. ಜಾಸ್ಮಿನ್ ಗಿಂಬ್ರೇರ್ ಮಾಡಿದ ಕೆಲ ಅನಗತ್ಯ ದೋಷ ಪ್ರಯೋಜನವಡಿಸಿಕೊಂಡ ವೈಷ್ಣವಿ ಅಡ್ಕರ್, ಅಂತಿಮವಾಗಿ 6-3, 6-2 ಅಂತರಗಳಿಂದ ನೆದರ್ಲ್ಯಾಂಡ್ಸ್ ಅಗ್ರ ಆಟಗಾರ್ತಿಗೆ ಸೋಲಿಸಿದರು.

8ನೇ ಶ್ರೇಯಾಂಕದ ಅಂಕಿತಾ ರೈನಾ, ಥೈಲ್ಯಾಂಡಿನ ಅನುಭವಿ ಆಟಗಾರ್ತಿ, ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ತೋರಿದ ಥಾಸಪಾರ್ನ್ ನಾಕ್ಲೋ ವಿರುದ್ಧ ಬಲಿಷ್ಠ ಹೋರಾಟ ಮತ್ತು ದೃಢ ಮನೋಬಲ ಪ್ರದರ್ಶಿಸಿ ಫೈನಲ್‌ಗೆ ಪ್ರವೇಶ ಪಡೆದರು. ಮೊದಲ ಸೆಟ್ 4-6ನಲ್ಲಿ ಸೋತು ನಿರಾಶೆಗೊಂಡರೂ ಆತ್ಮವಿಶ್ವಾಸ ಮಾತ್ರ ಕಳೆದುಕೊಳ್ಳದೇ ಕೋರ್ಟ್ ಮೇಲಿನ ನಿರ್ಧಾರಾತ್ಮಕ ಆಟದೊಂದಿಗೆ ಮುಂದಿನ ಸೆಟ್‌ಗಳನ್ನು 6-4,6-2 ಅಂತರದಲ್ಲಿ ಗೆದ್ದು ಸಿಂಗಲ್ಸ್ ಫೈನಲ್‌ಗೇರಿದರು.

ಶೀಘ್ರವೇ ತವರಿಗೆ ಕ್ರಿಕೆಟಿಗರು

ಮುಂಬೈ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ವಾಣಿಜ್ಯ ವಿಮಾನ ಹಾರಾಟಕ್ಕೆ ನಿರ್ಬಂಧಿಸಿರುವ ನಿಟ್ಟಿನಲ್ಲಿ ವೆಸ್ಟ್ ಇಂಡೀಸ್, ದ.ಆಫ್ರಿಕಾ ಮತ್ತು ಇಂಗ್ಲೆಂಡ್ ಆಟಗಾರರು ಭಾರತದಲ್ಲೇ ಉಳಿದಿದ್ದು, ವಾರಾಂತ್ಯದಲ್ಲಿ ವಿಶೇಷ ವಿಮಾನಗಳ ಮೂಲಕ ಕಳಿಸಿಕೊಡುವ ಯೋಜನೆ ಬಿಸಿಸಿಐ ಹಾಕಿಕೊಂಡಿದೆ. ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೋತು ಹೊರಬಿದ್ದಿರುವ ಮೂರೂ ತಂಡದ ಆಟಗಾರರು ಪಂದ್ಯಾವಳಿಯಿಂದ ಹೊರಬಿದ್ದರೂ ಇಲ್ಲೇ ಉಳಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಗಲ್ಫ್ ಪ್ರದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಐಸಿಸಿ ಉಳಿದ ಆಟಗಾರರನ್ನು ಚಾರ್ಟರ್ ವಿಮಾನದ ಮೂಲಕ ತಲುಪಿಸುವ ಭರವಸೆ ಮೂಡಿಸಿದೆ. ಸುರಕ್ಷತೆಯ ಖಚಿತತೆ ನೀಡಿದೆ.

ಚಾರ್ಟರ್ ವಿಮಾನದಲ್ಲಿ ಪ್ರಯಾಣ: ವರದಿಗಳ ಪ್ರಕಾರ ಬಿಸಿಸಿಐ ಖಾಸಗಿ ಜೆಟ್‌ಗಳ ಮೂಲಕ ಆಟಗಾರರನ್ನು ಕಳಿಸಿಕೊಡುವ ಯೋಜನೆ ಹಾಕಿಕೊಂಡಿದೆ. ಇಂಗ್ಲೆಂಡ್ ತಂಡದ ಆಟಗಾರರು ಭಾನುವಾರದಂದು ಲಂಡನ್‌ಗೆ ನೇರ ವಿಮಾನದ ಮೂಲಕ ಹೋಗಲಿದ್ದಾರೆ. ಆದರೆ ವಿಂಡೀಸ್ ಮತ್ತು ದ.ಆಫ್ರಿಕಾ ತಂಡಗಳ ಆಟಗಾರರು ಇನ್ನೊಂದು ಚಾರ್ಟರ್ ವಿಮಾನದ ಮೂಲಕ ಜೋಹಾನ್ಸ್‌ಬರ್ಗ್‌ಗೆ ತಲುಪಲಿದ್ದಾರೆ. ನಂತರ ಸ್ವದೇಶಕ್ಕೆ ಹೋಗಲಿದ್ದಾರೆ ಎನ್ನಲಾಗಿದೆ.

» ಇಂದು ಇಂಗ್ಲೆಂಡ್ ತಂಡ ಸ್ವದೇಶಕ್ಕೆ ಸಾಧ್ಯತೆ
» ಮರಳಲು ವಿಂಡೀಸ್ ಕೋಚ್ ಸ್ಯಾಮಿ ಚಡಪಡಿಕೆ

ಡೆರೇನ್ ಸ್ಯಾಮಿಗೆ 5 ಸ್ಟಾರ್ ಹೋಟೆಲ್‌ನಲ್ಲಿರಲು ಕಷ್ಟವೇ?

ಯುದ್ಧ ದಿನದಿನಕ್ಕೂ ಭೀಕರ ರೂಪ ಪಡೆದುಕೊಳ್ಳುತ್ತಿದೆ. ಸಾವಿರಾರು ಜನರು ಜೀವ ಕಳೆದುಕೊಳ್ಳುತ್ತಿದ್ದಾರೆ. ಆದರೆ ವೆಸ್ಟ್ ಇಂಡೀಸ್ ತಂಡದ ಪ್ರಧಾನ ತರಬೇತುದಾರ ಡೆರೇನ್ ಸ್ಯಾಮಿ ಅವರಿಗೆ ಮಾತ್ರ 5 ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಳ್ಳಲು ಕಷ್ಟವಾಗುತ್ತಿದೆಯಂತೆ. ಕಳೆದ ಭಾನುವಾರ ನಡೆದಿದ್ದ ಭಾರತದ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಹೊರಬಿದ್ದಿದ್ದ ವಿಂಡೀಸ್ ಮುಂಬೈನ 5 ಸ್ಟಾರ್ ಹೋಟೆಲ್ ಒಂದರಲ್ಲಿದೆ. ಈ ಮಧ್ಯೆ, ಪರಿಸ್ಥಿತಿ ಬಗ್ಗೆ ಅರಿವಿದ್ದರೂ ಸ್ಯಾಮಿ, ಬಿಸಿಸಿಐ ಅವರಿಗೆ ಬಲವಂತವಾಗಿ ಭಾರತದಲ್ಲಿ ಉಳಿಸಿಕೊಂಡಿರುವಂತೆ ಆಡುತ್ತಿದ್ದಾರೆ. ಟ್ವಿಟ್ಟರ್‌ನಲ್ಲಿ ನನಗೆ ಮನೆಗೆ ಹೋಗುವುದಿದೆ ಎಂದು ಪೋಸ್ಟ್ ಮಾಡಿದ್ದರು. ಶನಿವಾರದಂದು ಆರನೇ ದಿನ ಇಲ್ಲೇ ಉಳಿದಿದ್ದೇವೆ ಎಂದು ಬರೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಆಫ್ರಿಕಾದ ಗಿಬ್ಸ್ 7ನೇ ದಿನ ವಿರಾಮ ಸಿಗಬಹುದೇ ಎಂದು ಟ್ವಿಟ್ ಮಾಡಿದ್ದು, ಅದಕ್ಕೆ ಉತ್ತರಿಸಿರುವ ಸ್ಯಾಮಿ, ಆ ದಿನಗಳು ಬೇಗನೇ ಬರಬೇಕೆಂದು ಪ್ರತಿಕ್ರಿಯಿಸಿದ್ದಾರೆ. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಸ್ಯಾಮಿಗೆ 5 ಸ್ಟಾರ್ ಹೋಟೆಲ್‌ನಲ್ಲಿ ಉಳಿಯುವುದು ಕಷ್ಟದ ಕೆಲಸವೇ ಎಂದು ಪ್ರಶ್ನಿಸಿದ್ದಾರೆ.

ಪ್ರಾಗ್ ಚೆಸ್: ಅರವಿಂದ್‌ಗೆ ಎರಡನೇ ಸ್ಥಾನ

ಹೊಸದಿಲ್ಲಿ: ಪ್ರಾಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಚೆಸ್ ಉತ್ಸವದ ಮಾಸ್ಟರ್ಸ್ ವಿಭಾಗದಲ್ಲಿ ಭಾರತೀಯ ಗ್ರ್ಯಾಂಡ್ ಮಾಸ್ಟರ್ ಅರವಿಂದ್ ಚಿತಂಬರಂ ಚೆಕ್ ಗಣರಾಜ್ಯದ ಡೇವಿಡ್ ನವಾರಾ ಅವರನ್ನು ಸೋಲಿಸಿ ಐದು ಅಂಕಗಳೊಂದಿಗೆ ಕೂಟದಲ್ಲಿ ಸಂಯುಕ್ತ ದ್ವಿತೀಯ ಸ್ಥಾನ ಪಡೆದರು. ಇರಾನ್‌ನ ವಿಶ್ವ ಚಾಂಪಿಯನ್ ಡಿ. ಗುಕೇಶ್ ಕೊನೆಯ ಸುತ್ತಿನಲ್ಲಿ ಸ್ಪೇನ್‌ನ ಡೇವಿಡ್ ಆಂಟನ್ ಗುಯಿಜಾರೊ ಅವರನ್ನು ಸೋಲಿಸಿ ತಮ್ಮ ನಿರ್ಜಯ ಸರಣಿಗೆ ತೆರೆ ಎಳೆದರು. ಉಜ್ಬೆಕಿಸ್ತಾನದ ನೋದಿರ್ಬೆಕ್ ಅಬ್ದುಸತ್ತೋರೋವ್ ಟೂರ್ನಿ ಗೆದ್ದರು. ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ ಚೆಕ್ ಗಣರಾಜ್ಯದ ಸ್ಟೆಪಾನ್ ಹ್ವೆಕ್ ಅವರನ್ನು ಸೋಲಿಸಿ ಮೂರನೇ ಸ್ಥಾನ ಪಡೆದರು

ವೀಲ್‌ಚೇರ್ ಟೆನಿಸ್: ಭಾರತಕ್ಕೆ ಕಂಚು

ಕೊಲಂಬೋ: ಕೊಲಂಬೊದಲ್ಲಿ ನಡೆದ ಬಿಎನ್‌ಪಿ ಪರಿಬಾ ವೀಲ್‌ಚೇರ್ ವಿಶ್ವ ತಂಡ ಕಪ್ ಏಷ್ಯಾ ಅರ್ಹತಾ ಸ್ಪರ್ಧೆಯಲ್ಲಿ ಭಾರತೀಯ ಪುರುಷರ ತಂಡ ಐತಿಹಾಸಿಕ ಕಂಚಿನ ಪದಕ ಗೆದ್ದಿದೆ. ತೈವಾನ್ ವಿರುದ್ಧ ನಡೆದ ಪಂದ್ಯದಲ್ಲಿ ಭಾರತ 3-0 ಅಂತರದಲ್ಲಿ ಜಯ ಸಾಧಿಸಿ ಈ ಸಾಧನೆ ಮಾಡಿತು. ಮಾರ್ಚ್ ಎರಡರಿಂದ ಆರರವರೆಗೆ ನಡೆದ ಈ ಸ್ಪರ್ಧೆಯನ್ನು ಅಂತರರಾಷ್ಟ್ರೀಯ ಟೆನ್ನಿಸ್ ಮಹಾಸಂಸ್ಥೆ ಆಯೋಜಿಸಿತ್ತು. ಈ ಟೂರ್ನಿಯನ್ನು ವೀಲ್‌ಚೇರ್ ಟೆನ್ನಿಸ್‌ನ ಡೆವಿಸ್ ಕಪ್ ಎಂದು ಕರೆಯಲಾಗುತ್ತದೆ.



ಪಾಕ್ ವಿರುದ್ಧ ಜಯ: ಭಾರತೀಯ ತಂಡದಲ್ಲಿ ಕರ್ನಾಟಕದ ಶೇಖರ್ ವೀರಸ್ವಾಮಿ ಮತ್ತು ಬಸವರಾಜ ಕುಂದರ್ಗಿ ಜೊತೆಗೆ ತಮಿಳುನಾಡಿನ ಕಾರ್ತಿಕ್ ಕರುಣಾಕರಣ ಇದ್ದರು. ಆರಂಭಿಕ ಪಂದ್ಯದಲ್ಲಿ ಭಾರತ ಕೊರಿಯಾ ಗಣರಾಜ್ಯ ವಿರುದ್ಧ 0-3 ಅಂತರದಲ್ಲಿ ಸೋತಿತು. ನಂತರ ಆತಿಥೇಯ ಶ್ರೀಲಂಕಾ ವಿರುದ್ಧವೂ ತಂಡಕ್ಕೆ 0-3 ಸೋಲು ಎದುರಾಯಿತು. ಆದರೆ ಮೂರನೇ ಪಂದ್ಯದಲ್ಲಿ ಭಾರತ ಭರ್ಜರಿ ಪುನರಾಗಮನ ಮಾಡಿತು. ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ಕಾರ್ತಿಕ್ ಕರುಣಾಕರಣ ಮತ್ತು ಶೇಖರ್ ವೀರಸ್ವಾಮಿ ಸಿಂಗಲ್ಸ್ ಪಂದ್ಯಗಳಲ್ಲಿ ಸುಲಭವಾಗಿ ಗೆದ್ದು ಭಾರತಕ್ಕೆ ಮುನ್ನಡೆ ತಂದರು. ನಂತರ ಡಬಲ್ಸ್ ಪಂದ್ಯದಲ್ಲೂ ಭಾರತೀಯ ಜೋಡಿ 6-0, 6-0 ಅಂತರದಲ್ಲಿ ಗೆದ್ದಿತು.

ನಿರ್ಣಾಯಕ ಪಂದ್ಯದಲ್ಲಿ ಮಿಂಚಿನಾಟ: ಕಂಚಿನ ಪದಕಕ್ಕಾಗಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಭಾರತ ತೈವಾನ್ ವಿರುದ್ಧ ಮತ್ತೊಮ್ಮೆ ಪ್ರಭಾವಿ ಪ್ರದರ್ಶನ ನೀಡಿತು. ಕಾರ್ತಿಕ್ ಕರುಣಾಕರಣ ಟಾಂಗ್ ಚಾವ್ ಹಾನ್ ಅವರನ್ನು 6-1, ಅಂತರದಲ್ಲಿ ಸೋಲಿಸಿದರು. ಶೇಖರ್ ವೀರಸ್ವಾಮಿ ವಾಂಗ್ ವೇಯ್ ಹ್ಸುವಾನ್ ವಿರುದ್ಧ 6-2, ಅಂತರದಲ್ಲಿ ಜಯ ಸಾಧಿಸಿದರು. ನಂತರ ಡಬಲ್ಸ್ ಪಂದ್ಯದಲ್ಲೂ ಭಾರತೀಯ ಜೋಡಿ 6-1, 6-0 ಅಂತರದಲ್ಲಿ ಗೆದ್ದು ಭಾರತಕ್ಕೆ ಕಂಚಿನ ಪದಕವನ್ನು ಖಚಿತಪಡಿಸಿತು. ಮುಂದಿನ ಅವಧಿಯಲ್ಲಿ ಭಾರತೀಯ ವೀಲ್‌ಚೇರ್ ಟೆನ್ನಿಸ್ ಆಟಗಾರರು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಮುಂದಿನ ವಿಶ್ವ ತಂಡ ಕಪ್ ಅರ್ಹತಾ ಚಕ್ರಕ್ಕೆ ಸಿದ್ಧತೆ ನಡೆಸಲಿದ್ದಾರೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5917



ಎಡದಿಂದ ಬಲಕ್ಕೆ
1.ವಸು ಒಳಗೊಂಡ ಸಂಪೂರ್ಣವಾಗಿ ತಿಳಿಹೇಳುವಿಕೆ (4)
3.ಉಪವಾಸ ಬಿಟ್ಟ ನಂತರ ಮಾಡಿದ ಭಾಷಣ (4)
5.ಬಿಸಿ ಕಡೆಯಲ್ಲಿಟ್ಟುಕೊಂಡ ಶೌರ್ಯ (3)
6.ರಾಜಿ ಮಾಡಿಕೊಳ್ಳದೆ ಸೋಲು (4)
8.ಆಂಜನೇಯನ ಒಂದು ಹೆಸರು (4)
10.ವಿಪರೀತವಾಗಿ ವರ್ತಿಸು (4)
12.ವ್ಯವಸ್ಥಿತವಾಗಿರುವಂಥಾದ್ದು ತಿರುಗಿದೆ (4)
14.ವೇತನವು ಕಡೆಯಲ್ಲಿ ದೀರ್ಘವಾಗಿದೆ (3)
15.ಕಲಾಪತ್ತಿನ ಅಂಚುಳ್ಳ ರುಮಾಲು (4)
16.ವರ್ಣದ ನಡುವೆ ಸಮಗ್ರವಾದುದಿದೆ (4)

ಮೇಲಿನಿಂದ ಕೆಳಕ್ಕೆ
1.ಕೃಷ್ಣನ ವಿರಾಟ ದರ್ಶನ (4)
2.ಸುತನು ಈ ನಡುವೆ ಹೇಳಿದ ಗುಡ್-ಮಾರ್ನಿಂಗ್ (4)
3.ದೊಡ್ಡ ಆಕಾಶಕಾಯದ ಸುತ್ತ ಸುತ್ತುತ್ತಿರುವುದು (4)
4.ಒಮ್ಮತ-ಏಕಾಭಿಪ್ರಾಯ (4)
7.ಸೀತೆ ಹೀಗೆ ದಶರಥ ಪುತ್ರನ ಹೆಂಡತಿಯಾಗಿ (4)
9.ಮೆಲುವಾಗಿ ಬೀರಿದ ನಗೆ (4)
10.ಆಡಿನ ನಡುವೆ ಅಣ್ಣನಿದ್ದಾನೆ (3)
11.ಪಟ ಕಡೆಯಲ್ಲಿರುವ ಮೋಸದಿಂದ ಕೂಡಿದ್ದು (3)
12.ಅಗಲವಾದ ತಟ್ಟೆ ತಲೆಕೆಳಗಾಗಿದೆ (3)
13.ಒಳ್ಳೆಯ ಬಣ್ಣವುಳ್ಳ ಬಂಗಾರ (3)

5916 ಉತ್ತರ

ಎಡದಿಂದ ಬಲಕ್ಕೆ:
2.ಮೆಲ್ಲುಸಿರು 4.ಹರ
5.ಚತುರ 6.ತರುಣಾತಪ
9.ಕಿರುಗೆಜ್ಜೆ
10.ದೇವದಾಸ
13.ರಸಾನುಭವ
15.ಜಹಜು 17.ಸ್ವರ
18.ಕಾಸದಾರ

ಮೇಲಿನಿಂದ ಕೆಳಕ್ಕೆ :
1.ಮಂಚ 2.ಮೆರವಣಿಗೆ
3.ಸಿರಿತನ 4.ಹರಿತ
7.ಪರಿಸರ 8.ಬಾಕಿದಾರ
11.ವಜ್ರಪಂಜರ
12.ನವರಸ 14.ಸಾಕಾರ
16.ಜುಟ್ಟು

ಕಿರುಸುದ್ದಿ

ಸೈಕಲಿನಿಂದ ಬಿದ್ದು ಗಂಭೀರ ಗಾಯಗೊಂಡಿದ್ದ ಬಾಲಕ ಸಾವು

ವಿಟ್ಲ: ಕೊಳ್ನಾಡು ಗ್ರಾಮದ ತಾಳಿತ್ತನೂಜಿ ದೇವಸ್ಯ ನಿವಾಸಿ ಅಬೂಬಕ್ಕರ್ ಅವರ ಮಗಳು ಅಸ್ಮ ಎಂಬವರ ಪುತ್ರ ಆಸೀಫ್ (12) ಎಂಬ ಬಾಲಕ ಸೈಕಲ್‌ನಿಂದ ಬಿದ್ದು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿರುವ ದುರ್ಘಟನೆ ಶನಿವಾರ ಸಂಜೆ ಸಂಭವಿಸಿದೆ. ಮದರಸವೊಂದರಲ್ಲಿ ಆಯೋಜಿಸಲಾದ ಇಫ್ತಾರ್ ಕೂಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಮನೆಗೆ ಸೈಕಲ್‌ನಲ್ಲಿ ಹಿಂತಿರುಗುವ ವೇಳೆ ರಸ್ತೆಯ ತಿರುವಿನಲ್ಲಿ ಆಕಸ್ಮಾತ್ ನಿಯಂತ್ರಣ ತಪ್ಪಿ ಬಿದ್ದ ಪರಿಣಾಮ ಬಾಲಕನ ದೇಹದ ಒಳಭಾಗಕ್ಕೆ ತೀವ್ರವಾದ ಪೆಟ್ಟು ತಗುಲಿದೆಯೆಂದು ತಿಳಿದುಬಂದಿದೆ. ಗಂಭೀರ ಗಾಯಗೊಂಡಿದ್ದ ಆಸೀಫ್‌ನ್ನು ತಕ್ಷಣ ಚಿಕಿತ್ಸೆಗಾಗಿ ಫಾದರ್ ಮುಲ್ಲರ್ ಆಸ್ಪತ್ರೆ ತುಂಬೆಗೆ ಸಾಗಿಸಿದರೂ, ಅವನ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲವೆಂದು ಸ್ಥಳೀಯರು ತಿಳಿಸಿದ್ದಾರೆ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಾಳಿತ್ತನೂಜಿಯ ವಿದ್ಯಾರ್ಥಿಯಾಗಿದ್ದ ಆಸೀಫ್ ಶಾಲೆಯ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಮುಂಚೂಣಿಯಲ್ಲಿದ್ದ ಪ್ರತಿಭಾವಂತ ಬಾಲಕನಾಗಿದ್ದನು ಎಂದು ತಿಳಿದುಬಂದಿದೆ. ತಾಯಿಗೆ ಏಕೈಕ ಮಗನಾಗಿದ್ದ ಆಸೀಫ್‌ನ ಅಕಾಲಿಕ ನಿಧನವು ಕುಟುಂಬದವರನ್ನು ತೀವ್ರ ಆಘಾತಕ್ಕೆ ಗುರಿಮಾಡಿದೆ.

ವ್ಯಾಪಾರಿಗಳ ಪೈಪೋಟಿ: ಹತ್ತು ರೂ.ಗಿಳಿದ ಎಳನೀರು ಬೆಲೆ

ಕುಶಾಲನಗರ: ವ್ಯಾಪಾರಿಗಳ ನಡುವೆ ಏರ್ಪಟ್ಟ ಪೈಪೋಟಿ ಕೇವಲ ಹತ್ತು ರುಪಾಯಿಗೆ ಎಳನೀರನ್ನು ಮಾರಾಟ ಮಾಡುವಷ್ಟರ ಮಟ್ಟಿಗೆ ಬಂದಿತ್ತು. ಇದು ಕುಶಾಲನಗರ–ಕೂಡಿಗೆ ರಸ್ತೆ ಬದಿಯಲ್ಲಿ ಶನಿವಾರ ಕಂಡುಬಂದ ದೃಶ್ಯ. ಎಳನೀರು ಕುಡಿಯಲು ಬಂದವರು ತಮ್ಮ ಮನೆಗಳಿಗೂ ಸಾಧ್ಯವಾದಷ್ಟು ಖರೀದಿ ಮಾಡಿದರು. ರಂಜಾನ್ ತಿಂಗಳಾದ ಕಾರಣ ಬಹುತೇಕ ಮಂದಿ ವ್ಯಾಪಾರಿಗಳು ಪೈಪೋಟಿಯ ಲಾಭವನ್ನು ಬಳಸಿಕೊಂಡು ಖುಷಿಪಟ್ಟರು.

ಆಟೋ ಡಿಕ್ಕಿ: ಚಿಕಿತ್ಸೆ ಫಲಕಾರಿಯಾಗದೆ ವೃದ್ಧ ಸಾವು

ಉಡುಪಿ: ರಸ್ತೆ ದಾಟಲು ನಿಂತಿದ್ದ ವೃದ್ಧರೊಬ್ಬರಿಗೆ ಆಟೋ ಡಿಕ್ಕಿ ಹೊಡೆದ ಪರಿಣಾಮ, ಗಂಭೀರವಾಗಿ ಗಾಯಗೊಂಡಿದ್ದ ಅವರು ಗುರುವಾರ ಮೃತಪಟ್ಟಿದ್ದಾರೆ. ಯಡ್ತಾಡಿ ನಿವಾಸಿ ಸಂಜೀವ ಪೂಜಾರಿ (66) ಮೃತರು. ಫೆ. 22ರಂದು ಸಾಹೇಬ್ರಕಟ್ಟೆ ಶನಿಶ್ವೇರ ದೇವಸ್ಥಾನದ ಬಳಿ ರಸ್ತೆ ದಾಟುತ್ತಿದ್ದಾಗ ಸಂದೀಪ್ ಎಂಬವರು ಚಲಾಯಿಸುತ್ತಿದ್ದ ಆಟೋ ಡಿಕ್ಕಿ ಹೊಡೆದಿತ್ತು. ತಲೆಗೆ ತೀವ್ರ ಗಾಯವಾಗಿದ್ದ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಮಾ. 5ರಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಕೋಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಪಾಜೆಯಲ್ಲಿ ಕಾಡಾನೆಗಳ ದಾಳಿ: ಕೃಷಿ ನಾಶ

ನಾಪೋಕ್ಲು : ಸಂಪಾಜೆ ಗ್ರಾಮದಲ್ಲಿ ನಿರಂತರ ಕಾಡಾನೆಗಳ ದಾಳಿಯಿಂದ ಅಪಾರ ಪ್ರಮಾಣದ ಕೃಷಿಯನ್ನು ನಾಶಪಡಿಸಿದ ಘಟನೆ ಜರುಗಿದೆ. ಕೊಡಗು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗವಾದ ಸಂಪಾಜೆ ಗ್ರಾಮದ ಕರುಣಾಕರ ಎಸ್.ಪಿ ಅವರ ತೋಟಕ್ಕೆ ಆನೆಗಳ ಹಿಂಡು ದಾಳಿ ಮಾಡಿರುವುದಲ್ಲದೆ ಗ್ರಾಮದ ಇತರ ಕೃಷಿಕರ ತೋಟಗಳಿಗೆ ಕಾಡಾನೆಗಳು ಲಗ್ಗೆ ಇಟ್ಟು ಅಪಾರ ಪ್ರಮಾಣದ ನಷ್ಟ ಸಂಭವಿಸುತ್ತಿದೆ. ತೋಟಕ್ಕೆ ದಾಳಿ ನಡೆಸಿದ ಆನೆಗಳು ಅಡಿಕೆ, ತೆಂಗು, ಬಾಳೆ ಇತರ ಬೆಳೆಗಳನ್ನು ನಾಶ ಪಡಿಸಿವೆ. ಈ ಭಾಗದಲ್ಲಿ ನಿರಂತರವಾಗಿ ಕಾಡಾನೆಗಳು ದಾಳಿ ಮಾಡುತ್ತಿದ್ದು ರೈತರು ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದು ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಹಾಗೂ ನಷ್ಟಕ್ಕೆ ಒಳಗಾದ ಕೃಷಿಕರಿಗೆ ನಷ್ಟ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಅನಂತಪುರದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಗೃಹೋಪಕರಣ ಹಾನಿ

ಕುಂಬಳೆ: ಅನಂತಪುರದ ರಾಜಾರಾಮ್ ಎಂಬವರ ಮನೆಯಲ್ಲಿ ಉಂಟಾದ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಟಿವಿ ಹಾಗೂ ಗೃಹೋಪಕರಣ ವಸ್ತುಗಳು ನಾಶಗೊಂಡಿವೆ. ದೈಹಿಕವಾಗಿ ಅಶಕ್ತರಾಗಿರುವ ರಾಜಾರಾಮ್ ಅವರಿಗೆ ಮನೆಯ ನಡುಕೋಣೆಯಿಂದ ಬೆಂಕಿ ಮತ್ತು ಹೊಗೆ ಏರುತ್ತಿರುವುದನ್ನು ನೋಡಿ ತನ್ನ ನೆರೆಹೊರೆಯವರಿಗೆ ಫೋನ್ ಮೂಲಕ ಮಾಹಿತಿ ನೀಡಿದರು. ಮನೆಯಲ್ಲಿ ರಾಜಾರಾಮ್ ಒಬ್ಬರೇ ಇದ್ದರು. ನೆರೆಯ ಪ್ರಕಾಶ್ ಎಂಬವರು ರಾಜಾರಾಮ ಅವರನ್ನು ಸುರಕ್ಷಿತವಾಗಿ ಹೊರಗೆ ಕರೆತಂದು ಬಳಿಕ ಅಗ್ನಿಶಾಮಕ ಇಲಾಖೆಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ಮತ್ತು ರಕ್ಷಣಾ ಅಧಿಕಾರಿ ವಿ.ಎಂ.ಸತೀಶನ್ ನೇತೃತ್ವದ ಕಾಸರಗೋಡು ಅಗ್ನಿಶಾಮಕ ಮತ್ತು ರಕ್ಷಣಾ ಠಾಣೆಯ 2 ಘಟಕಗಳು ಆಗಮಿಸಿ ಬೆಂಕಿಯನ್ನು ನಂದಿಸಿತು.

ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ಕುರಿತ ಉಡುಪಿ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಸ್ವರೂಪ ಟಿ.ಕೆ.

ನ್ಯಾಯಾಲಯ ನಿರ್ದೇಶನ ಪಾಲಿಸಬೇಕು

ಉಡುಪಿ: ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಆದೇಶದಲ್ಲಿರುವ ಮಾರ್ಗಸೂಚಿಗಳನ್ನು ಮಾನವೀಯ ಹಾಗೂ ವೈಜ್ಞಾನಿಕ ದೃಷ್ಟಿಕೋನದಿಂದ ಅನುಷ್ಠಾನ ಮಾಡಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಶನಿವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ಕುರಿತ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜನಸಾಮಾನ್ಯರಿಗೆ ಬೀದಿ ನಾಯಿಗಳಿಂದ ಉಂಟಾಗುವ ಉಪಟಳಗಳನ್ನು ತಪ್ಪಿಸುವ ಉದ್ದೇಶದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೆಲವೊಂದು ಮಾರ್ಗದರ್ಶನಗಳನ್ನು ಸೂಚಿಸಿದೆ. ಇವುಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದರೊಂದಿಗೆ ಬೀದಿ ನಾಯಿಗಳಿಂದ ಉಂಟಾಗುವ ತೊಂದರೆಗಳನ್ನು ನಿಯಂತ್ರಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರೇಬೀಸ್ ಹರಡದಂತೆ ಲಸಿಕಾ ಕಾರ್ಯಕ್ರಮ

ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಸಂಬಂಧಪಟ್ಟ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಅವುಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರಿಸಲು, ಎ.ಬಿ.ಸಿ ಕಾರ್ಯಕ್ರಮಗಳನ್ನು ತೀವ್ರಗೊಳಿಸಲು, ರೇಬೀಸ್ ಹರಡದಂತೆ ತಡೆಗಟ್ಟಲು ಲಸಿಕಾ ಕಾರ್ಯಕ್ರಮ ಸೇರಿದಂತೆ ಮತ್ತಿತರ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡುವಂತೆ ಸೂಚಿಸಿದ್ದು, ಇದು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು ಎಂದರು.



ನೋಡೆಲ್ ಅಧಿಕಾರಿಗಳ ವಿವರ ಸಲ್ಲಿಸಿ

ಜಿಲ್ಲೆಯ ನಗರ ಭಾಗದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು, ಸರ್ಕಾರಿ ಕಚೇರಿಗಳು, ಬಸ್ ಹಾಗೂ ರೈಲ್ವೆ ನಿಲ್ದಾಣ, ಆಸ್ಪತ್ರೆಗಳು ಹಾಗೂ ಕ್ರೀಡಾಂಗಣ ಸೇರಿದಂತೆ ಒಟ್ಟು 253 ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 440 ಬೀದಿನಾಯಿಗಳನ್ನು ಗುರುತಿಸಲಾಗಿರುತ್ತದೆ. ಈ ಸಂಸ್ಥೆಗಳ ಗೇಟ್‌ಗಳ ಮೇಲೆ ಸಂಬಂಧಪಟ್ಟ ನೋಡೆಲ್ ಅಧಿಕಾರಿಗಳ ಹೆಸರು, ಮೊಬೈಲ್ ನಂಬರ್ ಹಾಗೂ 'ಇಲ್ಲಿ ನಾಯಿಗಳು ಕಂಡಲ್ಲಿ ನೋಡೆಲ್ ಅಧಿಕಾರಿಗಳನ್ನು ಸಂಪರ್ಕಿಸಿ' ಎಂಬ ಫಲಕಗಳನ್ನು ಪ್ರತೀ ಸಂಸ್ಥೆಗಳಲ್ಲಿ ಅಳವಡಿಸಿರುವ ಕುರಿತ ವಿವರಗಳನ್ನು ಜಿ.ಪಿ.ಎಸ್ ಫೋಟೋದೊಂದಿಗೆ ಎರಡು ದಿನಗಳ ಒಳಗಾಗಿ ನೀಡುವಂತೆ ಹಾಗೂ ಗ್ರಾಮೀಣ ಪ್ರದೇಶದಲ್ಲಿಯೂ ನೇಮಕ ಮಾಡಲಾದ ನೋಡೆಲ್ ಅಧಿಕಾರಿಗಳ ವಿವರವನ್ನು ಸಲ್ಲಿಸುವಂತೆ ಸೂಚಿಸಿದರು.

> ▸▸ ಬೀದಿ ನಾಯಿಗಳಿಂದ ಉಂಟಾಗುವ ತೊಂದರೆಗಳನ್ನು ನಿಯಂತ್ರಿಸಿ
>
> ▸▸ ಒಟ್ಟು 253 ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 440 ಬೀದಿನಾಯಿಗಳನ್ನು ಗುರುತಿಸಲಾಗಿರುತ್ತದೆ.

> **ಜಿಲ್ಲೆಯಲ್ಲಿ ಡಾಗ್ ಅಡಾಪ್ಷನ್ ಕುರಿತು ಜಾಗೃತಿ ಮೂಡಿಸಬೇಕು. ಇತರೆ ಕೆಲವು ಜಿಲ್ಲೆಗಳಲ್ಲಿಯೂ ಸಹ ಬೀದಿ ನಾಯಿಗಳ ಡಾಗ್ ಶೋ ಮಾಡಲು ನೋಂದಣಿ ಮಾಡಿಕೊಂಡಿದ್ದಾರೆ, ಡಾಗ್ ಶೋ ಮಾಡಿದ್ದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ನಾಯಿಗಳನ್ನು ದತ್ತು ಸ್ವೀಕಾರ ಮಾಡಿಲಿದ್ದಾರೆ. ಜಿಲ್ಲೆಯಲ್ಲಿ ಡಾಗ್ ಅಡಾಪ್ಷನ್ ಮಾಡಿಕೊಂಡಿರುವ ವಿವರಗಳನ್ನು ನೀಡಿ.**
>
> ■ ಸ್ವರೂಪ ಟಿ.ಕೆ. ಜಿಲ್ಲಾಧಿಕಾರಿ

ರೇಬೀಸ್ ಕಾಯಿಲೆ, ಸಂಶಯಾಸ್ಪದ ರೋಗ ಪೀಡಿತ ಅಥವಾ ಆಕ್ರಮಣಕಾರಿ ನಡತೆ ಇರುವ ನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಬಿಡಲು ಅನುಕೂಲವಾಗುವಂತೆ ಪ್ರತೀ ತಾಲೂಕಿನಲ್ಲಿಯೂ ಆಶ್ರಯ ತಾಣಗಳ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಗುರುತಿಸುವಂತೆ ಈಗಾಗಲೇ ಕಳೆದ ಸಭೆಯಲ್ಲಿ ಸೂಚಿಸಲಾಗಿದ್ದು, ಉಡುಪಿ ನಗರ ವ್ಯಾಪ್ತಿಯಲ್ಲಿ 9 ಎಕ್ರೆ, ಕುಂದಾಪುರದ ಕಂದಾವರ ಡಂಪಿಂಗ್ ಯಾರ್ಡ್ ಬಳಿ 1.5 ಎಕ್ರೆ, ಕಾರ್ಕಳದಲ್ಲಿ 1 ಎಕ್ರೆ, ಕಾಪುವಿನ ಶಿರ್ವದಲ್ಲಿ 3 ಎಕ್ರೆ, ಬೈಂದೂರಿನಲ್ಲಿ 1 ಎಕ್ರೆ ಹಾಗೂ ಸಾಲಿಗ್ರಾಮದ ಗಿಳಿಯಾರಿನಲ್ಲಿ 3 ಎಕರೆ ಗುರುತಿಸಲಾಗಿದೆ ಎಂದ ಅವರು, ಎಸ್.ಓ.ಪಿ. ಅನ್ವಯ ಅಗತ್ಯವಿರುವ ಆಹಾರ, ನೀರು, ನೆರಳು, ಪಶು ವೈದ್ಯಕೀಯ ಚಿಕಿತ್ಸೆಗಳನ್ನು ಒದಗಿಸುವಂತಹ ಆಶ್ರಯ ತಾಣಗಳನ್ನು ಕೂಡಲೇ ನಿರ್ಮಾಣ ಮಾಡುವುದರೊಂದಿಗೆ ಡಾಗ್ ಶೆಲ್ಟರ್ ಎಂಬ ಬೋರ್ಡ್‌ನ್ನು ಅಳವಡಿಸುವಂತೆ ಕ್ರಮ ವಹಿಸಬೇಕೆಂದರು.

ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂಖ್ಯೆಗೆ ಅನುಗುಣವಾಗಿ ಆಹಾರ ವಿತರಣೆಗೆ ಸ್ಥಳಗಳನ್ನು ಗುರುತಿಸಬೇಕು. ನಿಗದಿತ ಜಾಗದಲ್ಲಿ ಮಾತ್ರ ಆಹಾರ ನೀಡಬೇಕು. ಆಹಾರ ವಿತರಣಾ ತಾಣಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ಪೂರೈಕೆ ಮಾಡದಂತೆ ಸುಪ್ರೀಂಕೋರ್ಟ್ ಆದೇಶದಲ್ಲಿ ಸೂಚಿಸಿದ್ದು, ಇದು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು ನೋಡಲ್ ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದರು.

ಜಿಲ್ಲೆಯ ನಗರ ಹಾಗೂ ಸ್ಥಳೀಯ ಸಂಸ್ಥೆಯವರು ಬೀದಿನಾಯಿಗಳ ಸ್ಥಳಾಂತರ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ಬೀದಿ ನಾಯಿಗಳ ನಿಯಂತ್ರಣ ಕುರಿತು ಸಹಾಯವಾಣಿ ಸ್ಥಾಪಿಸಿ, ಜನರ ದೂರುಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಎಸ್.ಎಸ್ ಕಾದ್ರೋಳ್ಳಿ, ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ.ಎಂ.ಸಿ ರೆಡ್ಡಪ್ಪ, ಪೌರಾಯುಕ್ತ ಮಹಾಂತೇಶ ಹಂಗರಗಿ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಂಬಳಕ್ಕೆ ಸರಕಾರದಿಂದ ಅನುದಾನ: ಸಿಎಂ

ಬಂಟ್ವಾಳ: ಅವಿಭಜಿತ ದ.ಕ.ಜಿಲ್ಲೆಯಲ್ಲಿ ನಡೆಯುವ ಕಂಬಳ ಜಾತ್ಯತೀತ, ಧರ್ಮಾತೀತವಾಗಿ ಭಾಗವಹಿಸುವ ಜನಪ್ರಿಯ ಕ್ರೀಡೆಯಾಗಿದ್ದು, ಇದನ್ನು ಉಳಿಸಿ ಬೆಳೆಸುವುದು ನಮ್ಮ ಜವಾಬ್ದಾರಿ, ಈ ನಿಟ್ಟಿನಲ್ಲಿ ನಮ್ಮ ಸರಕಾರ ಕಂಬಳಕ್ಕೆ ಪ್ರೋತ್ಸಾಹ, ಬೆಂಬಲದ ಜತೆಗೆ ಹಣಕಾಸಿನ ನೆರವನ್ನೂ ಕೊಡ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ನಾವೂರು ಗ್ರಾಮದ ಕೂಡಿಬೈಲಿನಲ್ಲಿ ಶನಿವಾರ ಆರಂಭಗೊಂಡ 15 ನೇ ವರ್ಷದ 'ಮೂಡೂರು–ಪಡೂರು' ಜೋಡುಕರೆ ಬಯಲು ಕಂಬಳಕೂಟದಲ್ಲಿ ಸಂಜೆ ನಡೆದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜಕೀಯ ಪ್ರಜಾಪ್ರಭುತ್ವದ ಜತೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ದೊರಕಿದಾಗ ಮಾತ್ರ ಸ್ವಾತಂತ್ರ್ಯದ ಪರಿಕಲ್ಪನೆ ಯಶಸ್ಸು ಕಾಣುತ್ತದೆ. ಈ ಹಿನ್ನಲೆಯಲ್ಲಿ ಸಮಾಜದ ದುರ್ಬಲ ವರ್ಗವನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿದ್ದೇವೆ. ರಾಜ್ಯದ ಜನ ಕೈ ಹಿಡಿಯುತ್ತಾರೆಂಬ ವಿಶ್ವಾಸವಿದೆ. 2028ಕ್ಕೂ ನಾವೇ ಅಧಿಕಾರಕ್ಕೆ ಬರುತ್ತವೆ ಎಂದರು.



ರಮಾನಾಥ ರೈಗಳ ಕ್ಷೇತ್ರಕ್ಕೆ ಐದು ಸಾವಿರ ಕೋಟಿ ರೂಪಾಯಿಯನ್ನು ಕಳೆದ ಅವಧಿಯಲ್ಲಿ ತರಿಸಿ ಅಭಿವೃದ್ಧಿ ಮಾಡಲಾಗಿತ್ತು. ಆದರೂ ಅವರನ್ನು ಕ್ಷೇತ್ರದ ಜನ ಸೋಲಿಸಿದರು. ಇದು ನೋವಿನ ಸಂಗತಿ, ಇನ್ನೊಂದು ಸಾರಿ ಅವರು ನಿಲ್ಲುತ್ತಾರೆ. 2028ಕ್ಕೆ ಮತ್ತೆ ಅಭ್ಯರ್ಥಿ ಆಗುತ್ತಾರೆ, ಅವರು ಮತ್ತೆ ಗೆಲ್ಲಬೇಕು ಎಂದರು. ಮುಂದಿನ ಆರ್ಥಿಕ ವರ್ಷದಲ್ಲಿ ಬೆಂಜನಪದವಿನಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು ಎಂದರು

ಸಿಎಂಗೆ ಕಂಬಳದ ಬೆತ್ತ

ಇದೇ ವೇಳೆ ಕಂಬಳ ಸಮಿತಿಯ ವತಿಯಿಂದ ಮುಖ್ಯಮಂತ್ರಿ ಅವರಿಗೆ ಕಂಬಳದ ಬೆತ್ತ, ಸ್ಮರಣಿಕೆಯನ್ನಿತ್ತು ಸನ್ಮಾನಿಸಲಾಯಿತು. ಬಾರ್ಕೂರು ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ವಿದ್ಯಾವಾಚಸ್ಪತಿ ಡಾ.ಸಂತೋಷ್ ಗುರೂಜಿ ಆಶೀರ್ವಚನ ಗೈದರು. ಸಮಿತಿಯ ಗೌರವಾಧ್ಯಕ್ಷ , ಮಾಜಿ ಸಚಿವ ಬಿ.ರಮಾನಾಥ ರೈ ಪ್ರಸ್ತಾವಿಕವಾಗಿ ಮಾತನಾಡಿದರು.

ಸ್ಪೀಕರ್ ಯು.ಟಿ.ಖಾದರ್, ಸಾರಿಗೆ ಸಚಿವ ರಾಮಲಿಂಗ ರೆಡ್ಡಿ, ಎಂಎಲ್‌ಸಿ ಸಲೀಮ್ ಅಹ್ಮದ್, ಐವನ್ ಡಿಸೋಜ, ಶಾಸಕ ಅಶೋಕ್ ಕುಮಾರ್ ರೈ, ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ವಿವಿಧ ನಿಗಮದ ಅಧ್ಯಕ್ಷರಾದ ಲಾವಣ್ಯ ಬಲ್ಲಾಳ್, ಟಿ.ಎಮ್ ಶಹೀದ್ ತೆಕ್ಕಿಲ್, ಮಮತಾ ಡಿ.ಎಸ್. ಗಟ್ಟಿ, ಶಾಲೆಟ್ ಪಿಂಟೋ, ಸದಾಶಿವ ಉಳ್ಳಾಲ್, ಸಿಎಂ ಅವರ ಮಾಧ್ಯಮ ಸಲಹೆಗಾರ ಪ್ರಭಾಕರ್, ಕೆಪಿಸಿಸಿ ಪ್ರ. ಕಾರ್ಯದರ್ಶಿಗಳಾದ ಪದ್ಮರಾಜ್ ಆರ್ ಪೂಜಾರಿ, ಕೃಪಾ ಆಳ್ವ, ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ಚೆನ್ನವೇಣಿ ಶೆಟ್ಟಿ, ನ್ಯಾಯವಾದಿ ಅಶ್ವನಿಕುಮಾರ್ ರೈ, ದೀಪಕ್ ಕುಮಾರ್ ರೈ,ಉದ್ಯಮಿ ಉದಯಹೆಗ್ಡೆ, ಪ್ರತಿಭಾ ಕುಳಾಯಿ ಮೊದಲಾದವರು ಉಪಸ್ಥಿತರಿದ್ದರು.

ಸತೀಶ್ ಪ್ರಭುವಿಗೆ ಸಾರ್ವಜನಿಕ ಶ್ರದ್ಧಾಂಜಲಿ

ಮಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕ, ಬಿಜೆಪಿ ಮುಖಂಡ ಇತ್ತೀಚೆಗೆ ಅಗಲಿದ ಸತೀಶ್ ಪ್ರಭು ಅವರಿಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ ಶನಿವಾರ ನಗರದ ಟಿ.ವಿ.ರಮಣ ಪೈ ಸಭಾಂಗಣದಲ್ಲಿ ನಡೆಯಿತು.

ಬಾಲ್ಯದಿಂದಲೇ ಆರೆಸ್ಸೆಸ್ ಕಾರ್ಯಕರ್ತರಾಗಿ, ಸಂಘದ ಪ್ರೇರಣೆಯಿಂದ ಬದುಕನ್ನು ಸಮಾಜಕ್ಕಾಗಿ ಅರ್ಪಿಸಿದ್ದ, ರಾಷ್ಟ್ರಧರ್ಮ, ಸಾಮಾಜಿಕ ರಂಗ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಸತೀಶ್ ಪ್ರಭು ಅವರು ಬದುಕಿದ ರೀತಿಯ ಬಗೆಯನ್ನು ಮೆಲುಕು ಹಾಕಿದ ಗಣ್ಯರು ಅವರಿಗೆ ಪುಷ್ಪನಮನದೊಂದಿಗೆ ನುಡಿನಮನ ಸಲ್ಲಿಸಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರಾಗಿ ಸಮಾಜ ಸೇವೆ ಸಲ್ಲಿಸಿ, ಭಾರತೀಯ ಜನತಾ ಪಾರ್ಟಿಯ ಮಂಡಲ ಹಾಗೂ ಜಿಲ್ಲಾ ಮಟ್ಟದ ಜವಾಬ್ದಾರಿಗಳನ್ನು ನಿರ್ವಹಿಸಿದ್ದ ಸತೀಶ್ ಪ್ರಭು ಅವರು, ಮಂಗಳೂರಿನ ಶ್ರೀ ವೆಂಕಟರಮಣ ದೇವಸ್ಥಾನದ ವಿಶ್ವಸ್ಥರೂ ಆಗಿದ್ದರು. ಅಲ್ಲದೆ ಸಂಘನಿಕೇತನ ಶ್ರೀ ಗಣೇಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು.



ಶ್ರದ್ಧಾಂಜಲಿ ಸಭೆಯಲ್ಲಿ ಶಾಸಕ ಡಿ.ವೇದವ್ಯಾಸ ಕಾಮತ್ ಆರೆಸ್ಸೆಸ್ ಪ್ರಾಂತ ಸಹ ಕಾರ್ಯವಾಹ, ಹೊಸದಿಗಂತ ಪತ್ರಿಕೆಯ ಸಿಇಒ ಪಿ.ಎಸ್.ಪ್ರಕಾಶ್, ಮಂಗಳೂರಿನ ಶ್ರೀ ವೆಂಕಟರಮಣ ದೇವಸ್ಥಾನದ ಟ್ರಸ್ಟಿಗಳೂ ಸೇರಿದಂತೆ ಹಲವು ಮಂದಿ ಶ್ರದ್ಧಾಂಜಲಿ ಸಲ್ಲಿಸಿದರು.

9 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ

ಕೊಲೆ ಆರೋಪಿಗೆ ಬಂಧಿಸಿದ ಮಂಗಳೂರು ಸಿಸಿಬಿ ಪೊಲೀಸರು

ಮಂಗಳೂರು: ಕೊಲೆ ನಡೆಸಿ ಕಳೆದ 9 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯೊಬ್ಬನನ್ನು ಮಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಶ್ಯಾಮಪುರ ಬಳಿ ವಾಸವಿದ್ದ ಮೂಲತಃ ಬಳ್ಳಾರಿಯ ಸೂಫಿಯಾನ ಕೊಟ್ರೇಶಿ (31) ಬಂಧಿತ. ಈತ ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2017ನೇ ಇಸವಿಯಲ್ಲಿ ಲೆಫ್ಟಿ ಸಫ್ವಾನ್ ಎಂಬಾತನನ್ನು ಅಪಹರಿಸಿ ಕೊಲೆ ಮಾಡಿದ ಪ್ರಕರಣದ ಆರೋಪಿಯಾಗಿದ್ದಾನೆ. ಈತನನ್ನು ಬೆಂಗಳೂರಿನ ಡಿ.ಜೆ.ಹಳ್ಳಿಯ ಶ್ಯಾಮ್ ಪುರ್ ರೈಲ್ವೇ ಗೇಟ್ ಬಳಿ ಬಂಧಿಸಲಾಗಿದೆ.



ಈತ ಕುಖ್ಯಾತ ರೌಡಿಶೀಟರ್ ಸಫ್ವಾನ್ ಹುಸೈನ್‌ನ ಸಹಚರನಾಗಿದ್ದು, 2017 ರಲ್ಲಿ ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಫ್ವಾನ್ ಹುಸೈನ್ ಹಾಗೂ ಆತನ ಸಹಚರರೊಂದಿಗೆ ಸೇರಿಕೊಂಡು ಲೆಫ್ಟಿ ಸಫ್ವಾನ್ ಎಂಬಾತನನ್ನು ಅಪಹರಿಸಿ ಹಲ್ಲೆ ನಡೆಸಿ, ಕೊಲೆ ಮಾಡಿ ಆಗುಂಬೆ ಘಾಟಿಯಲ್ಲಿ ಎಸೆದ ಪ್ರಕರಣದಲ್ಲಿ ನೇರ ಭಾಗಿಯಾಗಿದ್ದ. ಬಳಿಕ ಪೊಲೀಸರಿಗೆ ಸಿಗದೇ ತಲೆಮರೆಸಿಕೊಂಡಿದ್ದನು. ಗುಲ್ಬರ್ಗಾ, ಬಳ್ಳಾರಿ, ಮುಂಬೈ ಹಾಗೂ ಆಂದ್ರಪ್ರದೇಶದ ರಾಯ್ ಚೋಟಿ ಪ್ರದೇಶದಲ್ಲಿ ತಲೆಮರೆಸಿಕೊಂಡು ಬಳಿಕ ಬೆಂಗಳೂರಿನಲ್ಲಿ ತನ್ನ ಸೂಫಿಯಾನ್ ಎಂಬ ಹೆಸರನ್ನು ಮೊಹಮ್ಮದ್ ಹುಸೈನ್ ಎಂದು ಬದಲಿಸಿ, ಆಧಾರ್ ಕಾರ್ಡ್, ಪಾಸ್ ಪೋರ್ಟ್, ಡ್ರೈವಿಂಗ್ ಲೈಸನ್ಸ್ ಮಾಡಿಸಿಕೊಂಡು ಬೆಂಗಳೂರಿನ ಯುವತಿಯನ್ನು ವಿವಾಹವಾಗಿ ಜೀವನ ನಡೆಸುತ್ತಿದ್ದನು.

ಈತನು 2012ನೇ ಇಸವಿಯಲ್ಲಿ ಬಳ್ಳಾರಿ ಜಿಲ್ಲೆಯ ಬ್ರೂಸ್ ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಬ್ಬ ವೃದ್ಧೆಯ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಎಳೆದ ಸಮಯ ತನ್ನ ಗುರುತು ವೃದ್ಧೆಗೆ ಸಿಕ್ಕಿತೆಂದು ತಿಳಿದು ಆಕೆಯ ಕುತ್ತಿಗೆ ಹಿಸುಕಿ ಕೊಲೆ ಮಾಡಿದ್ದ. ಈ ಪ್ರಕರಣದಲ್ಲಿ ದಸ್ತಗಿರಿಯಾಗಿ 4 ವರ್ಷಗಳ ಕಾಲ ಬಳ್ಳಾರಿ ಜೈಲ್‌ನಲ್ಲಿದ್ದು, ಆ ಸಮಯ ಸಫ್ವಾನ್ ಹುಸೈನ್ ಮತ್ತು ಆತನ ಸಹಚರರ ಪರಿಚಯವಾಗಿ ಅವರ ಸಹಾಯದಿಂದ ಜಾಮೀನು ಪಡೆದುಕೊಂಡು ನಂತರ ಹಿಂದೂ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ತನ್ನ ಕೊಟ್ರೇಶಿ ಎಂಬ ಹೆಸರನ್ನು ಸೂಫಿಯಾನ ಎಂದು ಬದಲಾಯಿಸಿಕೊಂಡು ಸಫ್ವಾನ್ ಹುಸೈನ್‌ನ ಜೊತೆಯಲ್ಲಿ ಮಂಗಳೂರಿಗೆ ಬಂದು ಆತನ ಗ್ಯಾಂಗ್‌ನಲ್ಲಿದ್ದನು.

ನಂತರ ಸಫ್ವಾನ್ ಹುಸೈನ್ ಮತ್ತು ಸಹಚರರ ಗ್ಯಾಂಗ್‌ನಲ್ಲಿ ಸೇರಿಕೊಂಡು 2017ನೇ ಇಸವಿಯಲ್ಲಿ ಬಜಪೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರಿಗೆ ಬೆದರಿಸಿ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಭಾಗಿಯಾಗಿ ಈ ಪ್ರಕರಣದಲ್ಲಿ ಕೂಡ ದಸ್ತಗಿರಿಯಾಗದೇ ತಲೆಮರೆಸಿಕೊಂಡಿದ್ದನು. ಈತನ ವಿರುದ್ಧ ಬಳ್ಳಾರಿಯ ಹೊಸಪೇಟೆ ಠಾಣಾ ವ್ಯಾಪ್ತಿಯಲ್ಲಿ ನಡೆದ ಬೈಕ್ ಕಳ್ಳತನ ಪ್ರಕರಣದಲ್ಲಿ ಸಹ ಭಾಗಿಯಾಗಿದ್ದ.

> **ಆರೋಪಿ ಪೊಲೀಸ್ ಕಸ್ಟಡಿ**
>
> ಆರೋಪಿ ಸೂಫಿಯಾನ ಕೊಟ್ರೇಶಿ ಎಂಬಾತನ ವಿರುದ್ಧ ಒಟ್ಟು 4 ಪ್ರಕರಣಗಳು ದಾಖಲಾಗಿದ್ದು, ಸುರತ್ಕಲ್‌ನ ಲೆಫ್ಟಿ ಸಫ್ವಾನ್‌ನ ಕೊಲೆ ಪ್ರಕರಣ. ಬಳ್ಳಾರಿ ಬ್ರೂಸ್ ಪೇಟ್ ಠಾಣಾ ವ್ಯಾಪ್ತಿಯ ವೃದ್ಧೆಯ ಕೊಲೆ ಪ್ರಕರಣ, ಹೊಸಪೇಟೆಯಲ್ಲಿ ಬೈಕ್ ಕಳ್ಳತನ, ಬಜಪೆ ಪೊಲೀಸ್ ಠಾಣೆಯಲ್ಲಿ ಬಲವಂತದಿಂದ ಹಣ ಸುಲಿಗೆ ಮಾಡಿದ ಪ್ರಕರಣ ದಾಖಲಾಗಿವೆ. ಈತನನ್ನು ಮುಂದಿನ ಕ್ರಮಕ್ಕಾಗಿ ಸುರತ್ಕಲ್ ಪೊಲೀಸ್ ಠಾಣೆಗೆ ಹಸ್ತಾಂತರಿಸಿದ್ದು. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಪೊಲೀಸ್ ಕಸ್ಟಡಿ ಪಡೆದುಕೊಂಡು ತನಿಖೆಗೆ ಒಳಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕಸಾಯಿಖಾನೆಗೆ ತಂದಿದ್ದ ಎಮ್ಮೆಗಳನ್ನು ಕದ್ದು ಸಾಗಿಸುತ್ತಿದ್ದ ಕಳ್ಳರಿಬ್ಬರ ಬಂಧನ

ಕಾಸರಗೋಡು: ಕಸಾಯಿಖಾನೆಗೆ ತಂದಿದ್ದ ಎಮ್ಮೆಗಳನ್ನು ಕದ್ದು ಸಾಗಿಸುತ್ತಿದ್ದ ಅಂತಾರಾಜ್ಯ ಕಳ್ಳರ ತಂಡದ ಇಬ್ಬರು ಆರೋಪಿಗಳನ್ನು ಪಯ್ಯಾವೂರು ಪೊಲೀಸರು ಬಂಧಿಸಿದ್ದಾರೆ.

ಇತ್ತೀಚೆಗಿನ ದಿನಗಳಲ್ಲಿ ಕಣ್ಣೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಎಮ್ಮೆ ಕಳ್ಳತನದ ಘಟನೆಗಳು ಹೆಚ್ಚುತ್ತಿತ್ತು. ತಳಿಪ್ಪರಂಬ ಪ್ರದೇಶದಲ್ಲೂ ಇದೇ ರೀತಿಯ ಕಳ್ಳತನಗಳು ವರದಿಯಾಗಿವೆ. ಇದರ ಹಿಂದೆ ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ಯಾಂಗ್‌ಗಳ ಕೈವಾಡವಿದೆ ಎಂಬ ಸುಳಿವು ಲಭಿಸಿದ ಹಿನ್ನೆಲೆಯಲ್ಲಿ ಪೊಲೀಸರು ಹಾಸನಕ್ಕೆ ತೆರಳಿ ತನಿಖೆ ನಡೆಸಿದ್ದರು. ಅದರಂತೆ ಕರ್ನಾಟಕದ ಹಾಸನ ಮೂಲದ ಅಸ್ಕರ್ ಹುಸೇನ್ (26) ಮತ್ತು ಇಮ್ರಾನ್ ಅಲಿ (34) ಎಂಬವರನ್ನು ಪಯ್ಯಾವೂರು ಇನ್‌ಸ್ಪೆಕ್ಟರ್ ಟಿಂಕ್ಷಿಲ್ ಶಶಿ ಎಂಬವರ ನೇತೃತ್ವದ ಪೊಲೀಸರ ತಂಡ ಬಂಧಿಸಿದೆ.





ಕಣ್ಣೂರು ಜಿಲ್ಲೆಯ ಪಯ್ಯಾವೂರು ಚಾಚಮ್ಮ ಜಂಕ್ಷನ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡೈಲಿ ಫ್ರೆಶ್ ಎಂಬ ಸಂಸ್ಥೆಯಿಂದ ಎಮ್ಮೆಯನ್ನು ಕದ್ದ ಪ್ರಕರಣದಲ್ಲಿ ಈ ಆರೋಪಿಗಳನ್ನು ಬಂಧಿಸಲಾಗಿದೆ.

ಶಿವಪಾಡಿ ಶ್ರೀ ಉಮಾಮಹೇಶ್ವರ ದೇವಸ್ಥಾನದ 'ಶಿವಪಾಡಿ ವೈಭವ'ದ ಯಶಸ್ಸಿನ ಕುರಿತು ದೇವಸ್ಥಾನದ ಆಡಳಿತ ಮೊಕ್ತೇಸರ ಮಹೇಶ್ ಠಾಕೂರ್

ದೇವರ ಅನುಗ್ರಹ, ಕಾರ್ಯಕರ್ತರ ಶಿಸ್ತುಬದ್ಧ ಸಂಘಟನೆ ಕಾರಣ

ಉಡುಪಿ: ಧರ್ಮ, ಸಂಸ್ಕೃತಿ ಮತ್ತು ಬದುಕನ್ನು ಒಳಗೊಂಡ 'ಶಿವಪಾಡಿ ವೈಭವ' ಕಾರ್ಯಕ್ರಮವು ಜಿಲ್ಲೆಯ ಇತಿಹಾಸದಲ್ಲೇ ಅತ್ಯಂತ ಯಶಸ್ವಿ ಮತ್ತು ಮಾದರಿ ಕಾರ್ಯಕ್ರಮವಾಗಿ ಮೂಡಿಬಂದಿದೆ. ಸುಮಾರು 16 ಸಾವಿರಕ್ಕೂ ಹೆಚ್ಚು ಜನರು ಪ್ರತಿನಿತ್ಯ ಅನ್ನದಾನ ಪ್ರಸಾದ ಸ್ವೀಕರಿಸುವ ಮೂಲಕ ಈ ಪುಣ್ಯಕ್ಷೇತ್ರದ ಸಾರ್ಥಕತೆಗೆ ಸಾಕ್ಷಿಯಾಗಿದ್ದಾರೆ ಎಂದು ಶಿವಪಾಡಿ ದೇವಸ್ಥಾನದ ಆಡಳಿತ ಮೊಕ್ತೇಸರ ಮಹೇಶ್ ಠಾಕೂರ್ ತಿಳಿಸಿದರು.

ನಗರದ ಮಣಿಪಾಲದ ಶಿವಪಾಡಿ ಶ್ರೀ ಉಮಾಮಹೇಶ್ವರ ದೇವಸ್ಥಾನದ ರಮಾನಂದ ಸ್ಮೃತಿ ಮಂಟಪದಲ್ಲಿ ಶನಿವಾರ ನಡೆದ ಶಿವಪಾಡಿ ವೈಭವದ ಯಶಸ್ಸಿಗೆ ಕಾರಣರಾದ ಕಾರ್ಯಕರ್ತರಿಗೆ ಅಭಿನಂದನಾ ಸಮಾರಂಭ ಹಾಗೂ ಪ್ರಸಾದ್ ನೇತ್ರಾಲಯದ ವತಿಯಿಂದ ನಡೆದ ಕನ್ನಡಕ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಪ್ರತಿಯೊಬ್ಬರನ್ನು ಅಭಿನಂದಿಸಿದರು.

ಯಶಸ್ಸಿನ ಹಿಂದೆ ಕಾರ್ಯಕರ್ತರ ಶ್ರಮ

ಕಾರ್ಯಕ್ರಮದ ಯಶಸ್ಸಿಗೆ ಸುಮಾರು 25 ವಿವಿಧ ವಿಭಾಗಗಳು ಹಗಲಿರುಳು ಶ್ರಮಿಸಿವೆ. ದೇವಸ್ಥಾನದ ಒಳಾಂಗಣ ವ್ಯವಸ್ಥೆಯಲ್ಲಿ ವಿವಿಧ ತಂಡಗಳ ಕಾರ್ಯ ಶ್ಲಾಘನೀಯ. ಪ್ರತಿನಿತ್ಯ 3,000ಕ್ಕೂ ಹೆಚ್ಚು ಪ್ರಸಾದಗಳನ್ನು ಸಿದ್ಧಪಡಿಸಿ ವಿತರಿಸುವುದು ಸಾಮಾನ್ಯ ಕೆಲಸವಲ್ಲ. ಸೇವಾ ಕೌಂಟರ್‌ಗಳಲ್ಲಿ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಸೇವೆ ನೀಡಲಾಗಿದೆ ಎಂದರು.

ಯಕ್ಷಗಾನ ಮತ್ತು ಸಾಂಸ್ಕೃತಿಕ ಮೆರುಗು

2025ರ ಶಿವಪಾಡಿ ವೈಭವದ ಕಲ್ಪನೆ ಹುಟ್ಟಿದ್ದು ಯಕ್ಷಗಾನದ ಮೂಲಕ. ರತನ್ ರೈ ಅವರ ನೇತೃತ್ವದಲ್ಲಿ ಐದು ಮೇಳಗಳ ಯಕ್ಷಗಾನದ ಹೂರಣವು ಜನಮನ ಗೆದ್ದಿದೆ. ಸಾಹಿತ್ಯ ಸಮ್ಮೇಳನದ ಅತಿಥಿಗಳನ್ನು ಬರಮಾಡಿಕೊಳ್ಳುವಲ್ಲಿ ನಿತ್ಯಾನಂದ ಪಡ್ರೆ ಅವರ ಸಹಕಾರ ದೊಡ್ಡದು. ಪ್ರಕಾಶ್ ಕುಕ್ಕೆಹಳ್ಳಿ ಅವರ ಚುರುಕಾದ ಸಂಘಟನೆ ಮತ್ತು ಗೋಪಾಲಕೃಷ್ಣ ಪ್ರಭು ಅವರ ಕಚೇರಿ ನಿರ್ವಹಣೆ ಕಾರ್ಯಕ್ರಮಕ್ಕೆ ಆಡಳಿತಾತ್ಮಕ ಬಲ ನೀಡಿದೆ ಎಂದು ಮಹೇಶ್ ಠಾಕೂರ್ ಸ್ಮರಿಸಿದರು. ಸತೀಶ್ ಪಾಟೀಲ್ ಅವರು ಲೆಕ್ಕಪತ್ರ ಮಂಡಿಸಿದರು.



ಈ ಸಂದರ್ಭದಲ್ಲಿ ಶಿವಪಾಡಿ ಸಮಿತಿಯ ಪದಾಧಿಕಾರಿಗಳಾದ ದಿನೇಶ್ ಪ್ರಭು, ಸತೀಶ್ ಪಾಟೀಲ್, ನಿತ್ಯಾನಂದ ಪಡ್ರೆ , ಪ್ರಕಾಶ್ ಕುಕ್ಕೆಹಳ್ಳಿ, ರತನ್ ರೈ, ಶುಭಕರ್ ಸಾಮಂತ್ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

ಪ್ರಕಾಶ್ ಪ್ರಭು ಸ್ವಾಗತಿಸಿದರು. ಗೋಪಾಲಕೃಷ್ಣ ಪ್ರಭು ನಿರೂಪಿಸಿದರು. ದಿನೇಶ ಪ್ರಭು ವಂದಿಸಿದರು.

ಭರವಸೆಯ ಬ್ರ್ಯಾಂಡ್

ಮಾಜಿ ಶಾಸಕ ಹಾಗೂ ಶಿವಪಾಡಿ ಉತ್ಸವ ಆಚರಣೆ ಸಮಿತಿಯ ಅಧ್ಯಕ್ಷ ರಘುಪತಿ ಭಟ್ ಅವರು, ಶಿವಪಾಡಿ ವೈಭವ ಎಂಬುದು ಇಂದು ಕೇವಲ ಒಂದು ಕಾರ್ಯಕ್ರಮವಾಗಿ ಉಳಿದಿಲ್ಲ, ಅದು ಉಡುಪಿ ಜಿಲ್ಲೆಯ ಶೇ. 80ಕ್ಕೂ ಹೆಚ್ಚು ಜನರನ್ನು ತಲುಪಿರುವ ಒಂದು ಶಕ್ತಿಶಾಲಿ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ. ಕೇವಲ ಸೋಷಿಯಲ್ ಮೀಡಿಯಾ ಪ್ರಚಾರದಿಂದ ಇದು ಸಾಧ್ಯವಾಗಿಲ್ಲ, ಬಂದ ಭಕ್ತರಿಗೆ ಸಿಕ್ಕ ದೇವದರ್ಶನ, ಶಿಸ್ತಿನ ಪಾರ್ಕಿಂಗ್ ವ್ಯವಸ್ಥೆ, ಅತ್ಯುತ್ತಮ ಅನ್ನದಾನ ಮತ್ತು ಧಾರ್ಮಿಕ ವಿಧಿವಿಧಾನಗಳ ಗುಣಮಟ್ಟವೇ ಇದರ ಯಶಸ್ಸಿಗೆ ಕಾರಣ. ಇಂದು ಉಡುಪಿಯ ಇತರೆ ದೇವಸ್ಥಾನಗಳು ಸಹ ಶಿವಪಾಡಿ ವೈಭವದ ಸಂಘಟನಾ ಚಾತುರ್ಯವನ್ನು ಮಾದರಿಯಾಗಿಟ್ಟುಕೊಳ್ಳುವ ಯೋಚನೆಯಲ್ಲಿವೆ ಎಂದರು.

> **'ಕಂಟೆಂಟ್ ಕ್ರಿಯೇಟರ್' ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ**
>
> ಶಿವಪಾಡಿ ವೈಭವದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಂಟೆಂಟ್ ಕ್ರಿಯೇಟರ್ ಸ್ಪರ್ಧೆಯಲ್ಲಿ ಸೂರಜ್ ಎಸ್. ಅಂಚನ್ ಪ್ರಥಮ ಬಹುಮಾನ ಮುಡಿಗೇರಿಸಿಕೊಂಡರೆ, ಫ್ಲೈ ವಿತ್ ನೇಚರ್ ದ್ವಿತೀಯ ಹಾಗೂ ಮನು ತೃತೀಯ ಬಹುಮಾನವನ್ನು ಪಡೆದುಕೊಂಡಿದ್ದಾರೆ. ವಿಭಿನ್ನ ಕ್ರಿಯಾಶೀಲತೆ ಮತ್ತು ಸಾಮಾಜಿಕ ಜಾಲತಾಣದಲ್ಲಿ ಗರಿಷ್ಠ ವೀಕ್ಷಣೆ ಪಡೆದ ಈ ವಿಜೇತರಿಗೆ ದೇವಸ್ಥಾನದ ಅಭಿನಂದನಾ ಸಭೆಯಲ್ಲಿ ಅಧಿಕೃತವಾಗಿ ಬಹುಮಾನ ವಿತರಿಸಿ ಗೌರವಿಸಲಾಯಿತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 34° 24° | ಉಡುಪಿ 32° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 08 ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಯಶಸ್ವಿಯಾಗಿ ಅನುಷ್ಠಾನಗೊಂಡ ಬುಡಕಟ್ಟು ಪ್ಲಸ್ ಯೋಜನೆ



ಪುಟ 6

ಶಾಸಕನಾಗಿ ಅವ್ಯವಹಾರ, ದುರಾಡಳಿತ ನಡೆಸಿಲ್ಲ: ಗುರ್ಮೆ ಸುರೇಶ್ ಶೆಟ್ಟಿ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ಉಜಿರೆ ಬ್ರಹ್ಮಕಲಶ: ಇಂದಿನ ಕಾರ್ಯಕ್ರಮ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಮಾ.7ರಂದು ಬೆಳಿಗ್ಗೆ ಶ್ರೀ ಮಹಾಗಣಪತಿ ಹೋಮ, ಅಂಕುರ ಪೂಜೆ,ತ್ರಿಕಾಲ ಪೂಜೆ,ಕುಂಭೇಶ ಪೂಜೆ, ಕರ್ಕರಿ ಪೂಜೆ, ಜಲದ್ರೋಣಿ ಪೂಜೆ, ಶಯ್ಯಾಪೂಜೆ ನಿದ್ರಾಕಲಶ ಪೂಜೆ, ವಿದ್ಯೇಶ ಪೂಜೆ, ಚಕ್ರಾಬ್ಜ ಪೂಜೆ, ಶಿರಸ್ತತ್ವ ಹೋಮ, ಸಂಹಾರ ತತ್ವ ಕಲಶಪೂಜೆ , ಸಂಹಾರ ತತ್ವಹೋಮ, ತತ್ವ ಕಲಶಾಭಿಷೇಕ, ಧ್ಯಾನ ಸಂಕೋಚ, ಜೀವ ಕಲಶ ಪೂಜೆ, ಜೀವೋದ್ವಾಸನಾ, ಜೀವ ಕಲಶ, ಶಯ್ಯೆಯಲ್ಲಿಟ್ಟು ಮಹಾಪೂಜೆ , ಮಂಜುಳೇಶ ನಲ್ಲಿ ಕಲಶ ಪೂಜೆ ,ಸಂಜೆ ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ , ಬಿಂಬ ಶುದ್ಧಿ, ಕಲಶಾಭಿಷೇಕ, ಅಧಿವಾಸ ಹೋಮ, ಶಾಂತಿ ಹೋಮ, ಧ್ಯಾನಾಧಿವಾಸ , ಗೋದೋಹನ, ಅಧಿವಾಸ ಬಲಿ , ರಾತ್ರಿ ಪೂಜೆ, ಪೀಠಾಧಿವಾಸ, ಪ್ರಾಸಾದಾ ಧಿವಾಸ ಹಾಗು ಸುಯಜ್ಞ ಯಾಗ ಮಂಟಪದಲ್ಲಿ ಬೆಳಿಗ್ಗೆ ತುಳು ಶಿವಳ್ಳಿ ಉಜಿರೆ ವಲಯದ ವತಿಯಿಂದ ಶ್ರೀ ವಿಷ್ಣು ಯಾಗ, ಸಂಜೆ ರವಿಚಂದ್ರ ಚೆಕ್ಕಿತ್ತಾಯ ಮತ್ತು ಮನೆಯವರಿಂದ ಆಶ್ಲೇಷ ಬಲಿ, ಬೆಂಗಳೂರಿನ ಸಂಧ್ಯಾ ಮತ್ತು ಶ್ಯಾಮಪ್ರಸಾದ್ ಆಚಾರ್ಯ ಮತ್ತು ಮನೆಯವರಿಂದ ಮದ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಬೆಂಗಳೂರಿನ ಮೇಧಾ ವಿದ್ಯಾಭೂಷಣ್ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ದಾಸವಾಣಿ ಹಾಗೂ ಶ್ರೀಕೃಷ್ಣಾನುಗ್ರಹ ಸಭಾಭವನದಲ್ಲಿ ಕನ್ಯಾಡಿಯ ಯಕ್ಷಭಾರತಿ ವತಿಯಿಂದ ಲೀಲಾಮೂರ್ತಿ ಜನಾರ್ದನ ಪ್ರಸಂಗದ ಯಕ್ಷಗಾನ ಪ್ರದರ್ಶನ ಹಾಗೂ ಉಜಿರೆಯ ಹಿಪ್ ಬಾಯ್ಸ್ ನೃತ್ಯ ತಂಡದವರಂದ ಗಾನ ನೃತ್ಯ ವೈಭವ ನಡೆಯಲಿದೆ.

ಉಪ್ಪಿನಂಗಡಿ ಜಾತ್ರೆ: ಕಟ್ಟೆಪೂಜೆ, ಉತ್ಸವ

ಉಪ್ಪಿನಂಗಡಿ: ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಾಲಯದ ವರ್ಷಾವಧಿ ಉತ್ಸವದ ಪ್ರಯುಕ್ತ ನಡೆದ ಶ್ರೀ ದೇವರ



ಆರಾಟ ಉತ್ಸವವು ಶುಕ್ರವಾರ ರಾತ್ರಿ ಉಪ್ಪಿನಂಗಡಿಯ ಪ್ರಮುಖ ಬೀದಿಗಳಲ್ಲಿ ಸಾಗಿ ನೇತ್ರಾವತಿ ಕುಮಾರಧಾರಾ ನದಿ ಸಂಗಮ ಸ್ಥಳದಲ್ಲಿ ಅವಭೃತ ಸ್ನಾನ ನಡೆದು ಧ್ವಜಾವರೋಹಣ ನಡೆಯಿತು. ಆರಾಟ ಉತ್ಸವದ ಅಂಗವಾಗಿ ಉಪ್ಪಿನಂಗಡಿಯ ಹೊಸ ಬಸ್ ನಿಲ್ದಾಣ ಹಾಗೂ ಹಳೇ ಬಸ್ ನಿಲ್ದಾಣಗಳ ಕಟ್ಟೆಗಳಲ್ಲಿ ಶ್ರೀ ದೇವರ ಕಟ್ಟೆ ಪೂಜೆಯು ನೆರವೇರಿತು. ಹೊಸಬಸ್ ನಿಲ್ದಾಣದಲ್ಲಿ ಪೂಜೆಯ ನೇತೃತ್ವವನ್ನು ವಿಶ್ವ ಹಿಂದೂ ಪರಿಷತ್ ವಹಿಸಿಕೊಂಡು ವಾಯಲಿನ್ ಸಹಿತ ಚೆಂಡೆ ವಾದನ, ಆಕರ್ಷಕ ಸುಡು ಮದ್ದು ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ಹಳೇ ಬಸ್ ನಿಲ್ದಾಣದಲ್ಲಿ ಗೆಳೆಯರು-94 ಇದರ ನೇತೃತ್ವದಲ್ಲಿ ಭಕ್ತಿ ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್, ಸಮಿತಿಯ ಸದಸ್ಯರು ಮೊದಲಾದವರು ಭಾಗವಹಿಸಿದ್ದರು.

ಡಾ. ಜಗಜೀವನ್ ರಾಂ, ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಆಹ್ವಾನ

ಪುತ್ತೂರು: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ್ರತಿ ವರ್ಷ ಏ. 5ರಂದು ಡಾ. ಬಾಬು ಜಗಜೀವನ್ ರಾಂ ಅವರ ಹಾಗೂ ಏ. 14 ರಂದು ಡಾ. ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯನ್ನು ರಾಜ್ಯ ಮಟ್ಟದಲ್ಲಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಪ.ಜಾತಿ/ಪ. ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ 2026-27ನೇ ಸಾಲಿನ ಡಾ. ಬಾಬು ಜಗಜೀವನ್ ರಾಂ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲು ಉದ್ದೇಶಿಸಲಾಗಿದೆ. ಪ.ಜಾತಿ/ಪ.ಪವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳು ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರು(ಗ್ರೇಡ್-2) ಅವರ ಕಚೇರಿಯಿಂದ ಪಡೆದು, ನಮೂನೆ ಭರ್ತಿ ಮಾಡಿ ಸಂಬಂಧಪಟ್ಟ ದಾಖಲೆಗಳೊಂದಿಗೆ, ಅರ್ಜಿ ಸಲ್ಲಿಸಲು ಮಾ.10 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಪುತ್ತೂರು ತಾಲೂಕು ಅವರನ್ನು ಸಂಪರ್ಕಿಸುವಂತೆ ಪ್ರಕಟನೆ ತಿಳಿಸಿದೆ.

ಬೆಳಿಗ್ಗೆ 11:15ರ ವೃಷಭ ಲಗ್ನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ | ಭಕ್ತರಲ್ಲಿ ಮನೆಮಾಡಿದೆ ಸಂಭ್ರಮ

ಸಸಿಹಿತ್ಲು ಶ್ರೀ ಭಗವತಿ ಅಮ್ಮನವರಿಗೆ ಇಂದು ಬ್ರಹ್ಮಕಲಶ

ಮುಲ್ಕಿ: ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿರುವ ಸಸಿಹಿತ್ಲುವಿನ ಶ್ರೀ ಭಗವತೀ ದೇವಸ್ತಾನದಲ್ಲಿ ಇಂದು ಬೆಳಿಗ್ಗೆ 11:15ರ ವೃಷಭ ಲಗ್ನದಲ್ಲಿ ಸಪರಿವಾರ ಶ್ರೀ ಭಗವತೀ ಅಮ್ಮನವರಿಗೆ ಬ್ರಹ್ಮಕಲಶೋತ್ಸವವು ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿದ್ವಾನ್ ವೇದಮೂರ್ತಿ ಶ್ರೀ ಕೃಷ್ಣಮೂರ್ತಿ ಭಟ್ ಹೊಯ್ಗೆ ಗುಡ್ಡೆ ಹಾಗೂ ಶ್ರೀ ಶ್ರೀಪತಿ ಭಟ್ ಹೊಯ್ಗೆಗುಡ್ಡೆ ನೇತೃತ್ವದಲ್ಲಿ ವೇ.ಮೂ. ಶ್ರೀ ವೆಂಕಟೇಶ ತಂತ್ರಿ ಎಡಪದವು ಮಾರ್ಗದರ್ಶನದಲ್ಲಿ ನಡೆಯಲಿದೆ.

ಅಂದು ಬೆಳಿಗ್ಗೆ 7 ರಿಂದ ಚಂಡಿಕಾಯಾಗ, ಬೆಳಿಗ್ಗೆ 11:15ರ ವೃಷಭ ಲಗ್ನ ಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ, ಮಹಾಪೂಜೆ, ಪಲ್ಲ ಪೂಜೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ಸಂಜೆ 6ರಿಂದ ದೀಪಾರಾಧನೆ, ಭಂಡಾರ ನಿರ್ಗಮನ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ 2ರಿಂದ ಶಿವಪ್ರಣಾಮ್ ಮುಲ್ಕಿ, ಸ್ಕೂಲ್ ಆಫ್ ಡ್ಯಾನ್ಸ್ ಅವರಿಂದ ಅನ್ನಪೂರ್ಣ ರಿತೇಶ್ ನಿರ್ದೇಶನದಲ್ಲಿ ನೃತ್ಯ ವೈಭವ, ಮಧ್ಯಾಹ್ನ 3ರಿಂದ ಗಂಗೆಗೆ ನೃತ್ಯ ನಮನ, ವಿದ್ವಾನ್ ಚಿತ್ರಾಕ್ಷೀ ಅಜಿತ್ ಬಳಗದವರಿಂದ, ಸಂಜೆ 6.30ರಿಂದ ಸಮುದ್ರ ತೀರದಲ್ಲಿ ಗಂಗೆಗೆ ನುಡಿ



ನಮನ, ಚಕ್ರವರ್ತಿ ಸೂಲಿಬೆಲೆಯವರಿಂದ, ರಾತ್ರಿ 7.30 ರಿಂದ ಅದ್ದೂರಿ ವೈಭವದ ಗಂಗಾರತಿ,ರಾತ್ರಿ 8.15 ರಿಂದ ಕಲಾಸಿರಿ ಬಳಗ,ಮಂಗಳೂರುರವರಿಂದ ಗಂಗಾ ಗಾಯನ; ಖ್ಯಾತ ಗಾಯಕರಿಂದ ಭಕ್ತಿ ಭಾವ ಗಾನ ನಡೆಯಲಿದೆ.

ಧಾರ್ಮಿಕ ಕಾರ್ಯಕ್ರಮ

ಸಂಜೆ 4ರಿಂದ ನಡೆಯಲಿರುವ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮಶ್ರೀ ಡಾ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲು ವಹಿಸಲಿದ್ದಾರೆ. ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಮತ್ತು ಸಸಿಹಿತ್ಲು ಶ್ರೀ ಭಗವತೀ ಕ್ಷೇತ್ರದ ಅನುವಂಶಿಕ ಮೊಕ್ತೇಸರ ಮತ್ತು ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ ಆಶೀರ್ವಚನ ನೀಡಲಿದ್ದು, ಕರ್ನಾಟಕ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಡಿ. ವೇದವ್ಯಾಸ್ ಕಾಮತ್, ಡಾ. ಭರತ್ ಶೆಟ್ಟಿ ವೈ, ಭಾಗೀರಥಿ ಮುರುಳ್ಯ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ದ.ಕ.ಜಿಲ್ಲಾ ಪೊಲೀಸ್ ಆಯುಕ್ತರಾದ ಸುಧೀರ್ ಕುಮಾರ್ ರೆಡ್ಡಿ, ಯುವ ಬ್ರಿಗೇಡ್ ಹಾಗೂ ಸೋದರಿ ನಿವೇದಿತಾ ಪ್ರತಿಷ್ಠಾನದ ಸ್ಥಾಪಕಾಧ್ಯಕ್ಷ ಚಕ್ರವರ್ತಿ ಸೂಲಿಬೆಲೆ, ಕರ್ನಾಟಕ ಬ್ಯಾಂಕ್, ಮಂಗಳೂರು ಇದರ ಎಂಡಿ ರಾಘವೇಂದ್ರ ಎಸ್. ಭಟ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಬೆಂಗಳೂರು ಇದರ ಅಧ್ಯಕ್ಷ ಡಾ. ಎಂ.ಎನ್ ರಾಜೇಂದ್ರ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕ ಐಕಳಬಾವ ದೇವಿಪ್ರಸಾದ್ ಶೆಟ್ಟಿ,ಉದ್ಯಮಿಗಳಾದ ಶೋಭಾ ದೇವರಾಜ್, ಡಾ. ಕೆ. ಪ್ರಕಾಶ್ ಶೆಟ್ಟಿ, ಶಶಿಧರ್ ಶೆಟ್ಟಿ ಬರೋಡಾ, ಏಕನಾಥ್ ಎಸ್. ಅಮೀನ್, ಸೂರಜ್ ಬಂಗೇರ, ಧೀರಜ್ ಬಂಗೇರ, ಶ್ರೀನಿವಾಸ ವಿಶ್ವವಿದ್ಯಾನಿಲಯ ಮಂಗಳೂರುನ ಉಪಕುಲಪತಿ ಡಾ. ಎ. ಶ್ರೀನಿವಾಸ ರಾವ್, ಶ್ರೀ ಭಗವತಿ ದೇವಸ್ಥಾನದ ಕಲಿನದ ಆಡಳಿತ ಮೊಕ್ತೇಸರ ಕುಮಾರಸ್ವಾಮಿ, ಚಿರುಂಭ ಶ್ರೀ ಭಗವತೀ ಕ್ಷೇತ್ರ ಉಳ್ಳಾಲದ ನಿಕಟಪೂರ್ವಾಧ್ಯಕ್ಷ ಚಂದ್ರಹಾಸ್ ಉಳ್ಳಾಲ್, ಶ್ರೀ ಜಯಕೃಷ್ಣ ಪರಿಸರ ಪ್ರೇಮಿ ಸಮಿತಿ, ಮುಂಬೈನ ಅಧ್ಯಕ್ಷ ಜಯಕೃಷ್ಣ ಶೆಟ್ಟಿ, ಉಪ್ಪಳ ಶ್ರೀ ಭಗವತೀ ದೇವಸ್ಥಾನದ ಅಧ್ಯಕ್ಷ ಸುಕುಮಾರ್ ಉಪ್ಪಳ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಉಚಿತ ಬಸ್ ಸೇವೆ ಇರಲಿದೆ

ಸಸಿಹಿತ್ಲು ಭಗವತೀ ಅಮ್ಮನವರ ಬ್ರಹ್ಮಕಲಶೋತ್ಸವದ ದಿನದಂದು ಖಾಸಗಿ ಬಸ್‌ಗಳಿಂದ ಪಡು ಪಣಂಬೂರು, ಹಳೆಯಂಗಡಿ, ಪಾವಂಜೆ ಪರಿಸರದ ಭಕ್ತಾದಿಗಳಿಗೆ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನಕ್ಕೆ ಉಚಿತ ಬಸ್ ಸೇವೆ ನಡೆಯಲಿದೆ.

ಉಚಿತ ಕಲ್ಲಂಗಡಿ ಹಣ್ಣಿನ ಸೇವೆ

ಮುಲ್ಕಿ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಕೋತ್ಸವದ ದಿನವಾದ ಇಂದು ಹಳೆಯಂಗಡಿ ಶ್ರೀ ದುರ್ಗಾಪರಮೇಶ್ವರೀ ವಿನಾಯಕ ಮಠ, ಪಡುಪಣಂಬೂರು ಶ್ರೀ ನಾಲ್ಕೂರು ಪಂಜುರ್ಲಿ ದೈವಸ್ಥಾನ, ಕಿನ್ನಿಗೋಳಿ ಶ್ರೀ ವಿಶ್ವಬ್ರಾಹ್ಮಣ ಸಮಾಜ ಸೇವಾ ಸಂಘ ಹಾಗೂ ಶ್ರೀ ಕಾಳಿಕಾಂಬ ಮಹಿಳಾ ವೃಂದದ ವತಿಯಿಂದ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಉಚಿತ ಕಲ್ಲಂಗಡಿ ಹಣ್ಣಿನ ಸೇವೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶಿಮಂತೂರು ದೇವಳದ ಜಾತ್ರೆ: ಕವಾಟೋದ್ಘಾಟನೆ, ಕಟ್ಟೆಪೂಜೆ ಸಂಪನ್ನ



ಮುಲ್ಕಿ: ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದ ವರ್ಷಾವದಿ ಜಾತ್ರಾ ಮಹೋತ್ಸವದ ಅಂಗವಾಗಿ ಕ್ಷೇತ್ರದ ತಂತ್ರಿ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ಶುಕ್ರವಾರ ರಾತ್ರಿ ಶಯನೋತ್ಸವ ಹಾಗೂ ಶನಿವಾರ ಬೆಳಿಗ್ಗೆ ಕವಾಟೋದ್ಘಾಟನೆ ಶ್ರೀ ದೇವರಿಗೆ ಪೂಜೆ, ಭಕ್ತರಿಗೆ ಮಲ್ಲಿಗೆ ಪ್ರಸಾದ ವಿತರಣೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭ ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ, ಮಾಜಿ ಮೊಕ್ತೇಸರ ಚಂದ್ರಹಾಸ ಶೆಟ್ಟಿ, ಬಾಬಾ ರಂಜನ್ ಶೆಟ್ಟಿ ಮಜಲಗುತ್ತು, ಜಯಕರ ಶೆಟ್ಟಿ ಮುಂಬೈ, ಸತೀಶ್ ಶೆಟ್ಟಿ, ಶ್ರೀಕಾಂತ್ ಶೆಟ್ಟಿ ಕೆಂಚನಕೆರೆ, ಉದಯಕುಮಾರ್ ಶೆಟ್ಟಿ ಆದಿಧನ್, ಮೋಹನ್ ಕೋಟ್ಯಾನ್ ಶಿಮಂತೂರು, ಹಾಗೂ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಕ್ಷೇತ್ರದಲ್ಲಿ ಶನಿವಾರ ರಾತ್ರಿ ಪಲ್ಲಕ್ಕಿ ಉತ್ಸವ, ಮಹಾರಥೋತ್ಸವ ನಡೆಯಲಿದೆ.

ಕಟ್ಟೆ ಪೂಜೆ, ಉತ್ಸವ ಬಲಿ

ಜಾತ್ರಾ ಮಹೋತ್ಸವದ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ಗುರುವಾರ ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ ನಡೆಯಿತು ಸಂಜೆ 5ಕ್ಕೆ ಶ್ರೀ ದೇವರ ಪಂಜಿನಡ್ಕ ಸವಾರಿ, ಕಟ್ಟೆ ಪೂಜೆ, ಉತ್ಸವ ಬಲಿ ವಿಜೃಂಭಣೆಯಿಂದ ನಡೆಯಿತು. ವೇದಮೂರ್ತಿ ವಾದಿರಾಜ ಉಪಾಧ್ಯಾಯ ಕೊಲಕಾಡಿ,, ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿಯ ಸದಸ್ಯ ರೂಪಾ ವಿಷ್ಣುಮೂರ್ತಿ ಭಟ್,ಶಶಿಕಲಾ ಎನ್ ಕುಂದರ್, ಶಾಂತಾರಾಮ ಹೆಗ್ಡೆ ತೆಂಗಾಳಿ, ನಂದನಾ ಶೆಟ್ಟಿ ಕುಬೆವೂರು,ಅರುಣ್ ಕುಮಾರ್ ಕಟ್ಟಪುಣಿ,, ಶಂಕರ್ ಮಾಸ್ಟರ್, ವಿಶ್ವನಾಥ ಶೆಟ್ಟಿ, ನಾಗರಾಜ ಶೆಟ್ಟಿ ಮೊದಲಾದವರು ಇದ್ದರು.

ಮಾ.11ಕ್ಕೆ ಧರ್ಮಯಾನ ಶೋಭಾಯಾತ್ರೆ: ಪ್ರಚಾರಾರ್ಥ ವಾಹನ ಅಭಿಯಾನಕ್ಕೆ ಚಾಲನೆ



ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ಅಂಗವಾಗಿ ವಿಜಯ ಗೋಪುರ ಲೋಕಾರ್ಪಣೆ, ಬ್ರಹ್ಮರಥ ಹಾಗೂ ಪುಷ್ಪರಥ ಸಮರ್ಪಣಾ ಸಮಾರಂಭ ಜತೆಗೆ ಮಾ.11ಕ್ಕೆ ಸಂಜೆ ಐತಿಹಾಸಿಕಶೋಭಾಯಾತ್ರೆ 'ಧರ್ಮಯಾನ' ನಡೆಯಲಿದೆ. ಅದರ ಪ್ರಚಾರವಾಹನ ಅಭಿಯಾನಕ್ಕೆ ಮಾ.7ಕ್ಕೆ ಮದ್ಯಾಹ್ನ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ರಥಬೀದಿಯಲ್ಲಿ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು ಶುಭ ಚಾಲನೆ ನೀಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್, ವಿಜಯಗೋಪುರ ನಿರ್ಮಾಣ ಸಮಿತಿ ಅಧ್ಯಕ್ಷ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ನವಶಕ್ತಿ, ಧರ್ಮಯಾನ ಶೋಭಾಯಾತ್ರೆಯ ಸಂಯೋಜಕ, ಪ್ರಧಾನ ಸಂಚಾಲಕ ಕೆ. ಮೋಹನ ಕುಮಾರ್, ಕೆ.ಮೋಹನ ಶೆಟ್ಟಿಗಾರ್, ರವೀಂದ್ರ ಶೆಟ್ಟಿ ಸುರಭಿ, ಚಿತ್ರೇಶ್ ಶೆಟ್ಟಿ ರವಿಕುಮಾರ್ ಬರಮೇಲು, ಡಾ. ಶ್ರೀಧರ ಭಟ್, ಮಂಜುನಾಥ ಕಾಮತ್, ಪ್ರಸಾದ್ ಬಿ.ಎಸ್., ದಿನೇಶ್ ಕೋಟಿಯಾನ್, ವಿಶ್ವನಾಥ್ ಶೆಟ್ಟಿ ದೇವಪ್ಪ ಗೌಡ ಮೊದಲಾದವರು ಇದ್ದರು.

ಮಾ.11 ರಂದು ಅಪರಾಹ್ನ 4ರಿಂದ ಉಜಿರೆ ಶ್ರೀ ರತ್ನವರ್ಮ ಹೆಗ್ಗಡೆ ಕ್ರೀಡಾಂಗಣದಿಂದ ಶ್ರೀ ಜನಾರ್ದನ ದೇವಸ್ಥಾನದ ವರೆಗೆ ನಡೆಯಲಿರುವ ಧರ್ಮಯಾನ ಶೋಭಾಯಾತ್ರೆಯಲ್ಲಿ ಸರ್ವಾಲಂಕೃತ ಮೂರು ರಥಗಳಲ್ಲಿ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ, ಉಡುಪಿ ಸೋದೆ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಗಳವರು, ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಗಳವರು ಹಾಗೂ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರನ್ನು ಮೆರವಣಿಗೆಯಲ್ಲಿ ಬರಮಾಡಿಕೊಳ್ಳಲಾಗುವುದು. ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್.ಎಸ್. ಮತ್ತು ಶಶಿಧರ್ ಶೆಟ್ಟಿ ನವಶಕ್ತಿ ಹಾಗೂ ಎಸ್ ಡಿಎಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್. ಅವರು ಭಾಗವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಾ.9,10: ತಾಂತ್ರಿಕ, ಕ್ರೀಡಾ ಉತ್ಸವ

ಮಂಗಳೂರು: ಮುಕ್ಕದಲ್ಲಿರುವ ಶ್ರೀನಿವಾಸ ಯೂನಿವರ್ಸಿಟಿ ಇನ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಸಂಸ್ಥೆಯಲ್ಲಿ ಮಾ.9, 10ರಂದು ಟೆಕ್ ಯುವ-26 ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಾಂಸ್ಕೃತಿಕ ಮತ್ತು ಕ್ರೀಡಾ ಉತ್ಸವ ಆಯೋಜಿಸಲಾಗಿದೆ.

ಮಾ.9ಕ್ಕೆ ಬೆಳಗ್ಗೆ 10.30ಕ್ಕೆ ಸಂಸ್ಥೆಯ ಸಭಾಂಗಣದಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಸಾಫ್ಟ್ ವೇರ್ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುನಿಫೈ ಸಿಎಕ್ಸ್ ಸಂಸ್ಥೆಯ ಉಪಾಧ್ಯಕ್ಷ ಶ್ಯಾಮ್ ಪ್ರಸಾದ್ ಹೆಬ್ಬಾರ್ ಟೆಕ್ ಯುವ ಉದ್ಘಾಟಿಸಲಿದ್ದಾರೆ. ಶ್ರೀನಿವಾಸ ವಿವಿ ಸಹಕುಲಾಧಿಪತಿ ಡಾ. ಎ. ಶ್ರೀನಿವಾಸ್ ರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀನಿವಾಸ ವಿವಿ ವಿಶ್ವಸ್ತ ಮಂಡಳಿಯ ಸದಸ್ಯ ಎ.ವಿಜಯಲಕ್ಷ್ಮೀ ಆರ್. ರಾವ್, ಪ್ರೊ. ಎ. ಮಿತ್ರಾ ಎನ್. ರಾವ್, ಶ್ರೀನಿವಾಸ ವಿವಿ ಉಪಕುಲಪತಿ ಡಾ. ಕೆ. ಸತ್ಯನಾರಾಯಣ ರೆಡ್ಡಿ ಭಾಗವಹಿಸಲಿದ್ದಾರೆ. ಅಕಾಡೆಮಿಕ್ ರಿಜಿಸ್ಟ್ರಾರ್ ಡಾ. ಆದಿತ್ಯ ಕುಮಾರ್ ಮಯ್ಯ, ರಿಜಿಸ್ಟ್ರಾರ್ ಡಾ. ಅನಿಲ್ ಕುಮಾರ್, ಮೌಲ್ಯಮಾಪನ ರಿಜಿಸ್ಟ್ರಾರ್ ಡಾ. ಶ್ರೀನಿವಾಸ ಮಯ್ಯ ಡಿ., ಡೆವಲಪ್‌ಮೆಂಟ್ ರಿಜಿಸ್ಟ್ರಾರ್ ಡಾ. ಅಜಯ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಡಾ. ರಾಮಕೃಷ್ಣ ಎನ್. ಹೆಗಡೆ, ಟೆಕ್ ಯುವ ಕಾರ್ಯಕ್ರಮದ ಸಂಚಾಲಕ ಪ್ರೊ. ಕೆ. ಶ್ರೀನಾಥ್ ರಾವ್, ಟೆಕ್ ಯುವ-25 ರ ವಿದ್ಯಾರ್ಥಿ ಸಮನ್ವಯಕಾರ ಆದರ್ಶ್, ಸಾಗರ್ ಎ. ಭಾಗವಹಿಸುವರು ಎಂದು ಕಾಲೇಜಿನ ಮುಖ್ಯಸ್ಥ ಡಾ. ರಾಮಕೃಷ್ಣ ಎನ್. ಹೆಗಡೆ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸೈಬರ್ ಭದ್ರತಾ ಜಾಗೃತಿ' ಪರಿಕಲ್ಪನೆಯಲ್ಲಿ ಈ ಬಾರಿಯ ಟೆಕ್ ಯುವ ನಡೆಯಲಿದೆ. ತಾಂತ್ರಿಕ, ಸಾಂಸ್ಕೃತಿಕ, ಸಾಹಿತ್ಯ ಮತ್ತು ಕ್ರೀಡೆಗಳಿಗೆ ಸಂಬಂಧಿಸಿದ 50ಕ್ಕೂ ಅಧಿಕ ಸ್ಪರ್ಧೆ ಆಯೋಜಿಸಲಾಗಿದೆ. ಉತ್ಸವದಲ್ಲಿ 800 ಇಂಜಿನಿಯರಿಂಗ್, ಡಿಪ್ಲೋಮ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಬ್ಯಾಡ್ಮಿಂಟನ್ ಮತ್ತು ಕ್ರಿಕೆಟ್ ಪಂದ್ಯಾವಳಿಯನ್ನು 2 ದಿನ ಆಯೋಜಿಸಲಾಗುವುದು. ಫುಟ್ಬಾಲ್ ಪಂದ್ಯಾವಳಿ ಮಾ.12ಕ್ಕೆ ಆಯೋಜಿಸಲಾಗುವುದು ಎಂದರು. ಟೆಕ್ ಯುವ-26 ಸಂಚಾಲಕ ಪ್ರೊ. ಕೆ.ಶ್ರೀನಾಥ್ ರಾವ್, ವಿದ್ಯಾರ್ಥಿ ಸಮನ್ವಯಕಾರ ಆದರ್ಶ್, ವಿದ್ಯಾರ್ಥಿ ಸಹ-ಸಮನ್ವಯಕಾರ ಸಾಗರ್ ಎ., ಖಜಾಂಚಿ ವಿಶ್ರುತಕೃಷ್ಣ ಸಾಂಸ್ಕೃತಿಕ ಸಂಯೋಜಕಿ ಸ್ನೇಹಾ ರಶೀಲ್ ರೊಡ್ರಿಗಸ್, ತಾಂತ್ರಿಕ ಸಂಯೋಜಕ ಕಾರ್ತಿಕ್ ವೆರ್ಣೇಕರ್ ಉಪಸ್ಥಿತರಿದ್ದರು.

ನವೀಕರಣಗೊಂಡ ಬಿ.ಸಿ.ರೋಡಿನ 'ರಂಗೋಲಿ' ಮಾ.10ರಂದು ಉದ್ಘಾಟನೆ

ಬಂಟ್ವಾಳ: ಬಿ.ಸಿ.ರೋಡಿನ ಪ್ರತಿಷ್ಠಿತ ಹೊಟೇಲ್ ರಂಗೋಲಿ ಸೂಟ್ಸ್ ಮತ್ತು ರೆಸ್ಟೋ ಬಾರ್ 25ನೇ ವರ್ಷಕ್ಕೆ ಪಾದಾರ್ಪಣೆಗೈಯುತ್ತಿದೆ.

ಈ ಪ್ರಯುಕ್ತ ನೂತನ ಹವಾ ನಿಯಂತ್ರಿತ ವಸತಿಗೃಹ ಹಾಗೂ ನವೀಕರಣಗೊಂಡ ಹವಾ ನಿಯಂತ್ರಿತ ಸಭಾಭವನ ಮತ್ತು ರಂಗೋಲಿ ಸೂಟ್ಸ್ ಮತ್ತು ರೆಸ್ಟೋಬಾರ್ ನ ಉದ್ಘಾಟನಾ ಸಮಾರಂಭ ಮಾ.10 ರಂದು ಪೂರ್ವಾಹ್ನ 10:30ಕ್ಕೆ ನಡೆಯಲಿದೆ ಎಂದು ಹೊಟೇಲಿನ ಪಾಲುದಾರರಾದ ಚಂದ್ರಹಾಸ ಡಿ. ಶೆಟ್ಟಿ ರಂಗೋಲಿ ಅವರು ತಿಳಿಸಿದ್ದಾರೆ.

ಗಣ್ಯರು ಭಾಗಿ

ಶುಕ್ರವಾರ ಸಂಜೆ ಸುದ್ದಿಗಾರರಿಗೆ ಈ ಬಗ್ಗೆ ಮಾಹಿತಿ ನೀಡಿದ ಅವರು ಮೂಡಬಿದ್ರೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಅವರು ಉದ್ಘಾಟಿಸಲಿದ್ದು,ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್, ಮಾಜಿ ಸಚಿವ ಬಿ. ರಮಾನಾಥ ರೈ, ಬಂಟವಾಳ ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ, ಬದಿಗುಡ್ಡೆ,ಬಂಟ್ವಾಳ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಸಂದರ್ಭ ಆರಂಭಿಕ ಹಂತದಿಂದಲೂ ಇರುವಂತ ಹೊಟೇಲ್ ಸಿಬ್ಬಂದಿಗಳನ್ನು ಗೌರವಿಸಲಾಗುವುದು ಎಂದು ವಿವರಿಸಿದರು.



ಹೊಟೇಲ್ ಮುಂಭಾಗದಲ್ಲಿ ವಾಹನ ಪಾರ್ಕಿಂಗ್ ವ್ಯವಸ್ಥೆಯನ್ನು ಹೊಂದಿದ್ದು ತಾಲೂಕಿನ ಕೇಂದ್ರ ಸ್ಥಾನವಾದ ಬಿ.ಸಿ.ರೋಡಿನಲ್ಲಿ ಗ್ರಾಹಕರ ಸಹಕಾರದಲ್ಲಿ ಸಂಸ್ಥೆಯು ಯಶಸ್ವಿಯಾಗಿ 24 ವರ್ಷ ವನ್ನು ಪೂರೈಸುತ್ತಿದ್ದು 25ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ಹೊಸದಾಗಿ ಹವಾ ನಿಯಂತ್ರಿತವಾದ ವಸತಿಗೃಹಗಳು ಜತೆಗೆ ಎರಡು ಸೂಟ್ ರೂಂ ಅನ್ನು ನಿರ್ಮಿಸಲಾಗಿದ್ದಲ್ಲದೇ, ಸಭಾಭವನವನ್ನು ನವೀಕರಣಗೊಳಿಸಿ ಹವಾ ನಿಯಂತ್ರಿತವನ್ನಾಗಿ ಪರಿವರ್ತಿಸಲಾಗಿದೆ. ಗ್ರಾಹಕರ ಅನುಕೂಲ ದ ದೃಷ್ಟಿಯಿಂದ ಹೊಸತನವಾಗಿ ಕೆಲ ಬದಲಾವಣೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಇನ್ನೋರ್ವ ಪಾಲುದಾರ ಸದಾನಂದ ಡಿ. ಶೆಟ್ಟಿ,ಸಾಕ್ಷತ್ ಶೆಟ್ಟಿ ರಂಗೋಲಿ,ಗಣೇಶ್ ಶೆಟ್ಟಿ ಗೋಳ್ತಮಜಲು ಉಪಸ್ಥಿತರಿದ್ದರು.

ಉಜಿರೆ ಬ್ರಹ್ಮಕಲಶೋತ್ಸವಕ್ಕೆ ರಾಘವೇಶ್ವರ ಶ್ರೀ ಭೇಟಿ: ದೇವಳದ ವ್ಯವಸ್ಥೆಗೆ ಮೆಚ್ಚುಗೆ



ಬೆಳ್ತಂಗಡಿ: ಉಜಿರೆಯ ಶ್ರೀ ಜನಾರ್ದನ ಸ್ವಾಮಿ ಸನ್ನಿಧಿಗೆ ಬಂದಾಗ ಬೇರೆಯದೇ ಲೋಕಕ್ಕೆ ಬಂದ ಅನುಭವವಾಯಿತು ಎಂದು ಹೊಸನಗರ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತಿ ಶ್ರೀ ನುಡಿದರು.

ಅವರು ಮಾ. 6ರಂದು ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಮಧ್ಯಾಹ್ನ ಭೇಟಿ ನೀಡಿ ಶ್ರೀ ದೇವರ ದರ್ಶನ ಪಡೆದು 'ಸುಪ್ರಸಾದ' ಅನ್ನಛತ್ರಕ್ಕೆ ಭೇಟಿ ನೀಡಿ, ಮೊದಲ ಬಾರಿ ಬ್ರಹ್ಮಕಲಶೋತ್ಸವದ ಅನ್ನದಾನ ಕೇಂದ್ರಕ್ಕೆ ಬಂದು ಅನ್ನದಾನ ಸೇವೆ ಮಾಡುತ್ತಿದ್ದೇನೆ. ಇಲ್ಲಿ ಜನಾರ್ದನ ಸ್ವಾಮಿ ಮತ್ತು ಮಂಜುಳೇಶನ ಸನ್ನಿಧಿ ಶೈವ, ವೈಷ್ಣವರ ಸಮನ್ವಯ ಕ್ಷೇತ್ರವೆನಿಸಿದೆ. ಧರ್ಮಸ್ಥಳದ ಮಂಜುನಾಥ ಸ್ವಾಮಿಯ ನೆನಪು ಬರುತ್ತದೆ. ಧರ್ಮಸ್ಥಳ ಮಂಜುನಾಥ ಸ್ವಾಮಿ ಮತ್ತು ಉಜಿರೆ ಜನಾರ್ದನ ಸ್ವಾಮಿಯಲ್ಲಿ ಮೈತ್ರಿಯಿದೆ. ಶೈವ, ವೈಷ್ಣವರಲ್ಲಿ ಜಗಳವಿಲ್ಲ ಎಂದು ಹೇಳಿದರು.

ಕ್ಷೇತ್ರದ ವತಿಯಿಂದ ಅನುವಂಶಿಕ ಆಡಳಿತ ಮಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು ಕ್ಷೇತ್ರದ ಮಹಾದ್ವಾರದ ಬಳಿ ಸ್ವಾಗತಿಸಿ, ಪೂರ್ಣಕುಂಭ,ಸಕಲ ವಾದ್ಯ ವೈಭವಗಳೊಂದಿಗೆ ಬರಮಾಡಿಕೊಳ್ಳಲಾಯಿತು. ಹವ್ಯಕ ವಲಯ ಅಧ್ಯಕ್ಷ ವಿದ್ಯಾಕುಮಾರ್ ಕಾಂಚೋಡು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್ , ಶಾಮ ಭಟ್ ಅತ್ತಾಜೆ, ಕೇಶವ ಭಟ್ ಅತ್ತಾಜೆ, ಅನಂತ ಭಟ್ ಎಂ ಮತ್ತು ಸಮಾಜಬಾಂಧವರು, ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ, ಪ್ರದಾನ ಸಂಚಾಲಕ ಕೆ.ಮೋಹನ ಕುಮಾರ್, ಅರುಣ ಕುಮಾರ್ , ಲಕ್ಷ್ಮಣ ಸಫಲ್ಯ,ಮೊದಲಾದವರು ಉಪಸ್ಥಿತರಿದ್ದರು.

ಕುಡಾಲು ಕನಾಕಪ್ಪಾಡಿ ತರವಾಡು ಮನೆಯಲ್ಲಿ ನೇಮ: ಹೊರೆಕಾಣಿಕೆ



ಮಂಗಳೂರು: ಮಂಜೇಶ್ವರ ಕುಡಾಲು ಕನಾಕಪ್ಪಾಡಿ ತರವಾಡು ಮನೆ ಹಾಗೂ ದೈವಚಾವಡಿಯ ಧೂಮಾವತಿ ಬಂಟ ದೈವಗಳ ಹರಕೆಯ ನೇಮದ ಅಂಗವಾಗಿ ಕೋಡಿಂಗಾರು ಶಾಖೆಯ ವತಿಯಿಂದ ಹೊರೆ ಕಾಣಿಕೆ ಸಮರ್ಪಣೆ ಶುಕ್ರವಾರ ಜರುಗಿತು.

ಈ ವೇಳೆ ವಿವಿಧ ತಂಡಗಳಿಂದ ಭಜನಾ ಸಂಕೀರ್ತನೆ ನಡೆಯಿತು. ಸಂಜೆ ಭಂಡಾರ ಏರಿ, ರಾತ್ರಿ ಮೈಸಂದಾಯ, ಅಣ್ಣಪ್ಪ ಪಂಜುರ್ಲಿ ದೈವದ ನೇಮ ನೆರವೇರಿತು. ಶನಿವಾರ ಬೆಳಿಗ್ಗೆ 10ಕ್ಕೆ ಬಿರ್ನಾಳ ದೈವದ ನೇಮ, ಸಂಜೆ 6ಕ್ಕೆ ಕೊರತಿ ದೈವದ ಕೋಲ, ರಾತ್ರಿ 7.30ಕ್ಕೆ ಕುಪ್ಪೆಟ್ಟು ಪಂಜುರ್ಲಿ ಮತ್ತು ಕಲ್ಲುರ್ಟಿ ದೈವದ ಕೋಲ ನಡೆಯಿತು. ಮಾ.8ಕ್ಕೆ ಬೆಳಿಗ್ಗೆ 8ಕ್ಕೆ ಎಣ್ಣೆ ವೀಳ್ಯ ಕೊಡುವುದು, 10ರಿಂದ ಧೂಮಾವತಿ ದೈವದ ನೇಮ, ಮಧ್ಯಾಹ್ನ 12ಕ್ಕೆ ಪ್ರಸಾದ ವಿತರಣೆ ಸಂಜೆ 4ಕ್ಕೆ ಗುಳಿಗ ದೈವದ ಕೋಲ ನಡೆಯಲಿದೆ.

ಮಾ.11: ಮೆಸ್ಕಾಂ ಜನ ಸಂಪರ್ಕ ಸಭೆ

ಕೈಕಂಬ: ಮೆಸ್ಕಾಂ ಕೈಕಂಬ ಉಪ ವಿಭಾಗ ಕಚೇರಿಯಲ್ಲಿ ಮಾ.11ಕ್ಕೆ ಬೆಳಿಗ್ಗೆ 11ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸಲ್ಲಿಸಲು ಅವಕಾಶವಿದ್ದು, ದೂ.ಸಂ. 0824-2258202 ಮೂಲಕವೂ ಸಂಪರ್ಕಿಸಿ, ಅಹವಾಲು ಸಲ್ಲಿಸಬಹುದಾಗಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ವಿಭಾಗಕ್ಕೆ ತಕ್ಷಣವೇ ವೈದ್ಯರ ನೇಮಕಕ್ಕೆ ಕ್ರಮ: ಶಾಸಕ ಅಶೋಕ್ ರೈ

ಪುತ್ತೂರು: ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಪ್ರಮುಖವಾಗಿ ಬೇಕಾದ ಹೆರಿಗೆ ತಜ್ಞ ವೈದ್ಯರು ಇಲ್ಲ, ವಿಟ್ಲ ಸರಕಾರಿ ಆಸ್ಪತ್ರೆಯಲ್ಲೂ ಇಲ್ಲ, ಇದರಿಂದ ದೊಡ್ಡ ಮಟ್ಟದ ಸಮಸ್ಯೆ ಉಂಟಾಗಿದ್ದು, ಪುತ್ತೂರು ಆಸ್ಪತ್ರೆಗೆ ತಕ್ಷಣ ಹೆರಿಗೆ ತಜ್ಞ ವೈದ್ಯರ ನೇಮಕಕ್ಕೆ ಜಿಲ್ಲಾ ಆರೋಗ್ಯ ಆರೋಗ್ಯಾಧಿಕಾರಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಪುತ್ತೂರು ಶಾಸಕ ಅಶೋಕ್ ರೈ ಭರವಸೆ ನೀಡಿದ್ದಾರೆ.

ಶನಿವಾರ ಪುತ್ತೂರು ತಾ.ಪಂ. ಸಭಾಂಗಣದಲ್ಲಿ ಶಾಸಕ ಅಶೋಕ್ ರೈ ಅಧ್ಯಕ್ಷತೆಯಲ್ಲಿ ತ್ರೈ ಮಾಸಿಕ ಕೆಡಿಪಿ ಸಭೆ ನಡೆಯಿತು. ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹೆರಿಗೆ ತಜ್ಞೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಹಾಗಾಗಿ ಸಮಸ್ಯೆ ಎದುರಾಗಿದೆ ಎಂದು ವೈದ್ಯಾಧಿಕಾರಿ ಡಾ. ಯದುರಾಜ್ ತಿಳಿಸಿದರು. ಸಹಜ ಹೆರಿಗೆಗಳನ್ನು ಉಳಿದ ವೈದ್ಯರು ಮಾಡುತ್ತಿದ್ದಾರೆ. ಸಿಸೇರಿಯನ್ ಹೆರಿಗೆಗಳನ್ನು ಮಂಗಳೂರು ಆಸ್ಪತ್ರೆಗೆ



ಕಳುಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಪುತ್ತೂರು ಆಸ್ಪತ್ರೆಗೆ ಕನಿಷ್ಠ ಇಬ್ಬರಾದರೂ ಹೆರಿಗೆ ತಜ್ಞ ವೈದ್ಯಾಧಿಕಾರಿಗಳ ಬೇಕು. ಈ ಬಗ್ಗೆ ಮೇಲಾಧಿಕಾರಿಗಳಲ್ಲಿ ಮಾತನಾಡಿ, ವ್ಯವಸ್ಥೆ ಮಾಡೋಣ ಎಂದು ಶಾಸಕರು ತಿಳಿಸಿದರು.

ಡಯಾಲಿಸಿಸ್ ಕೆಲಸ ಬೇಗ ಮುಗಿಸಿ

ಪುತ್ತೂರು ಸರಕಾರಿ ಆಸ್ಪತ್ರೆಗೆ ಸಂಬಂಧಿಸಿ ಹೆಚ್ಚುವರಿ ಡಯಾಲಿಸಿಸ್ ವ್ಯವಸ್ಥೆಗೆ ಕಟ್ಟಡ ನಿರ್ಮಾಣ ಕೆಲಸ ನಡೆಯುತ್ತಿದ್ದು, ಶೀಘ್ರ ಮುಗಿಸಲು ಗುತ್ತುಗೆದಾರರಿಗೆ ತಿಳಿಸುವಂತೆ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಯದುರಾಜ್‌ಗೆ ಶಾಸಕರು ಸೂಚನೆ ನೀಡಿದರು.

ಕಂದಾಯ ಭೂಮಿಯಲ್ಲಿ ಅರಣ್ಯ ಇಲಾಖೆ ನೆಡುತೋಪು ನಿರ್ಮಾಣ ಮಾಡಿದ್ದು, ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ತೊಡಕು ಉಂಟಾಗುತ್ತಿದೆ. ಅರಣ್ಯ ಇಲಾಖೆಗೆ ಸೇರಿದ ಭೂಮಿಯಲ್ಲಿ ಮಾತ್ರ ನೆಡುತೋಪುಗಳನ್ನು ಮಾಡಬೇಕು ಎಂದು ಅರಣ್ಯ ಇಲಾಖೆಗೆ ಶಾಸಕ ಅಶೋಕ್ ರೈ ಸೂಚನೆ ನೀಡಿದರು.

ಬೆಳ್ತಂಗಡಿಗೆ ಕೊಡಬೇಡಿ

ಬೆಳ್ತಂಗಡಿ ತಾಲೂಕಿನ ಪೆರಿಯಶಾಂತಿ-ಧರ್ಮಸ್ಥಳ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿ ಅರಣ್ಯ ಇಲಾಖೆಗೆ ಪುತ್ತೂರಿನಲ್ಲಿ ಸಪ್ಲಿಮೆಂಟರಿ ಜಾಗ ಕೊಡುವ ಪ್ರಸ್ತಾಪ ಮಾಡಲಾಗಿದೆ ಎಂದು ಕಿರಣ್ ಬಿಎಂ ತಿಳಿಸಿದಾಗ ಬೆಳ್ತಂಗಡಿಯಲ್ಲಿ ಸರಕಾರಿ ಭೂಮಿ ಬೇಕಾದಷ್ಟಿದೆ. ಯಾವುದೇ ಕಾರಣಕ್ಕೂ ಪುತ್ತೂರಿನಿಂದ ಜಾಗಕೊಡಬಾರದು. ಕೆಯ್ಯೂರಿನಲ್ಲಿ ಅರಣ್ಯ ಇಲಾಖೆಗೆ ಹೊಂದಿಕೊಡಿರುವ ಸುಮಾರು 40 ಎಕರೆ ಪ್ರದೇಶ ಕಂದಾಯ ಭೂಮಿ ಇದೆ. ಈಗ ಪೆರಿಯಶಾಂತಿ ರಸ್ತೆಗೆ ಸಂಬಂಧಿಸಿ ಅರಣ್ಯ ಇಲಾಖೆ ವ್ಯವಸ್ಥೆ ಮಾಡಿದ ಜಾಗವನ್ನೂ ಇಲ್ಲಿಗೆ ವರ್ಗಾಯಿಸಿ ಎಂದು ಶಾಸಕರು ಸೂಚಿಸಿದರು. 1200 ಚಮೀ ವ್ಯಾಪ್ತಿಯ ಮನೆಗಳಿಗೆ ಯಾವುದೇ ದಾಖಲೆಗಳನ್ನು ತೆಗೆದುಕೊಳ್ಳದೆ ವಿದ್ಯುತ್ ಸಂಪರ್ಕ ಕೊಡಬೇಕು. ಇದು ಹೊಸ ನಿಯಮ ಎಂದು ಶಾಸಕರು ಸೂಚಿಸಿದಾದ ಮೆಸ್ಕಾಂ ಇಲಾಖೆಯ ಕಾರ್ಯನಿರ್ವಾಹಕ ಇಂಜಿಯರ್ ರಾಮಚಂದ್ರ ಅವರು ಆ ಮನೆಗೆ ವಾಸ್ತವ್ಯ ಬಗ್ಗೆ ದಾಖಲೆ ಬೇಕಾಗುತ್ತದೆ ಎಂದು ತಿಳಿಸಿದರು. ಅದನ್ನು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಯಿಂದ ಪಡೆದುಕೊಳ್ಳುವ ಕೆಲಸ ಮಾಡಿ ಎಂದು ಶಾಸಕರು ಸೂಚಿಸಿದರು.

ಈಶ್ವರಮಂಗಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಕೊರತೆ ಬಗ್ಗೆ ಚರ್ಚೆ ನಡೆಯಿತು. ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿದ ಸಂದರ್ಭ ಅಧಿಕಾರಿ ಸುರೇಶ್ ದೊಡ್ಡಮನಿ, ಅರಣ್ಯ ಇಲಾಖೆ ಜಾಗದಲ್ಲಿ ಪೈಪ್‌ಲೈನ್ ಹಾಗೂ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಅನುಮತಿ ಸಿಗುತ್ತಿಲ್ಲ ಎಂದರು. ತಹಶೀಲ್ದಾರ್ ಎಸ್ .ಬಿ. ಕೂಡಲಗಿ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ನವೀನ್ ಭಂಡಾರಿ, ತಾಲೂಕು ವೈದ್ಯಾಧಿಕಾರಿ ಡಾ.ದೀಪಕ್ ರೈ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ, ನಗರಸಭಾ ಪೌರಾಯುಕ್ತೆ ವಿದ್ಯಾ ಕಾಳೆ ಉಪಸ್ಥಿತರಿದ್ದರು.

ರಸ್ತೆ ದುರಸ್ತಿಗೆ ಸಿಗದ ಅನುದಾನ

ಮಳೆಗಾಲಕ್ಕೆ ಇನ್ನು 2 ತಿಂಗಳು ಇರುವುದು. ಗ್ರಾಮಾಂತರ ರಸ್ತೆಗಳ ಪ್ಯಾಚ್ ವರ್ಕ್ ಕಾಮಗಾರಿ ನಡೆಸದಿದ್ದರೆ ಕಷ್ಟ ಎಂದು ಶಾಸಕ ಅಶೋಕ್ ರೈ ಹೇಳಿದರು. ಜಿ.ಪಂ. ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ಮಾತನಾಡಿ, ರಸ್ತೆಯ ನಿರ್ವಹಣೆಗೆ ಕಿ.ಮೀ.ಗೆ 60 ಸಾವಿರ ಮಾತ್ರ ಸಿಗುತ್ತದೆ. ಈ ವರ್ಷ ಪುತ್ತೂರಿನಲ್ಲಿ 56 ಕಿ.ಮೀ. ಹಾಗೂ ಬಂಟ್ವಾಳದಲ್ಲಿ 13 ಕಿ.ಮೀ. ಕಾಮಗಾರಿಗೆ ಪ್ರಪೋಸಲ್ ನೀಡಲಾಗಿದೆ. ಆದರೆ ಈ ವರ್ಷ ಅನುದಾನ ಬಂದಿಲ್ಲ ಎಂದರು. ಶಾಸಕ ಅಶೋಕ್ ರೈ, ಇಲಾಖೆ ರಸ್ತೆಗಳಿಗೆ 1 ಕಿ.ಮೀ.ಗೆ 1.50 ಕೋಟಿ ನೀಡಲಾಗುತ್ತಿದೆ. ಅಧಿ ಕಾರಿಗಳು ಒತ್ತಡ ಹೇರುವುದು ಸಾಕಾಗುತ್ತಿಲ್ಲ ಎಂದರು.

ಸುತ್ತಮುತ್ತ

ಇಂದು ಬೆಟ್ಟಂಪಾಡಿಯಲ್ಲಿ ವೈದ್ಯಕೀಯ ಶಿಬಿರ

ನಿಡ್ಪಳ್ಳಿ: ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಪುತ್ತೂರು ಇದರ ಇರ್ದೆ, ಬೆಟ್ಟಂಪಾಡಿ, ಪಾಣಾಜೆ, ನಿಡ್ಪಳ್ಳಿ ಘಟಕಗಳ ಆಶ್ರಯದಲ್ಲಿ ಶ್ರೀ ಸತ್ಯಸಾಯಿ ಸೇವಾ ಸಮಿತಿ ಈಶ್ವರಾಂಭ ಟ್ರಸ್ಟ್ ಮತ್ತು ಜಸ್ಟಿಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ ದೇರಳಕಟ್ಟೆ ಇವರ ಸಹಯೋಗದೊಂದಿಗೆ ಆ್ಯಂಬುಲೆನ್ಸ್ ಸೇವೆಯ 3 ನೇ ವರ್ಷದ ಪಾದಾರ್ಪಣೆ ಪ್ರಯುಕ್ತ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಮಾ.8 ರಂದು ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಸಭಾಭವನದಲ್ಲಿ ಆಯೋಜಿಸಲಾಗಿದೆ. ಸಾಮಾನ್ಯ ತಪಾಸಣೆ, ದಂತ ಹಾಗೂ ಕಣ್ಣಿನ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಕಿವಿ, ಮೂಗು, ಗಂಟಲು, ಎಲುಬು, ಚರ್ಮ ಮತ್ತು ಮಕ್ಕಳ ವಿಭಾಗದ ಸೇವೆ ಲಭ್ಯ ಇದೆ. ಬೆಳಗ್ಗೆ ಗಂಟೆ 9 ರಿಂದ ಮಧ್ಯಾಹ್ನ ಗಂಟೆ 1 ರವರೆಗೆ ನಡೆಯಲಿರುವ ಶಿಬಿರವನ್ನು ಪುತ್ತಿಲ ಪರಿವಾರದ ಸಂಸ್ಥಾಪಕ ಅರುಣ್ ಕುಮಾರ್ ಪುತ್ತಿಲ ಉದ್ಘಾಟಿಸಲಿದ್ದು, ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ತಾಲೂಕು ಅಧ್ಯಕ್ಷ ಶ್ರೀರಾಮ್ ಭಟ್ ಪಾತಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಹಲವಾರು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿರುವರು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಳ್ಳುವಂತೆ ಸಂಘಟಕರು ತಿಳಿಸಿದ್ದಾರೆ.

ಇಂದು ವರ್ಷಾವಧಿ ನೇಮ

ಮುಲ್ಕಿ: ಪಡು ಪಣಂಬೂರು ಬೆಳ್ಳಾಯರು ಮೂಡುತೋಟ ಶ್ರೀ ಜಾರಂದಾಯ ಬಂಟ ಮತ್ತು ಪಟ್ಟದ ಪಂಜುರ್ಲಿ ದೈವಸ್ಥಾನದ ವರ್ಷಾವಧಿ ನೇಮ ಮಾ.8 ರಂದು ನಡೆಯಲಿದೆ. ಮಧ್ಯಾಹ್ನ4 ಗಂಟೆಗೆ ತೋಕೂರು ಮಾಗಂದಡಿ ಮನೆಯಿಂದ ಭಂಡಾರ ಹೊರಡುವುದು. ಸಂಜೆ 6ಕ್ಕೆ ವರ್ಷಾವಧಿ ಚೌತಿ ಪೂಜೆ, ರಾತ್ರಿ 8 ಗಂಟೆಗೆ ಭಂಡಾರ ಇಳಿಯುವುದು. ಬಳಿಕ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ 10.30ಕ್ಕೆ ಗಗ್ಗರ ನೇಮ, ಕೋರಬ್ಬು ದೈವದ ಭೇಟಿ ನಡೆಯಲಿದೆ ಎಂದು ದೈವಸ್ಥಾನದ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ

ಇಂದು ಕೊಂಕಣಿ ಸಾಹಿತ್ಯ ಅಕಾಡೆಮಿ- ಜಾಗತಿಕ ಮಹಿಳಾ ದಿನಾಚರಣೆ

ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಾಗತಿಕ ಮಹಿಳಾ ದಿನಾಚರಣೆ, ಸ್ವರ ಸಂಭ್ರಮ–2026– ಕೊಂಕಣಿಯಿಂದ ಕನ್ನಡಕ್ಕೆ ಭಾಷಾಂತರಿಸಿದ ಕಥೆ ಮತ್ತು ಕವಿತಾ ಸಂಗ್ರಹಗಳ ಲೋಕಾರ್ಪಣೆ ಮಾ. 8 ರಂದು ಸಂಜೆ 5 ಗಂಟೆಗೆ ಶಕ್ತಿನಗರದ ಮಾಕಾಳೆ ಕಲಾಂಗಣ್‌ನಲ್ಲಿ ನಡೆಯಲಿದೆ. ವಿಧಾನಸಭೆ ಸ್ಪೀಕರ್ ಯು. ಟಿ. ಖಾದರ್ ಫರೀದ್ ಉಪಸ್ಥಿತಿಯಲ್ಲಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟಾನಿ ಅಲ್ವಾರಿಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಮತ್ತಿತರರು ಉಪಸ್ಥಿತರಿರುವರು.

ಶ್ರೀ ಧರ್ಮ ಜಾರಂದಾಯ, ಬಂಟ ದೈವಗಳ ಸಿರಿಸಿಂಗಾರದ ನೇಮ

ಮುಲ್ಕಿ: ಇಲ್ಲಿಗೆ ಸಮೀಪದ ಶಿಮಂತೂರು ತಕ್ಕಣಪಾದೆ ದೈವಸ್ಥಾನದಲ್ಲಿ ಶಿಮಂತೂರು ಮತ್ತು ಎಳತ್ತೂರು ಗ್ರಾಮಸ್ಥರ ರಾಜನ್ ದೈವ ಶ್ರೀ ಮಹಿಷಂದಾಯ ಮತ್ತು ಶ್ರೀ ಧರ್ಮ ಜಾರಂದಾಯ ಹಾಗೂ ಬಂಟ ದೈವಗಳ ವಾರ್ಷಿಕ ಸಿರಿಸಿಂಗಾರದ ನೇಮ ಮಾ.9ರಂದು ನಡೆಯಲಿದೆ. ಮಾ.9ರಂದು ಸಂಜೆ 5.30ಕ್ಕೆ ಶಿಮಂತೂರು ಮಜಲಗುತ್ತು ಮನೆಯಿಂದ ತಕ್ಕಣಪಾದೆ ದೈವಸ್ಥಾನಕ್ಕೆ ಭಂಡಾರ ಹೊರಡುವುದು. ರಾತ್ರಿ 8ರಿಂದ ತಕ್ಕಣಪಾದೆ ದೈವಸ್ಥಾನದಲ್ಲಿ ಅನ್ನಸಂತರ್ಪಣೆ,ರಾತ್ರಿ 9.30ರಿಂದ ಮಹಿಷಂದಾಯ ದೈವದ ನೇಮ, ರಾತ್ರಿ 10.30ರಿಂದ ಶ್ರೀ ಜಾರಂದಾಯ ಬಂಟ ದೈವಗಳಿಗೆ ಗಗ್ಗರ ಸೇವೆ ಮತ್ತು ನೇಮ, ಕೋರ್ದಬ್ಬು ಜಾರಂದಾಯ ದೈವಗಳ ಭೇಟಿ ನಡೆಯಲಿದೆ ಎಂದು ಎಳತ್ತೂರುಗುತ್ತು ಗುತ್ತಿನಾರ್ ಬಾಲಕೃಷ್ಣ ಶೆಟ್ಟಿ ಯಾನೆ ಶಂಕರ ರೈ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ರಸ್ತೆ ಅಭಿವೃದ್ಧಿ ಕಾಮಗಾರಿಗೆ 30 ಲ.ರೂ. ಅನುದಾನ

ಪೆರ್ಲ: ಎಣ್ಮಕಜೆ ಪಂಚಾಯತ್‌ನ 18ನೇ ವಾರ್ಡ್‌ನಲ್ಲ ಪ್ರದೇಶದಲ್ಲಿ ತೀರಾ ಅವಗಣನೆಯಲ್ಲಿದ್ದ ಪಾಪಿತ್ತಡ್ಕ – ನೀರಮೂಲೆ – ಗುರಿನೇರೋಲು ರಸ್ತೆ ಡಾಮರೀಕರಣ ಕಾಮಗಾರಿಗೆ ರಾಜ್ಯ ಸಭಾ ಸದಸ್ಯೆ ಡಾ.ಪಿ.ಟಿ.ಉಷಾ ಅವರ ಎಂಪಿಎಲ್‌ಎಡಿಎಸ್ ನಿಧಿಯಿಂದ 30 ಲ.ರೂ. ಮಂಜೂರು ಮಾಡಲಾಗಿದೆ. ಕಾಸರಗೋಡು ಸಂಸದರು ಮತ್ತು ಮಂಜೇಶ್ವರ ಶಾಸಕರು ತಿರಸ್ಕರಿಸಿದ ಎಣ್ಮಕಜೆ ಪಂಚಾಯತ್‌ಗೆ ಈ ಯೋಜನೆ ಮಂಜೂರು ಮಾಡಿರುವುದು ಸಂತಸ ತಂದಿದ್ದು ಸ್ಥಳೀಯರಿಗೆ ಉತ್ತಮ ಸಂಚಾರ ಸೌಲಭ್ಯ ದೊರೆಯಲು ಇದು ಸಹಕಾರಿಯಾಗಲಿದೆ. ಸಂಸದೆ ಡಾ.ಪಿ.ಟಿ.ಉಷಾ ಅವರಿಗೆ ಈ ಯೋಜನೆಯನ್ನು ಮಂಜೂರು ಮಾಡುವಂತೆ ಒತ್ತಡ ಹೇರಿದ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಅವರನ್ನು ಜನತೆ ಅಭಿನಂದಿಸಿದ್ದಾರೆ.

ಹೋಳಿಹಬ್ಬ

ಉಪ್ಪುಂದ: ಯಡ್ತರೆ ಗ್ರಾಮದ ಹೊಸೂರು ಸಿದ್ದೇಶ್ವರ ಹೋಳಿ ಸಮಿತಿಯಿಂದ ಹೋಳಿಹಬ್ಬ ನಡೆಯಿತು. ಇಲ್ಲಿನ ಮರಾಠಿ ಸಮುದಾಯ ಪ್ರತಿ ವರ್ಷ ಹೋಳಿಹಬ್ಬವನ್ನು ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬರುತ್ತಿದ್ದು, ಇದು ಊರಿನ ಹಿರಿಮೆಯಾಗಿದೆ ಮತ್ತು ಯುವ ಸಮುದಾಯ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಒಂದು ವಾರಗಳ ಕಾಲ ವಿವಿಧ ಊರುಗಳಿಗೆ ತೆರಳಿ ಹೋಳಿ ಕುಣಿತ ನಡೆಸುತ್ತಾರೆ. ಕೊನೆಯಲ್ಲಿ ಸಮುದಾಯದ ಊರಿನ ಮುಖ್ಯಸ್ಥರ ಮನೆಯಲ್ಲಿ ಸಮಾಪನಗೊಳ್ಳಲಿದೆ. ಶೇಷ ಮರಾಠಿ, ನಾಗಪ್ಪ ಮರಾಠಿ, ವಾಸುದೇವ ಮರಾಠಿ, ಚಂದ್ರ ಮರಾಠಿ ಹೊಸೂರು, ವಾಸು ಹೊಸೂರು, ದಯಾನಂದ ಮರಾಠಿ, ಮಹಾದೇವ ಮರಾಠಿ ಹೊಸೂರು, ಬಾಲರಾಜ್ ಮರಾಠಿ ಹಾಗೂ ಹೋಳಿ ಸಮಿತಿ ಸರ್ವ ಸದಸ್ಯರು ಇದ್ದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಪಂಕಜಾ, ವಿಲ್ಸನ್, ಅಪ್ರೂಜ್, ಫಿಲೋಮೀನಾ ಮತ್ತಿತರರಿದ್ದರು.

ಪಂಪ್‌ವೆಲ್ ಮಹಾವೀರ ವೃತ್ತದಿಂದ ಕರಾವಳಿ ಜಂಕ್ಷನ್‌ವರೆಗಿನ ಚತುಷ್ಪಥ ರಸ್ತೆ ಅಭಿವೃದ್ಧಿ

ಬಸ್ ಸಂಚಾರ ಬದಲಾವಣೆಯಿಂದ ಪ್ರಯಾಣಿಕರಿಗೆ ಸಂಕಷ್ಟ!

ಮಂಗಳೂರು: ನಗರದ ಪಂಪ್‌ವೆಲ್ ಮಹಾವೀರ ವೃತ್ತದಿಂದ ಕರಾವಳಿ ಜಂಕ್ಷನ್‌ವರೆಗಿನ ಚತುಷ್ಪಥ ರಸ್ತೆ ಅಭಿವೃದ್ಧಿ ಹಿನ್ನೆಲೆಯಲ್ಲಿ ಕಳೆದ ಫೆ.15ರಿಂದ ಬಿ.ಸಿ.ರೋಡ್ ಕಡೆಯಿಂದ ಕೆಎಸ್‌ಆರ್‌ಟಿಸಿ ಬಿಜೈ ಬಸ್ ನಿಲ್ದಾಣಕ್ಕೆ ಆಗಮಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳು ಪಡೀಲ್‌ನಿಂದ ನಂತೂರು ಮಾರ್ಗವಾಗಿ ಬಂಟ್ಸ್‌ಹಾಸ್ಟೆಲ್ ಮೂಲಕ ಬರುತ್ತಿವೆ. ಇದರಿಂದಾಗಿ ಈ ಬಸ್‌ಗಳಲ್ಲಿ ಆಗಮಿಸುವ ಪಂಪ್‌ವೆಲ್, ಕಂಕನಾಡಿಗೆ ತೆರಳುವ ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದಾರೆ.



ತಾತ್ಕಾಲಿಕವಾಗಿ ಏಕಮುಖ ರಸ್ತೆ

ನಗರದ ಪಂಪ್‌ವೆಲ್ ಸರ್ಕಲ್‌ನಿಂದ ಕರಾವಳಿ ಜಂಕ್ಷನ್‌ವರೆಗಿನ ಚತುಷ್ಪಥ ರಸ್ತೆಯ ಅಭಿವೃದ್ಧಿ ಕಾಮಗಾರಿ ಲೋಕೋಪಯೋಗಿ ಇಲಾಖೆ ವತಿಯಿಂದ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪಂಪ್‌ವೆಲ್ ವೃತ್ತದಿಂದ ಕಂಕನಾಡಿ ಹಳೇ ರಸ್ತೆ – ಕಂಕನಾಡಿ ಜಂಕ್ಷನ್‌ಗೆ (ಮಂಗಳೂರು ನಗರಕ್ಕೆ ಒಳಬರುವ ರಸ್ತೆ) ಮತ್ತು ಕರಾವಳಿ ಜಂಕ್ಷನ್‌ನಿಂದ – ಪಂಪ್‌ವೆಲ್ ವೃತ್ತದವರೆಗಿನ (ಮಂಗಳೂರು ನಗರದಿಂದ ಹೊರ ಹೋಗುವ ರಸ್ತೆ) ಬೈಪಾಸ್ ರಸ್ತೆಗಳನ್ನು ತಾತ್ಕಾಲಿಕವಾಗಿ ಏಕಮುಖ ರಸ್ತೆಗಳನ್ನಾಗಿ ಮಾರ್ಪಾಡು ಮಾಡಲಾಗಿದೆ. ಪಂಪ್‌ವೆಲ್‌ನಿಂದ ಕರಾವಳಿ ಜಂಕ್ಷನ್‌ಗೆ ಆಗಮಿಸುವ ರಸ್ತೆ ಕಾಮಗಾರಿ ಪ್ರಸ್ತುತ ನಡೆಯುತ್ತಿದ್ದು, ಲಾಲ್‌ಬಾಗ್ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಹೋಗುವ ಬಸ್ಸುಗಳು ಪಡೀಲ್ – ನಂತೂರು – ಶಿವಬಾಗ್ – ಬಲ್ಮಠ – ಅಂಬೇಡ್ಕರ್ ವೃತ್ತ –ಬಂಟ್ಸ್ ಹಾಸ್ಟೆಲ್ ಆಗಿ ಬಸ್ಸು ನಿಲ್ದಾಣಕ್ಕೆ ಸಂಚರಿಸುವಂತೆ ಸೂಚಿಸಲಾಗಿದೆ.

ಸುತ್ತಿ ಬಳಸಿ ಪ್ರಯಾಣ

ಪಂಪ್‌ವೆಲ್ –ಕರಾವಳಿ ಜಂಕ್ಷನ್‌ವರೆಗಿನ ಚತುಷ್ಪಥ ರಸ್ತೆ ಅಭಿವೃದ್ಧಿ ಕಾಮಗಾರಿಯಿಂದ ಬಿ.ಸಿ.ರೋಡ್ ಕಡೆಯಿಂದ ಕೆಎಸ್ಸಾರ್ಟಿಸಿ ಬಿಜೈ ಬಸ್ ನಿಲ್ದಾಣಕ್ಕೆ ಆಗಮಿಸುವ ಕೆಎಸ್ಸಾರ್ಟಿಸಿ ಪ್ರಯಾಣಿಕರು ಪಡೀಲ್‌ನಿಂದ ನಂತೂರು ಮಾರ್ಗವಾಗಿ ಬಂಟ್ಸ್‌ಹಾಸ್ಟೆಲ್ ಮೂಲಕ ಬರುತ್ತಿದ್ದು, ಈ ಬಸ್‌ಗಳಲ್ಲಿ ಆಗಮಿ ಸುವ ಪಂಪ್‌ವೆಲ್, ಕಂಕನಾಡಿಗೆ ತೆರಳುವ ಪ್ರಯಾಣಿಕರು ಮಾತ್ರ ತೊಂದರೆ ಅನುಭವಿಸುತ್ತಿದ್ದಾರೆ.

ಪ್ರಯಾಣಿಕರಿಗೆ ಗೊಂದಲ

ಇದರಿಂದಾಗಿ ಪಂಪ್‌ವೆಲ್, ಕಂಕನಾಡಿಯಲ್ಲಿ ಇಳಿಯಬೇಕಾದ ಪ್ರಯಾಣಿಕರು ನೇರವಾಗಿ ಅಂಬೇಡ್ಕರ್ ವೃತ್ತ ಬಸ್‌ಸ್ಟಾಪ್‌ಗೆ ಆಗಮಿಸಬೇಕಿದೆ. ಪಂಪ್‌ವೆಲ್‌ನಲ್ಲಿ ಇಳಿದು ಕೇರಳ ಕಡೆಗೆ ಪ್ರಯಾಣಿಸುವವರು, ಪಂಪ್‌ವೆಲ್‌ನಲ್ಲಿ ವ್ಯವಹಾರ ಹೊಂದಿರುವವರು, ಕಂಕನಾಡಿಯಲ್ಲಿ ಇಳಿದು ಮಂಗಳಾದೇವಿ, ಮೋರ್ಗನ್ಸ್‌ಗೇಟ್ ಕಡೆಗೆ ತೆರಳುವವರು, ಫಾದರ್ ಮುಲ್ಲರ್ ಆಸ್ಪತ್ರೆಗೆ ಹೋಗುವವರು ಈಗ ಅಂಬೇಡ್ಕರ್ ವೃತ್ತದಲ್ಲಿ ಇಳಿದು ಮತ್ತೊಂದು ಬಸ್‌ನಲ್ಲಿ ತಮ್ಮ ನಿಗದಿತ ಸ್ಥಳಕ್ಕೆ ವಾಪಸ್ ತೆರಳಬೇಕಿದೆ. ಇಲ್ಲವೇ ಪಡೀಲ್‌ನಲ್ಲಿ ಇಳಿದು ಅಲ್ಲಿಂದ ಸ್ಟೇಟ್‌ಬ್ಯಾಂಕ್ ಬಸ್ ಮೂಲಕ ಪಂಪ್‌ವೆಲ್, ಕಂಕನಾಡಿಗೆ ಪ್ರಯಾಣಿಸಬೇಕಿದೆ. ಪಡೀಲ್‌ನಿಂದ ಮತ್ತೆ ಟಿಕೆಟ್ ಪಡೆಯಬೇಕಿದೆ. ಸುಳ್ಯ, ಕಡಬ, ಪುತ್ತೂರು, ಬೆಳ್ತಂಗಡಿ ತಾಲೂಕು ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸುವ ಪ್ರಯಾಣಿಕರು ಈ ಸಂಚಾರ ಬದಲಾವಣೆಯಿಂದ ಗಲಿಬಿಲಿ, ಗೊಂದಲಕ್ಕೆ ಒಳಗಾಗುತ್ತಿದ್ದಾರೆ.

ಅವಕಾಶ ನೀಡಬೇಕು

ಪ್ರಯಾಣಿಕರ ಅನುಕೂಲದ ದೃಷ್ಟಿಯಿಂದ ಬಿಜೈ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳನ್ನೂ ಪಡೀಲ್‌ನಲ್ಲಿ ನಿರ್ಬಂಧಿಸದೇ, ಪಂಪ್‌ವೆಲ್– ಕಂಕನಾಡಿ ಹಳೇ ರಸ್ತೆ ಮೂಲಕ ಸಂಚರಿಸಲು ಅವಕಾಶ ನೀಡಬೇಕು ಎಂಬುದು ಪ್ರಯಾಣಿಕರ ಆಗ್ರಹವಾಗಿದೆ. ತೊಕ್ಕೊಟ್ಟು ಕಡೆ ಯಿಂದ ಆಗಮಿಸುವ ವಾಹನಗಳು ಪ್ರಸ್ತುತ ಮಹಾಕಾಳಿಪಡ್ಪು ಮೂಲಕ ನಗರದೊಳಗೆ ಬರುತ್ತಿರುವುದರಿಂದ ಪಂಪ್‌ವೆಲ್–ಕಂಕನಾಡಿ ಹಳೇ ರಸ್ತೆಯಲ್ಲಿ ಸಂಚಾರ ದಟ್ಟಣೆ ಅಷ್ಟಾಗಿ ಉಂಟಾಗದು ಎನ್ನುವುದು ನಿತ್ಯಪ್ರಯಾಣಿಕರ ಅಭಿಮತ.

ಕಂಕನಾಡಿ ಹಳೆ ರಸ್ತೆ ಮೂಲಕ ಸಂಚರಿಸಲು ಅನುವು ಮಾಡಿಕೊಡಬೇಕು

ಪಂಪ್‌ವೆಲ್ ಜಂಕ್ಷನ್‌ನಿಂದ ಕರಾವಳಿ ಜಂಕ್ಷನ್‌ಗೆ ಹೋಗುವ ವಾಹನ ನಿರ್ಬಂಧಿಸಿ, ಕಂಕನಾಡಿ ಹಳೆ ರಸ್ತೆ ಮೂಲಕ ಸಂಚರಿಸಲು ಅನುವು ಮಾಡಿಕೊಡಲಾಗಿದೆ. ಬಿ.ಸಿ.ರೋಡ್ ಕಡೆಯಿಂದ ಸ್ಟೇಟ್‌ಬ್ಯಾಂಕ್‌ಗೆ ತೆರಳುವ ಬಸ್‌ಗಳು ಪಂಪ್‌ವೆಲ್, ಕಂಕನಾಡಿಯಾಗಿ ಇದೇ ದಾರಿಯಲ್ಲಿ ಸಂಚರಿಸುತ್ತಿವೆ. ಸ್ಟೇಟ್‌ಬ್ಯಾಂಕ್‌ಗೆ ಆಗಮಿಸುವ ಬಹುತೇಕ ಬಸ್‌ಗಳು ಜಿಲ್ಲೆಯೊಳಗಿಂದಲೇ ಆಗಮಿಸುತ್ತಿವೆ. ಬಿಜೈ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು ಹೊರಜಿಲ್ಲೆ ದೂರದ ಸ್ಥಳಗಳಿಂದ ಆಗಮಿಸುತ್ತವೆ.

ಕ್ಕೊಲದ ಶ್ರೀರಾಮ ಭಜನಾ ಮಂದಿರಕ್ಕೆ ಧರ್ಮಸ್ಥಳದಿಂದ 1 ಲಕ್ಷ ರೂ. ನೆರವು



ಕಡಬ: ನಮ್ಮ ಸಂಸ್ಕಾರ, ಸಂಸ್ಕೃತಿ ಉಳಿವಿಗೆ ಭಜನಾ ಮಂದಿರಗಳು ಮಹತ್ತರವಾದ ಕೊಡುಗೆ ನೀಡುತ್ತಿದ್ದು, ಸಮಾಜದಲ್ಲಿ ಧರ್ಮ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿವೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಡಬ ತಾ.ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಹೇಳಿದ್ದಾರೆ.

ಅವರು ಕಡಬ ತಾಲೂಕಿನ ಕ್ಕೊಲ ಗ್ರಾಮದ ಸಬಳೂರು ಅಯೋಧ್ಯಾನಗರ ಶ್ರೀರಾಮ ಭಜನಾ ಮಂದಿರದ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಬಿಡುಗಡೆಯಾದ ರೂ. 1 ಲಕ್ಷ ದೇಣಿಗೆಯ ಚೆಕ್ ವಿತರಣಾ ಸಮಾರಂಭದಲ್ಲಿ ಅತಿಥಿಯಾಗಿ ಮಾತನಾಡಿದರು. ಚೆಕ್ ವಿತರಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳ ಭಜನಾ ಪರಿಷತ್‌ನ ಜಿಲ್ಲಾ ಸಮನ್ವಯಾಧಿಕಾರಿ ಸಂತೋಷ್ ಪಿ.ಅಳಿಯೂರು ಮಾತನಾಡಿ, ಕಳೆದ 2 ವರ್ಷಗಳಿಂದ ಜಿಲ್ಲೆಯಲ್ಲಿ ಬಹಳಷ್ಟು ಭಜನಾ ಮಂದಿರ ಗಳು ನಿರ್ಮಾಣವಾಗಿವೆ. ಅವುಗಳಿಗೆ ಹೆಗ್ಗಡೆ ಅನುದಾನ ನೀಡಿ ಜೀರ್ಣೋದ್ಧಾರ ಕಾರ್ಯಗಳಿಗೆ ವೇಗ ನೀಡಿದ್ದಾರೆ. ಇದೀಗ ಶ್ರೀ ಕ್ಷೇತ್ರದಿಂದ ಭಜನ ಪರಿಷತ್ ಮೂಲಕ ಭಜನಾ ಮಂದಿರಗಳಿಗೆ ಅನುದಾನ ಮಂಜೂರು ಮಾಡಲಾಗುತ್ತಿದೆ. ಈ ಭಜನಾ ಮಂದಿರಕ್ಕೆ ಅನುದಾನ ನೀಡುವ ಯೋಗ ನನ್ನದಾಗಿದೆ ಎಂದರು.

ಶ್ರೀರಾಮ ಭಜನಾ ಮಂದಿರ ಅಧ್ಯಕ್ಷ ಕೆ.ಎಸ್. ಬಾಲಕೃಷ್ಣ ಗೌಡ ಚೆಕ್ ಸ್ವೀಕರಿಸಿ ಕೃತಜ್ಞತೆ ಸಲ್ಲಿಸಿದರು. ಭಜನಾ ಮಂದಿರದ ಉಪಾಧ್ಯಕ್ಷ ಸುಪ್ರಿತ್ ರೈ ಕ್ಕೊಲ, ಗೌರವ ಸಲಹೆಗಾರರಾದ ರಾಜೀವ ಗೌಡ ಪಟ್ಟೆದಮೂಲೆ, ರಾಮಯ್ಯ ಗೌಡ ಬುಡಲೂರು, ಕುಶಾಲಪ್ಪ ಗೌಡ ಕಡೆಂಬ್ಯಾಲ್, ಪ್ರವೀಣ್ ರಾಜ್ ಕೆ.ಎಸ್., ಸೇವಾ ಪ್ರತಿನಿಧಿ ಪ್ರೇಮಾವತಿ ಮಹಾಬಲ ನಾಯ್ಕ, ಒಕ್ಕೂಟ ಅಧ್ಯಕ್ಷ ಪುರಂದರ ತುಂಬೆತಡ್ಕ, ಶ್ರೀರಾಮ ಗೆಳೆಯರ ಬಳಗ ಸದಸ್ಯ ಮುಖೇಶ್ ಕಡೆಂಬ್ಯಾಲ್ ಉಪಸ್ಥಿತರಿದ್ದರು. ಗೋಳಿತೊಟ್ಟು ವಲಯ ಮೇಲ್ವಿಚಾರಕಿ ಜಯಶ್ರೀ ಸ್ವಾಗತಿಸಿ, ವಂದಿಸಿದರು.

ಮರವಂತೆ ಬೀಚ್‌ನಲ್ಲಿ ತೆರವು ಮಾಡಿದ ಸ್ಥಳದಲ್ಲೇ ಮತ್ತೆ ತಲೆ ಎತ್ತಿದ ಗೂಡಂಗಡಿ!



ಕುಂದಾಪುರ: ಮರವಂತೆ ಬೀಚ್‌ನಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿದ್ದ ಗೂಡಂಗಡಿಗಳನ್ನು ತೆರವು ಮಾಡಿದ ತಿಂಗಳಲ್ಲೇ ಮತ್ತೆ ಪುನ: ಅದೇ ಜಾಗದಲ್ಲಿ ಗೂಡಂಗಡಿಗಳು ತಲೆ ಎತ್ತುತ್ತಿವೆ. ರಾಷ್ಟ್ರೀಯ ಹೆದ್ದಾರಿ 66ರ ಮರವಂತೆ ಶ್ರೀ ವರಾಹ ಸ್ವಾಮಿ ದೇವಸ್ಥಾನದ ಎದುರುಗಡೆ ಕಡಲ ತೀರದಲ್ಲಿ ತ್ರಾಸಿ ಮತ್ತು ಮರವಂತೆ ಬೀಚ್ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಮುಂದಾಗುತ್ತಿರುವಾಗಲೇ ಅಲ್ಲಲ್ಲಿ ಗೂಡಂಗಡಿಗಳು ಅಕ್ರಮವಾಗಿ ತಲೆ ಎತ್ತುತ್ತಿವೆ. ದಾರಿಯಲ್ಲಿ ಸಾಗುವ ಬಸ್, ಲಾರಿ ಮತ್ತಿತರ ವಾಹನಗಳು ಇಂತಹ ಗೂಡಂಗಡಿ' ಸಮೀಪ ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿದ್ದು, ಇದರಿಂದ ಅನೇಕ ಅಪಘಾತಗಳು ಸಂಭವಿಸಿವೆ. ಇದೇ ಕಾರಣದಿಂದ ಕಳೆದ ಕೆಲವು ವರ್ಷಗಳ ಹಿಂದೆ ತ್ರಾಸಿ–ಮರವಂತೆ ತೀರದುದ್ದಕ್ಕೂ ಇದ್ದ ಗೂಡಂಗಡಿಗಳನ್ನು ತೆರವು ಮಾಡಿ, ತ್ರಾಸಿ ಪಾರ್ಕ್ ಒಳಗೆ ಸ್ಥಳಾವಕಾಶ ನೀಡುವ ಭರವಸೆ ಅಂದು ಜಿಲ್ಲಾಡಳಿತ ನೀಡಿತ್ತು. ಆದರೆ ಭರವಸೆ ಮಾತ್ರ ಇಂದಿಗೂ ಭರವಸೆಯಾಗಿಯೇ ಉಳಿದಿದೆ.

ತ್ರಾಸಿ – ಮರವಂತೆ ತೀರದ ಪಶ್ಚಿಮ ದಿಕ್ಕಿನಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿದ್ದ ಗೂಡಂಗಡಿ ಕಳೆದ ಕೆಲವು ತಿಂಗಳ ಹಿಂದಷ್ಟೇ ಕಂದಾಯ ಇಲಾಖೆ ಅಧಿಕಾರಿಗಳು ತೆರವು ಗೊಳಿಸಿದ್ದರು. ಇದೀಗ ಅದೇ ಸ್ಥಳದಲ್ಲಿ ಮತ್ತೆ ಪುನಃ ಗೂಡಂಗಡಿಗಳ ನಿರ್ಮಿಸುವ ಕಾರ್ಯ ನಡೆಯುತ್ತಿದೆ ಎಂಬ ದೂರು ಕೇಳಿ ಬಂದಿದೆ.

ಕ್ರಮಕ್ಕೆ ಆಗ್ರಹ

ಜಿಲ್ಲಾಡಳಿತ ಆದೇಶವನ್ನು ಗಾಳಿಗೆ ತೂರಿ ಅಲ್ಲಲ್ಲಿ ಜಾಗ ಸಮತಟ್ಟು ಮಾಡಿಕೊಂಡು ಗೂಡಂಗಡಿ ನಿರ್ಮಾಣಕ್ಕೆ ಯತ್ನಿಸುತ್ತಿರುವ ಬಗ್ಗೆ ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಇಲಾಖ, ಸ್ಥಳೀಯಾಡಳಿತ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಕೇಳಿ ಬಂದಿದೆ.

ಮುಂಡಪಳ್ಳ–ದೇಲಂಪಾಡಿ–ಕೆಜಿಎನ್ ರಸ್ತೆ: ಶಾಸಕ ಅಶ್ರಫ್ ಲೋಕಾರ್ಪಣೆ



ಕುಂಬಳೆ: ಕುಂಬಳೆ ಗ್ರಾಮ ಪಂಚಾಯತ್‌ನಲ್ಲಿ ನವೀಕರಿಸಿದ ಮುಂಡಪಳ್ಳ – ದೇಲಂಪಾಡಿ ಕೆಜಿಎನ್ ರಸ್ತೆಯನ್ನು ಮಂಜೇಶ್ವರ ಶಾಸಕ ಎ.ಕೆ. ಎಂ.ಅಶ್ರಫ್ ಶುಕ್ರವಾರ ಉದ್ಘಾಟಿಸಿ ಲೋಕಾರ್ಪಣೆಗೊಳಿಸಿದರು. ಈ ರಸ್ತೆಯನ್ನು ಶಾಸಕರ ಆಸ್ತಿ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಲಾಗಿದ್ದು 20 ಲಕ್ಷ ರೂ.ಗಳನ್ನು ವೆಚ್ಚ ಮಾಡಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ.

ಗ್ರಾ.ಪಂ.ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ.ಉಪಾಧ್ಯಕ್ಷ ಎ.ಬಲ್ಕೀಸ್, ಸ್ಥಾಯೀ ಸಮಿತಿ ಅಧ್ಯಕ್ಷ ಎ.ಕೆ. ಆರೀಫ್, ಜಿ.ಪಂ. ಸದಸ್ಯ ಆರ್ಝೀರ್ಝ್ ಕಳತ್ತೂರು, ಕಾಸರಗೋಡು ಬ್ಲಾಕ್ ಪಂ. ಅಭಿವೃದ್ಧಿ ವ್ಯವಹಾರಗಳ ಸ್ಥಾಯೀ ಸಮಿತಿ ಅಧ್ಯಕ್ಷ ಅಶ್ರಫ್ ಕಾರ್ಲೆ, ಮಂಜೇಶ್ವರ ಬ್ಲಾಕ್ ಪಂಚಾಯತ್ ಸದಸ್ಯ ಆರ್ಝೀರ್ಝ್ ಮರಿಕೆ, ಪಂ. ಸದಸ್ಯರಾದ ಎಂ.ಸಬೂರ, ಫರ್ಝಲ್ ಪೇರಾಲ್, ಗ್ರಾ.ಪಂ.ಯೋಜನಾ ಸಮಿತಿ ಉಪಾಧ್ಯಕ್ಷ ಬಿ.ಎನ್. ಮುಹಮ್ಮದಲಿ, ಅಶ್ರಫ್ ಕೊಡ್ಯಮೆ, ಮುಹಮ್ಮದ್ ಮಮ್ಮುಟ್ಟಿ ಮುಳಿಯಡ್ಕ, ಅಬ್ದು ಪೆಲ್ತಡ್ಕ, ಲತೀಫ್ ಮುಳಿಯಡ್ಕ, ಐ.ಸಿ.ಅಬ್ದು, ಶಮ್ಮು ಮುಳಿಯಡ್ಕ ಮತ್ತಿತರರು ಮಾತನಾಡಿದರು.

ಮಾ. 24: ಡಿಸಿಸಿ, ಡಿಎಲ್‌ಆರ್‌ಸಿ ಸಭೆ

ಮಂಗಳೂರು: ಲೀಡ್ ಬ್ಯಾಂಕ್ ವತಿಯಿಂದ ಜಿಲ್ಲಾ ಸಮಾಲೋಚನಾ ಸಮಿತಿ(ಡಿ.ಸಿ.ಸಿ) ಮತ್ತು ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ (ಡಿ.ಎಲ್.ಆರ್.ಸಿ) ಸಭೆ ಮಾರ್ಚ್ 24 ರಂದು ಲೋಕಸಭಾ ಸದಸ್ಯ ಕ್ಯಾ.ಬ್ರಿಜೇಶ್ ಚೌಟ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 10.30 ಕ್ಕೆ ದಕ್ಷಿಣ ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿ.ಸಿ.ರೋಡ್ ರೋಟರಿ ಭವನ: 'ಶಕ್ತಿಪಥ' ಮಹಿಳಾ ಉದ್ಯಮಿಗಳ ಕಾರ್ಯಾಗಾರ



ಬಂಟ್ವಾಳ: ಟಿ.ಎ.ಪೈ ಮೆನೇಜ್‌ಮೆಂಟ್ ಇನ್‌ಸ್ಟಿಟ್ಯೂಷನ್ ಹಳೆ ವಿದ್ಯಾರ್ಥಿ ಸಂಘ ಮಣಿಪಾಲ, ಟಿಎಪೈ ಮೆನೇಜ್‌ಮೆಂಟ್ ಇನ್‌ಸ್ಟಿಟ್ಯೂಷನ್, ಸೆಲ್ಕೋ ಸೋಲಾರ್ ಲೈಟ್ ಬೆಂಗಳೂರು, ರೋಟರಿ ಚಾರಿಟೇಬಲ್ ಟ್ರಸ್ಟ್ ಬಿ.ಸಿ. ರೋಡ್ ಮತ್ತು ರೋಟರಿ ಕ್ಲಬ್ ಬಂಟ್ವಾಳ ಇವರ ಸಹಕಾರದಲ್ಲಿ 'ಶಕ್ತಿಪಥ' ಮಹಿಳಾ ಉದ್ಯಮಿಗಳ ಕಾರ್ಯಾಗಾರ ಬಿ.ಸಿ.ರೋಡಿನ ರೋಟರಿ ಭವನ ನಡೆಯಿತು.

ಬಂಟ್ವಾಳ ರೋಟರಿ ಕ್ಲಬ್ ಅಧ್ಯಕ್ಷ ಬಸ್ತಿ ಮಾಧವ ಶೆಣೈ ಕಾರ್ಯಾಗಾರ ಉದ್ಘಾಟಿಸಿ, ಜೀವನೋಪಾಯ , ಸಮುದಾಯ ಆಧಾರಿತ ಉದ್ಯಮಗಳ ಬಲಪಡಿಸುವಲ್ಲಿ ತಳಮಟ್ಟದ ಸಂಸ್ಥೆಗಳು , ಮೂಲಸೌಕರ್ಯ, ಶಾಶ್ವತ ಆರ್ಥಿಕ ಚಟುವ ಟಿಕೆಗಳ ಸಾಧ್ಯವಾಗಿಸಲು ಇಂತಹ ಕಾರ್ಯಾಗಾರ ಸಹಕಾರಿ ಎಂದರು. ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷ ನಾರಾಯಣ ಹೆಗಡೆ ಮಹಿಳಾ ಉದ್ಯಮಶೀಲತೆ , ನಾಯಕತ್ವದ ವಿಷಯ ಮಂಡಿಸಿದರು. ಅತಿಥಿಯಾಗಿದ್ದ ಬಿ.ಸಿ.ರೋಡಿನ ನ್ಯಾಯವಾದಿ ಶೈಲಜಾ ರಾಜೇಶ್, ಮಹಿಳೆಯರು ಸ್ವಾವಲಂಬಿ ಯಾಗಿ ಬದುಕುವುದೇ ಸಮಾಜಕ್ಕೆ ನೀಡುವ ಕೊಡುಗೆಯಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಜನಶಿಕ್ಷಣ ಟ್ರಸ್ಟ್‌ನ ಶೀನ ಶೆಟ್ಟಿ ಮಾತನಾಡಿ, ಕಸಮುಕ್ತ ಪ್ರದೇಶವನ್ನಾಗಿಸುವತ್ತ ನಾವು ಮುಂದಡಿ ಇಡಬೇಕು. ಸೋಲಾರ್ ಕ್ಷೇತ್ರದಲ್ಲಿ ಸೆಲ್ಕೋ ಸಂಸ್ಥೆ ಸಮಾಜಮುಖಿ ಕಾರ್ಯ ಗಳನ್ನು ಶ್ಲಾಘಿಸಿದರು. ಸರಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಎಲ್ಲರು ಕೈ ಜೋಡಿಸಬೇಕೆಂದರು. ಟಿಎಪೈ ಮೆನೇಜ್ಮೆಂಟ್ ಇನ್‌ಸ್ಟಿಟ್ಯೂಷನ್ ಹಳೆ ವಿದ್ಯಾರ್ಥಿ ಸಂಘದ ಪ್ರೊಫೆಸರ್ ಶ್ರುತಿ ಮಯೂರ್ ಉಪಸ್ಥಿತರಿದ್ದರು.

ಸೆಲ್ಕೋ ಸಂಸ್ಥೆಯ ಉಪ ಮಹಾಪ್ರಬಂಧಕ ಗುರುಪ್ರಕಾಶ್ ಶೆಟ್ಟಿ ಪ್ರಸ್ತಾವನೆಗೈದು, ಸ್ವಾಗತಿಸಿದರು. ಚೈತ್ರಾ ನಿರೂಪಿಸಿದರು.

ಕೊಡಗು ವಿವಿ ಕುಲಪತಿ ಪ್ರೊ. ಅಶೋಕ ಸಂಗಪ್ಪಗೆ ವಿಜ್ಞಾನ ಪುರಸ್ಕಾರದ ಗೌರವ



ಮಡಿಕೇರಿ: ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ, ಚಾಮರಾಜನಗರ ವಿಶ್ವವಿದ್ಯಾಲಯ, ಹಾಗೂ ಕೊಡಗು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಹಾವೇರಿ ವಿಶ್ವವಿದ್ಯಾಲಯದವರು ಆಯೋಜಿಸಿದ್ದ '18ನೇ ಕನ್ನಡ ವಿಜ್ಞಾನ ಸಮ್ಮೇಳನ' ದಲ್ಲಿ ಕೊಡಗು ವಿವಿ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅವರಿಗೆ ಭಾರತರತ್ನ ಡಾ. ಸರ್.ಎಂ.ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ –2026 ನೀಡಿ ಗೌರವಿಸಲಾಗಿದೆ.

ಆಲೂರರವರು ಸರ್ಕಾರಿ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮಿತಿಗಳು ಮತ್ತು ಮಿಷನ್'ಗಳಲ್ಲಿ ಅಧ್ಯಕ್ಷರಾಗಿ ಹಾಗೂ ಸದಸ್ಯರಾಗಿ ಕಾರ್ಯನಿರ್ವಹಿಸಿ, ವಿಶ್ವ ಆಹಾರ ಸಂಸ್ಥೆ, ವಿಶ್ವ ಬ್ಯಾಂಕ್ ಸೇರಿದಂತೆ ಹಲವಾರು ಅಂತಾರಾಷ್ಟ್ರೀಯ ಸಂಸ್ಥೆಗಳ ಯೋಜನೆಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರವಹಿಸಿರುವ, ಐವತ್ತಕ್ಕೂ ಅಧಿಕ ದೇಶಗಳಿಗೆ ಭೇಟಿ ನೀಡಿ ಜಾಗತಿಕ ಮಟ್ಟದಲ್ಲಿ ಕೃಷಿ ಮತ್ತು ಅಭಿವೃದ್ಧಿ ಕ್ಷೇತ್ರಗಳಿಗೆ ಅಮೂಲ್ಯ ಕೊಡುಗೆ ನೀಡಿರುವ, ಕೃಷಿ ಕ್ಷೇತ್ರ ಮತ್ತು ತತ್ಸಂಬಂಧ ಸಂಶೋಧನಾ ಕಾರ್ಯಗಳನ್ನು ಸ್ಮರಿಸಿ ಅವರಿಗೆ ಸ್ವದೇಶಿ ವಿಜ್ಞಾನ ಆಂದೋಲನದ ವತಿಯಿಂದ 2026ನೇ ಸಾಲಿನ ಡಾ.ಸರ್.ಎಂ.ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ಪ್ರದಾನ ಮಾಡಲಾಯಿತು.

ಗೌರವ

ಹಾವೇರಿ ವಿವಿ ಆಯೋಜಿಸಿದ್ದ '18ನೇ ಕನ್ನಡ ವಿಜ್ಞಾನ ಸಮ್ಮೇಳನದಲ್ಲಿ ಕೊಡಗು ವಿವಿ ಕುಲಪತಿ ಪ್ರೊ.ಅಶೋಕ ಸಂಗಪ್ಪ ಆಲೂರ ಅವರಿಗೆ ಭಾರತ ರತ್ನ ಡಾ. ಸರ್.ಎಂ. ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ನೀಡಿ ಗೌರವಿಸಲಾಯಿತು.

ಅಂಗನವಾಡಿ ಕೇಂದ್ರದ ನೂತನ ಕಟ್ಟಡ ಕಾಮಗಾರಿಗೆ ಶಿಲಾನ್ಯಾಸ



ಬೆಳ್ತಂಗಡಿ: ಶಾಸಕ ಹರೀಶ್ ಪೂಂಜ ಮರೋಡಿ ಗ್ರಾಮದ ಮಾವಿನಕಟ್ಟೆ ಎಂಬಲ್ಲಿ ರೂ. 17.00 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಅಂಗನವಾಡಿ ಕೇಂದ್ರದ ನೂತನ ಕಟ್ಟಡ ಕಾಮಗಾರಿಗೆ ಶನಿವಾರ ಶಿಲಾನ್ಯಾಸ ನೆರವೇರಿಸಿದರು. ಈ ಸಂದರ್ಭ ಮಾಜಿ ತಾಂ. ಪಂ. ಮಾಜಿ ಸದಸ್ಯ ಜಯಂತ ಕೋಟ್ಯಾನ್, ಮರೋಡಿ ಪಂ. ಮಾಜಿ ಅಧ್ಯಕ್ಷ ರತ್ನಾಕರ್ ಬುಣ್ಣನ್ ಪದ್ಮಶ್ರೀ ಜೈನ್, ಬಾಲಕೃಷ್ಣ ಬಂಗೇರ, ಪಂ.ಮಾಜಿ ಸದಸ್ಯರಾದ ಯಶೋಧ, ಅಶೋಕ್ ಪೂಜಾರಿ, ಧನಲಕ್ಷ್ಮೀ, ಉಮಾವತಿ, ಉಮೇಶ್ ಸಾಲ್ಯಾನ್, ಅಂಗನವಾಡಿ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸುಜಿತ್ ಪೆರಾಡಿ, ಕಾರ್ಯದರ್ಶಿ ಅವಿನಾಶ್ ಶೆಟ್ಟಿ, ಪ್ರಮುಖರಾದ ಗಣೇಶ್ ಕರ್ಕೇರ, ಬಾಸ್ಕರ್ ಜೆ ಸಾಲಿಯಾನ್, ದೇವಾರಾಜ್ ಶೆಟ್ಟಿ ರವಿ ಕುಲಾಲ್, ಸುರೇಂದ್ರ ಬಲ್ಲಾಳ್, ವಾಸು ಪೂಜಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕರಾದ ಕಾತ್ಯಾಯಿನಿ, ಬಾಲವಿಕಾಸ ಅಧ್ಯಕ್ಷ ಯಶ್ವಿತಾ ಮೊದಲಾದವರಿದ್ದರು.

ಇಂದಿನಿಂದ ವಿ.ಕೆ.ಫರ್ನಿಚರ್ –ಇಲೆಕ್ಟ್ರಾನಿಕ್ಸ್ ವಾರ್ಷಿಕ ಶೇ.50 ದರ ಕಡಿತ ಮಾರಾಟ

ಮಂಗಳೂರು: ವಿ.ಕೆ.ಫರ್ನಿಚರ್ ಮತ್ತು ಎಲೆಕ್ಟ್ರಾನಿಕ್ಸ್–ಯೆಯ್ಯಾಡಿ, ಕಲ್ಲಾಪು–ತೊಕ್ಕೊಟ್ಟು ಉರ್ವಾ–ಚಿಲಿಂಬಿ ಮತ್ತು ವಾಮಂಜೂರಿನಲ್ಲಿ ಸೈಂಟ್ ಜೋಸೆಫ್ ಕಾಲೇಜ್ ಬಳಿ ಮತ್ತು ವಿ.ಕೆ.ಲಿವಿಂಗ್ ಕಾನ್ಸೆಪ್ಟ್– ಲೇಡಿಹಿಲ್‌ನಲ್ಲಿ ವಾರ್ಷಿಕ ಕ್ಲಿಯರೆನ್ಸ್ ಸೇಲ್ ಹಮ್ಮಿಕೊಳ್ಳಲಾಗಿದ್ದು ವ್ಯಾಪಕ ಶ್ರೇಣಿಯ ಪೀಠೋಪಕರಣಗಳು ಮತ್ತು ಎಲೆಕ್ಟ್ರಾನಿಕ್‌ಗಳ ಮೇಲೆ 50%ದ ವರೆಗೆ ದರಕಡಿತ ಲಭ್ಯವಿದೆ.

ಗುಣಮಟ್ಟದ ವಸ್ತುಗಳು ಮಿತ ದರದಲ್ಲಿ ಲಭ್ಯ

ವಿ.ಕೆ.ಫರ್ನಿಚರ್‌ನಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ವಿನ್ಯಾಸದ ಉತ್ತಮ ಗುಣಮಟ್ಟದ, ಯೂನಿಕ್ ಡಿಸೈನ್ಸ್ ಯೂನಿಕ್ ಕಲೆಕ್ಷನ್ಸ್‌ನ ಬೆಡ್‌ರೂಮ್ ಸೆಟ್, ವಾರ್ಡ್‌ರೋಬ್, ಡೈನಿಂಗ್ ಸೆಟ್, ಲಿವಿಂಗ್ ರೂಮ್ ಸೋಫಾ ಸೆಟ್, ಸ್ಟಡಿ ಟೇಬಲ್, ಮೊಡ್ಯುಲರ್ ಕಿಚನ್ ಮತ್ತು ಹೈ ಕ್ಲಾಸ್ ಕಚೇರಿ ಫರ್ನಿಚರ್ ಲಭ್ಯವಿವೆ. ಗ್ರಾಹಕರ ಅವಶ್ಯಕತೆಗಳಿಗೆ ಅನುಗುಣ ಕಸ್ಟಮೈಸ್ ಮಾಡಬಹುದಾದ ಫರ್ನಿಚರ್, ಜೊತೆಗೆ ರೆಡಿಮೇಡ್ ಉತ್ಕೃಷ್ಟ ಗುಣಮಟ್ಟದ ವಸ್ತುಗಳು ಮಿತ ದರದಲ್ಲಿ ಲಭ್ಯವಿವೆ.



ಫರ್ನಿಚರ್ ಬೆಲೆಗಳು ಪಾರದರ್ಶಕವಾಗಿದ್ದು ಎಲ್ ಕಾರ್ನರ್ ಸೋಫಾ ರೂ.28,999, ಕುಶನ್ 3+1+1 ಸೋಫಾ ರೂ.21,999, ಮರದ 3+1+1 ಸೋಫಾ ರೂ. 19,499, ಡೈನಿಂಗ್ ಸೆಟ್ 6 ಸೀಟ್ ರೂ.23,999, ಡೈನಿಂಗ್ ಸೆಟ್ 4ಸೀಟ್ ರೂ.17,999, ಬೆಡ್‌ರೂಮ್ ಸೆಟ್ ರೂ.28,999, ಸಿಂಗಲ್ ಕಾಟ್ ರೂ.10,999, 3 ಡೋರ್ ವಾರ್ಡ್‌ರೋಬ್ ರೂ.9,999, 2 ಡೋರ್ ವಾರ್ಡ್‌ರೋಬ್ ರೂ.7,999, ವಾಲ್ ಟಿವಿ ಯುನಿಟ್ ರೂ.6,999 , ಬೇಸ್ ಟಿವಿ ಯುನಿಟ್ ರೂ.6,499 , ಕ್ರಾಕರಿ ಯುನಿಟ್ ರೂ.8,799, ಡ್ರೆಸ್ಸಿಂಗ್ ಟೇಬಲ್ ರೂ.4,199, ಕಂಪ್ಯೂಟರ್ ಟೇಬಲ್ ರೂ.3,999, ಸೆಂಟರ್ ಟೇಬಲ್ ರೂ.2,499, ರಾಕಿಂಗ್ ಚೇರ್ ರೂ.7,599ರಿಂದ ಪ್ರಾರಂಭಗೊಳ್ಳುತ್ತಿದೆ.

ಎಲೆಕ್ಟ್ರಾನಿಕ್ಸ್ ಉತ್ಪನ್ನಗಳಾದ 1 ಟನ್ ಎಸಿ 3 ಸ್ಟಾರ್ ರೂ.23,499, 1.5 ಟನ್ ಎಸಿ 3 ಸ್ಟಾರ್ ರೂ. 25,599, 32 ಸ್ಮಾರ್ಟ್ ಟಿವಿ ರೂ.12,899, 43ಎಫ್ ಹೆಚ್‌ಡಿ ಟಿವಿ ರೂ.16,899, 55 4ಕೆ ಯುಹೆಚ್‌ಡಿ ಟಿವಿ ರೂ.33,999, 65 4ಕೆ ಯುಹೆಚ್‌ಡಿ ಟಿವಿ ರೂ.53,999, ಸೈಡ್ ಬೈ ಸೈಡ್ ರೆಫ್ ರೂ.63,999, ಡಬಲ್ ಡೋರ್ ರೆಫ್ ರೂ.23,999–, ಸಿಂಗಲ್ ಡೋರ್ ರೆಫ್ ರೂ.12,999, 8 ಕೆ.ಜಿ. ಫ್ರಂಟ್ ಲೋಡ್ ವಾಶಿಂಗ್ ಮೆಶಿನ್ ರೂ.31,999, 6 ಕೆ.ಜಿ. ಟಾಪ್ ಲೋಡ್ ವಾಶಿಂಗ್ ಮೆಶಿನ್ ರೂ.– 13,999, 7ಕೆ.ಜಿ ಸೆಮಿ ಆಟೋಮೆಟಿಕ್ ವಾಶಿಂಗ್ ಮೆಶಿನ್ ರೂ.10,999, ಇನ್ವರ್ಟರ್ ರೂ.16,499, ಚಿಮಣಿ+ ಕುಕ್‌ಟಾಪ್ ರೂ.12,999ರಿಂದ ಪ್ರಾರಂಭಗೊಳ್ಳುತ್ತದೆ.

ಕಡಿಮೆ ದರದಲ್ಲಿ ಲಭ್ಯ

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬ್ರ್ಯಾಂಡ್‌ಗಳ ಎಲೆಕ್ಟ್ರಾನಿಕ್ಸ್ ವಸ್ತುಗಳು ಟಿವಿ, ಫ್ರಿಜ್, ಎಸಿ, ವಾಶಿಂಗ್ ಮೆಶಿನ್, ವಾಟರ್ ಹೀಟರ್, ವಾಟರ್ ಪ್ಯೂರಿಫೈಯರ್, ಚಿಮಿಣಿ, ಕೂಲರ್, ಫ್ಯಾನ್, ಮಿಕ್ಸಿ ಮೈಕ್ರೊವೇವ್, ಐರನ್ ಬಾಕ್ಸ್, ಡೆಕೋರೇಟಿವ್ ಹೌಸ್ ಹೋಲ್ಡ್ ವಸ್ತುಗಳು ಲಭ್ಯವಿವೆ. ವಿವಿಧ ಬ್ರಾಂಡ್‌ಗಳ ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್ ಮತ್ತು ಇತರ ಎಲೆಕ್ಟ್ರಾನಿಕ್ ಉತ್ಪನ್ನಗಳು ಅತ್ಯಂತ ಕಡಿಮೆ ದರದಲ್ಲಿ ಲಭ್ಯವಿದೆ.

ಅಗ್ಗದ ದರದಲ್ಲಿ ಖರೀದಿಸಬಹುದು

ಶೋರೂಮ್ ಡ್ಯೂರೋಫ್ಲೆಕ್ಸ್ ಮ್ಯಾಟ್ರೆಸ್‌ಗಳ ಎಕ್ಸ್‌ಕ್ಲೂಸಿವ್ ಔಟ್‌ಲೆಟ್ ಆಗಿದೆ. ಮನೆ, ಕಚೇರಿ, ಶಾಲೆ–ಕಾಲೇಜು, ಮಸೀದಿ, ಚರ್ಚ್ ಮತ್ತು ದೇವಾಲಯಗಳಿಗೆ ಅಗತ್ಯವಿರುವ ಒಳಾಂಗಣದ ಫರ್ನಿಚರ್, ಇಂಟೀರಿಯರ್ ವಸ್ತುಗಳು, ಗ್ರಹೋಪಯೋಗಿ ಫರ್ನಿಚರ್, ಮೊಬೈಲ್, ಲ್ಯಾಪ್‌ಟಾಪ್, ಕಿಚನ್ ವಸ್ತುಗಳು, ಮತ್ತು ಡೆಕೊರೇಟಿವ್ ಐಟಂಗಳನ್ನು ಅಗ್ಗದ ದರದಲ್ಲಿ ಖರೀದಿಸಬಹುದು. ಬಜಾಜ್ ಫೈನಾನ್ಸ್ ಎಚ್‌ಡಿಬಿ, ಎಚ್‌ಡಿಎಫ್‌ಸಿ, ಐಡಿಎಫ್‌ಸಿ , ಇತರ ಫೈನಾನ್ಸ್ ಸಂಸ್ಥೆಗಳ ಮೂಲಕ ತಿಂಗಳ ಕಂತುಗಳಲ್ಲಿ ವಸ್ತುಗಳ ಖರೀದಿಸಲು ಅವಕಾಶವಿದೆ.

ಶೋರೂಮ್‌ಗಳು ವಿಸ್ತಾರವಾಗಿದ್ದು ಸಮರ್ಪಕವಾದ ಪಾರ್ಕಿಂಗ್ ಸ್ಥಳವಿದೆ. ಶೋರೂಮ್‌ಗಳು ಭಾನುವಾರವೂ ತೆರೆದಿರುತ್ತವೆ. ವಿವರಗಳಿಗಾಗಿ www.vkfurnitureandelectronics.com ಅನ್ನು ಸಂಪರ್ಕಿಸಬಹುದು.

ಸುತ್ತ ಮುತ್ತ

ಹನುಮಗಿರಿ: ಸವಣೂರಿನ ಗ್ರಾಮ ಸಮಿತಿ ಅಧ್ಯಕ್ಷರಾಗಿ ಮಹೇಶ್



ಸವಣೂರು: ಹನುಮಗಿರಿ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ 2026ನೇ ಏಪ್ರಿಲ್‌ನಲ್ಲಿ ನಡೆಯಲಿರುವ ಬ್ರಹ್ಮಕಲಶೋತ್ಸವದ ಪ್ರಯುಕ್ತ ಹಮ್ಮಿಕೊಳ್ಳಲಾಗಿರುವ ಶ್ರೀ ರಾಮ ಹನುಮ ಜ್ಯೋತಿ ಯಾತ್ರೆ ಹಾಗೂ ಶ್ರೀ ರಾಮ ತಾರಕ ಜಪ ದೀಕ್ಷೆಯ ಸಲುವಾಗಿ ಸವಣೂರು ಪಂಚಾಯತ್ ವ್ಯಾಪ್ತಿಯ ಭಕ್ತಾದಿಗಳ ಸಭೆ ಹಾಗೂ ಗ್ರಾಮ ಸಮಿತಿ ರಚನೆಯ ಕುರಿತು ಸವಣೂರು ಯುವಕ ಮಂಡಲದ ಯುವಸಭಾಭವನದಲ್ಲಿ ನಡೆಯಿತು. ಸವಣೂರು ಗ್ರಾಮ ಸಮಿತಿಯ ಅಧ್ಯಕ್ಷರಾಗಿ ನ್ಯಾಯವಾದಿ ಮಹೇಶ್ ಕೆ. ಸವಣೂರು, ಪ್ರಧಾನ ಕಾರ್ಯದರ್ಶಿಯಾಗಿ ತಾರನಾಥ ಕಾಯರ್ಗ ಅವರನ್ನು ಆಯ್ಕೆ ಮಾಡಲಾಯಿತು. ಜಪ ಯಜ್ಞ ಸಮಿತಿ ಗ್ರಾಮ ಸಂಚಾಲಕರಾಗಿ ಗಿರಿಶಂಕರ ಸುಲಾಯ, ಸಹಸಂಚಾಲಕರಾಗಿ ಭರತ್ ರೈ ಪಾಲ್ತಾಡಿ, ಲಿಂಗಪ್ಪ ರೈ ಚೆಂಬುತ್ತೋಡಿ, ಶ್ರೀಧರ ಇಡ್ಯಾಡಿ, ರಥಯಾತ್ರೆ ಗ್ರಾಮ ಸಂಚಾಲಕರಾಗಿ ಚೇತನ್ ಕೋಡಿಬೈಲು, ಸಹಸಂಚಾಲಕರಾಗಿ ಪ್ರಭಾಕರ ಶೆಟ್ಟಿ ನಡುಬೈಲು, ಲಕ್ಷೋತ್ತರ ನಾರಿಕೇಲ ಗ್ರಾಮ ಸಂಚಾಲಕರಾಗಿ ಗಂಗಾಧರ ಪೆರಿಯಡ್ಕ, ಸಹಸಂಚಾಲಕರಾಗಿ ಪ್ರವೀಣ್ ಚೆನ್ನಾವರ, ಪುಟ್ಟಣ್ಣ ಗೌಡ ಬದಿಯಡ್ಕ, ರಾಮಕೃಷ್ಣ ಪ್ರಭು ಸವಣೂರು, ಭಜನಾ ಸಂಕೀರ್ತನ ಗ್ರಾಮ ಸಂಚಾಲಕರಾಗಿ ರಾಜೇಶ್ ಇಡ್ಯಾಡಿ, ಸಹಸಂಚಾಲಕರಾಗಿ ತಾರನಾಥ ಬೊಳಿಯಾಲ, ಶಿವರಾಮ ಗೌಡ ಮೆದು, ಜಯಶ್ರೀ ಕುಚ್ಚೆಜಾಲು, ಮಹಿಳಾ ಸಮಿತಿ ಸಂಚಾಲಕರಾಗಿ ಇಂದಿರಾ ಬಿ.ಕೆ., ಸಹ ಸಂಚಾಲಕರಾಗಿ ಆಶಾ ರೈ ಕಲಾಯಿ, ಸಾಮಾಜಿಕ ಜಾಲತಾಣ ಸಂಚಾಲಕರಾಗಿ ಸತೀಶ್ ಬಲ್ಯಾಯ ಅವರನ್ನು ಆಯ್ಕೆ ಮಾಡಲಾಯಿತು. ಬ್ರಹ್ಮಕಲಶೋತ್ಸವ ನಗರ ಗ್ರಾಮ ಸಮಿತಿ ನಗರ ಸಂಚಾಲಕ ಸಾಜ ರಾಧಾಕೃಷ್ಣ ಆಳ್ವ ಅಧ್ಯಕ್ಷತೆ ವಹಿಸಿದರು. ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಚುತ್ತ ಮೂಡೆತ್ತಾಯ ಮಾಹಿತಿ ನೀಡಿದರು. ಸಭೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳಾದ ರಾಕೇಶ್ ರೈ ಕೆಡೆಂಜಿ, ದಿನೇಶ್ ಮೆದು, ಸುರೇಶ್ ರೈ ಸೂಡಿಮುಳ್ಳು ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮುದಾಯಕ್ಕೆ ಶೇ.2 ಮೀಸಲಾತಿ ಜಾರಿಗೊಳಿಸಿ: ಆಗ್ರಹ

ಮಂಗಳೂರು: ಆದಿದ್ರಾವಿಡ ಸಮುದಾಯದ ಬಗ್ಗೆ ಸರಕಾರ ತಕ್ಷಣ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಪರಿಶಿಷ್ಟ ಜಾತಿಯ ಆದಿದ್ರಾವಿಡ ಉಪಜಾತಿ 'ಸಾರಮಾಣಿ ಸಮಾಜ' ಎಂದು ಗುರುತಿಸಿ ಜಾತಿ ಪ್ರಮಾಣ ಪತ್ರ ನೀಡಬೇಕು ಹಾಗೂ ನಮ್ಮ ಸಮುದಾಯಕ್ಕೆ ಶೇ.2ರಷ್ಟು ಮೀಸಲಾತಿ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಆದಿದ್ರಾವಿಡ ಸಮಾಜ ಸೇವಾ ಸಂಘ ಒತ್ತಾಯಿಸಿದೆ.

ರಾಜ್ಯ ಸರಕಾರ ಒಳಮೀಸಲಾತಿ ಜಾರಿಗೊಳಿಸಿದ್ದು ಇದರಲ್ಲಿ ಅನೇಕ ಗೊಂದಲಗಳಿವೆ. ಜತೆಗೆ 'ಆದಿದ್ರಾವಿಡ' ಜಾತಿ ಅಲ್ಲ, ಅದು ಜಾತಿಗಳ ಗುಂಪು ಎಂದು ನ್ಯಾಯ ಮೂರ್ತಿ ನಾಗಮೋಹನ ದಾಸ್ ಅವರು ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ನಾವು ಆಕ್ಷೇಪ ವ್ಯಕ್ತಪಡಿಸಿದ್ದೇವೆ. ಅನೇಕ ದಶಕಗಳಿಂದ ಸರಕಾರ ನಮ್ಮ ಸಮುದಾಯಕ್ಕೆ ಆದಿದ್ರಾವಿಡ ಪ್ರಮಾಣಪತ್ರ ನೀಡಿದೆ. ರಾಜ್ಯದ ಆರು ಜಿಲ್ಲೆಗಳಲ್ಲಿ ನಮ್ಮ ಜನಸಂಖ್ಯೆ 8 ಲಕ್ಷ ಇದೆ. ಆದಿದ್ರಾವಿಡ ಜಾತಿಗಳ ಗುಂಪು ಎಂಬ ಹೇಳಿಕೆಯಿಂದ ಇಡೀ ಸಮುದಾಯಕ್ಕೆ ಬೇಸರವಾಗಿದೆ ಎಂದು ಕರ್ನಾಟಕ ರಾಜ್ಯ ಆದಿದ್ರಾವಿಡ ಸಮಾಜ ಸೇವಾ ಸಂಘದ ಸಲಹೆಗಾರ ಅನಿಲ್‌ಕುಮಾರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಸಂಘದ ಉಪಾಧ್ಯಕ್ಷ ಮೋಹನ್, ಮಾಜಿ ಜಿಲ್ಲಾಧ್ಯಕ್ಷ ಶಿವರಾಜ್ ಪಿ.ಬಿ., ರಾಜ್ಯ ವಕ್ತಾರ ಪ್ರೇಮನಾಥ್ ಬಳ್ಳಾಲ್‌ಬಾಗ್, ಸೂರಜ್ ಬಳ್ಳಾಲ್‌ಬಾಗ್, ಎ.ಕೆ. ವಿಜಯ್ ಕೋಕಿಲ ಇದ್ದರು.

ಮಡಿಕೇರಿ ಹಿಂದೂ ಮಲಯಾಳಿ ಸಂಘದ ಪದಾಧಿಕಾರಿಗಳ ಆಯ್ಕೆ

ಮಡಿಕೇರಿ: ಮಡಿಕೇರಿ ಹಿಂದೂ ಮಲಯಾಳಿ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎಸ್.ರಮೇಶ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ವಾರ್ಷಿಕ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿಯಾಗಿ ದಿನೇಶ್ ನಾಯರ್ ಇ.ಬಿ, ಖಜಾಂಚಿಯಾಗಿ ದಿನೇಶ್ ಎಂ.ಎಸ್, ಉಪಾಧ್ಯಕ್ಷರಾಗಿ ಪ್ರಮೋದ್ ಟಿ.ಆರ್, ಗೌರವಾಧ್ಯಕ್ಷರಾಗಿ ಧರ್ಮೇಂದ್ರ ಕೆ.ವಿ, ಕಾರ್ಯದರ್ಶಿಯಾಗಿ ಸಂದೀಪ್ ಎಸ್., ಸಹ ಕಾರ್ಯದರ್ಶಿ ವಸಂತಕುಮಾರ್ (ಮನು), ಸಹ ಖಜಾಂಚಿ ಹರೀಶ್ ಸಿ.ಕೆ, ಸಂಘಟನಾ ಕಾರ್ಯದರ್ಶಿ ಮೋಹನ್ ಕೆ.ಕೆ, ಸಹ ಸಂಘಟನಾ ಕಾರ್ಯದರ್ಶಿ ಪ್ರಭಾಕರ್ ಸಿ.ಕೆ, ಕಚೇರಿ ಕಾರ್ಯದರ್ಶಿಯಾಗಿ ಶಿವನ್ ಕೆ.ಪಿ, ಪ್ರಚಾರ ಸಮಿತಿಗೆ ಸುಬ್ರಮಣಿ ಪಿ.ವಿ, ಗೋಪಿನಾಥ್ ಟಿ.ವಿ, ಮೀಡಿಯಾ ವಕ್ತಾರರಾಗಿ ಅಶೋಕ್ ಹೆಚ್.ಪಿ, ಯುವ ಘಟಕದ ಅಧ್ಯಕ್ಷರಾಗಿ ಅರವಿಂದ್ ಆರ್, ಉಪಾಧ್ಯಕ್ಷರಾಗಿ ಮುರಳಿ ಕೆ.ಆರ್, ಕಾರ್ಯದರ್ಶಿಯಾಗಿ ರದೀಶ್ ಕೆ.ಆರ್, ಶ್ರದ್ಧಾಂಜಲಿ ಸಮಿತಿ ಉಸ್ತುವಾರಿಗಳಾಗಿ ಪ್ರಕಾಶ್ (ಉಣ್ಣಿ), ವಿಜಯ್ ಕುಮಾರ್ ಪಿ, ರಮೇಶ್ ಎನ್, ಸದಸ್ಯತ್ವ ಅಭಿಯಾನದ ಉಸ್ತುವಾರಿಗಳಾಗಿ ರವಿ ಎಂ.ಪಿ, ಹರೀಶ್ ಕೆ.ಎ, ನಿರ್ದೇಶಕರಾಗಿ ಅನಿಲ್ ಕೆ.ಕೆ, ಸುಕುಮಾರನ್ ನಾಯರ್, ವಿನೋದ್ ಕುಮಾರ್, ಆನಂದ್ ವಿ.ಜಿ, ಸುನಿಲ್ ಎನ್.ಸಿ, ರಾಜೇಶ್ ಎಸ್, ರವಿ ಅಪ್ಪುಕುಟ್ಟನ್, ಉತ್ತಮನ್ ಪಿ.ಟಿ, ಕಣ್ಣನ್ ಮೇಕೇರಿ, ಚಂದ್ರನ್, ಪ್ರಭಾಕರ್ ಟಿ.ಬಿ, ಹಿರಿಯ ಸಲಹೆಗಾರರಾಗಿ ವಾಸುದೇವ ಟಿ.ಆರ್, ಸುಧೀರ್ ಟಿ.ಕೆ, ಗೌರವ ಸಲಹೆಗಾರರಾಗಿ ಉಣಿಕೃಷ್ಣನ್ ಪಿ.ಟಿ, ಕೆ.ವಿ.ಸುಬ್ರಮಣಿ, ಸಲಹೆಗಾರರಾಗಿ ಎನ್.ವಿ.ಉಣ್ಣಿಕೃಷ್ಣ, ಗಿರೀಶ್ ಆರಾಧನ, ಜಯನ್ ಭಾಗಮಂಡಲ, ಎ.ಎಂ.ಮೋಹನ್ ನಾಪೋಕ್ಲು ಹಾಗೂ ಟಿ.ಕೆ.ರಾಘವ ನಾಪೋಕ್ಲು ಆಯ್ಕೆಯಾದರು.

ಉಜಿರೆಯ ಶ್ರೀ ಜನಾರ್ದನ ಸ್ವಾಮಿಯ ಬ್ರಹ್ಮಕಲಶೋತ್ಸವದ ಸಂಭ್ರಮ | ಧಾರ್ಮಿಕ ಸಭೆ

ಮನಸ್ಸು ರಾಗದ್ವೇಷಗಳಿಂದ ಮುಕ್ತವಾಗಲಿ: ಒಡಿಯೂರು ಶ್ರೀ



ಬೆಳ್ತಂಗಡಿ: ರಾಗದ್ವೇಷಗಳು ತುಂಬಿದಲ್ಲಿ ಪ್ರೀತಿ ದಾರಿ ತಪ್ಪುತ್ತದೆ. ಅದನ್ನು ಮೀರಿದಾಗ ಮಾತ್ರ ನಾವು ಆದರ್ಶ ಬದುಕಿನಿಂದ ಬಾಳಬಹುದು. ಎಂದು ಒಡಿಯೂರಿನ ಶ್ರೀ ಗುರುದೇವದತ್ತ ಸಂಸ್ಥಾನದ ಗುರುದೇವಾನಂದ ಸ್ವಾಮೀಜಿ ನುಡಿದರು.

ಉಜಿರೆಯ ಶ್ರೀ ಜನಾರ್ದನ ಸ್ವಾಮಿಯ ಬ್ರಹ್ಮಕಲಶೋತ್ಸವದ ಪ್ರಯುಕ್ತ ಸುದರ್ಶನ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಧಾರ್ಮಿಕ ಸಭೆಯಲ್ಲಿ ಆಶೀರ್ವದಿಸಿದರು.

ವಿಶ್ವಾಸ ಮತ್ತು ಆತ್ಮವಿಶ್ವಾಸ ಎರಡೂ ಕರಾವಳಿ ಜನರ ಸಾಧನವಾಗಿದೆ. ವರ್ತಮಾನದಲ್ಲಿ ನಮ್ಮ ನಿರ್ಧಾರಗಳಲ್ಲಿ ನಾವುಗಟ್ಟಿಯಾಗಿ ನಿಂತರೆ ಭವಿಷ್ಯದಲ್ಲಿ ನಾವು ಯೋಚಿಸಿದ ಹಾಗೆ ಆಗುತ್ತದೆ. ರಾಜನಂತೆ ಬದುಕು ಸನ್ಯಾಸಿಯಂತೆ ಯೋಚಿಸಬೇಕು. ಯಾಕೆಂದರೆ ಸನ್ಯಾಸಿಯಂತೆ ತ್ಯಾಗ ಮಾಡಲು ಅವನಿಗೆ ಗೊತ್ತಿದ್ದರೆ ಅವನು ಎಲ್ಲಿದ್ದರೂ ರಾಜನಂತೆ ಬದುಕಲು ಸಾಧ್ಯವಾಗುತ್ತದೆ ಎಂದರು.

ಬ್ರಹ್ಮಕಲಶೋತ್ಸವದ ಸಮಿತಿಯ ಕಾರ್ಯಾಧ್ಯಕ್ಷ ಶಶಿಧರಶೆಟ್ಟಿ ಬರೋಡ ಮಾತಾನಾಡಿದರು. ಹಿರಿಯ ಸ್ವಯಂಸೇವಕ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮಾತನಾಡಿ, ಭಾರತ ಎಲ್ಲರನ್ನು ಒಂದೇ ಮನಸ್ಸಿನಲ್ಲಿ ಎಲ್ಲರೂ ಒಂದೇ ಎಂಬ ತತ್ವವನ್ನು ಸ್ವೀಕರಿಸಿದೆ. ಜಾತಿಯನ್ನು ದಾಟಿ ಗುಣದಿಂದದ ಮೇಲೆ ಬರುವ ಹಾಗೆ ಸಂಕಲ್ಪ ಮಾಡಬೇಕು ಮತ್ತು ಸಾಮರ್ಥ್ಯದಿಂದ ಬಾಳಬೇಕು. ಜಾತಿಯನ್ನು ಪರಿಗಣಿಸದೆ ಎಲ್ಲರೂ ಒಂದೇ ಎಂಬ ಸಮಾನತೆಯ ಭಾವನೆಯಲ್ಲಿ ಬದುಕಿದರೆ ಮಾತ್ರ ಜೀವನ ಆಶಾವಾದಿಯ ಮತ್ತು ಸಮಾನತೆ ಹಾದಿಯತ್ತ ಸಾಗುತ್ತದೆ ಎಂದರು.

ಭಗವದ್ಗೀತೆಯನ್ನು ಎಲ್ಲರ ಮನೆಯಲ್ಲಿ ಇಡುವ ಸಂಕಲ್ಪ ಮಾಡಬೇಕು. ಮನೆ ಮಂದಿಯಲ್ಲ ಒಟ್ಟಿಗೆ ಕೂತು ಶ್ಲೋಕ, ರಾಮಾಯಣ ಮತ್ತು ಮಹಾಭಾರತದ ಸುದೀರ್ಘವಾದ ಸಂವಾದವನ್ನು ಮಾಡಬೇಕು ಮತ್ತು ಅದರ ಜೊತೆಗೆ ತಮ್ಮನ್ನು ತಾವು ತೊಡಗಿಸಿಕೊಂಡಲ್ಲಿ ಮಾತ್ರ ಧಾರ್ಮಿಕತೆಯ ಬಗೆಗೆ ಎಲ್ಲರಿಗೂ ಅರಿವು ಮೂಡುವುದು ಎಂದರು.

ಸಂಸದ ಬ್ರಿಜೇಶ್‌ಚೌಟ ಅವರು ಮಾತನಾಡಿ, ಮಧ್ಯಪ್ರಾಚ್ಯ ದೇಶಗಳಲ್ಲಿ ದ.ಕ. ಜಿಲ್ಲೆಯ ತುಂಬಾ ಜನರು ಬದುಕು ಕಟ್ಟಿಕೊಳ್ಳಲು ಅಲ್ಲಿ ನೆಲೆಸಿದ್ದಾರೆ ಆದರೆ ಈಗ ಆತಂಕದಲ್ಲಿ ಜೀವಿಸುತ್ತಿದ್ದಾರೆ. ಆದಷ್ಟು ಬೇಗ ಎಲ್ಲರಮನದಲ್ಲೂ ಶಾಂತಿಯ ಕಹಳೆಮೊಳಗಲಿ, ಮತ್ತು ಯುದ್ಧ ಮಾಡುತ್ತಿರುವವರಿಗೆ ಸದ್ಬುದ್ಧಿಯನ್ನು ಭಗವಂತ ಕೊಡಲಿ ಎಂದರು. ಕಾರ್ಯಕ್ರಮದಲ್ಲಿ ಅಳದಂಗಡಿ ಅರಮನೆ ಡಾ. ಪದ್ಮಪ್ರಸಾದ ಅಜಿಲರು ಶುಭಹಾರೈಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಖ್ಯಾತ ಕೈಗಾರಿಕೋದ್ಯಮಿ ರಾಮದಾಸ ಮಡಮಣ್ಣಾಯ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕೆ. ಪ್ರತಾಪಸಿಂಹನಾಯಕ್, ಕೆ. ಕೃಷ್ಣ ಸಂಪಿಗೆತ್ತಾಯ, ಜಯಂತಶೆಟ್ಟಿ, ರಾಜಪ್ರಸಾದ ರಾವ್, ಆನಂದ ಆಚಾರ್ಯ, ಬಾಬು ಮೊಗೇರ, ಪುಷ್ಪಾ ಆರ್.ಶೆಟ್ಟಿ ಹಾಗೂ ಮತ್ತಿತ್ತರು ಇದ್ದರು. ಉಜಿರೆಯ ನಿವೃತ್ತ ಪ್ರಾಚಾರ್ಯ ಡಾ.ಬಿ.ಎ.ಕುಮಾರ ಹೆಗ್ಡೆ ನಿರೂಪಿಸಿದರು. ಬೆಂಗಳೂರು ಸಮಿತಿಯ ಸಂಚಾಲಕ ಮಂಜುನಾಥ ಕನ್ಯಾಡಿ ಸ್ವಾಗತಿಸಿದರು. ಉಪಾಧ್ಯಕ್ಷ ಪ್ರಕಾಶ ಶೆಟ್ಟಿ ನೊಚ್ಚ ವಂದಿಸಿದರು.

ಸುಯಜ್ಞ ಮಂಟಪದಲ್ಲಿ ವಿವಿಧ ಧಾರ್ಮಿಕ ಯಾಗ



ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ದೇವಸ್ಥಾನ ಪ್ರಾಂಗಣದ 'ಸುಯಜ್ಞ' ಮಂಟಪದಲ್ಲಿ ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳು, ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು, ಪವಿತ್ರಪಾಣಿ ಶಿವರಾಮ ಪಡು ವೆಟ್ನಾಯ, ಅನಂತಮೋಹನ ಮೂಡಣ್ಣಾಯರ ನೇತೃತ್ವದಲ್ಲಿ ವಿವಿಧ ಹೋಮ ನಡೆಯಿತು. ಶ್ರೀಪತಿ ಎಳಚಿತ್ತಾಯ ಅವರ ಪೌರೋಹಿತ್ಯದಲ್ಲಿ ಚಕ್ರಪಾಣಿ ಸರಳಾಯ ಮತ್ತು ಮನೆಯವರ ಸೇವಾರ್ಥ ಅಥರ್ವಶೀರ್ಷ ಗಣ ಯಾಗ, ರಾಮಕೃಷ್ಣ ಕಲ್ಲೂರಾಯ ಅವರ ಪೌರೋಹಿತ್ಯದಲ್ಲಿ ಪದ್ಮಶ್ರೀ ಶೆಟ್ಟಿಗಾರ್ ಮತ್ತು ಮನೆಯವರ ಸೇವಾರ್ಥ ಚಂಡಿಕಾ ಯಾಗ, ಚಂದ್ರಶೇಖರ ಬಳ್ಳಕುರಾಯ ಅವರ ಪೌರೋಹಿತ್ಯದಲ್ಲಿ ತುಳು ಶಿವಳ್ಳಿ ಬ್ರಾಹ್ಮಣ ಸಭಾ ಉಜಿರೆ ವಲಯದ ವತಿಯಿಂದ ಅಧ್ಯಕ್ಷ ಗಿರಿರಾಜ ಬಾರಿತ್ತಾಯ ಅವರ ಯಜಮಾನತ್ವದಲ್ಲಿ ಶ್ರೀ ವಿಷ್ಣುಯಾಗ ಸಂಪನ್ನಗೊಂಡಿತು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ಗೋಪುರ ನಿರ್ಮಾಣ ಸಮಿತಿ ಅಧ್ಯಕ್ಷ ಶಶಿಧರ ಶೆಟ್ಟಿ ಇದ್ದರು.

ಎಸ್‌ಸಿ, ಎಸ್‌ಟಿ ರಕ್ಷಣೆಗೆ ಕಾನೂನು ಸಮರ್ಪಕ ಜಾರಿಯಾಗಲಿ: ಅಖಿಲ್



ಕಾಸರಗೋಡು: ಕಾಸರಗೋಡು ಕಲೆಕ್ಟರೇಟ್‌ನ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ 1989ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಗೆ ಸಂಬಂಧಿಸಿದ ಜಾಗೃತಿ ವಿಚಾರ ಸಂಕಿರಣ ನಡೆಯಿತು.

ಎಡಿಎಂ ಪಿ.ಅಖಿಲ್ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಎಸ್‌ಸಿ ಮತ್ತು ಎಸ್‌ಟಿ ವಲಯದವರ ಸಂರಕ್ಷಣೆಗಾಗಿ ಕಾನೂನು ಜಾರಿಗೆ ಬಂದು ಕಾಲು ಶತಮಾನ ಕಳೆದರೂ ಕಾನೂನು ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ ಎಂದು ಹೇಳಿದರು.

ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡುವವರು, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಕಾನೂನಿನ ಬಗ್ಗೆ ಸರಿಯಾದ ಅರಿವು ಮೂಡಿಸಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಕ್ಷಣೆಗಾಗಿ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಗಳಿದ್ದು, ಇದರಲ್ಲಿ ಅಧಿ ಕಾರಿಗಳು, ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಎಡಿಎಂ ನುಡಿದರು.

ಜಿಲ್ಲಾ ಪರಿಶಿಷ್ಟ ಜಾತಿ ಅಭಿವೃದ್ಧಿ ಅಧಿಕಾರಿ ಪಿ.ಮಿನಿ ಅಧ್ಯಕ್ಷತೆ ವಹಿಸಿದ್ದರು. ಚೆಂಗಳ ಗ್ರಾ.ಪಂ. ಅಧ್ಯಕ್ಷ ವಸಂತ ಅಜಕ್ಕೋಡು ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದರು. ಜಿಲ್ಲಾ ಎಸ್‌ಎಂಎಸ್ ಸಬ್ ಇನ್‌ಸ್ಪೆಕ್ಟರ್ ಆಫ್ ಪೊಲೀಸ್ ಎ.ಯು. ದಿವಾಕರನ್ ಮತ್ತು ಕಾನೂನು ತಜ್ಞ ಟಿ.ವಿ. ಮದನನ್ ಜಂಟಿಯಾಗಿ ಜಾಗೃತಿ ತರಗತಿಗಳನ್ನು ನಡೆಸಿದರು. ಕಾಞಂಗಾಡು ನಗರಸಭಾ ಕೌನ್ಸಿಲರ್ ವಿ.ಶ್ರೀರಾಮನ್, ಕಾಸರಗೋಡು ನಗರಸಭಾ ಕೌನ್ಸಿಲರ್ ಕೆ.ಬಿಂದು, ಮೊಗ್ರಾಲ್ ಪುತ್ತೂರು ಗ್ರಾ.ಪಂ. ಸದಸ್ಯ ಧರ್ಮಪಾಲ, ಎಂಡೋಸಲ್ಫಾನ್ ಸೆಲ್ ಉಪ ಕಲೆಕ್ಟರ್ ಲಿಪು ಎಸ್. ಲಾರೆನ್ಸ್, ಅಭಿವೃದ್ಧಿ ಅಧಿಕಾರಿ ಪಿ.ರಾಘವನ್, ಪರಪ್ಪ ಪರಿಶಿಷ್ಟ ಪಂಗಡ ಅಭಿವೃದ್ಧಿ ಅಧಿಕಾರಿ ಅಯ್ಯಪ್ಪನ್ ಮಾತನಾಡಿದರು. ಕಾಞಂಗಾಡು ಬ್ಲಾಕ್ ಪರಿಶಿಷ್ಟ ಜಾತಿ ಅಭಿವೃದ್ಧಿ ಅಧಿಕಾರಿ ಪಿ.ಬಿ. ಬಶೀರ್ ಸ್ವಾಗತಿಸಿ, ಕಚೇರಿಯ ಮುಖ್ಯ ಗುಮಾಸ್ತೆ ಶೈಜಲತಾ ವಂದಿಸಿದರು.

ದೇಗುಲಗಳು ಧಾರ್ಮಿಕ ನಂಬಿಕೆಯನ್ನು ಜಾಗೃತಗೊಳಿಸುವ ಕೇಂದ್ರ: ಮಾಣಿಲ ಶ್ರೀ



ಮುಲ್ಕಿ: ದೇವಸ್ಥಾನಗಳು ಸಮಾಜದಲ್ಲಿ ಧಾರ್ಮಿಕ ನಂಬಿಕೆ, ಸಂಸ್ಕೃತಿ ಮತ್ತು ಒಗ್ಗಟ್ಟನ್ನು ಬೆಳೆಸುವ ಪವಿತ್ರ ಕೇಂದ್ರಗಳಾಗಿವೆ ಎಂದು ಮಾಣಿಲ ಶ್ರೀಧಾಮ ಮೋಹನದಾಸ ಸ್ವಾಮೀಜಿ ಹೇಳಿದರು.

ಅವರು ಶುಕ್ರವಾರ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಮಹೋತ್ಸವಗಳು ಭಕ್ತರಲ್ಲಿ ಭಕ್ತಿ, ಶ್ರದ್ಧೆ ಮತ್ತು ಧಾರ್ಮಿಕ ಚಿಂತನೆ ಹೆಚ್ಚಿಸುವುದರ ಜೊತೆಗೆ ಸಮಾಜದಲ್ಲಿ ಸೌಹಾರ್ದತೆ ಬಲಪಡಿಸುತ್ತವೆ. ದೇವಸ್ಥಾನದ ಅಭಿವೃದ್ಧಿಗೆ ಹಾಗೂ ಧಾರ್ಮಿಕ ಕಾರ್ಯ ಗಳಿಗೆ ಭಕ್ತರು ಕೈಜೋಡಿಸಿ ಕ್ಷೇತ್ರದ ವೈಭವವನ್ನು ಹೆಚ್ಚಿಸಬೇಕು ಎಂದರು.

ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅರ್ಚಕ ವೇ. ಅನಂತ ಪದ್ಮನಾಭ ಆಸ್ರಣ್ಣ ಶುಭಹಾರೈಸಿದರು. ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಳ್ಚಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕ್ಷೇತ್ರದ ಅನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಮಂಗಳೂರು ಕರ್ನಾಟಕ ಬ್ಯಾಂಕ್ ಡಿಜಿಎಂ ಬಿ. ಗೋಪಾಲಕೃಷ್ಣ ಸಾಮಗ, ನಟ ಅರವಿಂದ ಬೋಳಾರ್, ಪ್ರಮುಖರಾದ ವಸಂತ್ ಬೆರ್ನಾಡ್, ಉದ್ಯಮಿ ಗುರುಪ್ರಸಾದ್ ಅಮೀನ್ ನಾನಿಲ್ ಕೊಡಿಯಾಲ್‌ಬೈಲ್, ಗಣೇಶ್ ಕುಂಟಲ್ಪಾಡಿ, ವಿಶ್ವನಾಥ ಮಂಕಿ ಸ್ಟ್ಯಾಂಡ್, ಉದ್ಯಮಿ ಶಶೀಂದ್ರ ಎಂ. ಸಾಲ್ಯಾನ್, ಜಯಕೃಷ್ಣ ಕೋಟ್ಯಾನ್, ಪುಷ್ಪದಯಾನಂದ, ರಮೇಶ್ ಬಂಗೇರ, ರಾಜೇಂದ್ರ ಪ್ರಸಾದ್ ಎಕ್ಕಾರ್, ಶಿವಣ್ಣ ಅಂಚನ್, ನವೀನ್ ಕುಮಾರ್ ಗುಜ್ಜರಬೆಟ್ಟು, ವಿಠಲ ಕಾಂಚನ್, ನಿತಿನ್ ಕುಂದರ್, ಅನಿಲ್ ಪೂಜಾರಿ, ಸತೀಶ್ ಶೆಟ್ಟಿ ಎಕ್ಕಾರ್, ಉದಯ ಸುವರ್ಣ, ಯಶವಂತ ಸಾಲ್ಯಾನ್, ಸುಧಾಕರ ಅಮೀನ್ ಇದ್ದರು. ಕುದ್ರೋಳಿ ಶ್ರೀ ಭಗವತಿ ಕ್ಷೇತ್ರದ ರಾಮಚಂದ್ರ ಯಾನೆ ಅಪ್ಪು ಕಾರ್ನವರು ಅವರಿಗೆ ಗೌರವಾರ್ಪಣೆ ನಡೆಯಿತು. ದಾನಿಗಳಿಗೆ ಗೌರವ ಸನ್ಮಾನ ನಡೆಯಿತು. ರಾಜೇಂದ್ರ ಪ್ರಸಾದ್ ಎಕ್ಕಾರ್ ದಾನಿಗಳ ಪಟ್ಟಿ ವಾಚಿಸಿದರು, ರಘುರಾಮ್ ಕೋಟ್ಯಾನ್ ಕುರ್ಕಾಲು ಸ್ವಾಗತಿಸಿ, ಸಚ್ಚೇಂದ್ರ ಅಂಬಾಗಿಲು ಕಾರ್ಯಕ್ರಮ ನಿರೂಪಿಸಿದರು.

ದರಿಬಾಗಿಲು-ಪಲ್ಕೆ ನೂತನ ಕಾಂಕ್ರಿಟ್ ರಸ್ತೆ ಲೋಕಾರ್ಪಣೆ



ಬಂಟ್ವಾಳ: ತಾಲೂಕಿನ ಕಳ್ಳಿಗೆ ಗ್ರಾಮದ ಶ್ರೀ ಕನಪಾಡಿ ದೈವಸ್ಥಾನಕ್ಕೆ ಭಂಡಾರ ಹೋಗುವ ದರಿಬಾಗಿಲು-ಪಲ್ಕೆ ಕಾಂಕ್ರಿಟ್ ರಸ್ತೆಯನ್ನು ಬಂಟ್ವಾಳ ಶಾಸಕರಾದ ರಾಜೇಶ್ ನ್ಯಾಕ್ ಉಳಿಪ್ಪಾಡಿ ಬುಧವಾರ ಲೋಕಾರ್ಪಣೆಗೊಳಿಸಿದರು.

ಕಳ್ಳಿಗೆ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಮನೋಜ್ ವಳವೂರ್, ಹಿರಿಯ ಕಾರ್ಯಕರ್ತರಾದ ಭೋಜ ದರಿಬಾಗಿಲು, ಸಂಜೀವ ಪೂಜಾರಿ ಕನಪಾಡಿ, ಪುಷ್ಪ ಬಂಜನ್, ದಿನಕರ್ ಬರೆ, ಅರುಣ್ ಶೆಟ್ಟಿ ಪೆರ್ಲಬೈಲು ತುಂಬೆ,ಕೊರಗಪ್ಪ ಕುಲಾಲ್ ದರಿಬಾಗಿಲು, ಯೋಗೀಶ್ ಕುಮಾರ್ ದರಿಬಾಗಿಲು, ಸಂದೇಶ್ ದರಿಬಾಗಿಲು, ದೇವಿಪ್ರಸಾದ್ ದೇವಂದಬೆಟ್ಟು, ದಿನಕರ ಚಂದ್ರಿಗೆ, ಗಿರೀಶ್ ಪಲ್ಕೆ, ನಯನ್ ಪಲ್ಕೆ, ಪ್ರಿಯಾದರ್ಶನಿ, ಸುನಿಲ್ ಬಜ್ಪೆ, ಶಿವರಾಮ್, ಭಾರತಿ ಕುಲಾಲ್, ಶಾಲಿನಿ ಕುಲಾಲ್, ಮಾಧವ ಬ್ರಹ್ಮರ ಕೊಟ್ಲು, ಸತೀಶ್ ಬ್ರಹ್ಮರ ಕೊಟ್ಲು, ಶ್ರೀನಾಥ್ ಕನಪಾಡಿ, ಯೋಗೀಶ್ ವಿ. ಕೆ. ಚಂದ್ರಹಾಸ ದರಿಬಾಗಿಲು,ರಮೇಶ್ ಚಂದ್ರಿಗೆ, ಸಂತೋಷ್ ಬ್ರಹ್ಮರ ಕೊಟ್ಲು, ಪ್ರಸಾದ್ ವಳವೂರ್,ಗೋಪಾಲ ದೇವಂದಬೆಟ್ಟು, ಸುನಿಲ್ ಜಾರಂದಗುಡ್ಡೆ,ಸಮ್ಮಿತ್ ದರಿಬಾಗಿಲು ಮೊದಲಾದವರು ಭಾಗವಹಿಸಿದರು.

ಕೆವಿಜಿ ಸಮೂಹ ಸಂಸ್ಥೆಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಸುಳ್ಯ: ಕೆವಿಜಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಸುವರ್ಣ ಸಂಭ್ರಮದ ಹೊಸ್ತಿಲಿನಲ್ಲಿರುವ ಎನ್.ಎಂ.ಸಿ. ಮತ್ತು ಎನ್.ಎಂ.ಪಿ.ಯು.ಸಿ. ಸಂಸ್ಥೆಗಳು ಕಾರ್ಯಕ್ರಮದ ಆತಿಥ್ಯ ವಹಿಸಿತು. ಎನ್‌ಎಂಸಿಯ ಆವರಣದ ಮೈದಾನದಲ್ಲಿ ಜುಂಬಾ ಶೋ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಅಧ್ಯಕ್ಷ ಡಾ.ಕೆ.ವಿ. ಚಿದಾನಂದ, ಮಹಿಳೆ ಕುಟುಂಬದಲ್ಲಿ ಅನೇಕ ಪಾತ್ರಗಳನ್ನು ಒಂದೇ ಸಮಯದಲ್ಲಿ ಯಶಸ್ವಿಯಾಗಿ ನಿರ್ವಹಿಸುತ್ತಾಳೆ. ಆದರೂ ಅವಳ ಪರಿಶ್ರಮ ಅನೇಕ ಬಾರಿ ಗಮನಿಸದೇ ಹೋಗುತ್ತದೆ. ಆದ್ದರಿಂದ ಮಹಿಳೆಯ ಕೊಡುಗೆಯನ್ನು ಗುರುತಿಸಿ ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಕಾರ್ಯದರ್ಶಿ ಡಾ. ಐಶ್ವರ್ಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಟೋಸ್ಟ್ ಮಾಸ್ಟರ್ ಸುಮಿತ್ರಾ ಮನಮೋಹನ್ ಮಾರ್ಗದರ್ಶನ ನೀಡಿದರು. ಬಳಿಕ ಅಡ್ಯನಡ್ಕ ವಾರಣಾಸಿ ಫಾರ್ಮ್ ಮಾಲಕ, ಅಡ್ಯನಡ್ಕ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಡಾ. ಅಶ್ವಿನಿ ಕೃಷ್ಣಮೂರ್ತಿ ಭಾಗವಹಿಸಿದರು. ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಉಪಾಧ್ಯಕ್ಷೆ ಶೋಭಾ ಚಿದಾನಂದ ಹಾಗೂ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ. ಶುಭ ಹಾರೈಸಿದರು. ಕೆವಿಜಿ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಡೀನ್ ಡಾ. ನೀಲಾಂಬಿಕೈ ನಟರಾಜನ್, ನೆಹರೂ ಮೆಮೋರಿಯಲ್ ಕಾಲೇಜಿನ ಪ್ರಾಂಶುಪಾಲರು ಡಾ. ರುದ್ರ ಕುಮಾರ್ ಎಂ.ಎಂ. ಹಾಗೂ ಎನ್.ಎಂ.ಪಿ.ಯು.ಸಿ. ಪ್ರಾಂಶುಪಾಲೆ ಮಿಥಾಲಿ ಪಿ. ರೈ ಉಪಸ್ಥಿತರಿದ್ದರು. ಡಾ. ಅಪೂರ್ವ ದೊರೆ ಸ್ವಸ್ತಶ್ರೀ ವರದಿ ವಾಚಿಸಿದರು. ಡಾ. ಬೀನ ರಾಣಿ ಹಾಗೂ ಸವಿತಾ ಎ.ಡಿ. ಅತಿಥಿ ಪರಿಚಯಗೈದರು. ಕೃತಿಕಾ ಜೆ. ಹಾಡಿದರು. ಮಿಥಾಲಿ ಪಿ. ರೈ ಸ್ವಾಗತಿಸಿ, ಡಾ. ರುದ್ರ ಕುಮಾರ್ ಎಂ.ಎಂ. ವಂದಿಸಿ, ಉಪನ್ಯಾಸಕಿ ಬೇಬಿ ವಿದ್ಯಾ ಪಿ.ಬಿ. ನಿರ್ವಹಿಸಿದರು.

ಮಹಿಳಾ ದಿನ: ಸೂಲಗಿತ್ತಿ ಗುಂಡಿಗೋಳಿ ಲಕ್ಷ್ಮೀ ಪೂಜಾರ್ತಿಗೆ ಬಿಜೆಪಿಯಿಂದ ಸನ್ಮಾನ



ಕುಂದಾಪುರ: ಕುಂದಾಪುರ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಹಿರಿಯ ಸೂಲಗಿತ್ತಿ ಬಸ್ರೂರು ಗುಂಡಿಗೋಳಿ ಲಕ್ಷ್ಮೀ ಪೂಜಾರ್ತಿ ಅವರನ್ನು ಅವರ ಸ್ವಗೃಹದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಸಂದರ್ಭ ಮಾತನಾಡಿದ ಬಿಜೆಪಿ ಕುಂದಾಪುರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಸೌರಭಿ ಪೈ, ಬಸ್ರೂರಿನ ಈ ಸೂಲಗಿತ್ತಿ ಲಕ್ಷ್ಮೀ ಪೂಜಾರ್ತಿ ಅವರು ಅದೆಷ್ಟೋ ಬಸುರಿಯರಿಗೆ ಸುಖಮಯ ಹೆರಿಗೆ ಮಾಡಿಸಿದ್ದಾರೆ. ಆದರೆ ಎಷ್ಟು ಹೆರಿಗೆ ಮಾಡಿಸಿದ್ದೇನೆ ಎಂಬ ಲೆಕ್ಕ ಈ ಮಹಾತಾಯಿಯ ಬಳಿ ಇಲ್ಲ, ಯಾಕೆಂದರೆ ಆಕೆ ಅಷ್ಟು ಓದಿಲ್ಲ!. ಆದರೆ ಹೆಣ್ಣು ಜೀವದ ಬಗೆಗೆ ಈಕೆಯಲ್ಲಿರುವ ಜ್ಞಾನ ಯಾವ ಗೈನಕಾಲಜಿ ಓದಿಗೂ ಕಮ್ಮಿಯಿಲ್ಲ, ಅವರ ಈ ಸೇವೆಯನ್ನು ನೆನಪಿಸಿಕೊಂಡು ಲಕ್ಷ್ಮೀ ಪೂಜಾರ್ತಿ ಅವರನ್ನು ಅಂತರಾಷ್ಟ್ರೀಯ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಅಭಿನಂದಿಸಲಾಗುತ್ತಿದೆ ಎಂದರು.

ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ .ಕಿರಣ್ ಕುಮಾರ್ ಕೊಡ್ಗಿ ಶುಭ ಹಾರೈಸಿದರು. ಬಿಜೆಪಿ ಕುಂದಾಪುರ ಮಂಡಲದ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ, ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ವಕ್ವಾಡಿ ಮತ್ತು ಸುಧೀರ್ ಕೆ. ಎಸ್., ಹಾಗೂ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ವೇತಾ ಶ್ರೀನಿಧಿ ಉಪಾಧ್ಯ, ವಿದ್ಯಾ ಸಾಲಿಯನ್, ಜಿಲ್ಲಾ ಕಾರ್ಯದರ್ಶಿ ಸದಾನಂದ ಬಳ್ಕೂರು, ಅನಿತಾ ಶ್ರೀಧರ್ ಹಾಗೂ ಬಿಜೆಪಿ ಮಹಿಳಾ ಮೋರ್ಚಾದ ಪದಾಧಿಕಾರಿಗಳು, ಕುಂದಾಪುರ ಮಂಡಲ ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಪಕ್ಷದ ಮುಖಂಡರು ಹಾಗೂ ಬಸ್ರೂರು ಗ್ರಾಮ ಪಂಚಾಯಿತಿನ ನಿಕಟಪೂರ್ವ ಅಧ್ಯಕ್ಷರು ಹಾಗೂ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

ಭಾರತ ದೇಶವು ದೈವೀಶಕ್ತಿಯ ಭೂಮಿಯಾಗಿದೆ: ಶ್ರೀಕಾಂತ್ ಶೆಟ್ಟಿ



ಬೆಳ್ತಂಗಡಿ: ಎಲ್ಲಾ ಪರಂಪರೆಗಳ ಮೂಲ ಶಿವ. ಮತ ಸಂಘರ್ಷವಿಲ್ಲದೇ ಎಲ್ಲರನ್ನೂ ಸ್ವೀಕರಿಸುವ ದೇವ ಭೂಮಿ ಭಾರತ. ಹಾಗಾಗಿ ಭಾರತ ಜಗತ್ತಿನ ದೇವರ ಕೋಣೆಯಾಗಿದೆ ಎಂದು ವಾಗ್ಮಿ ಶ್ರೀಕಾಂತ್ ಶೆಟ್ಟಿ ಕಾರ್ಕಳ ಹೇಳಿದರು.

ಅವರು ಪದ್ಮುಂಜ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಪ್ರಯುಕ್ತ ಮಾ.6ರಂದು ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಧಾರ್ಮಿಕ ಉಪನ್ಯಾಸ ನೀಡಿದರು.

ಜಗತ್ತಿನಲ್ಲಿ ಎಲ್ಲಿಯೂ ಪರಿಸ್ಥಿತಿ ಸರಿ ಇಲ್ಲ ಆದರೆ ಭಾರತ ಮಾತ್ರ ಶಾಂತಿಯಿಂದ ಸರಿಯಿದೆ ಇದಕ್ಕೆ ಕಾರಣ ಭಾರತ ದೈವೀಶಕ್ತಿಯ ಭೂಮಿಯಾಗಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಶಾಸಕ ಹರೀಶ್ ಪೂಂಜ ಮಾತನಾಡಿದರು. ಉದ್ಯಮಿ ಶಶಿಧರ ಶೆಟ್ಟಿ ಬರೋಡ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಸಂಚಾಲಕ ಹರ್ಷ ಮೇಲಾಂಟ ಮೊಗರೋಡಿ, ಉದ್ಯಮಿ ಶಶಿಧರ ಶೆಟ್ಟಿ ಅಂಜನಕೋಡಿ, ಮೈಸೂರು ಮೆಮೋರಿಯಲ್ ಟ್ಯೂಷನ್ ಸೆಂಟರ್ ಟ್ರಸ್ಟ್‌ನ ಸುಜಾತ ಆರ್ ಶೆಟ್ಟಿ, ಬೆಂಗಳೂರು ಸೌತ್ ಫೀಲ್ಡ್ ಕೋಟಿಂಗ್ಸ್ ಪ್ರೈವೇಟ್ ಲಿಮಿಟೆಡ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೃತ್ಪೂರ್ಣ ರೈ ಮೊಗರೋಡಿ, ಪದ್ಮುಂಜ ಶ್ರೀ ಕ್ಲಿನಿಕ್ ಡಾ.ಎಂ.ವಿ ಭಟ್ ಪಿಲಿಗೂಡು, ಭಾಜಪ ಜಿಲ್ಲಾ ಉಪಾಧ್ಯಕ್ಷ ಜಯಂತ್ ಕೋಟ್ಯಾನ್, ಬೆಂಗಳೂರು ಗೋಕುಲ್ ದಾಸ್ ಎಕ್ಸ್ಪೋರ್ಟ್ ಜನರಲ್ ಮ್ಯಾನೇಜರ್ ಹರೀಶ್ ಶೆಟ್ಟಿ, ಕಾರಿಂಜ ಶ್ರೀ ವನಶಾಸ್ತಾರ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ದಾಸಪ್ಪ ಗೌಡ, ಮಲೆಂಗಲ್ಲು ಉಮಾಮಹೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ ಅಧ್ಯಕ್ಷ ವಿಠ್ಠಲ್ ಶೆಟ್ಟಿ ಕೊಲ್ಲೊಟ್ಟು, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಶಿವಶಂಕರ್ ನಾಯಕ್ ಮಾರುತಿಪುರ ಹಾಗೂ ಯೋಜನಾಧಿಕಾರಿ ಮಾಧವ ಗೌಡ ಉಪಸ್ಥಿತರಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ನಾರಾಯಣ ಗೌಡ ಮುಚ್ಚೂರು ಸ್ವಾಗತಿಸಿ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪ್ರಫುಲ್ಲಚಂದ್ರ ಅಡ್ಯಂತಾಯ ಮೊಗರೋಡಿ ವಂದಿಸಿ, ಕೆ.ಪಿ. ನವೀನ್ ಕುಮಾರ್ ಹಾಗೂ ಶೋಭಾ ಪಿ.ಎಸ್.ನಿರೂಪಿಸಿದರು

ಎರಡು ದಿನಗಳ 'ಬಂಟ್ವಾಳ ಕಂಬಳ'ಕ್ಕೆ ಕೂಡಿಬೈಲಿನಲ್ಲಿ ಚಾಲನೆ | 'ಮೂಡೂರು-ಪಡೂರು' ಜೋಡುಕರೆಯ ಉದ್ಘಾಟನೆ

ಕಂಬಳ ಕ್ರೀಡೆ ಸಹೋದರತೆ, ಸಾಮರಸ್ಯದ ಭಾವನೆ ಉದ್ದೀಪನ: ವಿಖ್ಯಾತನಂದ ಶ್ರೀ



ಬಂಟ್ವಾಳ: ಅವಿಭಜಿತ ಜಿಲ್ಲೆಯ ಪ್ರತಿಷ್ಠಿತ ಎರಡು ದಿನಗಳ 'ಬಂಟ್ವಾಳ ಕಂಬಳ'ಕ್ಕೆ ತಾಲೂಕಿನ ನಾವೂರು ಗ್ರಾಮದ ಕೂಡಿಬೈಲಿನಲ್ಲಿ ಶನಿವಾರ ಬೆಳಿಗ್ಗೆ ಅದ್ದೂರಿಯಾಗಿ ಚಾಲನೆ ನೀಡಲಾಯಿತು.

ಅರ್ಚಕ ಹರಿಪ್ರಸಾದ್ ಬೊಲ್ಲುಳ್ಳಾಯ ಅವರು ಧಾರ್ಮಿಕ ವಿಧಿ, ವಿಧಾನ ನೆರವೇರಿಸಿದರು. 'ಮೂಡೂರು-ಪಡೂರು' ಜೋಡುಕರೆಯನ್ನು ಅಳದಂಗಡಿ ಅರಮನೆಯ ತಿಮ್ಮಣ್ಣರಸ ಡಾ. ಪದ್ಮಪ್ರಸಾದ್ ಅಜಿಲ ದೀಪಬೆಳಗಿಸಿ ಉದ್ಘಾಟಿಸಿ, ಸರಳತೆ ಮತ್ತು ಸಜ್ಜನಿಕೆಯ ವ್ಯಕ್ತಿತ್ವದ ರಮಾನಾಥ ರೈ ಅವರ ನೇತೃತ್ವದಲ್ಲಿ ಸರ್ವಧರ್ಮಿಯರ ಪಾಲ್ಗೊಳ್ಳುವಿಕೆಯ ಮೂಡೂರು- ಪಡೂರು ಕಂಬಳ ಜಿಲ್ಲೆಯ ಸಂಸ್ಕೃತಿಯನ್ನು ಉಳಿಸುವ ಕಾರ್ಯ ನಡೆಸುತ್ತಿರುವುದು ಅಭಿನಂದನೀಯ. ಇದು ನಿರಂತರವಾಗಿ ಮುನ್ನಡೆಯಲಿ ಎಂದರು.

ವೇದಿಕಯನ್ನು ಉದ್ಘಾಟಿಸಿದ ಸೋಲೂರು ಆರ್ಯ-ಈಡಿಗ ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ವಿಖ್ಯಾತನಂದ ಸ್ವಾಮೀಜಿ ಆಶೀರ್ವಚನವಿತ್ತು, ಜಾತಿ, ಧರ್ಮದ ಸಂಘರ್ಷದ ಈ ಕಾಲಘಟ್ಟದಲ್ಲಿ ಏಕಾತ್ಮಕ ಚಿಂತನೆಯ ಕಂಬಳ ಕ್ರೀಡೆ ಸಹೋದರತೆ,ಸಾಮರಸ್ಯದ ಭಾವನೆ ಮೂಡಿಸಿದೆ. ಈ ನಿಟ್ಟಿನಲ್ಲಿ ಕಂಬಳ ಸಮಿತಿಯ ಪ್ರಯತ್ನ ಶ್ಲಾಘನೀಯ ಎಂದರು.

ಸಮಿತಿಯ ಗೌರವಾಧ್ಯಕ್ಷ, ಮಾಜಿ ಸಚಿವ ಬಿ.ರಮಾನಾಥ ರೈ ಸಭಾಧ್ಯಕ್ಷತೆ ವಹಿಸಿದ್ದರು. ಅಲ್ಲಿಪಾದೆ ಸಂತ ಅಂತೋನಿ ಧರ್ಮಕೇಂದ್ರದ ರಾಬರ್ಟ್ ಡಿಸೋಜ, ಬೆಂಗಳೂರು ಪಲ್ಲೊಟಾಯನ್ ಪ್ರಾಂತ್ಯದ ಸಲಹೆಗಾರ ಗಿಲ್ಬರ್ಟ್ ಮಸ್ಕರೇನ್ಹಸ್, ಫರ್ಲಾ ವೆಲಂಕಣಿ ಮಾತೆ ಧರ್ಮ ಕೇಂದ್ರದ ಮಾರ್ಕ್ ಅರುಣ್ ಡಿಸೋಜ, ಕಂಬಳ ಅಸೋಸೊಯೇಶನ್‌ನ ಸಲಹೆಗಾರ ಪ್ರೊ. ಗುಣಪಾಲ ಕಡಂಬ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ, ಉಪಾಧ್ಯಕ್ಷ ನಾರಾಯಣ ನಾಯ್ಕ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷೆ ಜಯಂತಿ ಪೂಜಾರಿ, ಬಂಟ್ವಾಳ ಡಿವೈಎಸ್ಪಿ ಯಶುಕುಮಾರ್, ಪ್ರೊಬೇಷನರಿ ಐಪಿಎಸ್ ಅನನ್ಯ ಶ್ರೀವಾಸ್ತವ್, ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ನಿರ್ದೇಶಕ ಮೆಲ್ವಿನ್ ಲಸ್ರಾದೋ, ಹೊಟೇಲ್ ಉದ್ಯಮಿ ನಂಜಪ್ಪ ಶೆಟ್ಟಿ ಮೈಸೂರು, ಗಣ್ಯರಾದ ಡಾ.ರಾಜಾರಾಮ್ ಪುತ್ತೂರು, ಮಾಣಿ ಸಾಜು ಉಮೇಶ್ ಮಹಾಬಲಶೆಟ್ಟಿ, ಬಾಲಕೃಷ್ಣ ಶೆಟ್ಟಿ, ಧರಣೇಂದ್ರ ಕುಮಾರ್, ಕಿರಣ್ ಶೆಟ್ಟಿ,ಜವಾಹರಲಾಲ್ ಬಾಲಮಂಚ್‌ನ ಶೈಲಜಾ ರಾಜೇಶ್, ಸಮಿತಿಯ ಪದಾಧಿಕಾರಿ ಚಂದ್ರಪ್ರಕಾಶ್ ಶೆಟ್ಟಿ ತುಂಬೆ, ಬಿ. ಪದ್ಮಶೇಖರ್ ಜೈನ್, ಪದ್ಮನಾಭ ರೈ ಕಲ್ಲಡ್ಕ, ಬೇಬಿ ಕುಂದರ್, ಬಿ.ಎಂ. ಅಬ್ಬಾಸ್ ಅಲಿ, ಬಾಲಕೃಷ್ಣ ಅಂಚನ್, ಸುದೀಪ್ ಕುಮಾರ್ ಶೆಟ್ಟಿ, ಚಂದ್ರಶೇಖರ ಭಂಡಾರಿ, ಸುದರ್ಶನ್ ಜೈನ್, ರಾಜೀವ ಶೆಟ್ಟಿ ಏಡ್ತೂರು, ಫಿಲಿಪ್ ಫ್ರೆಂಕ್, ಮಹಾಬಲ ಆಳ್ವ, ಜಗದೀಶ್ ಕೊಯಿಲ, ಪಶುಸಂಗೋಪನಾ ಇಲಾಖೆಯ ಬಾಲಕೃಷ್ಣ ಐಡಾ ಸುರೇಶ್, ಮಲ್ಲಿಕಾ ಶೆಟ್ಟಿ ಅಮ್ಮಾಡಿ, ಮಹಮ್ಮದ್ ನಂದಾವರ, ಸುಧಾಕರ ಶೆಣೈ ಖಂಡಿಗ, ವೆಂಕಪ್ಪ ಪೂಜಾರಿ ಬಂಟ್ವಾಳ, ಸ್ಥಳದಾನಿಗಳು ಮೊದಲಾದವರು ಇದ್ದರು. ಕಂಬಳ ಸಮಿತಿ ಅಧ್ಯಕ್ಷ ಪಿಯೂಸ್ ಎಲ್ ರೊಡ್ರಿಗಸ್ ಪ್ರಸ್ತಾವಿಸಿ, ಸ್ವಾಗತಿಸಿ, ಬಾಲಕೃಷ್ಣ ಆಳ್ವ ನಿರೂಪಿಸಿದರು.

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸದಿಗಂತ ಸಂಗಮ 5

ಭಾನುವಾರ 08, ಮಾರ್ಚ್ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪುಟ ಸಂಖ್ಯೆ

ಜಿಲ್ಲೆಯ 1643 ಪರಿಶಿಷ್ಟ ಪಂಗಡ ವಿಭಾಗದ ಕುಟುಂಬಗಳಿಗೆ 200 ದಿನಗಳ ಕೆಲಸ ಖಾಯಂ

ಯಶಸ್ವಿಯಾಗಿ ಅನುಷ್ಠಾನಗೊಂಡ ಬುಡಕಟ್ಟು ಪ್ಲಸ್ ಯೋಜನೆ

ಕಾಸರಗೋಡು: ಕೇರಳ ಸರಕಾರವು ಬುಡಕಟ್ಟು ಪ್ಲಸ್ ಎಂಬ ವಿನೂತನ ಯೋಜನೆಯನ್ನು ಜಾರಿಗೊಳಿಸಿದ್ದು, ಕಾಸರಗೋಡು ಜಿಲ್ಲೆಯಲ್ಲೂ ಈ ಯೋಜನೆಯು ಕಾರ್ಯಗತಗೊಂಡಿದೆ. ಪ್ರಸ್ತುತ ಯೋಜನೆಯು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಸೇರ್ಪಡೆಗೊಂಡಿರುವ ಪರಿಶಿಷ್ಟ ಪಂಗಡ ವಿಭಾಗಗಳ ಕುಟುಂಬಗಳಿಗೆ ಅತ್ಯಂತ ಉಪಯುಕ್ತವಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ನಿಗದಿಪಡಿಸಿದ 100 ದಿನಗಳ ಕೆಲಸದ ಜೊತೆಗೆ ಬುಡಕಟ್ಟು ಪ್ಲಸ್ ಯೋಜನೆಯಡಿ ಹೆಚ್ಚುವರಿಯಾಗಿ ಇನ್ನೂ 100 ದಿನಗಳ ಉದ್ಯೋಗ ಒದಗಿಸಲು ಸಾಧ್ಯವಾಗಿದೆ. ಈ ಯೋಜನೆ ಮೂಲಕ ಕಾಸರಗೋಡು ಜಿಲ್ಲೆಯ 1643 ಕುಟುಂಬಗಳಿಗೆ 41,509 ಹೆಚ್ಚುವರಿ ಉದ್ಯೋಗದಿನಗಳಒದಗಿಸಲಾಗಿದೆ.ಪ್ರಸಕ್ತಯೋಜನೆಯನ್ನು ಪರಿಶಿಷ್ಟ ಜಾತಿ –ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆ ನೇತೃತ್ವ ಅನುಷ್ಠಾನಗೊಳಿಸಲಾಗಿದೆ.

ಪರಿಶಿಷ್ಟ ಪಂಗಡ ವಲಯದ ಆರ್ಥಿಕ ಭದ್ರತೆ ಖಾತರಿಪಡಿಸುವ ಮುಖ್ಯ ಉದ್ದೇಶದೊಂದಿಗೆ ಜಾರಿಗೆ ತರಲಾಗುತ್ತಿರುವ ಈ ಯೋಜನೆಯ ಮೂಲಕ ಜಿಲ್ಲೆಯಲ್ಲಿ ಒಟ್ಟು 18,403 ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಉದ್ಯೋಗ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಯೋಜನೆಯ ಭಾಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಬುಡಕಟ್ಟು ಕುಟುಂಬಗಳಿಗೆ ಇದುವರೆಗೆ ಒಟ್ಟು 5,94,535 ಉದ್ಯೋಗ ದಿನಗಳನ್ನು ಸೃಷ್ಟಿಸಲಾಗಿದೆ.

ಇದೇ ವೇಳೆ 1904 ಬುಡಕಟ್ಟು ಕುಟುಂಬಗಳು 100 ಉದ್ಯೋಗ ದಿನಗಳನ್ನು ಪೂರ್ಣಗೊಳಿಸಿವೆ.



ಬುಡಕಟ್ಟು ಪ್ಲಸ್ ಯೋಜನೆಯು ಪರಿಶಿಷ್ಟ ಪಂಗಡ ವಲಯದಲ್ಲಿನ ನಿರುದ್ಯೋಗ ಪರಿಹರಿಸಲು ಮತ್ತು ಕುಟುಂಬಗಳ ಆರ್ಥಿಕ ವ್ಯವಸ್ಥೆ ಹಾಗೂ ಜೀವನ ಮಟ್ಟವನ್ನು ಸುಧಾರಿಸಲು ದಾರಿ ಮಾಡಿಕೊಡುತ್ತಿದೆ. ಬುಡಕಟ್ಟು ಪ್ಲಸ್ ಎಂಬುದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪರಿಶಿಷ್ಟ ಪಂಗಡ ಕುಟುಂಬಗಳಿಗೆ 100 ಹೆಚ್ಚುವರಿ ದಿನಗಳ ಉದ್ಯೋಗವನ್ನು ಒದಗಿಸುವ ಮಹತ್ವದ ಯೋಜನೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇದರ ಜೊತೆಗೆ ಎಲ್ಲಾ ಎಸ್‌ಟಿ ವಿಭಾಗದ ಕುಟುಂಬಗಳಿಗೆ ಉದ್ಯೋಗ ಕಾರ್ಡ್‌ಗಳನ್ನು ಖಚಿತಪಡಿಸಿಕೊಳ್ಳಲಾಗುತ್ತದೆ ಮತ್ತು ಪ್ರತಿ ಕುಟುಂಬದ ಉದ್ಯೋಗ ಕಾರ್ಡ್‌ನಲ್ಲಿ ಗರಿಷ್ಠ ಕುಟುಂಬ ಸದಸ್ಯರನ್ನು ಸೇರಿಸಲಾಗುತ್ತದೆ. ಈ ಮೂಲಕ ಪರಿಶಿಷ್ಟ ಪಂಗಡ ವಿಭಾಗದಲ್ಲಿ ಒಳಪಡುವ ಎಲ್ಲಾ ಕುಟುಂಬಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಹಲವಾರು ಕಾರ್ಯಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

ಮಾನದಂಡ ಪಾಲಿಸಬೇಕು

ಉದ್ಯೋಗ ಖಾತರಿ ಯೋಜನೆಯಡಿ ಒಂದು ವರ್ಷದಲ್ಲಿ 100 ದಿನಗಳ ಉದ್ಯೋಗದ ಜೊತೆಗೆ ರಾಜ್ಯ ಸರಕಾರ ದಿಂದ ಒದಗಿಸಲಾದ 100 ಹೆಚ್ಚುವರಿ ದಿನಗಳ ಉದ್ಯೋಗ ಪಡೆಯಲು ಪರಿಶಿಷ್ಟ ಪಂಗಡ ಕುಟುಂಬಗಳು ಅರ್ಹರಾಗಿರು ತ್ತಾರೆ. ಆದರೆ ಈ ನಿಟ್ಟಿನಲ್ಲಿ ಕಾನೂನು ಆಧಾರದಲ್ಲಿ ಕೆಲವೊಂದು ಮಾನದಂಡಗಳ ಪಾಲಿಸಬೇಕಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಯೋಜನೆ ಅನುಷ್ಠಾನ

ಬುಡಕಟ್ಟು ಪ್ಲಸ್ ಯೋಜನೆ ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಹೊಸದುರ್ಗ, ವೆಳ್ಳರಿಕುಂಡು ತಾಲೂಕುಗಳಲ್ಲಿ ಸಮರ್ಪಕವಾಗಿ ಕಾರ್ಯರೂಪಕ್ಕೆ ಬಂದಿದೆ. ಅರ್ಹ ಪರಿಶಿಷ್ಟ ಪಂಗಡ ಕುಟುಂಬಗಳನ್ನು ಗುರುತಿಸಿ ಅವರನ್ನು ಈ ಯೋಜನೆಯಲ್ಲಿ ಸೇರಿಸ ಲಾಗುತ್ತಿದೆ. ಇದೊಂದು ನಿರಂತರ ಪ್ರಕ್ರಿಯೆ ಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಕುಟುಂಬಗಳ ಸೇರ್ಪಡೆಗೊಳಿಸುವ ಗುರಿ ಹೊಂದಲಾಗಿದೆ. ಉದ್ಯೋಗ ಖಾತರಿ ಯೋಜನೆ ಯಡಿ ನಿರ್ವಹಿಸುವ ಎಲ್ಲಾ ಕೆಲಸಗಳ ಬುಡಕಟ್ಟು ಪ್ಲಸ್ ಯೋಜನೆಯಡಿ ನಡೆಸಬೇಕೆಂಬುದು ಮೂಲಸ್ವರೂಪವಾಗಿದ್ದು, ಈ ಎಲ್ಲಾ ಮಾನದಂ ಡಗಳಿಗೆ ಕಾರ್ಮಿಕರು ಒಪ್ಪಿಗೆ ನೀಡಿದಾಗ ಮಾತ್ರ 200 ದಿನಗಳ ಕೆಲಸ ಲಭ್ಯವಾಗುತ್ತದೆ. ಅಂದರೆ ಶ್ರಮವಹಿಸಿ ಕೆಲಸ ನಿರ್ವಹಿಸಬೇಕೆಂಬುದು ಈ ಯೋಜನೆ ಇನ್ನೊಂದು ಉದ್ದೇಶ.

ಸುತ್ತಮುತ್ತ

ಇಂದು ಕಾಸರಗೋಡಿನಲ್ಲಿ ಹಿಂದೂ ಏಕತಾ ಸಂಗಮ

ಕಾಸರಗೋಡು: ಕಾಸರಗೋಡು ಹಿಂದೂ ಸಮಾಜೋತ್ಸವ ಸಮಿತಿಯ ಆಶ್ರಯದಲ್ಲಿ ಹಿಂದೂ ಸಮಾಜದಲ್ಲಿ ಒಗ್ಗಟ್ಟು, ಜಾಗೃತಿ ಹಾಗೂ ಹಿಂದುತ್ವ ಆಶಯಗಳನ್ನು ಬಲಪಡಿಸುವ ಉದ್ದೇಶದಿಂದ ಮಾ.8ರಂದು ಕಾಸರಗೋಡು ನಗರದ ತಾಳಿಪಡ್ಪು ಮೈದಾನದಲ್ಲಿ ಕೋಟಿಚೆನ್ನಯ್ಯ ನಗರದಲ್ಲಿ ಹಿಂದೂ ಏಕತಾ ಸಂಗಮ ಕಾರ್ಯಕ್ರಮ ನಡೆಯಲಿದೆ.

ಸಂಜೆ 4 ಗಂಟೆಗೆ ಶ್ರೀ ವಿಷ್ಣುಸಹಸ್ರ ನಾಮ ಸ್ತೋತ್ರ ಸಾಮೂಹಿಕ ಪಾರಾಯಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ ವಂದೇ ಮಾತರಂ ಗಾಯನ ನಡೆಯಲಿದೆ. 4.30ಕ್ಕೆ ಕಾಸರಗೋಡು ಹಿಂದೂ ಸಮಾಜೋತ್ಸವ ಸಮಿತಿ ಅಧ್ಯಕ್ಷ ಸಂದೀಪ್ ಭಟ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಚಿನ್ಮಯ ಮಿಷನ್ ಕೇರಳ ಘಟಕದ ಮುಖ್ಯಸ್ಥರಾದ ಶ್ರೀ ವಿವಿಕ್ತಾನಂದ ಸರಸ್ವತೀ ಸ್ವಾಮೀಜಿ ದೀಪ ಪ್ರಜ್ವಲಿಸಿ ಆಶೀರ್ವಚನ ನೀಡುವರು.

ಖ್ಯಾತ ಆಧ್ಯಾತ್ಮಿಕ ಆಚಾರ್ಯ ಡಾ.ಎಂ.ಜಿ.ವಿನೋದ್ ಮುಖ್ಯ ಭಾಷಣಗಾರರಾಗಿವರು. ಪಾಣಾನ್ ಕಾರ್ನವರ್, ನಾಗೇಶ ಕಾರ್ನವರ್, ಮಾಧವನ್ ಕಾರ್ನವರ್, ಗೋಪಾಲಕೃಷ್ಣ ಕಾರ್ನವರ್, ದೈವಪಾತ್ರಿ ಚಿದಾನಂದ ಪೂಜಾರಿ, ದೈವನರ್ತಕ ಅಶೋಕ, ಗಿರಿಧರ ಕಾಮತ್, ಸಿ.ವಿ.ಪೊದುವಾಳ್, ರಂಗನಾಥ ಮಲ್ಯ, ಪ್ರದೀಪ್ ಬೇಕಲ್, ಕಲ್ಮಾಡಿ ಸದಾಶಿವ ಆಚಾರ್ಯ, ಎ.ಟಿ.ನಾಯ್ಕ್, ಕೆ.ಎನ್. ವೆಂಕಟ್ರಮಣ ಹೊಳ್ಳ, ದಾಮೋದರನ್ ನಾಯರ್, ರಾಮ ಪಡುಮಲೆ, ಪುರುಷೋತ್ತಮ ರಾವ್ ಧರೆಕರ್, ನಾಗೇಶ್ ರೈ, ಸುರೇಂದ್ರನ್ ಫಣಿಕ್ಕರ್ ಮೊದಲಾದವರು ಉಪಸ್ಥಿತರಿರುವರು. ಕಾಸರಗೋಡು ಹಿಂದೂ ಸಮಾಜೋತ್ಸವ ಸಮಿತಿ ಕಾರ್ಯದರ್ಶಿ ಕಮಲಾಕ್ಷ, ಶ್ರೀಲತಾ ಎಂ. ಸಹಿತ ಹಲವಾರು ಮಂದಿ ಭಾಗವಹಿಸುವರು. ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ 7ಗಂಟೆಗೆ ಶಾಂತಿಮಂತ್ರ ನಡೆಯಲಿದೆ.

ಪ್ರಾಜೆಕ್ಟ್ ಎಕ್ಸ್‌ಪೋ

ಕಾಸರಗೋಡು: ಬೋವಿಕ್ಕಾನ ಪೊವ್ವಲ್ ಎಲ್‌ಬಿಎಸ್ ಇಂಜಿನಿಯರಿಂಗ್ ಕಾಲೇಜು ನೇತೃತ್ವದಲ್ಲಿ ವಿವಿಧ ಇಂಜಿನಿಯರಿಂಗ್ ವಿಭಾಗಗಳ ಸಮನ್ವಯದೊಂದಿಗೆ ಯೋಜನಾ ಪ್ರದರ್ಶನ (ಪ್ರಾಜೆಕ್ಟ್ ಎಕ್ಸ್‌ಪೋ)ವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಪ್ರಾಂಶುಪಾಲ ಡಾ.ಮುಹಮ್ಮದ್ ಶುಕೂರ್ ಉದ್ಘಾಟಿಸಿದರು. ಸಂಶೋಧನಾ ಡೀನ್ ಡಾ.ಪಿ.ಪ್ರಮೋದ್, ಕಂಪ್ಯೂಟರ್ ಸಯನ್ಸ್ ಮತ್ತು ಇಂಜಿನಿಯರಿಂಗ್ ಸಂಘದ ಕಾರ್ಯದರ್ಶಿ ಶ್ರೀನಿವಾಸ್, ಮ್ಯೂಲ್‌ಲರ್ನ್ ಕ್ಲಬ್ ಕಾರ್ಯನಿರ್ವಾಹಕ ಸದಸ್ಯರು ಭಾಗವಹಿಸಿದ್ದರು. ನವೀನ ತಂತ್ರಜ್ಞಾನ ಬಳಸಿಕೊಂಡು ಸಾರ್ವಜನಿಕ ಪ್ರಯೋಜನ ಯೋಜನೆಗಳ ಪ್ರದರ್ಶನ ಪ್ರೇಕ್ಷಕರಿಗೆ ವಿಶಿಷ್ಟ ಅನುಭವವಾಗಿತ್ತು. ಪ್ರಾಜೆಕ್ಟ್ ಎಕ್ಸ್‌ಪೋದ ವಿಷಯ ಸಮಾಜಕ್ಕಾಗಿ ತಂತ್ರಜ್ಞಾನ ಆಗಿದೆ.

ಇಲೆಕ್ಟ್ರಾನಿಕ್ಸ್ ವಿಭಾಗದ ವಿದ್ಯಾರ್ಥಿಗಳಾದ ಅಮಲ್ ದೇವ್, ಅಬ್ದುಲ್ ರಶೀದ್, ಯಾನ್ ಕೃಷ್ಣನ್ ಮತ್ತು ವೈಷ್ಣವ್ ಗೋಪಾಲಕೃಷ್ಣನ್ ಅವರು ಪ್ರಸ್ತುತಪಡಿಸಿದ ಬಳಕೆದಾರ ದೃಢೀಕರಣದೊಂದಿಗೆ ಮತದಾನ ಯಂತ್ರವು ಪ್ರಥಮ ಸ್ಥಾನ ಗಳಿಸಿತು. ಕಂಪ್ಯೂಟರ್ ಸಯನ್ಸ್ ವಿಭಾಗದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ದೃಷ್ಟಿಹೀನರಿಗಾಗಿ ಬ್ರೈಲ್ ಪ್ರಿಂಟರ್ ಮತ್ತು ವಿದ್ಯುತ್ ವಿಭಾಗದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ವಿದ್ಯುತ್ ವಾಹನಗಳಿಗಾಗಿ ಸ್ಮಾರ್ಟ್ ವೈರ್‌ಲೆಸ್ ಚಾರ್ಜಿಂಗ್ ಮತ್ತು ಪಾರ್ಕಿಂಗ್ ವ್ಯವಸ್ಥೆ 2ನೇ ಸ್ಥಾನ ಪಡೆಯಿತು.

ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಕಾಸರಗೋಡು ಸರಕಾರಿ ಐಟಿಐ, ಮಲ್ಟಿಮೀಡಿಯಾ ಆನಿಮೇಷನ್ ಮತ್ತು ಸ್ಪೆಷಲ್ ಎಫೆಕ್ಟ್ಸ್ ಟ್ರೇಡ್ ವಲಯಗಳಲ್ಲಿ ಅತಿಥಿ ಉಪನ್ಯಾಸಕರ (ಸಾಮಾನ್ಯ ವರ್ಗ) ಸಂದರ್ಶನವು ಮಾ.10ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಪದವಿ, ಮಲ್ಟಿಮೀಡಿಯಾ ಆನಿಮೇಷನ್‌ನಲ್ಲಿ ಡಿಪ್ಲೊಮಾ ಅಥವಾ ಮಲ್ಟಿಮೀಡಿಯಾ ಆನಿಮೇಷನ್ ಮತ್ತು ಸ್ಪೆಷಲ್ ಎಫೆಕ್ಟ್ಸ್ ಟ್ರೇಡ್‌ನಲ್ಲಿ ಮೂರು ವರ್ಷಗಳ ಕೆಲಸದ ಅನುಭವದೊಂದಿಗೆ ಎನ್‌ಎಸಿ, ಒಂದು ವರ್ಷದ ಕೆಲಸದ ಅನುಭವದೊಂದಿಗೆ ಎನ್‌ಎಸಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 04994256440 ಕರೆ ಮಾಡಬಹುದು.

ಪೆರ್ಮುದೆ ಪೇಟೆಯಲ್ಲಿ ಬೀದಿ ನಾಯಿಗಳ ಹಿಂಡು: ಸ್ಥಳೀಯರಲ್ಲಿ ಭೀತಿ

ಉಪ್ಪಳ: ಪೆರ್ಮುದೆ ಪೇಟೆಯಲ್ಲಿ ಬೀದಿ ನಾಯಿಗಳ ಹಿಂಡು ರಸ್ತೆಯಲ್ಲಿ ಅಲೆದಾಡುತ್ತಿದ್ದು, ಸ್ಥಳೀಯರಲ್ಲಿ ಆತಂಕ ಸೃಷ್ಟಿಯಾಗಿದೆ. ಕಳೆದ ಹಲವು ದಿನಗಳಿಂದ ಇಲ್ಲಿನ ಪೇಟೆಯಲ್ಲಿ ಸುಮಾರು 10 ರಷ್ಟು ಬೀದಿ ನಾಯಿಗಳು ರಸ್ತೆಯಲ್ಲಿ, ಅಂಗಡಿ ಪರಿಸರಲ್ಲಿ ಕಚ್ಚಾಡಿಕೊಂಡು ಅಲೆದಾಡುತ್ತಿರುವುದು ಪಾದಚಾರಿಗಳ ಸಂಚಾರಕ್ಕೆ ಆತಂಕ ಉಂಟಾಗಿದೆ. ದಿನನಿತ್ಯ ಶಾಲಾ ಮಕ್ಕಳ ಸಹಿತ ಊರವರ ಸಂಚಾರಕ್ಕೆ, ವಾಹನ ಸವಾರರಿಗೆ ಭೀತಿ ಉಂಟಾಗಿದೆ. ವಿವಿಧ ಕಡೆಗಳಲ್ಲಿ ಬೀದಿ ನಾಯಿಗಳ ದಾಳಿಯಿಂದ ಹಲವು ಮಂದಿ ಗಾಯಗೊಂಡ ಘಟನೆ ನಡೆದಿದ್ದು, ನಾಯಿಗಳ ನಿಯಂತ್ರಣಕ್ಕೆ ಕ್ರಮಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಆತಂಕ ಹೆಚ್ಚಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ವೈದ್ಯರಿಗೆ ಹಲ್ಲೆ: ಇಬ್ಬರ ಬಂಧನ

ಮಂಜೇಶ್ವರ: ವೈದ್ಯರಿಗೆ ಹಲ್ಲೆಗೈದು ಗಾಯಗೊಳಿಸಿದ ಪ್ರಕರಣದಲ್ಲಿ ಆರೋಪಿಗಳಾದ ಇಬ್ಬರನ್ನು ಮಂಜೇಶ್ವರ ಪೊಲೀಸರು ಬಂಧಿಸಿದ್ದಾರೆ. ಉಪ್ಪಳ ಕೋಡಿಬೈಲು ನಿವಾಸಿ ಉಮ್ಮರ್ (45), ಆತನ ಸಹೋದರ ಕೋಡಿಬೈಲು ಅಡ್ಕತ್ತೊಟ್ಟಿಯ ಹೈದರಾಲಿ (33) ಬಂಧಿತ ಆರೋಪಿಗಳು. ಉಪ್ಪಳ ರೈಲು ನಿಲ್ದಾಣ ರಸ್ತೆಯ ದೇವಿಪ್ರಸಾದ್ ಮಾವೆ ಆಸ್ಪತ್ರೆಯ ವೈದ್ಯ ಕುಮಾರ್ ಶಾಶ್ವತ್ (42) ಎಂಬವರಿಗೆ ಹಲ್ಲೆಗೈದ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಕಾಸರಗೋಡಿನಲ್ಲಿ ನಿರ್ಮಿಸಲಾದ ಶಿಲ್ಪ 'ತಾಯಿ -ಮಗು' ಶೀಘ್ರ ಲೋಕಾರ್ಪಣೆ

ಕಾಸರಗೋಡು: ಕಾಸರಗೋಡು ಜಿಲ್ಲಾ ಪಂಚಾಯತ್ ಕೇಂದ್ರ ಕಚೇರಿಯಲ್ಲಿ ನಿರ್ಮಾಣ ಹಂತದಲ್ಲಿರುವ ಖ್ಯಾತ ಶಿಲ್ಪಿ ಕಾನಾಯಿ ಕುಂಞಿರಾಮನ್ ವಿನ್ಯಾಸಗೊಳಿಸಿದ 'ತಾಯಿ ಮತ್ತು ಮಗು' ಶಿಲ್ಪವನ್ನು ಶೀಘ್ರದಲ್ಲೇ ರಾಷ್ಟ್ರಕ್ಕೆ ಸಮರ್ಪಿಸಲಾಗುವುದು. ಶಿಲ್ಪಿ ಅವರ ವಯಸ್ಸಿನ ಹೊರತಾಗಿಯೂ, ಶಿಲ್ಪದ ಅಂತಿಮ ಸ್ಪರ್ಶವನ್ನು ವೈಯಕ್ತಿಕವಾಗಿ ಮುನ್ನಡೆಸುತ್ತಿದ್ದಾರೆ.

ಎಂಡೋಸಲ್ಫಾನ್ ಸಂತ್ರಸ್ತರ ಬದುಕು ಮತ್ತು ನೋವಿನ ಸಂಕೇತವಾಗಿ ಜಿಲ್ಲಾ ಪಂಚಾಯತ್ ಕಲ್ಪಿಸಿಕೊಂಡಿರುವ ಈ ಐತಿಹಾಸಿಕ ಸ್ಮಾರಕವು ಹದಿನೆಂಟು ವರ್ಷಗಳ ಕಾಯುವಿಕೆ ನಂತರ ಪೂರ್ಣಗೊಳ್ಳುತ್ತಿದೆ.

ವೃದ್ಧಾಪ್ಯದ ದೈಹಿಕ ತೊಂದರೆಗಳ ಹೊರತಾಗಿ ಕಾನಾಯಿ ಕುಂಞಿರಾಮನ್ ಈ ಕಾರ್ಯವನ್ನು ಪೂರ್ಣಗೊಳಿಸಲು ಪುನಃ ತೊಡಗಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ಬಿದ್ದ ನಂತರ ಅವರು ತಿಂಗಳುಗಟ್ಟಲೆ ಚಿಕಿತ್ಸೆ ಪಡೆಯುತ್ತಿದ್ದರು ಮತ್ತು ಅವರ ಪತ್ನಿ ನಳಿನಿ ಅವರ ಬೆಂಬಲದೊಂದಿಗೆ ಈ 40 ಅಡಿ ಎತ್ತರದ ಕಾಂಕ್ರೀಟ್ ಶಿಲ್ಪದ ಪ್ರತಿಯೊಂದು ಚಲನವಲನ ನಿರ್ವಹಿಸುತ್ತಿದ್ದಾರೆ. ತಮಿಳುನಾಡಿನ ಮಾರ್ತಾಂಡಮ್‌ನ ನುರಿತ ಕೆಲಸಗಾರರು ಪ್ರಸ್ತುತ ಶಿಲ್ಪದ ಮೇಲ್ಮೈ ಕೆಲಸದಲ್ಲಿ ನಿರತರಾಗಿದ್ದಾರೆ.



ದೃಢ ನಿರ್ಧಾರ

ಕಾಸರಗೋಡು ಜಿ.ಪಂ.ಗೆ ಇದು ಒಂದು ಪ್ರಮುಖ ಮೈಲಿಗಲ್ಲು. ವಿವಿಧ ಕಾರಣಗಳಿಂದ ಶಿಲ್ಪದ ನಿರ್ಮಾಣವು ಸ್ವಲ್ಪ ಸಮಯದಿಂದ ಸ್ಥಗಿತಗೊಂಡಿದ್ದರೂ, ಪ್ರಸ್ತುತ ಆಡಳಿತ ಸಮಿತಿ ಕೆಲಸವನ್ನು ಆದಷ್ಟು ಬೇಗ ಪೂರ್ಣಗೊಳಿಸಲು ದೃಢ ನಿರ್ಧಾರ ಹೊಂದಿದೆ.

● ಸಾಬು ಅಬ್ರಹಾಂ, ಜಿ.ಪಂ.ಅಧ್ಯಕ್ಷ

ಮುಂದಿನ ತಿಂಗಳಲ್ಲಿ ನಿರ್ಮಾಣವನ್ನು ಪೂರ್ತಿಗೊಳಿಸಿ ಶಿಲ್ಪವನ್ನು ಸಾರ್ವಜನಿಕರಿಗೆ ತೆರೆಯುವ ಗುರಿಯನ್ನು ಜಿಲ್ಲಾ ಪಂಚಾಯತ್ ಹೊಂದಿದೆ ಎಂದು ಅವರು ತಿಳಿಸಿದರು. ಈ ಶಿಲ್ಪವು ಕಾಸರಗೋಡಿನ ಸಾಂಸ್ಕೃತಿಕ ನಕ್ಷೆಯಲ್ಲಿ ಪ್ರಮುಖ ಹೆಗ್ಗುರುತಾಗುವ ನಿರೀಕ್ಷೆಯಿದೆ.

ನಾಳೆ ಮುನಿಯೂರು ಶ್ರೀ ಮಹಾವಿಷ್ಣು ದೇವರಿಗೆ ಸಹಸ್ರ ಬ್ರಹ್ಮಕಲಶಾಭಿಷೇಕ

ಬದಿಯಡ್ಕ: ಭಗವದ್ಭಕ್ತರ ಶ್ರದ್ಧಾಭಕ್ತಿಯ ಪ್ರಾರ್ಥನೆಯೊಂದಿಗೆ ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳವರ ನೇತೃತ್ವದಲ್ಲಿ ಶನಿವಾರ ಬೆಳಿಗ್ಗೆ ಗಣಪತಿ ಹೋಮ, ಇಂದ್ರಾದಿ ದಿಕ್ಪಾಲಕರ ಪ್ರತಿಷ್ಠೆ ಸಪ್ತಮಾತೃಕ ಪ್ರತಿಷ್ಠೆ ನಿರ್ಮಾಲ್ಯಧಾರಿ ಪ್ರತಿಷ್ಠೆ ಅಂಕುರ ಪೂಜೆ, ಸೋಪಾನ ಪೂಜೆ ನಡೆಯಿತು. ಸಂಜೆ ಕಲರ್ಸ್ ಕನ್ನಡ ಖ್ಯಾತಿಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತುಳುನಾಡ ಗಾನಗಂಧರ್ವ ಬಿರುದಾಂಕಿತ ಪುತ್ತೂರು ಜಗದೀಶ್ ಆಚಾರ್ಯ ಬಳಗದವರಿಂದ ಸಂಗೀತ ಗಾನ ಸಂಭ್ರಮ ನಡೆಯಿತು.

ಇಂದಿನ ಕಾರ್ಯಕ್ರಮ

ಮಾ.8ರಂದು ಬೆಳಗ್ಗೆ ಗಣಪತಿ ಹೋಮ, ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ, ತತ್ವಹೋಮ, ತತ್ವಕಲಶಪೂಜೆ, ಕುಂಭೇಶ ಕರ್ಕರಿ ಪೂಜೆ, ಅಂಕುರ ಪೂಜೆ, ಸೋಪಾನ ಪೂಜೆ, ಬ್ರಹ್ಮಕಲಶ ಪೂಜೆ, ಮಧ್ಯಾಹ್ನ ಸೋಪಾನ ಪೂಜೆ, ಮಹಾಪೂಜೆ, ಸಂಜೆ 6ರಿಂದ ಪರಿಕಲಶಪೂಜೆ, ಅಧಿವಾಸ ಹೋಮ, ಆವಾಸ ಬಲಿ, ಕಲಶಾಧಿವಾಸ, ಸೋಪಾನ ಪೂಜೆ, ಮಹಾಬಲಿ, ಪೀಠಾಧಿವಾಸ, ರಾತ್ರಿಪೂಜೆ, ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 5.30ರಿಂದ ಧಾರ್ಮಿಕ ಸಭೆ ನಡೆಯಲಿದೆ. ಉಡುಪಿ ಕಾಣಿಯೂರು ಮಠದ ಪರಮಪೂಜ್ಯ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದರಿಂದ ಆಶೀರ್ವಚನ. ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಉದ್ಯಮಿ ಬಿ.ವಸಂತ ಪೈ ಬದಿಯಡ್ಕ ಅಧ್ಯಕ್ಷತೆ ವಹಿಸಲಿದ್ದಾರೆ. ವಾಸ್ತುಶಿಲ್ಪಿ ಕೃಷ್ಣಪ್ರಸಾದ ಮುನಿಯಂಗಳ, ಕಾರ್ಕಳ ಶಿಲ್ಪಕಲಾ ಕೇಂದ್ರದ ಗುಣವಂತೇಶ್ವರ ಭಟ್ ದಿವ್ಯ ಉಪಸ್ಥಿತರಿರುವರು.



ಕುಳೂರು ಕನ್ಯಾನ ಸದಾಶಿವ ಶೆಟ್ಟಿ, ಎಡಕ್ಕಾನ ಮಹಾಬಲೇಶ್ವರ ಭಟ್, ಕೆ.ಕೆ.ಶೆಟ್ಟಿ ಕುತ್ತಿಕ್ಕಾರು, ಶಿವಶಂಕರ ನೆಕ್ರಾಜೆ, ಧರ್ಮಸ್ಥಳ ಗ್ರಾಮಾಭಿ ವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ದಿನೇಶ್ ಮುಖ್ಯ ಅಭ್ಯಾಗತರಾಗಿ ಪಾಲ್ಗೊಳ್ಳುವರು.

ಯಕ್ಷಗಾನ ಬಯಲಾಟ

ಸಂಜೆ 7ರಿಂದ ಮಾಣಿಲ ಶ್ರೀಧಾಮದ ಶ್ರೀ ಮಹಾಲಕ್ಷ್ಮೀ ಕೃಪಾಪೋಷಿತ ಯಕ್ಷಗಾನ ಮಂಡಳಿಯ ವರಿಂದ ಶ್ರೀಹರಿದರ್ಶನ ಯಕ್ಷಗಾನ ಬಯಲಾಟ ಡಾ.ಸತೀಶ್ ಪುಣಿಂಚತ್ತಾಯ ಪ್ರಾಯೋಜಕತ್ವದಲ್ಲಿ ನಡೆಯಲಿದೆ.

ತಲಪಾಡಿ ಟೋಲ್ ಮಂಜೇಶ್ವರಕ್ಕೆ ಫ್ರೀ ಪಾಸ್ ನೀಡಲು ಬಿಜೆಪಿ ಮನವಿ



ಮಂಜೇಶ್ವರ: ತಲಪಾಡಿ ಟೋಲ್ ಮಂಜೇಶ್ವರ ಪಂಚಾಯತ್ ವ್ಯಾಪ್ತಿಯ ವಾಹನಗಳಿಗೆ ಫ್ರೀ ಪಾಸಿಂಗ್ ನೀಡಬೇಕು ಎಂದು ಬಿಜೆಪಿ ಮಂಜೇಶ್ವರ ಮಂಡಲ ಸಮಿತಿಯು ಮಂಗಳೂರು ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರಲ್ಲಿ ಕರ್ನಾಟಕ ಹೆದ್ದಾರಿ ಮುಖ್ಯಸ್ತರಿಗೆ ಮನವಿ ಮಾಡಿದೆ.

ತಲಪಾಡಿ ಟೋಲ್ ತಲಪಾಡಿ ಗ್ರಾಮಕ್ಕೆ ಫ್ರೀ ಆಗಿರುವಂತೆ ಮಂಜೇಶ್ವರ ಪಂಚಾಯತ್ ವ್ಯಾಪ್ತಿಯ ವಾಹನಗಳಿಗೆ ಫ್ರೀ ಪಾಸಿಂಗ್ ನೀಡಬೇಕೆಂದು ಆಗ್ರಹಿಸಿದೆ. ಮಂಜೇಶ್ವರ ಶಾಸಕರಾಗಲಿ, ಸಂಸದರಾಗಲಿ ಈ ವಿಚಾರದಲ್ಲಿ ಮೌನವಾಗಿದ್ದಾರೆ. ಆದುದರಿಂದ ಜನತೆಯ ಬೇಡಿಕೆಯನ್ನು ಬಿಜೆಪಿ ಎತ್ತಿ ಹಿಡಿದಿದ್ದು ತಲಪಾಡಿ ಟೋಲ್ ಕರ್ನಾಟಕ ರಿಜಿನಲ್ ವಿಭಾಗದಲ್ಲಿ ಬರುವ ಕಾರಣ ಮಂಗಳೂರು ಸಂಸದರ ಮೂಲಕ ಮನವಿ ಸಲ್ಲಿಸಲಾಗಿದೆ ಎಂದು ಬಿಜೆಪಿ ಮಂಜೇಶ್ವರ ಮಂಡಲ ಅಧ್ಯಕ್ಷ ಆದರ್ಶ್ ಬಿ.ಎಂ. ಹೇಳಿದರು.

ಬಿಜೆಪಿ ಮುಖಂಡರಾದ ವಿಜಯ್ ಕುಮಾರ್ ರೈ, ಯತೀಶ್ ಭಂಡಾರಿ, ಕಾರ್ತಿಕ್ ಶೆಟ್ಟಿ, ವಕೀಲ ನವೀನ್‌ರಾಜ್, ಆಶಾಲತಾ ಬಿ.ಎಂ., ಉಪಸ್ಥಿತರಿದ್ದರು.

ಕ್ರಮ ಕೈಗೊಳ್ಳುವ ಭರವಸೆ

ಮನವಿಯ ಬಗ್ಗೆ ಹೆದ್ದಾರಿ ಅಧಿಕಾರಿಗಳಲ್ಲಿ ಮಾತನಾಡಿ ಶೀಘ್ರದಲ್ಲೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದ ಬ್ರಿಜೇಶ್ ಚೌಟ ಭರವಸೆ ನೀಡಿದರು.

ಕುಂಬ್ಡಾಜೆ: ಗರ್ಭಕೋಶದ ಕ್ಯಾನ್ಸರ್ ತಡೆಗೆ ಬಾಲಕಿಯರಿಗೆ ಎಚ್‌ಪಿವಿ ಲಸಿಕೆ



ಬದಿಯಡ್ಕ: ಗರ್ಭಕೋಶದ ಕ್ಯಾನ್ಸರ್ ತಡೆಗಟ್ಟಲು 14 ವರ್ಷ ವಯಸ್ಸಿನ ಬಾಲಕಿಯರಿಗೆ ಉಚಿತ ಎಚ್‌ಪಿವಿ ಲಸಿಕೆಯನ್ನು ಒದಗಿಸಲು ಭಾರತ ಸರಕಾರದ ಬೃಹತ್ ಕಾರ್ಯಕ್ರಮದಂಗವಾಗಿ ಕುಂಬ್ಡಾಜೆ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಶನಿವಾರ ಲಸಿಕೆ ವಿತರಣೆ ಕಾರ್ಯಕ್ರಮ ನಡೆಯಿತು.

ಕುಂಬ್ಡಾಜೆ ಗ್ರಾಮ ಪಂಚಾಯತ್ ಆರೋಗ್ಯ ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕಾ ಎ.ಸಿ. ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಮತ್ತು ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ ಉದ್ಘಾಟಿಸಿದರು.

ಈ ಸಂದರ್ಭ ಪಂಚಾಯತ್ ಸದಸ್ಯರಾದ ಸೌಭಾಗ್ಯಲಕ್ಷ್ಮಿ, ಆಯಿಷತ್ ಮಶಿದಾ ಮತ್ತು ಬಬಿತಾ ರೇಷ್ಮಾ ಮೊದಲಾದವರು ಭಾಗವಹಿಸಿದ್ದರು. ವೈದ್ಯಕೀಯ ಅಧಿಕಾರಿ ಡಾ.ಸೈಯದ್ ಶುಹೈಬ್ ತಂಳ್, ಆರೋಗ್ಯ ನಿರೀಕ್ಷಕ ಸುರೇಶ್‌ಕುಮಾರ್. ಎಲ್‌ಎಚ್‌ಐ ಎನ್.ಉಷಾ, ಜೆಪಿಎಚ್‌ಎನ್ ನಿಶಾದಾ, ಜೆಎಚ್‌ಐ ಜಿಜು ಮಾರ್ಕೋಸ್, ಎಂಎಲ್‌ಎಸ್‌ಪಿ ನರ್ಸ್. ಮಿಥ್ಯಾ ನಂಬಿಯಾರ್ ಆಶಾ ಕಾರ್ಯಕರ್ತೆಯರಾದ ಶರ್ಮಿಳಾ, ಇಂದಿರಾ, ಎಫ್‌ಎಚ್‌ಸಿ ಸಿಬ್ಬಂದಿಗಳು, ವಿದ್ಯಾರ್ಥಿಗಳು ಮತ್ತು ಪೋಷಕರು ಈ ಸಂದರ್ಭದಲ್ಲಿ ಭಾಗವಹಿಸಿದರು.

ಎಚ್‌ಪಿವಿ ಲಸಿಕೆ ಪಡೆದ ಎಲ್ಲಾ ಮಕ್ಕಳಿಗೆ ಪ್ರಮಾಣಪತ್ರಗಳು ಮತ್ತು ಉಡುಗೊರೆಗಳನ್ನು ವಿತರಿಸಲಾಯಿತು.

- **ಗರ್ಭಕೋಶದ ಕ್ಯಾನ್ಸರ್ ತಡೆಗಟ್ಟಲು ಭಾರತ ಸರಕಾರದಿಂದ ಬೃಹತ್ ಕಾರ್ಯಕ್ರಮ ಆಯೋಜನೆ**
- **14 ವರ್ಷ ವಯಸ್ಸಿನ ಬಾಲಕಿಯರಿಗೆ ಉಚಿತ ಎಚ್‌ಪಿವಿ ಲಸಿಕೆ**

ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನ: ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶ

ಕಾಸರಗೋಡು: ಅಡ್ಕತ್ತಬೈಲು ಅರ್ಜಾಲು ಶ್ರೀ ಧೂಮಾವತಿ ದೈವಸ್ಥಾನ ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಹಾಗೂ ಧರ್ಮನೇಮ ಮಾ.26ರಿಂದ 29ರ ವರೆಗೆ ಜರಗಲಿದೆ. ಮಾ.26ರಂದು ಅಪರಾಹ್ನ 3 ಕ್ಕೆ ಗುಡ್ಡೆ ಶ್ರೀ ಮಹಾಲಿಂಗೇಶ್ವರ ಕ್ಷೇತ್ರದಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಹೊರಡಲಿದೆ. ಬಳಿಕ ಉಗ್ರಾಣ ತುಂಬಿಸುವುದು, ಸಂಜೆ 4ರಿಂದ ಭಜನೆ, 5ಕ್ಕೆ ಬ್ರಹ್ಮಶ್ರೀ ವಿಷ್ಣುಪ್ರಕಾಶ್ ತಂತ್ರಿ ಕಾವು ಮಠ ಅವರಿಗೆ ಪೂರ್ಣಕುಂಭ ಸ್ವಾಗತ , ವೈದಿಕರ ಆಗಮನ, 6ರಿಂದ ವಿವಿಧ ವೈದಿಕ ಕಾರ್ಯಕ್ರಮ, ರಾತ್ರಿ 8ಕ್ಕೆ ಭಜನೆ ನಡೆಯಲಿದೆ.

ಮಾ,27ರಂದು ಬೆಳಿಗ್ಗೆ 6 ಗಂಟೆಗೆ ಮಹಾಗಣಪತಿ ಹೋಮ, ಬ್ರಹ್ಮಕಲಶ ಪೂಜೆ, 9.24ರಿಂದ 10.47ರ ತನಕದ ಮುಹೂರ್ತದಲ್ಲಿ ಶ್ರೀ ಧೂಮಾವತಿ ದೈವದ ಪ್ರತಿಷ್ಠೆ ಅರ್ಜಾಲು ಗೋಳಿತ್ತಡಿಯಲ್ಲಿ ಒಂದು ಕಡಿಮೆ ನಲ್ವತ್ತು ದೈವದ ಕಟ್ಟೆಯ ಪ್ರತಿಷ್ಠೆ, ಮಹಾಪೂಜೆ, ಪ್ರಾರ್ಥನೆ, ನಿತ್ಯ ನೈಮಿತ್ತಿಕ ನಿರ್ಣಯ, ಮಧ್ಯಾಹ್ನ 1.30ರಿಂದ ಯಕ್ಷಗಾನ ಕೂಟ, ಸಂಜೆ 4ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ ನೀಡಲಾಗುವುದು. ಬಳಿಕ ಧಾರ್ಮಿಕ , ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಸಮಾರಂಭದಲ್ಲಿ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡುವರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ದೇರಣ್ಣ ರೈ ಪುತ್ರಕಳ ಅಧ್ಯಕ್ಷತೆ ವಹಿಸುವರು. ಧಾರ್ಮಿಕ, ಸಾಮಾಜಿಕ ಮುಂದಾಳು ಎಂ. ಸಂಜೀವ ಶೆಟ್ಟಿ ಮೊಟ್ಟೆಕುಂಜ, ಜಿಲ್ಲಾ ಬಂಟರ ಸಂಘದ ಅಧ್ಯಕ್ಷ , ವಕೀಲ ಸುಬ್ಬಯ್ಯ ರೈ ಅತಿಥಿಗಳಾಗಿರುವರು. ಅರ್ಜಾಲು ತರವಾಡು ಪ್ರಧಾನ ಅರ್ಚಕ ಗೋಪಾಲಕೃಷ್ಣ ಅಡಿಗ, ವಾಸ್ತುಶಿಲ್ಪಿ ರಮೇಶ್ ಕಾರಂತ ಬೆದ್ರಡ್ಕ ಶುಭಾಶಂಸನೆ ಗೈಯ್ಯುವರು. ಪ್ರಾಧ್ಯಾಪಕಿ ಅರ್ಪಿತಾ ಪ್ರಶಾಂತ್ ಶೆಟ್ಟಿ ಕಟಪಾಡಿ ಧಾರ್ಮಿಕ ಭಾಷಣ ಮಾಡುವರು. ರಾತ್ರಿ 7ರಿಂದ ವಿಠಲ ನಾಯಕ್ ಕಲ್ಲಡ್ಕ ಬಳಗದವರಿಂದ ಗೀತಾ ಸಾಹಿತ್ಯ ಸಂಭ್ರಮ, 9ಕ್ಕೆ ಮಕ್ಕಳಿಂದ ನೃತ್ಯ ವೈವಿಧ್ಯ ಜರಗಲಿದೆ.

ಮಾ.28ರಂದು ಬೆಳಿಗ್ಗೆ 8ಕ್ಕೆ ಗಣಪತಿಹೋಮ, ಮುಡಿಪು ಪೂಜೆ, ಮಧ್ಯಾಹ್ನ 1.30ರಿಂದ ಸುಧಾಕರ ಕೋಟೆಕುಂಜತ್ತಾಯರಿಂದ ಹರಿಕಥಾ ಸತ್ಸಂಗ, ಅಪರಾಹ್ನ 3.30ರಿಂದ ಭಜನೆ, ಸಂಜೆ 6.30ರಿಂದ ಕುಣಿತ ಭಜನೆ, ರಾತ್ರಿ 7ರಿಂದ ದೈವಗಳ ಭಂಡಾರ ಇಳಿಯುವುದು, 8ಕ್ಕೆ ಗುಳಿಗನ ಕೋಲ, ಉಪದೈವಗಳ ಕೋಲ ನಡೆಯಲಿದೆ. ಮಾ.29ರಂದು ಬೆಳಗ್ಗೆ 8ಕ್ಕೆ ಶ್ರೀ ಧೂಮಾವತಿ ಧರ್ಮದೈವ ನೇಮ, ಉಪದೈವಗಳ ಕೋಲ, ರಾತ್ರಿ 7ಕ್ಕೆ ಅರ್ಜಾಲು ಗೋಳಿತ್ತಡಿಯಲ್ಲಿ ಒಂದು ಕಡಿಮೆ ನಲ್ವತ್ತು ದೈವಗಳ ಕೋಲ ನಡೆಯಲಿದೆ. ಉತ್ಸವ ದಿನಗಳಲ್ಲಿ ಮಧ್ಯಾಹ್ನ, ರಾತ್ರಿ ಅನ್ನಸಂತರ್ಪಣೆ ಇದೆ.

ಮಹಿಳೆಯರ ಆರ್ಥಿಕ ಮಟ್ಟ ಹೆಚ್ಚಿಸುವಲ್ಲಿ ಕೇಂದ್ರ ಸರಕಾರದ ಪಾತ್ರ ಮಹತ್ವದ್ದು: ಅಶ್ವಿನಿ



ಕಾಞಂಗಾಡು: ಮಹಿಳಾ ಮೋರ್ಚಾ ಕಾಸರಗೋಡು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾಞಂಗಾಡು ಅಂಬಲತ್ತರ ಸ್ನೇಹವೀಡುವಿನಲ್ಲಿ ಶನಿವಾರ ಜರಗಿತು.

ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಉದ್ಘಾಟಿಸಿ ಮಾತನಾಡಿ, ಕೇಂದ್ರ ಸರಕಾರ ಜಾರಿಗೊಳಿಸಿದ ಹಲವು ಆರ್ಥಿಕ ಪರಿಷ್ಕಾರಗಳು ಮಹಿಳೆಯರ ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದರು.

ರಾಷ್ಟ್ರಪತಿ ಸಹಿತ ಹಲವು ಪ್ರಮುಖ ಹುದ್ದೆಗಳಲ್ಲಿ ಮಹಿಳೆಯರು ಇದ್ದಾರೆ. ಇದು ನರೇಂದ್ರ ಮೋದಿ ಸರಕಾರದ ಸಾಧನೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸ್ನೇಹವೀಡು ಸಿಬ್ಬಂದಿ ಮುನೀಸ, ತೈಕೊಂಡೊ ರಾಷ್ಟ್ರೀಯ ವಿಜೇತೆ ಸ್ನೇಹ ಕೆ. ಸಹಿತ ಹಲವರನ್ನು ಸನ್ಮಾನಿಸಲಾಯಿತು.

ಮಹಿಳಾಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್.ರಮಣಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿತಾ ನಾಯಕ್, ಪ್ರೇಮಲತ ಎಸ್., ಆಶಾ, ಕೆ.ಶೋಭನಾ, ಸಜಿ, ಶೀಬಾ, ಮುರಳೀಧರನ್ ಎ.ಎಂ., ಅಂಬಲತ್ತರ ಕುಂಞಿಕೃಷ್ಣನ್ ಮತ್ತಿತರರಿದ್ದರು.

ಏಪ್ರಿಲ್ 4ರಿಂದ ಪೆರಡಾಲದಲ್ಲಿ ವಸಂತವೇದ ಶಿಬಿರ ಆರಂಭ

ಬದಿಯಡ್ಕ: ಕಾಸರಗೋಡು ಹೊಸದುರ್ಗ ಹೈವ ಬ್ರಾಹ್ಮಣ ಸಭಾ ಪೆರಡಾಲ ಇದರ ನೇತೃತ್ವದಲ್ಲಿ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಅನೇಕ ವರ್ಷಗಳಿಂದ ನಡೆದು ಬರುತ್ತಿರುವ ವಸಂತ ವೇದ ಶಿಬಿರವು ಏಪ್ರಿಲ್ 4ರಿಂದ ಆರಂಭವಾಗಲಿರುವುದು. ಯಜುರ್ವೇದ ಉಪನೀತ ವಟುಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕುಂಬಳೆ ಕೊಯಿಪ್ಪಾಡಿಯಲ್ಲಿ 'ಸುಭದ್ರಾಂ' ವಸತಿ ಸಂಕೀರ್ಣ ಆನ್‌ಲೈನ್ ಮೂಲಕ ಸಚಿವರಿಂದ ಉದ್ಘಾಟನೆ

ಮೊದಲ ಹಂತದಲ್ಲಿ 24 ಕುಟುಂಬಗಳಿಗೆ ಕೀಲಿ ಕೈಗಳ ಹಸ್ತಾಂತರ

ಕುಂಬಳೆ: ಪುನರ್ಗೇಹಂ ಯೋಜನೆಯ ಮೂಲಕ ಕುಂಬಳೆ ಕೊಯಿಪ್ಪಾಡಿಯಲ್ಲಿ ನಿರ್ಮಿಸಲಾದ ಸುಭದ್ರಾಂ ವಸತಿ ಸಂಕೀರ್ಣದ ಮೊದಲ ಹಂತವನ್ನು ಮೀನುಗಾರಿಕೆ, ಸಂಸ್ಕೃತಿ ಮತ್ತು ಯುವಜನ ವ್ಯವಹಾರಗಳ ಸಚಿವ ಸಜಿ ಚೆರಿಯಾನ್ ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಮೊದಲ ಹಂತದಲ್ಲಿ 24 ಕುಟುಂಬಗಳಿಗೆ ಕೀಲಿಗಳ ಹಸ್ತಾಂತರಿಸಲಾಯಿತು.

2019–20ನೇ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲಾದ ಪುನರ್ಗೇಹಂ ಯೋಜನೆ ಮೂಲಕ ರಾಜ್ಯದಲ್ಲಿ ವಸತಿ ಸಂಕೀರ್ಣಗಳು ಮತ್ತು ಮನೆಗಳು ಸೇರಿದಂತೆ 5800 ಮನೆಗಳು ಇಲ್ಲಿಯ ವರೆಗೆ ಪೂರ್ಣಗೊಂಡಿವೆ ಎಂದು ಸಚಿವ ಸಜಿ ಚೆರಿಯಾನ್ ಹೇಳಿದರು.

23.20 ಕೋ.ರೂ. ವೆಚ್ಚದಲ್ಲಿ ಸಿದ್ಧ

ಕರಾವಳಿ ಪ್ರದೇಶದ ಜನರ ಸುರಕ್ಷತೆ , ಘನತೆ ಖಚಿತಪಡಿಸಿಕೊಳ್ಳಲು ಸರಕಾರ ಬದ್ಧವಾಗಿದೆ. ಕರಾವಳಿ ಪ್ರದೇಶದ ಜನರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕೊಯಿಪ್ಪಾಡಿಯಲ್ಲಿ ವಸತಿ ಸಮುಚ್ಚಯವನ್ನು 23.20 ಕೋ.ರೂ. ವೆಚ್ಚದಲ್ಲಿ ಸಿದ್ಧಪಡಿಸ ಲಾಗಿದೆ. ಮೊದಲ ಹಂತದಲ್ಲಿ 24 ಕುಟುಂಬಗಳಿಗೆ ಕೀಲಿಗಳನ್ನು ಹಸ್ತಾಂತರಿಸುವ ಮೂಲಕ ಹೊಸ ಜೀವನ ಪ್ರಾರಂಭವಾಗುತ್ತಿದೆ ಎಂದು ಹೇಳಿದರು.



ಕೊಯಿಪ್ಪಾಡಿಯಲ್ಲಿ ನಡೆದ ಸಮಾರಂಭದಲ್ಲಿ ಶಾಸಕ ಎ.ಕೆ.ಎಂ.ಅಶ್ರಫ್ ಅಧ್ಯಕ್ಷತೆ ವಹಿಸಿದ್ದರು. ಬಂದರು ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಕೆ.ಕೆ.ರೂಪೇಶ್ ವರದಿ ಮಂಡಿಸಿದರು. ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲಾ ತಂಙಳ್, ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್, ಮಂಜೇಶ್ವರ ಗ್ರಾ.ಪಂ. ಅಧ್ಯಕ್ಷ ಬಶೀರ್ ಕನಿಲ, ಕುಂಬಳೆ ಗ್ರಾ.ಪಂ. ಉಪಾಧ್ಯಕ್ಷ ಎಂ.ಬಲ್ಕೀಸ್, ಜಿ.ಪಂ. ಸದಸ್ಯ ಅಜೀಜ್ ಕಳತ್ತೂರು, ಕುಂಬಳೆ ಗ್ರಾ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷರಾದ ಎ.ಕೆ.ಆರಿಫ್, ಎಂ.ಪಿ.ಖಾಲಿದ್, ಇನಾಸ್ ಫವಾಜ್ ಕೊಹಿನೂರ್, ಸದಸ್ಯೆ ಶಾರದಾ, ಉತ್ತರ ವಲಯ ಮೀನುಗಾರಿಕೆ ಜಂಟಿ ನಿರ್ದೇಶಕ ಬಿ.ಕೆ.ಸುಧೀರ್ ಕಿಶನ್, ಮತ್ಸ್ಯಫೆಡ್ ಜಿಲ್ಲಾ ವ್ಯವಸ್ಥಾಪಕ ಕೆ.ಎಚ್. ಶರೀಫ್ ಮತ್ತು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮಾತನಾಡಿದರು. ಕುಂಬಳೆ ಗ್ರಾ.ಪಂ.ಅಧ್ಯಕ್ಷ ಪಿ.ಪಿ.ಅಬ್ದುಲ್‌ಖಾದರ್ ಸ್ವಾಗತಿಸಿ, ಮೀನುಗಾರಿಕಾ ಜಿಲ್ಲಾ ಉಪ ನಿರ್ದೇಶಕ ಕೆ.ಎ.ಲಬೀಬ್ ವಂದಿಸಿದರು.

ಅನುಮೋದನೆ

2450 ಕೋ.ರೂ. ವೆಚ್ಚದಲ್ಲಿ ಪ್ರಾರಂಭಿಸಲಾದ ಈ ಯೋಜನೆಯು ರಾಜ್ಯದಲ್ಲಿ ಸಮುದ್ರ ತೀರದಿಂದ 50 ಮೀಟರ್ ಒಳಗೆ ವಾಸಿಸುವ 9108 ಕುಟುಂಬಗಳು ಸ್ಥಳಾಂತರಗೊಳ್ಳಲು ಇಚ್ಛೆ ವ್ಯಕ್ತಪಡಿಸಿದ್ದು, 6000 ಕುಟುಂಬಗಳಿಗೆ ಭೂಮಿ ಗುರುತಿಸಲಾಗಿದೆ ಮತ್ತು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆಯಲಾಗಿದೆ.

ಸುತ್ತಮುತ್ತ

ಇಂದು ಹಿಂದೂ ರುದ್ರಭೂಮಿ ಉದ್ಘಾಟನೆ

ಕಾರ್ಕಳ: ದಾನಿಗಳ ನೆರವಿನಿಂದಲೇ 38ನೇ ಕಳ್ತೂರು ಸಂತೆಕಟ್ಟೆಯಲ್ಲಿ ಸುಮಾರು 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಸುಸಜ್ಜಿತ ಹಿಂದೂ ರುದ್ರಭೂಮಿ ಇಂದು (ಮಾ.8) ಲೋಕಾರ್ಪಣೆಗೊಳ್ಳಲಿದೆ. ಈ ಭಾಗದಲ್ಲಿ ಸುಸಜ್ಜಿತವಾದ ಸ್ಮಶಾನದ ಸೌಕರ್ಯ ಈವರೆಗೆ ಇರಲಿಲ್ಲ, ಬಹುದೂರದ ಕೊಕ್ಕರ್ಣೆ, ಹೆಬ್ರಿಗೆ ಹೋಗಬೇಕಿತ್ತು. ಇದೀಗ ಹಿಂದೂ ರುದ್ರಭೂಮಿ ನಿರ್ಮಾಣದ ಮೂಲಕ ಜನರ ಬೇಡಿಕೆ ಈಡೇರಿದ್ದು ಕೊರತೆ ನೀಗಿದೆ 38ನೇ ಕಳ್ತೂರು ಸಂತೆಕಟ್ಟೆಯ ಸ್ಮಶಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ರುದ್ರಭೂಮಿ ನಿರ್ಮಾಣದ ರೂವಾರಿ ಬಿ. ಚಂದ್ರಶೇಖರ ಶೆಟ್ಟಿ ತಿಳಿಸಿದ್ದಾರೆ. 0.78 ಎಕರೆ ಜಾಗವನ್ನು ಸಾರ್ವಜನಿಕ ಹಿಂದೂರುದ್ರಭೂಮಿಗಾಗಿಯೇ ಜಾಗವನ್ನು ಕಾದಿರಿಸಿ ಅದೇ ಜಾಗದಲ್ಲಿ ಸಾರ್ವಜನಿಕ ಹಿಂದೂ ಭೂಮಿಯನ್ನು ನಿರ್ಮಿಸಲಾಗಿದೆ. 2005ರಿಂದ 2010ರ ತನಕ ಗ್ರಾಮ ಪಂಚಾಯತ್ ಸದಸ್ಯನಾಗಿ ಆಗ ಸ್ಮಶಾನ ನಿರ್ಮಾಣದ ಕನಸು ಕಂಡಿದ್ದೆ, ಹಲವು ಪ್ರಯತ್ನದ ಫಲವಾಗಿ 2021ರಲ್ಲಿ ಸದಸ್ಯನಾಗಿ ಸ್ಮಶಾನ ನಿರ್ಮಾಣಕ್ಕೆ ವಿಶೇಷ ಯೋಜನೆಯನ್ನು ಸಿದ್ಧಪಡಿಸಿ ನಮ್ಮೂರಿನ ದಾನಿಗಳಲ್ಲಿ ಪ್ರಸ್ತಾಪಿಸಿದಾಗ ಎಲ್ಲರೂ ಸಂತೋಷದಿಂದ ಒಪ್ಪಿ ನೆರವು ನೀಡಿದ್ದಾರೆ, ಆದರ ಫಲವಾಗಿಯೇ ಈಗ ರುದ್ರಭೂಮಿ ನಿರ್ಮಾಣಗೊಂಡಿದೆ ಎಂದು ಚಂದ್ರಶೇಖರ ಶೆಟ್ಟಿ ಸಂತಸ ವ್ಯಕ್ತಪಡಿಸಿದರು.

ಮಾ.10ರಂದು ಸಭೆ

ಕಾರ್ಕಳ: ಮೆಸ್ಕಾಂ ಕಾರ್ಕಳ ಉಪವಿಭಾಗ ಕಚೇರಿಯಲ್ಲಿ ಮಾ.10ರಂದು ಬೆಳಗ್ಗೆ 10.30ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು ಸಂಬಂಧಪಟ್ಟ ಪ್ರದೇಶದ ಗ್ರಾಹಕರಿಗೆ ಅಹವಾಲು ಸಲ್ಲಿಸಲು ಅವಕಾಶವಿದ್ದು ದೂ. ಸಂ. 08258-230648 ಮೂಲಕವೂ ದೂರು ನೀಡಬಹುದಾಗಿದೆ ಎಂದು ಮೆಸ್ಕಾಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಆಯವ್ಯಯಕ್ಕೆ ಸಲಹೆ, ಸೂಚನೆ ನೀಡಲು ಮನವಿ

ಬೈಂದೂರು: ಇಲ್ಲಿನ ಪಟ್ಟಣ ಪಂಚಾಯತ್‌ನ 2025-26ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿ ತಯಾರಿಸುವ ಪ್ರಕ್ರಿಯೆಯಲ್ಲಿದ್ದು, ಈ ಬಗ್ಗೆ ಸಾರ್ವಜನಿಕರು ತಮ್ಮ ಸಲಹೆ ಸೂಚನೆಗಳಿದ್ದಲ್ಲಿ ಜ.13ರೊಳಗೆ ಬೈಂದೂರು ಪಪಂ ಕಚೇರಿ ಸಮಯದಲ್ಲಿ ಆಡಳಿತಾಧಿಕಾರಿ ಅಥವಾ ಮುಖ್ಯಾಧಿಕಾರಿಗೆ ತಿಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಜಿ ಶಾಸಕ ಸೊರಕೆಯ ಆರೋಪದ ವಿರುದ್ಧ ಕಾಪು ಶ್ರೀ ಮಾರಿಯಮ್ಮ ಸನ್ನಿಧಿಯಲ್ಲಿ ಪ್ರಾರ್ಥನೆ

ಶಾಸಕನಾಗಿ ಅವ್ಯವಹಾರ, ದುರಾಡಳಿತ ನಡೆಸಿಲ್ಲ: ಗುರ್ಮೆ

ಕಾಪು: ಪ್ರಥಮ ಬಾರಿ ಕಾಪು ಕ್ಷೇತ್ರದ ಇತಿಹಾಸದಲ್ಲಿ ಅನಿವಾರ್ಯವಾಗಿ ತಾಯಿಯ ಸನ್ನಿಧಾನಕ್ಕೆ ಬರತಕ್ಕಂತಹ ಅನಿವಾರ್ಯತೆ ಬಂದಿದೆ. ವಿರೋಧ ಪಕ್ಷದಲ್ಲಿದ್ದು ಹೋರಾಟ, ಹರತಾಳ ಮಾಡಬಹುದು. ಇದಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ. ಆದರೆ ನಿರಂತರ ನನ್ನ ಕುಟುಂಬದ ಮೇಲೆ ನನ್ನ ಮಗನ ಮೇಲೆ ನನ್ನ ಮೇಲೆ ಸುಳ್ಳು ಅಪಪ್ರಚಾರ ಮಾಡುವ ಮಾಜಿ ಶಾಸಕ ವಿನಯ್ ಕುಮಾರ್ ಸೊರಕೆ ಅವರ ವಿರುದ್ಧ ಕಾಪು ಶ್ರೀ ಮಾರಿಯಮ್ಮ ಸನ್ನಿಧಿಯಲ್ಲಿ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಸಲ್ಲಿಸಲಾಗಿದೆ ಎಂದು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹೇಳಿದರು.

ಆರೋಪಗಳು ಸುಳ್ಳು

ಶಾಸಕರು ಶನಿವಾರ ಕಾಪು ಶ್ರೀ ಹೊಸಮಾರಿಗುಡಿ ದೇವಸ್ಥಾನದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರೊಂದಿಗೆ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಸಲ್ಲಿಸಿ ಬಳಿಕ ಮಾಧ್ಯಮಕ್ಕೆ ಪ್ರತಿಕ್ರಿಯಿಸಿ ಮಾತನಾಡಿದರು.

ಎಂ11 ಕಂಪೆನಿ ಬಗ್ಗೆ ಹೊರಗಡೆ ತಂದೆ ಹೋರಾಟ ಮಾಡುತ್ತಾರೆ. ಒಳಗಡೆ ಮಗ ಕಾಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ ಎಂದು ಮಾಜಿ ಶಾಸಕರು ಸುಳ್ಳು ಆರೋಪಿಸಿದ್ದಾರೆ. ಇದು ಸತ್ಯಕ್ಕೆ ದೂರ. ಆ ನಿಟ್ಟಿನಲ್ಲಿ ಸತ್ಯ ಸಾಯಬಾರದು, ಸುಳ್ಳು ಬದುಕಬಾರದು ಎಂಬ ದೃಷ್ಟಿ ಜನತೆಗೆ ತಪ್ಪು ಸಂದೇಶ ಹೋಗಬಾರದೆಂದು ಪ್ರಾರ್ಥಿಸಲಾಗಿದೆ ಎಂದು ಗುರ್ಮೆ ತಿಳಿಸಿದ್ದಾರೆ.

ರಾಜಕೀಯದಲ್ಲಿ ಅವ್ಯವಹಾರ ಮಾಡಿ ಬದುಕುವ ಅನಿವಾರ್ಯತೆ ನನಗಿಲ್ಲ, ಪ್ರತೀ ಕ್ಷಣದಲ್ಲೂ ಕೂಡಾ ಗೊಂದಲ, ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ, ಹಾಗಾಗಿ ಅತ್ಯಂತ ನೋವಿನಿಂದ ನಾನಾಗಲೀ ನನ್ನ ಕುಟುಂಬದವರಾಗಲಿ ರಾಜಕೀಯ ವಾಗಿ ಯಾವುದೇ ದುರಾಡಳಿತ ಮಾಡಲಿಲ್ಲ, ರಾಜಕೀಯ ಲಾಭ ಪಡೆದುಕೊಂಡಿಲ್ಲ ಎಂದು ಪ್ರಮಾಣಿಸಿದ್ದೇನೆ. ಪಾದೂರು ಹೋರಾಟದಲ್ಲಿಯೂ ಮಗನ ಮೇಲೆ ಆರೋಪ ಮಾಡಿದ್ದರು. ಮಾರಿಗುಡಿಯ ವಿಚಾರದಲ್ಲಿಯೂ ಮೊಗವೀರರಿಗೆ ಅನ್ಯಾಯ ಆಗಿದೆ ಎಂದೂ ಆರೋಪಿಸಿದ್ದರು. ಇಲ್ಲಿ ಟ್ರಸ್ಟಿಗಳು ಯಾರು ಆಗಬೇಕೆಂದು ಆಡಳಿತಾರೂಢ ಕಾಂಗ್ರೆಸ್ ಸರಕಾರ ನಿರ್ಧರಿಸುವುದು ಹೊರತು ನಾನಲ್ಲ, ನನಗೂ ಅದಕ್ಕೂ ಸಂಬಂಧ ಇಲ್ಲ ಎಂದು ಶಾಸಕರು ತಿಳಿಸಿದರು.

ಅಮ್ಮನ ಮುಂದೆ ನೋವು ತೋಡಿಕೊಂಡೆ!

ಧರ್ಮ-ಧರ್ಮವನ್ನು ಒಡೆದು, ಎಲ್ಲೆಲ್ಲಿ ಸಾಧ್ಯ ಇದೆಯೋ ಅಲ್ಲಲ್ಲಿ ಜಾತಿ, ಜಾತಿ ಒಡೆಯುವ ಕೆಲಸವನ್ನು ವಿನಯ್ ಕುಮಾರ್ ಸೊರಕೆ ಅವರು ಮಾಡುತ್ತಿದ್ದಾರೆ. ಹಾಗಾಗಿ ಸತ್ಯದ ವಿಚಾರವನ್ನು ಜನರ ಮುಂದೆ ಮತ್ತು ಅಮ್ಮನ ಮುಂದೆ ಅತ್ಯಂತ ನೋವಿನಿಂದ ಇಡುತ್ತಿದ್ದೇನೆ ಎಂದರು. ಇದು ರಸ್ತೆ ಬದಿ ಮಾರಿಯಮ್ಮ ಅಲ್ಲ, ತಲೆ ತಲಾಂತರದಿಂದ, ಅನಾದಿಯಿಂದ ಹಿರಿಯರು ಆರಾಧಿಸಿಕೊಂಡು ಬಂದಂತಹ ಆರಾಧನಾ ಕ್ಷೇತ್ರ ಇದು. ಹಿರಿಯರು, ಪಕ್ಷದ ಕಾರ್ಯಕರ್ತರ ಒತ್ತಾಸೆಯಿಂದ ಇನ್ನು ಈ ತರ ಆಗಬಾರದೆಂಬ ಉದ್ದೇಶದಿಂದ ಸತ್ಯದರ್ಶನಕ್ಕಾಗಿ ತಾಯಿಯ ಸನ್ನಿಧಾನದಲ್ಲಿ ಪ್ರಾರ್ಥಿಸಲಾಗಿದೆ. ಇನ್ನು ಮುಂದೆ ಏನಾದರೂ ತಾಯಿಯೇ ನೋಡಿಕೊಳ್ಳುತ್ತಾಳೆ ಎಂದರು. ಈ ಸಂದರ್ಭ ಬಿಜೆಪಿ ಕಾಪು ಮಂಡಲ ಅಧ್ಯಕ್ಷ ಜಿತೇಂದ್ರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಸುವರ್ಣ, ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಅರುಣ್ ಶೆಟ್ಟಿ ಪಾದೂರು, ಸಂದೀಪ್ ರಾವ್, ಗೀತಾಂಜಲಿ ಎಂ. ಸುವರ್ಣ, ನೀತಾ ಗುರುರಾಜ್, ಕೇಸರಿ ಯುವರಾಜ್, ವಸಂತಿ ಮಧ್ವರಾಜ್, ನ್ಯಾಯವಾದಿ ಚಂದ್ರಶೇಖರ್ ಶೆಟ್ಟಿ, ಸೋನು ಪಾಂಗಾಳ, ಸಂದೀಪ್ ಶೆಟ್ಟಿ ಕಲ್ಯ, ಪವಿತ್ರಾ ಶೆಟ್ಟಿ, ಕವಿತಾ ಸುವರ್ಣ, ಪಕ್ಷದ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.



> **ಉಡುಪಿ ಕಂಬಳದ ವಿಚಾರದಲ್ಲಿ ನಿಗದಿತ ಮುಹೂರ್ತದಂತೆ ಶಿಷ್ಟಾಚಾರ ಪಾಲಿಸಿಕೊಂಡೇ ಪಕ್ಷಾತೀತ, ಜಾತ್ಯಾತೀತ, ಧರ್ಮಾತೀತವಾಗಿ ಕಂಬಳ ಸಮಿತಿಯ ಮೂಲಕ ನಡೆಸಲು ಮುಂದಾಗಿದ್ದೆವು. ಕೊನೆಯ ಕ್ಷಣ ವಿನಯ್ ಕುಮಾರ್ ಸೊರಕೆ ಗೊಂದಲ ಸೃಷ್ಟಿಸಿದ್ದಾರೆ. ನಾಲ್ಕು ಜನ ಜೂಜುಕೋರರಿಗೋಸ್ಕರ ಮಾಡಿದ್ದ ಕಂಬಳ ಅದು ಎಂದೂ ಹೇಳಿದ್ದರು. ಆ ರೀತಿಯಾಗಿ ಮಾತನಾಡಬಾರದು. ನಮ್ಮ ಪರಂಪರೆ ಇರತಕ್ಕ ಕಂಬಳ. ಅಂತಹ ಕಂಬಳ ನಡೆಯದಿದ್ದಲ್ಲಿ ಕಾಂಗ್ರೆಸ್ ಪಕ್ಷವೇ ಹೊಣೆ.**
>
> • ಗುರ್ಮೆ ಸುರೇಶ್ ಶೆಟ್ಟಿ

ನೇತ್ರ ಜ್ಯೋತಿ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ | ಸಾಧಕರಿಗೆ ಸನ್ಮಾನ

ಕೀಳರಿಮೆ ತ್ಯಜಿಸಿ ಸಾಧನೆಯತ್ತ ಮುನ್ನುಗ್ಗಿ: ಡಾ. ಸವಿತಾ

ಉಡುಪಿ: ಇಲ್ಲಿನ ಉಡುಪಿ ನೇತ್ರ ಜ್ಯೋತಿ ಕಾಲೇಜು ಮತ್ತು ಪ್ರಸಾದ್ ನೇತ್ರಾಲಯದ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ನೇತ್ರ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಸವಿತಾ ಭಂಡಾರಿ ಭಾಗವಹಿಸಿ, ಮಹಿಳೆಯರು ಯಾವುದೇ ಕೀಳರಿಮೆ ಇಲ್ಲದೆ ಜೀವದಲ್ಲಿ ಮುನ್ನುಗ್ಗಿದರೆ ಯಶಸ್ಸು ಕಂಡುಕೊಳ್ಳಲು ಸಾಧ್ಯ. ಮುಂದಿನ ದಿನಗಳಲ್ಲಿ ನಮ್ಮ ನೇತ್ರ ಜ್ಯೋತಿ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಸಾಧನೆಯನ್ನು ಮಾಡಿ ಸನ್ಮಾನ ಸ್ವೀಕರಿಸುವಂತಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮಹಿಳೆಯರು ಅಬಲೆ ಅಲ್ಲ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ನೇತ್ರ ಜ್ಯೋತಿ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ನಾಡೋಜ ಡಾ. ಕೃಷ್ಣಪ್ರಸಾದ್ ಕೂಡ್ಲು ಅವರು, ಮಹಿಳೆಯರು ಈಗ ಅಬಲೆ ಅಲ್ಲ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅವಳ ಸಾಧನೆ ಅಮೋಘವಾದುದು. ಪುರುಷರ ಏಳಿಗೆಯಲ್ಲಿ ಮಹಿಳೆಯ ಪಾತ್ರ ಯಾವತ್ತೂ ಇರುತ್ತದೆ ಎಂದರು.

ನೇತ್ರ ಜ್ಯೋತಿ ಕಾಲೇಜಿನ ಅಧ್ಯಕ್ಷೆ ರಶ್ಮಿ ಕೃಷ್ಣಪ್ರಸಾದ್ ಪ್ರಾಸ್ತಾವಿಕ ನುಡಿಗಳನ್ನಾಡಿ, ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗಬಾರದು, ಪ್ರತಿ ದಿನವೂ ಮಹಿಳೆಯರಿಗೆ ಗೌರವ ನೀಡುವಂತಾಗಬೇಕು ಎಂದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರಾದ ಅಮೃತ ಕೃಷ್ಣಮೂರ್ತಿ, ಅರುಣಾಕಲ, ಅನಿತಾ ಬಾಳಿಗ, ಡಾ. ಕಾಂತಿ ಹರೀಶ್, ಡಾ. ಅರ್ಚನಾ ಎಂ.ವಿ., ಡಾ. ಶ್ರುತಿ ಬಲ್ಲಾಳ್ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಸಿಓಓ ಡಾ. ಗೌರಿ ಪ್ರಭು ಉಪಸ್ಥಿತರಿದ್ದರು.

ಶ್ರಾವ್ಯ ಹಾಗೂ ತಂಡದವರು ಪ್ರಾರ್ಥಿಸಿದರು. ಮಾಧವ ಪೂಜಾರಿ ಸ್ವಾಗತಿಸಿ ನಿರೂಪಿಸಿದರು. ವಿದ್ಯಾರ್ಥಿ ಚರಣರಾಜ್ ವಂದಿಸಿದರು.



ಹಕ್ಕುಪತ್ರ, ಸವಲತ್ತುಗಳ ವಿತರಿಸಿ ಅಧಿಕಾರಿಗಳಿಗೆ ಸುನೀಲ್ ಕಿವಿಮಾತು

ಬಡವರ ಹಕ್ಕುಪತ್ರ ಅರ್ಜಿಗಳ ತಿರಸ್ಕಾರ ಮಾಡದಿರಿ

ಕಾರ್ಕಳ: ಬಡ ನಿವೇಶನ ರಹಿತರಿಗೆ ಹಕ್ಕುಪತ್ರ ವಿತರಣೆಯು ನಿರಂತರ ಪ್ರಕ್ರಿಯೆಯಾಗಿದ್ದು, ಯಾವುದೇ ಕಾರಣಕ್ಕೂ ಅಧಿಕಾರಿಗಳು ಅರ್ಜಿಗಳನ್ನು ತಿರಸ್ಕರಿಸದೇ ಅರ್ಜಿ ಸಲ್ಲಿಸಿದ ಪ್ರತಿಯೊಬ್ಬ ಅರ್ಹರಿಗೂ ನಿವೇಶನ ನೀಡುವಲ್ಲಿ ಮುತುವರ್ಜಿವಹಿಸಿ ಕೆಲಸ ಮಾಡಬೇಕು ಎಂದು ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕ ವಿ.ಸುನೀಲ್ ಕುಮಾರ್ ಹೇಳಿದರು.

144 ವಿವಿಧ ಸವಲತ್ತು ವಿತರಣೆ

ಅವರು ಶನಿವಾರ ಕಾರ್ಕಳ ತಾಲೂಕು ಪಂಚಾಯತ್ ಸಭಾಂಗಣದಲ್ಲಿ 94ಸಿ ಹಾಗೂ ಸಿಸಿಯಲ್ಲಿ 25 ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರ ಹಾಗೂ ನಮೂನೆ 53ಮತ್ತು 57ರಲ್ಲಿ 7 ಫಲಾನುಭವಿಗಳಿಗೆ ಬಗರ್ ಹುಕುಂ ಹಕ್ಕುಪತ್ರ, ಕೈಗಾರಿಕಾ ಇಲಾಖೆಯ ಟೈಲರಿಂಗ್ ಯಂತ್ರಗಳು, ಮರಗೆಲಸ ಕಿಟ್, ಗಾರೆ ಕೆಲಸ ಕಿಟ್ ಸೇರಿದಂತೆ ಒಟ್ಟು 144 ವಿವಿಧ ಸರ್ಕಾರಿ ಸವಲತ್ತುಗಳನ್ನು ವಿತರಿಸಿ ಮಾತನಾಡಿದರು. ಪಡೆದ ಸವಲತ್ತುಗಳನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಿ ಎಂದರು.

2025-26ನೇ ಸಾಲಿನಲ್ಲಿ ಉಚಿತ ಉಪಕರಣಗಳಿಗಾಗಿ 2277 ಆನ್‌ಲೈನ್ ಅರ್ಜಿಗಳು ಬಂದಿದ್ದು ಅದರಲ್ಲಿ ಉಡುಪಿ ಜಿಲ್ಲೆಯಲ್ಲಿ 611 ಅರ್ಜಿಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ ಇಂದು 144 ಮಂದಿಗೆ ಉಚಿತವಾಗಿ ಉಪಕರಣಗಳನ್ನು ವಿತರಿಸಲಾಗುತ್ತಿದೆ ಎಂದರು.

ಕಾರ್ಕಳ ತಹಶೀಲ್ದಾರ್ ಪ್ರದೀಪ್ ಕುಮಾರ್, ಕೈಗಾರಿಕಾ ಇಲಾಖೆಯ ಉಪನಿರ್ದೇಶಕ ವಾಮನ ನಾಯ್ಕ, ಅಕ್ರಮ-ಸಕ್ರಮ ಸಮಿತಿಯ ಸದಸ್ಯರಾದ ನವೀನ್ ದೇವಾಡಿಗ, ಸುನೀತಾ ಶೆಟ್ಟಿ, ರಮೇಶ್ ಬಜಕಳ ಮೊದಲಾದವರು ಇದ್ದರು. ಕಂದಾಯ ನಿರೀಕ್ಷಕ ರಿಯಾಜ್ ಅಹಮ್ಮದ್ ಸ್ವಾಗತಿಸಿ, ನಿರೂಪಿಸಿದರು.

